ಕರ್ನಾಟಕ ಸರ್ಕಾರ

ಸಮಾಜ ವಿಜ್ಞಾನ

ಭಾಗ – II

ಕನ್ನಡ ಮಾಧ್ಯಮ

(ಪರಿಷ್ಕೃತ)

7

ಏಳನೆಯ ತರಗತಿ

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)

100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,

ಬೆಂಗಳೂರು – 560 085.

ಪರಿವಿಡಿ

ಕ್ರ. ಸಂ.	ಇತಿಹಾಸ	ಪುಟ ಸಂಖ್ಯೆ
1	ಭಾರತಕ್ಕೆ ಯುರೋಪಿಯನ್ನರ ಆಗಮನ	01
2	ಭಾರತದಲ್ಲಿ ಬ್ರಿಟಿಷರ ರಾಜಕೀಯ ಏಳಿಗೆ	07
3	ಬ್ರಿಟಿಷ್ ಆಳ್ವಿಕೆಯ ಪರಿಣಾಮ	14
4	ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆ	23
5	ಸ್ವಾತಂತ್ರ್ಯ ಹೋರಾಟಗಳು	35
6	ಕರ್ನಾಟಕದ ಸಮಾಜಮುಖಿ ಚಳವಳಿಗಳು	68
7	ಕರ್ನಾಟಕದ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆ	79
8	ಮಹಿಳಾ ಸ್ವಾತಂತ್ರ್ಯ ಹೋರಾಟಗಾರರು	84
9	ಕರ್ನಾಟಕದ ಏಕೀಕರಣ ಮತ್ತು ಗಡಿ ವಿವಾದಗಳು	92
	ಪೌರನೀತಿ	
10	ನಮ್ಮ ರಕ್ಷಣಾ ಪಡೆಗಳು	99
11	ಸಂವಿಧಾನ ತಿದ್ದುಪಡಿ	107
	ಭೂಗೋಳ ವಿಜ್ಞಾನ	
12	ಆಸ್ಟ್ರೇಲಿಯ ಅತ್ಯಂತ ಸಮತಟ್ಟಾದ ಭೂಖಂಡ	110
13	ಅಂಟಾರ್ಕ್‌ಟಿಕ್ ಶ್ವೇತ ಭೂಖಂಡ	127

ಪಾಠ 01	ಭಾರತಕ್ಕೆ ಯುರೋಪಿಯನ್ನರ ಆಗಮನ

ಪಾಠದ ಪರಿಚಯ

ಸಾ.ಶ 1498 ರ ಮೇ 17ರಂದು ವಾಸ್ಕೋಡಗಾಮನು ಕೇರಳದ ಕಲ್ಲಿಕೋಟೆಯನ್ನು ತಲುಪಿ ಭಾರತಕ್ಕೆ ನೂತನ ಜಲಮಾರ್ಗವನ್ನು ಕಂಡು ಹಿಡಿದನು. ಇದು ಯುರೋಪಿಯನ್ನರು ಭಾರತಕ್ಕೆ ಬರಲು ಕಾರಣವಾಯಿತು. ಈ ಸಮುದ್ರಮಾರ್ಗದ ಅನ್ವೇಷಣೆ (ಸಂಶೋಧನೆ)ಯಿಂದಾಗಿ ಪೋರ್ಚುಗೀಸರು, ಡಚ್ಚರು, ಇಂಗ್ಲಿಷರು ಮತ್ತು ಫ್ರೆಂಚರು ವ್ಯಾಪಾರಕ್ಕಾಗಿ ಭಾರತಕ್ಕೆ ಬಂದರು.

ಸಾಮರ್ಥ್ಯಗಳು

1] ಭಾರತದಲ್ಲಿ ಯುರೋಪಿಯನ್ನರ ಆರಂಭಿಕ ಚಟುವಟಿಕೆಗಳನ್ನು ಅರಿಯುವರು.

2] ಭಾರತದಲ್ಲಿ ಯುರೋಪಿಯನ್ನರ ನಡುವೆ ನಡೆದ ಸಂಘರ್ಷಗಳನ್ನು ಅರ್ಥೈಸಿಕೊಳ್ಳುವುದು.

3] ಭಾರತಕ್ಕೆ ಬಂದ ಯುರೋಪಿನ ವ್ಯಾಪಾರಿ ಕಂಪನಿಗಳನ್ನು ಪರಿಚಯಿಸುವುದು.

4] ಅಂತಿಮವಾಗಿ ಇಂಗ್ಲಿಷರು ಭದ್ರವಾಗಿ ನೆಲೆಸಲು ಕಾರಣವಾದ ಅಂಶಗಳನ್ನು ಪಟ್ಟಿ ಮಾಡುವುದು.

5] ಭಾರತದ ರೇಖಾ ನಕಾಶೆಯಲ್ಲಿ ಯುರೋಪಿಯನ್ನರ ವ್ಯಾಪಾರಿ ನೆಲೆಗಳನ್ನು ಗುರುತಿಸುವುದು.

ಪೋರ್ಚುಗೀಸರು (ಸಾ.ಶ.1498–1961)

ಸಾ.ಶ 1498ರ ಮೇ 17ರಂದು ವಾಸ್ಕೋಡಗಾಮನು ಕೇರಳದ ಕಲ್ಲಿಕೋಟೆಯನ್ನು ತಲುಪುವ ಮೂಲಕ ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡು ಹಿಡಿದನು. ಈ ಜಲಮಾರ್ಗದ ಮೂಲಕ ಭಾರತವನ್ನು ಪ್ರವೇಶಿಸಿದ ಯುರೋಪಿಯನ್ನರಲ್ಲಿ ಪೋರ್ಚುಗೀಸರು ಮೊದಲಿಗರು. ಪೂರ್ವದ ದೇಶಗಳೊಂದಿಗೆ ವ್ಯಾಪಾರದ ಏಕಸ್ವಾಮ್ಯವನ್ನು ಸಾಧಿಸಿದರು. ವಸಾಹತು ಸಾಮ್ರಾಜ್ಯವನ್ನು ನಿರ್ಮಿಸುವುದು, ಕ್ರೈಸ್ತ ಧರ್ಮವನ್ನು ಪ್ರಚಾರ ಮಾಡುವುದು ಇವರ ಮೂಲ ಗುರಿಗಳಾಗಿದ್ದವು.

ಪೋರ್ಚುಗೀಸರ ಏಳಿಗೆಗೆ ಕಾರಣಗಳು

- ಕಲ್ಲಿಕೋಟೆಯ ದೊರೆ ಜಾಮೊರಿನ್ ಪೋರ್ಚುಗೀಸ್ ನಾವಿಕ ವಾಸ್ಕೋಡಗಾಮನಿಗೆ ವ್ಯಾಪಾರಕ್ಕೆ ಅನುಮತಿ ನೀಡಿದನು.
- ಸಾ.ಶ. 1509 ರಲ್ಲಿ ಅಲ್ಬುಕರ್ಕ ಭಾರತಕ್ಕೆ ಗವರ್ನರ್ (ವೈಸರಾಯ್) ಆಗಿ ನೇಮಕಗೊಂಡನು. ಈತನು ಸಾ.ಶ. 1510ರಲ್ಲಿ ವಿಜಯಪುರದ ಸುಲ್ತಾನನಿಂದ ಗೋವಾವನ್ನು ವಶಪಡಿಸಿಕೊಂಡನು. ಪೋರ್ಚುಗೀಸರು ಭಾರತವನ್ನು ಬಿಟ್ಟು ಹೋಗುವವರೆಗು ಗೋವ ಪೋರ್ಚುಗೀಸರ ರಾಜಧಾನಿಯಾಗಿತ್ತು.

- ಅಲ್ಬುಕರ್ಕನ ಬಳಿಕ ಬಂದ ಗವರ್ನರ್‌ಗಳು ದಿಯು, ದಮನ್, ಸಾಲ್ಸೆಟ್, ಬೆಸ್ಸೀನ್, ಚೌಲ್, ಮುಂಬೈ, ಸಾನ್‌ಥೋಮ್ ಮತ್ತು ಬಂಗಾಳದ ಹೂಗ್ಲಿ ಮುಂತಾದ ಕಡೆ ತಮ್ಮ ವಸಾಹತುಗಳನ್ನು ಸ್ಥಾಪಿಸಿದರು.

ಪೋರ್ಚುಗೀಸರ ಅವನತಿಗೆ ಕಾರಣಗಳು

- ಬಲಿಷ್ಠ ನೌಕಾಪಡೆಯನ್ನು ಹೊಂದಿದ್ದ ಡಚ್ಚರು ಮತ್ತು ಇಂಗ್ಲಿಷರು ಪೋರ್ಚುಗೀಸರ ಪ್ರಬಲ ಪ್ರತಿಸ್ಪರ್ಧಿಗಳಾಗಿದ್ದರು.
- ಪೋರ್ಚುಗೀಸ್ ಸರ್ಕಾರದ ನೌಕರರು ಭ್ರಷ್ಟರಾಗಿ, ಸ್ವಾಮಿನಿಷ್ಠೆ ಕಳೆದುಕೊಂಡರು. ಮುಂದೆ ಅವರ ಸರ್ಕಾರ ಹೀನ ಸ್ಥಿತಿಗೆ ಇಳಿಯಿತು.
- ಮತಾಂಧತೆಯೇ ಪೋರ್ಚುಗೀಸರ ಅವನತಿಗೆ ಮುಖ್ಯ ಕಾರಣವಾಗಿತ್ತು. ಅವರು ಇಲ್ಲಿಯ ವಿವಿಧ ಧರ್ಮಿಯರನ್ನು ಬಲವಂತದಿಂದ ಮತಾಂತರಿಸಿದರು.
- ವಿಜಯನಗರ ಸಾಮ್ರಾಜ್ಯದ ಅವನತಿ ನಂತರ ಅವರ ವ್ಯಾಪಾರ ಕುಂಠಿತವಾಯಿತು.

ಪೋರ್ಚುಗೀಸರ ಫ್ರಾನ್ಸಿಸ್ಕೋ–ಡಿ–ಅಲ್ಮೇಡಾ ಭಾರತದ ಪ್ರಥಮ ವೈಸರಾಯ್ (ಗವರ್ನರ್). ಭಾರತಕ್ಕೆ ಬಂದ ಮೊಟ್ಟ ಮೊದಲ ಯೂರೋಪಿಯನ್ನರು ಹಾಗೂ ಭಾರತ ತೊರೆದ ಕಟ್ಟಕಡೆಯ ಯೂರೋಪಿಯನ್ನರು ಪೋರ್ಚುಗೀಸರೇ ಆಗಿದ್ದಾರೆ. ಕೊನೆಯವರೆಗೆ ಗೋವಾ, ದಿಯು ಮತ್ತು ದಮನ್ ಮಾತ್ರವೇ ಪೋರ್ಚುಗೀಸರ ವಶದಲ್ಲಿ ಉಳಿದವು. ಬ್ರಿಟಿಷ್ ಆಳ್ವಿಕೆ ಸಾ.ಶ. 1947ರಲ್ಲಿ ಕೊನೆಗೊಂಡರೂ ಪೋರ್ಚುಗೀಸರು ನಮ್ಮ ನೆಲದಿಂದ ಕದಲಲಿಲ್ಲ. ಗೋವೆಯ ವಿಮೋಚನೆಗಾಗಿ ಅಲ್ಲಿಯ ಭಾರತೀಯರು ಅಹಿಂಸಾತ್ಮಕ ಚಳವಳಿ ಹೂಡಿದರು. ಆದರೆ ಚಳವಳಿಗಾರರನ್ನು ಅಮಾನುಷವಾಗಿ ಹಿಂಸೆಗೊಳಪಡಿಸಲಾಯಿತು. ಕೊನೆಗೆ ಸಾ.ಶ.1961ರಲ್ಲಿ ಭಾರತೀಯ ಸೇನಾಪಡೆಯು ಪೋರ್ಚುಗೀಸರನ್ನು ಬಡಿದೋಡಿಸುವುದರೊಂದಿಗೆ ಗೋವಾ ವಿಮೋಚನೆಗೊಂಡಿತು.

ಡಚ್ಚರು (ಸಾ.ಶ.1596–1792)

ಪೋರ್ಚುಗೀಸರ ನಂತರ ಭಾರತಕ್ಕೆ ಬಂದ ಯೂರೋಪಿಯನ್ನರಲ್ಲಿ ನೆದರ್‌ಲ್ಯಾಂಡ್ ದೇಶದ ಡಚ್ಚರು ಪ್ರಮುಖರು. ಸಾ.ಶ. 1602ರಲ್ಲಿ "ಡಚ್ ಈಸ್ಟ ಇಂಡಿಯಾ ಕಂಪನಿ" ಸ್ಥಾಪನೆಯಾಯಿತು. ಈ ಕಂಪನಿಯು ಪೂರ್ವದ ದೇಶಗಳೊಂದಿಗೆ ವ್ಯಾಪಾರವನ್ನು ಮಾಡುವ ಏಕಸ್ವಾಮ್ಯವನ್ನು ಪಡೆಯಿತು. ಈ ಪ್ರದೇಶಗಳಲ್ಲಿ ಯುದ್ಧ ಮಾಡುವ, ಶಾಂತಿ ಸಂಧಾನಗಳನ್ನು ಏರ್ಪಡಿಸುವ ಅಧಿಕಾರವನ್ನು ಪಡೆಯಿತು. 'ಪುಲಿಕಾಟ್' ಡಚ್ಚರ ರಾಜಧಾನಿಯಾಗಿತ್ತು.

ಡಚ್ಚರ ವ್ಯಾಪಾರ ಕೇಂದ್ರಗಳು : ಭಾರತದ ಆಗ್ರಾ, ಮಚಲೀಪಟ್ಟಣ, ಸೂರತ್, ಕಾರೈಕಲ್, ನಾಗಪಟ್ಟಣಂ, ಕೊಚ್ಚಿ ಮೊದಲಾದ ಕಡೆಗಳಲ್ಲಿ ಡಚ್ಚರ ವ್ಯಾಪಾರ ಕೇಂದ್ರಗಳಿದ್ದವು.

ಡಚ್ಚರ ಅವನತಿ : ಡಚ್ಚರು ಇಂಗ್ಲಿಷರೊಡನೆ ಸಂಘರ್ಷಕ್ಕೆ ಇಳಿದರು. ಆದರೆ ಇಂಗ್ಲಿಷರು ಡಚ್ಚರನ್ನು ಸೋಲಿಸಿದರು. ಭಾರತದಲ್ಲಿ ಇಂಗ್ಲಿಷರ ಪೈಪೋಟಿಯನ್ನು ಎದುರಿಸಲಾಗದ ಡಚ್ಚರು ತಮ್ಮ ಆಗ್ನೇಯ ಏಷ್ಯಾದ ದ್ವೀಪರಾಷ್ಟ್ರಗಳ ಕಡೆಗೆ ಗಮನ ಹರಿಸಿದರು.

ಆಗ್ನೇಯ ಏಷ್ಯಾದ ದ್ವೀಪಗಳು : ಇಂಡೊನೇಷಿಯಾ, ಮಲಯ, ಥೈಲ್ಯಾಂಡ್, ಫಿಲಿಪೈನ್ಸ್, ಕಾಂಬೋಡಿಯಾ.

ಇಂಗ್ಲಿಷರು (ಸಾ.ಶ.1600–1947)

ಇಂಗ್ಲಿಷರು ಶಾಂತಿಯುತ ವ್ಯಾಪಾರವೇ ತಮ್ಮ ನೀತಿಯೆಂಬುದನ್ನು ಮೊದಲಿನಿಂದ ಅನುಸರಿಸಿಕೊಂಡು ಬಂದರು. ಆದರೆ ಭಾರತದ ಹದಗೆಟ್ಟ ರಾಜಕೀಯ ಪರಿಸ್ಥಿತಿಯ ಅನುಕೂಲ ಪಡೆದು ರಾಜಕೀಯ ಸಾರ್ವಭೌಮತ್ವವನ್ನು ಸ್ಥಾಪಿಸಿದರು.

ಇಂಗ್ಲೆಂಡಿನ ವರ್ತಕರು ಪೂರ್ವ ದೇಶಗಳೊಡನೆ ವ್ಯಾಪಾರ ಸಂಪರ್ಕ ಹೊಂದಲು ಬಯಸಿ ಸಾ.ಶ.1600ರಲ್ಲಿ "ಈಸ್ಟ್ ಇಂಡಿಯಾ ಕಂಪನಿ" ಯನ್ನು ಸ್ಥಾಪಸಿದರು. ಎಲಿಜಬೆತ್ ರಾಣಿಯ ಅನುಮತಿ ಪಡೆದು ಭಾರತದೊಡನೆ ವ್ಯಾಪಾರ ಸಂಪರ್ಕ ಬೆಳೆಸಿದರು.

ಪ್ರಾರಂಭದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಹಡಗುಗಳು ಸೂರತ್ ಬಂದರಿನಲ್ಲಿ ತಂಗುತ್ತಿದ್ದವು. ಸರ್ ಥಾಮಸ್ ರೋ ಸಾ.ಶ.1615ರಲ್ಲಿ ಮೊಗಲರ ಚಕ್ರವರ್ತಿ ಜಹಾಂಗೀರನ ಆಸ್ಥಾನಕ್ಕೆ ಭೇಟಿ ನೀಡಿ ಸೂರತ್‌ನಲ್ಲಿ ವ್ಯಾಪಾರ ಮಾಡಲು ಅನುಮತಿ ಪಡೆದನು. ನಂತರ ಆಗ್ರಾ, ಅಹ್ಮದಾಬಾದ್ ಮತ್ತು ಬ್ರೋಚ್‌ಗಳಲ್ಲಿ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿದರು. ಆನಂತರ ಮದ್ರಾಸ್, ಕೋಲ್ಕತಾ ಮತ್ತು ಮುಂಬೈಗಳಲ್ಲಿಯೇ ತಮ್ಮ ವ್ಯಾಪಾರದ ಕೋಠಿ(ಮಳಿಗೆ)ಗಳನ್ನು ಸ್ಥಾಪಿಸಿದರು. ಕಲ್ಕತ (ಈಗಿನ ಕೋಲ್ಕತಾ) ಬ್ರಿಟಿಷರ ಮೊದಲ ರಾಜಧಾನಿಯಾಗಿತ್ತು.

ಕಾಲಕ್ರಮೇಣ ಈಸ್ಟ್ ಇಂಡಿಯಾ ಕಂಪನಿಯ ಲಾಭವು ಗಣನೀಯವಾಗಿ ಹೆಚ್ಚುತ್ತಾ ಹೋಯಿತು. ಮೊಗಲ್ ಚಕ್ರವರ್ತಿ ಫರೂಕ್ ಸಿಯಾರನಿಂದ ಬಂಗಾಲ ಪ್ರಾಂತ್ಯ (ಈಗಿನ ಬಂಗಾಳ, ಬಿಹಾರ ಮತ್ತು ಒರಿಸ್ಸಾ) ಮತ್ತು ಸೂರತ್‌ನಲ್ಲಿ ಸುಂಕರಹಿತ (ತೆರಿಗೆ ರಹಿತ) ವ್ಯಾಪಾರ ಮಾಡುವ ಪರವಾನಗಿಯಾದ 'ದಸ್ತಕ್'ಗಳನ್ನು ಪಡೆದರು. ಇವುಗಳ ಸಹಾಯದಿಂದ ಇಂಗ್ಲಿಷರು ದೇಶೀಯ ವ್ಯಾಪಾರಿಗಳಿಗಿಂತ ಶಕ್ತಿವಂತರಾದರು.

ಸುಂಕವಿಲ್ಲದೆ ಮುಕ್ತ ವ್ಯಾಪಾರ ನಡೆಸಲು ಬ್ರಿಟಿಷ್ ವರ್ತಕರಿಗೆ ನೀಡಲಾದ ವಿಶೇಷ ಪರವಾನಗಿ ಪತ್ರ(ಪಾಸು)ಗಳೇ ದಸ್ತಕಗಳು.

ಬ್ರಿಟಿಷರು ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳಲು ತಮ್ಮ ವಸತಿ ಪ್ರದೇಶಗಳ ಸುತ್ತಲು ಕೋಟೆಗಳನ್ನು ಕಟ್ಟಿದರು. ಕೋಟೆಗಳ ರಕ್ಷಣೆಗಾಗಿ ಸೈನಿಕರನ್ನು, ಮದ್ದುಗುಂಡುಗಳನ್ನು ಇಟ್ಟುಕೊಳ್ಳಲು ಆರಂಭಿಸಿದರು. ಬಹುಬೇಗ ಇಂಗ್ಲಿಷರ ಸೇನಾಬಲವು ಬಲಿಷ್ಠವಾಗಿ ಬೆಳೆಯಿತು.

ಫ್ರೆಂಚರು (ಸಾ.ಶ. 1664–1954)

ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಯುರೋಪಿಯನ್ನರಲ್ಲಿ ಫ್ರೆಂಚರೇ ಕೊನೆಯವರು. ಇವರು ಸಾ.ಶ. 1664ರಲ್ಲಿ "ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ"ಯನ್ನು ಸ್ಥಾಪಿಸಿದರು. ಭಾರತದಲ್ಲಿ ಫ್ರೆಂಚರು ತಮ್ಮ ಪ್ರಥಮ ವ್ಯಾಪಾರ ಕೋಠಿಯನ್ನು ಸಾ.ಶ.1668ರಲ್ಲಿ ಸೂರತ್‌ನಲ್ಲಿ ತೆರೆದರು. ನಂತರ ಸ್ವಲ್ಪ ಕಾಲದಲ್ಲಿಯೇ ಭಾರತದ ನಾನಾ ಭಾಗಗಳಲ್ಲಿ ತಮ್ಮ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿದರು.

ಫ್ರೆಂಚರ ವ್ಯಾಪಾರ ಕೇಂದ್ರಗಳು : ಪಾಂಡಿಚೇರಿ, ಮಚಲಿಪಟ್ಟಣ, ಕಲ್ಲಿಕೋಟೆ, ಮಾಹೆ, ಕಾರೈಕಲ್ ಮತ್ತು ಚಂದ್ರನಗರಗಳಲ್ಲಿ ತಮ್ಮ ವ್ಯಾಪಾರ ಕೇಂದ್ರಗಳನ್ನು ತೆರೆದರು. ಪಾಂಡಿಚೇರಿ ಫ್ರೆಂಚರ ರಾಜಧಾನಿಯಾಗಿತ್ತು.

ಫ್ರೆಂಚರ ಗವರ್ನರಾಗಿ ಬಂದ ಡೂಪ್ಲೆ ಚಾಣಾಕ್ಷತೆಯಿಂದ ಹೈದ್ರಾಬಾದ್ ಮತ್ತು ಕರ್ನಾಟಿಕ್ (ತಮಿಳು ನಾಡಿನ ಪೂರ್ವಭಾಗ) ರಾಜ್ಯಗಳಲ್ಲಿ ಫ್ರೆಂಚರ ಪ್ರಭಾವವನ್ನು ಹೆಚ್ಚಿಸಿದನು. ಭಾರತಕ್ಕೆ ವ್ಯಾಪಾರಕ್ಕೆಂದು ಆಗಮಿಸಿದ ಬ್ರಿಟಿಷರು ಮತ್ತು ಫ್ರೆಂಚರ ಮಧ್ಯೆ ರಾಜಕೀಯ ಹಾಗೂ ವಾಣಿಜ್ಯ ಅಭಿವೃದ್ಧಿಗಾಗಿ ಅನೇಕ ಯುದ್ಧಗಳು ನಡೆದವು. ಅವುಗಳನ್ನು ಕರ್ನಾಟಿಕ್ ಯುದ್ಧಗಳೆಂದು ಕರೆಯಲಾಗಿದೆ.

ಫ್ರೆಂಚರ ಅವನತಿಗೆ ಕಾರಣಗಳು

- ಭಾರತದಲ್ಲಿದ್ದ ಫ್ರೆಂಚ್ ಸೇನಾ ನಾಯಕರಿಗೆ ಫ್ರಾನ್ಸ್ ಸರಕಾರ ಪೂರ್ಣ ಬೆಂಬಲವನ್ನು ನೀಡಲಿಲ್ಲ.
- ಫ್ರಾನ್ಸಿನಲ್ಲಿ ರಾಜಕೀಯ ಗೊಂದಲ ಮತ್ತು ಕ್ರಾಂತಿಗಳು ಕಂಡು ಬಂದವು. ಇದು ಭಾರತದಲ್ಲಿ ಅವರ ಅವನತಿಗೆ ಕಾರಣವಾಯಿತು.
- ಫ್ರೆಂಚರ ನೌಕಾಪಡೆಯು ಇಂಗ್ಲಿಷರ ನೌಕಾಪಡೆಗಿಂತ ಉತ್ತಮ ದರ್ಜೆಯದಾಗಿರಲಿಲ್ಲ.

ಕಾಲಗಣನೆ (ಸಾ.ಶ.)

- ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ : 1600
- ಡಚ್ ಈಸ್ಟ್ ಇಂಡಿಯಾ ಕಂಪನಿ : 1602
- ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ : 1664


ಭಾರತ, 1765
ಯುರೋಪಿಯನ್ ನೆಲೆಗಳು
ದಿಲ್ಲಿ
ಗಂಗಾ
ಯಮುನಾ
ಕೋರಾ
ಅಲಹಾಬಾದ್
ಬಕ್ಸಾರ್
ಪಟ್ನಾ
ಪ್ಲಾಸ್ಸಿ
(Br) ಮುರ್ಷಿರಾಬಾದ್
ಚಂದ್ರನಗರ (F)
(Br) ಕಲ್ಕತ್ತ
ಭಾ ರ ತ
ದಿಯು(P)
ಸೂರತ್ (Br)
ನರ್ಮದಾ
ತಪತಿ
ದಾಮನ್ (P)
ಮಹಾನದಿ
ಬಾಲಸೋರ್ (Br)
ಮುಂಬೈ (Br)
ಗೋದಾವರಿ
ಹೈದರಾಬಾದ್
ನಾರ್ದರ್ನ್ ಸರ್ಕಾರ್
ಗೋವಾ (P)
ಕೃಷ್ಣಾ
ಮಚಲೀಪಟ್ಟನ
ಯುರೋಪಿಯನ್ ನೆಲೆಗಳು
P = ಪೋರ್ಚುಗೀಸ್
Fr = ಫ್ರೆಂಚ್
Du = ಡಚ್
Br = ಬ್ರಿಟಿಷ್
ಪುಲಿಕಟ್
ಮದ್ರಾಸ್(Br)
ವಾಂಡಿವಾಶ್
ಕಾವೇರಿ
ಪಾಂಡಿಚೇರಿ(Fr)
ಮಾಹೆ (Fr)
ತಿರುಚಿನಾಪಳ್ಳಿ
ಪೋರ್ಟ್ ನೊವೊ (Du)
ಕಾರೈಕಲ್(Fr)
ಕೊಚ್ಚಿ (Du)
ನಾಗಪಟ್ಟಣಂ (Du)
ತಂಜಾವೂರು
ಉ
ಹಿಂದೂ ಮಹಾಸಾಗರ

I ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಭಾರತಕ್ಕೆ ವ್ಯಾಪಾರಕ್ಕಾಗಿ ಸಮುದ್ರ ಮಾರ್ಗವಾಗಿ ಮೊದಲಿಗೆ ಬಂದಿದ್ದ ಯುರೋಪಿಯನ್ನರು ಯಾರು?
2. ಭಾರತಕ್ಕೆ ಜಲಮಾರ್ಗವನ್ನು ಕಂಡುಹಿಡಿದವರು ಯಾರು?
3. ಡಚ್ಚರ ರಾಜಧಾನಿ ಯಾವುದು?
4. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಯಾವಾಗ ಸ್ಥಾಪನೆಯಾಯಿತು?
5. ಫ್ರೆಂಚರ ವ್ಯಾಪಾರ ಕೇಂದ್ರಗಳನ್ನು ಹೆಸರಿಸಿ.
6. ಬ್ರಿಟಿಷರಿಗೆ 'ದಸ್ತಕ್' ನೀಡಿದ ಮೊಗಲ್ ದೊರೆಯಾರು?

II ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿರಿ.

1. ಭಾರತದಲ್ಲಿ ಪೋರ್ಚುಗೀಸರ ಅವನತಿಗೆ ಕಾರಣವಾದ ಅಂಶಗಳನ್ನು ಪಟ್ಟಿಮಾಡಿ.
2. ಭಾರತದಲ್ಲಿ ಫ್ರೆಂಚರ ಅವನತಿಗೆ ಕಾರಣಗಳು ಯಾವುವು?

III ಈ ಕೆಳಗಿನ 'ಎ' ಪಟ್ಟಿಗೆ ಸಂಬಂಧಿಸಿದ 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.

ಎ	ಬಿ
ಪೋರ್ಚುಗೀಸರು	ಪಾಂಡಿಚೇರಿ
ಡಚ್ಚರು	ಕಲ್ಕತ್ತ (ಈಗಿನ ಕೋಲ್ಕತಾ)
ಫ್ರೆಂಚರು	ಪುಲಿಕಾಟ್
ಬ್ರಿಟಿಷರು	ಗೋವ

ಚಟುವಟಿಕೆ

ಭಾರತದ ರೇಖಾ ನಕಾಶೆಯನ್ನು ಬರೆದು ಯುರೋಪಿಯನ್ನರ ಆರಂಭಿಕ ನೆಲೆಗಳನ್ನು ಗುರುತಿಸಿರಿ.

☆ ☆ ☆

ಪಾಠ 02	ಭಾರತದಲ್ಲಿ ಬ್ರಿಟಿಷರ ರಾಜಕೀಯ ಏಳಿಗೆ

ಪಾಠದ ಪರಿಚಯ

ಬ್ರಿಟಿಷರ ಮತ್ತು ಫ್ರೆಂಚರ ಸೈನಿಕ ಸಾಮರ್ಥ್ಯ, ರಾಜಕೀಯ ಮಹತ್ವಾಕಾಂಕ್ಷೆ ಹಾಗೂ ಸ್ಥಳೀಯ ಅರಸರ ಅಂತಃಕಲಹಗಳು ಯುದ್ಧಗಳಿಗೆ ಪ್ರೇರಣೆ ನೀಡಿದವು. ಇದರಿಂದ ಬ್ರಿಟಿಷರು ಭಾರತದಲ್ಲಿ ಅನೇಕ ಯುದ್ಧಗಳನ್ನು ಮಾಡಿದರು. ಚಾಣಕ್ಷತೆಯಿಂದ ಮತ್ತು ಕುಟಿಲ ನೀತಿಗಳಿಂದ ಕರ್ನಾಟಕ ಮತ್ತು ಬಂಗಾಳದಲ್ಲಿ ಸಾ.ಶ.1857ರ ವರೆಗೆ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದರು.

ಸಾಮರ್ಥ್ಯಗಳು

1] ಭಾರತದಲ್ಲಿ ಬ್ರಿಟಿಷರ ರಾಜಕೀಯ ಏಳಿಗೆಯಾಗಲು ಸಹಾಯಕವಾದ ಅಂಶಗಳನ್ನು ತಿಳಿಯುವುದು.

2] ಪ್ಲಾಸಿ ಮತ್ತು ಬಕ್ಸಾರ ಕದನದ ಕಾರಣಗಳನ್ನು, ಪರಿಣಾಮಗಳನ್ನು ತಿಳಿಯುವುದು.

3] ಕರ್ನಾಟಿಕ್ ಯುದ್ಧಗಳ ಕಾರಣ ಮತ್ತು ಪರಿಣಾಮಗಳನ್ನು ಅರಿಯುವುದು.

4] ಸಹಾಯಕ ಸೈನ್ಯ ಪದ್ಧತಿಯ ಅರ್ಥ, ಕರಾರುಗಳನ್ನು ತಿಳಿದುಕೊಳ್ಳುವುದು.

5] ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯನ್ನು ಪರಿಚಯಿಸುವುದು.

ಪ್ಲಾಸಿ ಕದನ (ಸಾ.ಶ.1757)

ಬಂಗಾಳವು ಮೊಗಲ್ ಸಾಮ್ರಾಜ್ಯದ ಸಮೃದ್ಧ ಪ್ರಾಂತವಾಗಿತ್ತು. ಅದರ ಪ್ರಾಂತಾಧಿಕಾರಿಯಾಗಿದ್ದ ಅಲಿವರ್ಧಿಖಾನ್, ಮೊಗಲ್ ಸಾಮ್ರಾಜ್ಯ ಅವನತಿ ಹಾದಿಯಲ್ಲಿದ್ದಾಗ ಸ್ವತಂತ್ರನಾದನು. ಆತನ ನಂತರ ಸಿರಾಜ್–ಉದ್–ದೌಲ್‌ನು ಬಂಗಾಳದ ನವಾಬನಾದನು.

ನವಾಬ ಸಿರಾಜ್–ಉದ್–ದೌಲ್‌ನು ಯುವಕನಾಗಿದ್ದರಿಂದ ಇಂಗ್ಲಿಷರು ಅವನನ್ನು ಕಡೆಗಣಿಸಿ, ಅವನ ಅನುಮತಿ ಪಡೆ–ಯದೆ ಕೋಲ್ಕತಾದಲ್ಲಿ 'ಫೋರ್ಟ್‌ವಿಲಿಯಂ' ಕೋಟೆಯನ್ನು ಬಲಪಡಿಸಿದರು. ಅಲ್ಲದೆ ವ್ಯಾಪಾರದ ರಿಯಾಯಿತಿಗಳನ್ನು ದುರುಪಯೋಗ ಮಾಡುತ್ತಿದ್ದರು.

ಸಿರಾಜ್ ಉದ್ದೌಲ್

ಪ್ಲಾಸಿ ಕದನಕ್ಕೆ ಕಾರಣ

ಇಂಗ್ಲಿಷರು ತನ್ನ ಆದೇಶಗಳನ್ನು ಪಾಲಿಸದೆ, ವೈರಿಗಳೊಡನೆ ಸೇರಿ ಕುತಂತ್ರ ಮಾಡುತ್ತಿದ್ದಾರೆಂದು ಸಿರಾಜ್ ಉದ್ದೌಲ ಭಾವಿಸಿದನು. ಇದರಿಂದ ಕೋಪಗೊಂಡು ಇಂಗ್ಲಿಷರ ಕೋಠಿಗಳನ್ನು ಸ್ವಾಧೀನಪಡಿಸಿಕೊಂಡನು. ಇದೇ ಮುಂದೆ ಪ್ಲಾಸಿ ಕದನಕ್ಕೆ ಕಾರಣವಾಯಿತು.

ನವಾಬ್ ಸಿರಾಜ್ ಉದ್ದೌಲನ ದಾಳಿಯ ವಾರ್ತೆ ಕೇಳಿದ ಮದ್ರಾಸಿನ ಕಂಪನಿಯ ಅಧಿಕಾರಿಗಳು ರಾಬರ್ಟ್ ಕ್ಲೈವನ ನೇತೃತ್ವದಲ್ಲಿ ಕೋಲ್ಕತಾಕ್ಕೆ ಸೈನ್ಯ ರವಾನಿಸಿದರು. ಬಂಗಾಲದ ಪರಿಸ್ಥಿತಿಯನ್ನರಿತ ಕ್ಲೈವ್, ನವಾಬನ ವಿರುದ್ಧ ಒಳಸಂಚು ನಡೆಸಿದನು. ಸಿರಾಜನ ಸೇನಾನಿ ಮೀರ್ ಜಾಫರನಿಗೆ ನವಾಬಗಿರಿಯ ಆಸೆಯನ್ನು ತೋರಿಸಿ ರಹಸ್ಯ ಒಪ್ಪಂದ ಮಾಡಿಕೊಂಡನು.

ನವಾಬನ ಸೇನಾನಿ ಮೀರ್ ಜಾಫರ್ ನವಾಬನಾಗುವ ಆಸೆಯಿಂದ ಇಂಗ್ಲಿಷರೊಡನೆ ಒಪ್ಪಂದ ಮಾಡಿಕೊಂಡನು.ಅದರಂತೆ ನವಾಬನಾದ ಕೂಡಲೇ ಇಂಗ್ಲಿಷರಿಗೆ 175 ಲಕ್ಷ ರೂಪಾಯಿ ಕೊಡಬೇಕಾಗಿತ್ತು. ಈ ಕಪ್ಪು ವ್ಯವಹಾರದಲ್ಲಿ ಅಮೀನಚಂದ್ ಎಂಬ ವರ್ತಕ ಮಧ್ಯಸ್ಥಿಕೆ ವಹಿಸಿದನು.

ರಾಬರ್ಟ್ ಕ್ಲೈವ್

ಮೀರ್ ಜಾಫರ್

ಬ್ರಿಟಿಷರು ಮತ್ತು ಸಿರಾಜ್ ಉದ್ದೌಲನ ಸೈನ್ಯದ ನಡುವೆ ಪ್ಲಾಸಿ ಎಂಬಲ್ಲಿ ಸಾ.ಶ. 1757 ಜೂನ್ 23ರಂದು ಯುದ್ಧವಾಯಿತು. ಯುದ್ಧದಲ್ಲಿ ಮೀರ್ ಜಾಫರನು ಬ್ರಿಟಿಷರಿಗೆ ನೆರವಾದನು. ಅಂತಿಮವಾಗಿ ಸಿರಾಜ್ ಉದ್ದೌಲನು ಸೋತು ಕೊಲ್ಲಲ್ಪಟ್ಟನು. ಮೀರ ಜಾಫರನು ಮಾಡಿದ ದ್ರೋಹದಿಂದ ಬ್ರಿಟಿಷರಿಗೆ ಜಯ ಲಭಿಸಿತು. ಬ್ರಿಟಿಷ್ ವಸಾಹತು ಶಾಹಿಯ ಸ್ಥಾಪನೆಯಾಯಿತು.

ಪರಿಣಾಮಗಳು

ಆಧುನಿಕ ಭಾರತದ ಚರಿತ್ರೆಯಲ್ಲಿ ಪ್ಲಾಸಿ ಕದನವು ಒಂದು ನಿರ್ಣಾಯಕ ಕದನವಾಗಿದೆ. ಈ ಯುದ್ಧದಲ್ಲಿ ಸಿರಾಜ್ ಉದ್ದೌಲನ ಸೋಲಿನಿಂದ ಆಂಗ್ಲರು ಬಂಗಾಳದ ರಾಜಕೀಯದಲ್ಲಿ ಮಹತ್ವದ ಸ್ಥಾನವನ್ನು ಪಡೆದರು.

- ಬ್ರಿಟಿಷರ ಕೃಪೆಯಿಂದ ಮೀರ ಜಾಫರ್ ಬಂಗಾಳದ ನವಾಬನಾದನು. ಆದರೆ ಅವನು ಬ್ರಿಟಿಷರ ಕೈಗೊಂಬೆಯಾದನು.
- ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಹೇರಳ ಹಣ ಮತ್ತು 24 ಪರಗಣ ಜಮೀನ್ದಾರಿ ಹಕ್ಕನ್ನು ಪಡೆಯಿತು.
- ಪ್ಲಾಸಿ ಕದನವು ಮುಂದಿನ ಬಕ್ಸಾರ್ ಕದನಕ್ಕೂ ಕಾರಣವಾಯಿತು.

- ವ್ಯಾಪಾರಿಗಳಾಗಿ ಬಂದಿದ್ದ ಇಂಗ್ಲಿಷರು ತಕ್ಷಣವೇ ಆಡಳಿತ ನಡೆಸುವ ಅಧಿಕಾರ ಪಡೆದರು.
- ಪ್ಲಾಸಿ ವಿಜಯವು ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಸ್ಥಾಪನೆಗೆ ನಾಂದಿಯಾಯಿತು.

ಬಕ್ಸಾರ್ ಕದನ (ಸಾ.ಶ.1764)

ಮೀರ್‌ಜಾಫರನು ದೀರ್ಘಕಾಲ ಬ್ರಿಟಿಷರ ಕೊನೆ ಇಲ್ಲದ ಬೇಡಿಕೆಗಳನ್ನು ಈಡೇರಿಸುವಲ್ಲಿ ವಿಫಲನಾದನು. ಆಗ ಬ್ರಿಟಿಷರು ಬಂಗಾಳದ ನವಾಬ ಸ್ಥಾನದಿಂದ ಮೀರ್ ಜಾಫರ್‌ನನ್ನು ಪದಚ್ಯುತಗೊಳಿಸಿ ಅವನ ಅಳಿಯನಾದ ಮೀರ್‌ಕಾಸಿಂನನ್ನು ಅಧಿಕಾರಕ್ಕೆ ತಂದರು.

ಕಾರಣ : ಮೀರ್‌ಕಾಸಿಂ ಸ್ವತಂತ್ರ ಮನೋಭಾವದವನಾಗಿದ್ದನು. ಬ್ರಿಟಿಷರು ದುರ್ಬಳಕೆ ಮಾಡಿಕೊಳ್ಳುತ್ತಿದ್ದ ದಸ್ತಕಗಳನ್ನು ಪರಿಶೀಲಿಸಿ ಬಂಗಾಳದ ಎಲ್ಲಾ ವ್ಯಾಪಾರವನ್ನು ಸುಂಕಮುಕ್ತಗೊಳಿಸಿದನು. ಇದರಿಂದ ಭಾರತೀಯ ವರ್ತಕರ ಪೈಪೋಟಿಯನ್ನು ಬ್ರಿಟಿಷರು ಎದುರಿಸಬೇಕಾಯಿತು. ಆದ್ದರಿಂದ ಮೀರ್‌ಕಾಸಿಂನನ್ನು ನವಾಬನ ಸ್ಥಾನದಿಂದ ಕಿತ್ತೊಗೆದು ಮತ್ತೆ ಮೀರ್ ಜಾಫರ್‌ನನ್ನು ಅಧಿಕಾರಕ್ಕೆ ತಂದರು.

ಇದರಿಂದ ದೃತಿಗೆಡದ ಮೀರ್‌ಕಾಸಿಂ ಅವಧ್ ಸಂಸ್ಥಾನದ ನವಾಬ ಷೂಜಾ–ಉದ್–ದೌಲ ಮತ್ತು ಮೊಗಲ್ ದೊರೆ ಎರಡನೇ ಷಾಆಲಂ ಅವರೊಡನೆ ಸ್ನೇಹ ಬೆಳೆಸಿದನು. ತರುವಾಯ ಅವರ ಸಹಾಯವನ್ನು ಪಡೆದು ಬಂಗಾಳವನ್ನು ಪುನಃ ಸ್ವಾಧೀನಪಡಿಸಿಕೊಳ್ಳಲು ಬ್ರಿಟಿಷರ ಮೇಲೆ ಸಾ.ಶ. 1764 ರಲ್ಲಿ ಯುದ್ಧ ಘೋಷಿಸಿದನು. ಇದೇ ಪ್ರಸಿದ್ಧವಾದ ಬಕ್ಸಾರ್ ಕದನ. ಈ ಕದನದಲ್ಲಿ ಹೆಕ್ಟರ್ ಮನ್ರೋ ನಾಯಕತ್ವದ ಬ್ರಿಟಿಷ್ ಸೇನೆ ಮೀರಕಾಸಿಂನ ಸಂಯುಕ್ತ ಸೇನಾ ಪಡೆಯನ್ನು ಸೋಲಿಸಿತು. ಷೂಜಾ–ಉದ್–ದೌಲ್ ರೋಹಿಲಖಂಡದಲ್ಲಿ ಆಶ್ರಯ ಪಡೆದನು. ಎರಡನೇ ಷಾಆಲಂ ಬ್ರಿಟಿಷರೊಂದಿಗೆ ಸೇರಿದನು. ಮೀರ್‌ಕಾಸಿಂ ಯುದ್ಧ ರಂಗದಿಂದ ಪಲಾಯನ ಮಾಡಿದನು.

ಪರಿಣಾಮಗಳು

- ಮೀರಜಾಫರನು ಮತ್ತೆ ಬಂಗಾಲದ ನವಾಬನಾದನು.
- ಬಕ್ಸಾರ ಕಾಳಗವು ಬಂಗಾಳದಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಡಳಿತವನ್ನು ಸ್ಥಿರಪಡಿಸಿತು.
- ಈ ಯುದ್ಧವು ಆಂಗ್ಲರ ಪ್ರಭಾವವನ್ನು ಬಂಗಾಲದಿಂದ ಅಲಹಾಬಾದದವರೆಗೆ ವಿಸ್ತರಿಸಲು ಅವಕಾಶ ಮಾಡಿತು.
- ಮೊಗಲ್ ದೊರೆ ಎರಡನೇ ಷಾ ಆಲಂನಿಂದ ಬಂಗಾಳ ಪ್ರಾಂತ್ಯದ ದಿವಾನಿ (ಕಂದಾಯ ಸಂಗ್ರಹಿಸುವ) ಹಕ್ಕನ್ನು ಪಡೆದರು.
- ಸಾ.ಶ. 1765ರಲ್ಲಿ ಮೀರಜಾಫರನ ಮರಣದ ನಂತರ ನಿಜಾಮ್ ಉದ್ದೌಲನು ಬಂಗಾಳದ ನವಾಬನಾದನು.

ಕರ್ನಾಟಿಕ್ ಯುದ್ಧಗಳು (ಸಾ.ಶ.1746–1763)

ಮೊಗಲ್ ಸಾಮ್ರಾಜ್ಯದ ಒಂದು ಪ್ರಾಂತವೇ 'ಕರ್ನಾಟಿಕ್'. ಕೋರಮಂಡಲ ತೀರ (ಈಗಿನ ತಮಿಳುನಾಡು ಹಾಗೂ ಆಂದ್ರಪ್ರದೇಶದ ತೀರ ಪ್ರದೇಶ) ಮತ್ತು ಅದರ ಹಿನ್ನಾಡನ್ನು ಯುರೋಪಿಯನ್ನರು 'ಕರ್ನಾಟಿಕ್' (Carnatic) ಎಂದು ಕರೆಯುತ್ತಿದ್ದರು.

ಬ್ರಿಟಿಷ್ ಮತ್ತು ಫ್ರೆಂಚರ ನಡುವೆ ದಕ್ಷಿಣ ಭಾರತದ ವ್ಯಾಪಾರದ ಮೇಲಿನ ನಿಯಂತ್ರಣಕ್ಕಾಗಿ ಪೈಪೋಟಿ ನಡೆದು ಅಲ್ಪ ಕಾಲದಲ್ಲೇ ಅದು ಕದನದ ಹಾದಿಯನ್ನು ಹಿಡಿಯುವಂತೆ ಮಾಡಿತು. ಈ ಹಿನ್ನಲೆಯಲ್ಲಿ ನಡೆದ ಮೂರು ಕದನಗಳಿಗೆ ಕರ್ನಾಟಿಕ್ ಪ್ರದೇಶ ಮುಖ್ಯ ಭೂಮಿಕೆಯಾಯಿತು. ಆದ್ದರಿಂದ ಈ ಕದನಗಳನ್ನು 'ಕರ್ನಾಟಿಕ್ ಕದನ'ಗಳೆಂದು ಚರಿತ್ರೆಯಲ್ಲಿ ಗುರುತಿಸುತ್ತಾರೆ.

ಪ್ರಥಮ ಕರ್ನಾಟಿಕ್ ಯುದ್ಧ(ಸಾ.ಶ.1746–1748)

ಕಾರಣಗಳು

- ಭಾರತದಲ್ಲಿ ಆಂಗ್ಲ ಮತ್ತು ಫ್ರೆಂಚರ ನಡುವೆ ವ್ಯವಹಾರಿಕ ಮತ್ಸರ, ಪೈಪೋಟಿ ಮತ್ತು ರಾಜಕೀಯ ಮಹಾದಾಸೆ ಯುದ್ಧಕ್ಕೆ ಕಾರಣವಾಯಿತು.
- ಯುರೋಪ್ ಖಂಡದಲ್ಲಿ ಆರಂಭವಾಗಿದ್ದ ಆಸ್ಟ್ರೀಯಾದ ಉತ್ತರಾಧಿಕಾರತ್ವದ ಕಾರಣಕ್ಕಾಗಿ ಇಂಗ್ಲೆಂಡ್ ಮತ್ತು ಫ್ರಾನ್ಸಗಳ ನಡುವೆ ಯುದ್ಧ ಆರಂಭವಾಯಿತು. ಇದು ಭಾರತದಲ್ಲಿ ನೆಲೆಯೂರಿದ ಇವರಿಬ್ಬರ ನಡುವೆ ಯುದ್ಧಕ್ಕೆ ಕಾರಣವಾಯಿತು.

ಆರ್ಕಾಟ್ ಕರ್ನಾಟಿಕ ಸಂಸ್ಥಾನದ ರಾಜಧಾನಿಯಾಗಿತ್ತು. ಇಂಗ್ಲಿಷರು ಆಗ್ನೇಯ ಕರಾವಳಿಯನ್ನು ಗೆದ್ದುಕೊಂಡು ಫ್ರೆಂಚರ ಪಾಂಡಿಚೇರಿಯನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಇದಕ್ಕೆ ಸೇಡು ತೀರಿಸಿಕೊಳ್ಳಲು ಫ್ರೆಂಚರ ಗವರ್ನರ್ ಡೂಪ್ಲೆ ಮದ್ರಾಸನ್ನು ವಶಪಡಿಸಿಕೊಂಡನು. ಇಂಗ್ಲಿಷರು ಆರ್ಕಾಟಿನ ನವಾಬ ಅನ್ವರುದ್ದೀನ್‌ನ ಸಹಾಯವನ್ನು ಬೇಡಿದರು. ನವಾಬನು ಮದ್ರಾಸನ್ನು ಪುನಃ ವಶಪಡಿಸಿಕೊಳ್ಳಲು ಕಳುಹಿಸಿದನು. ಆದರೆ ನವಾಬನ ಸೇನೆ ಸೋಲನ್ನು ಅನುಭವಿಸಿತು. ಇಷ್ಟರಲ್ಲಿ ಯೂರೋಪಿನಲ್ಲಿ ಇಂಗ್ಲಿಷರು ಮತ್ತು ಫ್ರೆಂಚರ ನಡುವಣ ಯುದ್ಧ ನಿಂತು ಒಪ್ಪಂದ ಏರ್ಪಟ್ಟಿತು. ಈ ಒಪ್ಪಂದ ಭಾರತದಲ್ಲಿದ್ದ ಬ್ರಿಟಿಷರಿಗೂ, ಫ್ರೆಂಚರಿಗೂ ಅನ್ವಯಿಸಿತು.

> ಮೊದಲ ಕರ್ನಾಟಿಕ್ ಯುದ್ಧದಲ್ಲಿ ಫ್ರೆಂಚರು ಮೇಲುಗೈ ಸಾಧಿಸಿದರು. ಇದು 'ಏಕ್ಸ್–ಲಾ–ಚಾಪೆಲ್' ಒಪ್ಪಂದದೊಂದಿಗೆ ಅಂತ್ಯಗೊಂಡಿತು.

ಪರಿಣಾಮಗಳು

- ಮದ್ರಾಸ್ ಇಂಗ್ಲೀಷರ ಕೈ ವಶವಾಯಿತು.
- ಫ್ರೆಂಚರು ಆರ್ಕಾಟ್‌ನಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡರು.ಇದರಿಂದ ಡೂಪ್ಲೆಯ ಪ್ರತಿಷ್ಠೆಯು ಹೆಚ್ಚಾಯಿತು.
- ಪರಸ್ಪರ ಯುದ್ಧ ಖೈದಿಗಳನ್ನು ಬಿಡುಗಡೆಮಾಡಲಾಯಿತು.

ಎರಡನೇ ಕರ್ನಾಟಿಕ್ ಯುದ್ಧ (ಸಾ.ಶ.1749–1754)

ಕಾರಣ: ಆರ್ಕಾಟ್ ಮತ್ತು ಹೈದರಾಬಾದ್‌ಗಳಲ್ಲಿ ಪಟ್ಟಾಧಿಕಾರದ ಸಮಸ್ಯೆಗಳು ಉದ್ಭವಿಸಿದವು. ಇದು ಯುದ್ಧಕ್ಕೆ ಪ್ರಮುಖ ಕಾರಣವಾಯಿತು.

ಆರ್ಕಾಟಿನಲ್ಲಿ ಚಂದಾಸಾಹೇಬ ಮತ್ತು ಅನ್ವರುದ್ದೀನ್ ಹಾಗೂ ಹೈದರಾಬಾದಿನಲ್ಲಿ ನಾಸಿರ್‌ಜಂಗ್ ಮತ್ತು ಮುಜಾಫರ್‌ಜಂಗರ ನಡುವೆ ಸಿಂಹಾಸನಕ್ಕಾಗಿ ಪೈಪೋಟಿ ಆರಂಭವಾಯಿತು.

ಗುಪ್ತ ಸಂಧಾನದ ಮೂಲಕ ಡೂಪ್ಲೆಯು ಚಂದಾಸಾಹೇಬ ಮತ್ತು ಮುಜಾಫರಜಂಗ್ ನಡುವೆ ಒಂದು ಕೂಟವನ್ನು ಮಾಡಿಕೊಂಡರು. ಅನ್ವರುದ್ದೀನ್‌ನನ್ನು ಸೋಲಿಸಿ ಕೊಂದು ಹಾಕಿದರು. ಅವನ ಮಗ ಮಹಮದ್‌ಆಲಿ ತಿರುಚನಾಪಳ್ಳಿಗೆ ಓಡಿಹೋದನು.

ಆರ್ಕಾಟಿನಲ್ಲಿ ಚಂದಾಸಾಹೇಬನು, ಹೈದರಬಾದಿನಲ್ಲಿ ಮುಜಾಫರ್‌ಜಂಗ್ ನವಾಬರಾಗಲು ಫ್ರೆಂಚರು ನೆರವು ನೀಡಿದರು. ಕೆಲಕಾಲದ ನಂತರ ಮುಜಾಫರ್ ಜಂಗ್ ಕೊಲೆಗೀಡಾದನು. ಅವನ ಸ್ಥಾನಕ್ಕೆ ಫ್ರೆಂಚರು ಸಲಾಬತ್ ಜಂಗನನ್ನು ತಂದರು. ಇತ್ತ ಇದರಿಂದ ಕೋಪಗೊಂಡ ಇಂಗ್ಲಿಷರು ರಾಬರ್ಟ್ ಕ್ಲೈವನ ನಾಯಕತ್ವದಲ್ಲಿ ಆರ್ಕಾಟ್ ನಗರವನ್ನು ವಶಪಡಿಸಿಕೊಂಡು ಚಂದಾಸಾಹೇಬನನ್ನು ಕೊಂದರು. ಅಲ್ಲದೆ ಮಹಮದ್‌ಆಲಿಯನ್ನು ಆರ್ಕಾಟಿನ ನವಾಬನನ್ನಾಗಿ ಮಾಡಿದರು. ಈ ಯುದ್ಧದ ನಂತರ ಡೂಪ್ಲೆಯನ್ನು ಫ್ರೆಂಚ್ ಸರಕಾರವು ವಾಪಸ್ಸು ಕರೆಸಿಕೊಂಡಿತು. 1754ರ 'ಪಾಂಡಿಚೇರಿ ಒಪ್ಪಂದ'ದೊಂದಿಗೆ ಯುದ್ಧ ಕೊನೆಗೊಂಡಿತು.

ಪರಿಣಾಮಗಳು

- ಆರ್ಕಾಟಿನಲ್ಲಿ ಫ್ರೆಂಚರ ಶಕ್ತಿ ಪ್ರಭಾವಗಳು ಕುಗ್ಗಿದವು.
- ಬ್ರಿಟಿಷರು ಕಂದಾಯವನ್ನು ವಸೂಲು ಮಾಡುವ ಹಾಗೂ ಸೇನಾ ತುಕಡಿಗಳನ್ನು ಇರಿಸಿಕೊಳ್ಳುವ ಹಕ್ಕುಗಳನ್ನು ಪಡೆದುಕೊಂಡರು.

ಎರಡನೇ ಕರ್ನಾಟಿಕ್ ಯುದ್ಧದ ಕೊನೆಯ ಹೊತ್ತಿಗೆ ಇಂಗ್ಲಿಷರು ಆರ್ಕಾಟಿನಲ್ಲಿಯೂ, ಫ್ರೆಂಚರು ಹೈದರಾಬಾದಿನಲ್ಲಿಯೂ ತಮ್ಮ ಪ್ರಾಬಲ್ಯವನ್ನು ಕಾಯ್ದುಕೊಂಡರು.

ಮೂರನೇ ಕರ್ನಾಟಿಕ್ ಯುದ್ಧ (ಸಾ.ಶ.1758–1763)

ಕಾರಣ: ಯುರೋಪಿನಲ್ಲಿ ಸಪ್ತ ವಾರ್ಷಿಕ ಯುದ್ಧ ಸಾ.ಶ.1756ರಲ್ಲಿ ಆರಂಭವಾಯಿತು. ಇದರ ಪರಿಣಾಮವಾಗಿ ಭಾರತದಲ್ಲಿಯೂ ಫ್ರೆಂಚ್ ಮತ್ತು ಇಂಗ್ಲಿಷ್‌ರ ನಡುವೆ ಮೂರನೇ ಕರ್ನಾಟಿಕ್ ಯುದ್ಧ ಆರಂಭವಾಯಿತು.

ಸಾ.ಶ. 1760ರಲ್ಲಿ ಇಂಗ್ಲಿಷ ಸೇನಾನಿ ಸರ್ ಐರ್‌ಕೋಟನಿಗೂ ಫ್ರೆಂಚರ ಗವರ್ನರ್ ಕೌಂಟ್ ಡಿ ಲ್ಯಾಲಿಗೂ ಪಾಂಡಿಚೇರಿ ಸಮೀಪ ವಾಂಡಿವಾಷ್‌ನಲ್ಲಿ ಯುದ್ಧ ನಡೆಯಿತು. ಈ ಯುದ್ಧದಲ್ಲಿ ಫ್ರೆಂಚರಿಗೆ ಸೋಲಾಯಿತು. ಫ್ರೆಂಚರು ಇಂಗ್ಲಿಷರಿಗೆ ಶರಣಾದರು. ಯುರೋಪಿನಲ್ಲಿ ಈ ವೇಳೆಗೆ ಸಪ್ತವಾರ್ಷಿಕ ಯುದ್ಧಗಳು ಕೊನೆಗೊಂಡು ಪ್ಯಾರಿಸ್ ಒಪ್ಪಂದವಾಯಿತು. ಪರಿಣಾಮವಾಗಿ ಕರ್ನಾಟಿಕದಲ್ಲಿಯೂ ಯುದ್ಧ ಮುಕ್ತಾಯವಾಯಿತು.

ಪರಿಣಾಮಗಳು

- ಭಾರತದಲ್ಲಿ ಫ್ರೆಂಚರ ರಾಜಕೀಯ ಮತ್ತು ಸೈನಿಕ ಪ್ರಭಾವವು ಕೊನೆಗೊಂಡಿತು.
- ಭಾರತದಲ್ಲಿ ಆಂಗ್ಲರು ಯುರೋಪಿನ ಪ್ರಬಲ ಶಕ್ತಿಯಾಗಿ ಹೊರಹೊಮ್ಮಿದರು.

ಲಾರ್ಡ್ ವೆಲ್ಲೆಸ್ಲಿ

ಸಹಾಯಕ ಸೈನ್ಯ ಪದ್ಧತಿ (1798)

ಇಂಗ್ಲಿಷರ ಗವರ್ನರ ಜನರಲ್ ಲಾರ್ಡ್ ವೆಲ್ಲೆಸ್ಲಿಯು ಸಹಾಯಕ ಸೈನ್ಯ ಪದ್ಧತಿಯನ್ನು ಸಾ.ಶ 1798ರಲ್ಲಿ ಜಾರಿಗೆ ತಂದನು. ಇದು ಬ್ರಿಟಿಷ್ ರಾಜ್ಯದ ವಿಸ್ತರಣೆಗೆ ಹಾಗೂ ಭಾರತದ ಮೇಲಿನ ಬ್ರಿಟಿಷ್ ರಾಜಕೀಯ ನಿಯಂತ್ರಣಕ್ಕೆ ಸಹಾಯಕವಾದ ಒಂದು ಮಹತ್ವದ ಶಾಸನವಾಯಿತು.

ತಮ್ಮ ನೆರೆಯ ರಾಜರಿಂದ ಅಪಾಯ ಉಂಟಾಗದಂತೆ ಬ್ರಿಟಿಷರ ಸೇನಾ ಸಹಾಯ ಪಡೆಯಲು ಭಾರತೀಯ ರಾಜರನ್ನು ಪ್ರೇರೇಪಿಸಿದನು. ಈ ನಿಟ್ಟಿನಲ್ಲಿ ಕೆಲವೊಮ್ಮೆ ಅವರನ್ನು ಬಲವಂತ ಕೂಡಾ ಮಾಡಿದನು.

ಷರತ್ತುಗಳು (ಕರಾರುಗಳು)

- ಈ ಪದ್ಧತಿಯನ್ನು ಒಪ್ಪಿಕೊಂಡ ರಾಜರು ಇಂಗ್ಲಿಷ್ ಸೇನಾ ಪಡೆಯನ್ನು ತಮ್ಮ ರಾಜ್ಯದಲ್ಲಿ ಇಟ್ಟುಕೊಳ್ಳಬೇಕು.
- ಸೈನ್ಯದ ಖರ್ಚು ವೆಚ್ಚವನ್ನು ನಗದು ರೂಪದಲ್ಲಿ ಬ್ರಿಟಿಷರಿಗೆ ನೀಡಬೇಕು.
- ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟ್‌ನನ್ನು ಇಟ್ಟುಕೊಳ್ಳಬೇಕು. ಈತನ ಖರ್ಚನ್ನು ಅವರೇ ನೋಡಿಕೊಳ್ಳಬೇಕಾಗಿತ್ತು.

ಸಹಾಯಕ ಸೈನ್ಯ ಪದ್ಧತಿಯ ಪರಿಣಾಮಗಳು

- ಸೈನಿಕ ವೆಚ್ಚದ ಅಗಾಧ ಹೊರೆಯು ಭಾರತದ ರಾಜ್ಯಗಳನ್ನು ಆರ್ಥಿಕವಾಗಿ ದುರ್ಬಲಗೊಳಿಸಿತು.
- ಬ್ರಿಟಿಷರು ಭಾರಿ ಭೂಪ್ರದೇಶಗಳನ್ನು ತಮ್ಮ ಹತೋಟಿಗೆ ತೆಗೆದುಕೊಂಡರು.
- ಈ ನೀತಿಗೆ ಒಳಪಟ್ಟ ರಾಜ್ಯಗಳು ತಮ್ಮ ಪರಮಾಧಿಕಾರವನ್ನೇ ಕಳೆದುಕೊಂಡವು.

ಸಹಾಯಕ ಸೈನ್ಯ ಪದ್ಧತಿಯ ಒಪ್ಪಂದಕ್ಕೆ ಒಳಗಾದ ರಾಜ್ಯಗಳು:
ಹೈದರಾಬಾದ್, ಮೈಸೂರು, ತಿರುವಾಂಕೂರು, ಬರೋಡಾ, ಜೈಪುರ, ಜೋಧ್‌ಪುರ, ಭರತ್‌ಪುರ, ನಾಗಪುರ, ಗ್ವಾಲಿಯರ್, ಔದ್, ತಂಜಾವೂರು, ಸೂರತ್ ಮುಂತಾದವುಗಳು.

ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿ (1848)


ಲಾರ್ಡ್ ಡಾಲ್‌ಹೌಸಿ

ಬ್ರಿಟಿಷ್ ಗವರ್ನರ ಜನರಲ್ ಲಾರ್ಡ್ ಡಾಲ್ ಹೌಸಿಯು "ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ"ಯನ್ನು ಜಾರಿಗೆ ತಂದನು. ಯಾವುದೇ ಭಾರತದ ರಾಜನಿಗೆ ಗಂಡು ಮಕ್ಕಳಿಲ್ಲದಿದ್ದರೆ ದತ್ತು ಪುತ್ರನಿಗೆ ಪಟ್ಟವೇರುವ ಹಕ್ಕಿಲ್ಲವೆಂದು ಘೋಷಿಸಿದನು.

ಪುತ್ರ ಸಂತಾನವಿಲ್ಲದೆ ತೀರಿಕೊಂಡ ಅರಸರ ರಾಜ್ಯಗಳು ಬ್ರಿಟಿಷರ ವಶವಾದವು. ದತ್ತು ಸ್ವೀಕಾರವು ಭಾರತದಲ್ಲಿ ಪ್ರಾಚೀನ ಕಾಲದಿಂದ ಆಚರಣೆಯಲ್ಲಿದ್ದು, ಅದು ರೂಢಿಗೆ ವಿರುದ್ಧವಾಗಿತ್ತು.

ಪರಿಣಾಮಗಳು

- ಈ ಕುಟಿಲ ನೀತಿಯ ಪರಿಣಾಮವಾಗಿ ಔಧ್, ಸತಾರಾ, ನಾಗಪುರ ಮತ್ತು ಝಾನ್ಸಿ ಮುಂತಾದ ರಾಜ್ಯಗಳು ನೇರವಾಗಿ ಬ್ರಿಟಿಷರ ವಶವಾದವು.
- ಸಾ.ಶ. 1856ರಲ್ಲಿ ಡಾಲ್ ಹೌಸಿಯು ತನ್ನ ದೇಶಕ್ಕೆ ಮರುಳುವಾಗ ಭಾರತದ 2/3 (ಮೂರನೇ ಎರಡು) ರಷ್ಟು ಭೂಪ್ರದೇಶವು ಬ್ರಿಟಿಷ್ ಆಳ್ವಿಕೆಗೆ ಒಳಪಟ್ಟಿತು.

ಕಾಲಗಣನೆ: (ಸಾ.ಶ.)

- ಪ್ಲಾಸಿ ಕದನ : 1757
- ಬಕ್ಸಾರ್ ಕದನ : 1764
- ಕರ್ನಾಟಿಕ್ ಯುದ್ಧಗಳು : 1746 ರಿಂದ 1763
- ಸಹಾಯಕ ಸೈನ್ಯ ಪದ್ಧತಿ : 1798
- ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ : 1848

I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

1. ಪ್ಲಾಸಿ ಕದನದ ನಂತರ ಬಂಗಾಳದ ನವಾಬನಾದವನು_____
2. ಬಕ್ಸಾರ್ ಕದನದಲ್ಲಿ ಭಾಗವಹಿಸಿದ ಮೊಗಲ್ ದೊರೆ_____
3. ಎರಡನೇ ಕರ್ನಾಟಿಕ್ ಯುದ್ಧವು_____ ಒಪ್ಪಂದದೊಂದಿಗೆ ಕೊನೆಗೊಂಡಿತು.
4. ವಾಂಡಿವಾಷ್ ಕದನ_____ ರಲ್ಲಿ ನಡೆಯಿತು.

II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಬಕ್ಸಾರ್ ಕದನ ಯಾರ ನಡುವೆ ನಡೆಯಿತು?
2. ಕರ್ನಾಟಿಕ್ ಯುದ್ಧಗಳಲ್ಲಿ ಅಂತಿಮವಾಗಿ ಗೆದ್ದವರು ಯಾರು?
3. ಸಹಾಯಕ ಸೈನ್ಯ ಪದ್ಧತಿಯನ್ನು ಯಾರು ಜಾರಿಗೆ ತಂದರು?
4. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯನ್ನು ಯಾರು ಜಾರಿಗೆ ತಂದರು.

III ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿರಿ.

1. ಬಕ್ಸಾರ್ ಕದನದ ಪರಿಣಾಮಗಳು ಯಾವುವು?
2. ಪ್ಲಾಸಿ ಕದನದ ಕಾರಣಗಳು ಯಾವುವು?
3. ಸಹಾಯಕ ಸೈನ್ಯ ಪದ್ಧತಿಯ ಪರಿಣಾಮಗಳನ್ನು ತಿಳಿಸಿರಿ.
4. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಗೆ ಒಳಪಟ್ಟ ಭಾರತೀಯ ರಾಜ್ಯಗಳನ್ನು ಹೆಸರಿಸಿ.

☆ ☆ ☆

ಪಾಠ 03	ಬ್ರಿಟಿಷ್ ಆಳ್ವಿಕೆಯ ಪರಿಣಾಮ

ಪಾಠದ ಪರಿಚಯ

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು 1600 ರಿಂದ 1757 ರ ತನಕ ಕೇವಲ ಒಂದು ವ್ಯಾಪಾರಿ ಕಂಪನಿಯಾಗಿತ್ತು. ವ್ಯಾಪಾರಿ ಹಿತಾಸಕ್ತಿಯನ್ನು ಹೊತ್ತು ಬಂದ ಬ್ರಿಟಿಷರು ಕ್ರಮೇಣ ರಾಜಕೀಯ ಆಸಕ್ತಿಯನ್ನು ಬೆಳೆಸಿಕೊಂಡರು. ಆರಂಭದಲ್ಲಿ ಭಾರತದ ವಿವಿಧ ರಾಜಕೀಯ ಶಕ್ತಿಗಳಿಗೆ ಮನವಿಗಳನ್ನು ಸಲ್ಲಿಸುತ್ತ ತಮ್ಮ ವ್ಯಾಪಾರಿ ಹಿತಾಸಕ್ತಿಯನ್ನು ಹೆಚ್ಚಿಸಿಕೊಂಡರು. ಕ್ರಮೇಣ ಅವರು ಮನವಿ ಸೂತ್ರದ ಬದಲಿಗೆ ಯುದ್ಧ ಸೂತ್ರವನ್ನು ಅಳವಡಿಸಿದರು. ಇದರಿಂದ ರಾಜಕೀಯವಾಗಿ ಬಲಾಢ್ಯರಾದರು. ಯುದ್ಧಗಳಿಂದ ಪಡೆದ ಭಾರತವನ್ನು ಬೌದ್ಧಿಕವಾಗಿ ತಮ್ಮ ಅಧೀನಕ್ಕೆ ತೆಗೆದುಕೊಳ್ಳುವ ದೂರಗಾಮಿ ಉಪಾಯಗಳನ್ನು ರೂಪಿಸಿದರು. ಅವರ ದೂರಗಾಮಿ ಕನಸನ್ನು ಈಡೇರಿಸಿಕೊಳ್ಳಲು ಆಡಳಿತದ ಸುಧಾರಣೆಗಳನ್ನು ಒಂದು ಸಾಧನಮಾರ್ಗವಾಗಿ ಬಳಸಿಕೊಂಡರು. ರಾಜಕೀಯ, ಅರ್ಥವ್ಯವಸ್ಥೆ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ವಿವಿಧ ಕಾನೂನುಗಳನ್ನು ಜಾರಿಗೊಳಿಸಿದರು. ತಮ್ಮ ಬಹುಮುಖಿ ಹಿತಾಸಕ್ತಿಯೇ ಅವರ ಲೆಕ್ಕಾಚಾರವಾಗಿತ್ತು. ಆದರೆ ಜಾರಿಗೆ ಬಂದ ಕಾನೂನುಗಳನ್ನು 'ಸುಧಾರಣೆ' ಎಂದು ಕರೆದರು. ಆರಂಭದಲ್ಲಿ ಭಾರತೀಯರು ಹಾಗೆಯೇ ನಂಬತೊಡಗಿದರು. ಅವರು ಜಾರಿಗೊಳಿಸಿದ ಸುಧಾರಣೆಗಳಿಂದ ಭಾರತೀಯ ಸಮಾಜದ ಮೇಲೆ ಒಳ್ಳೆಯ ಪರಿಣಾಮಗಳಾಗಿದ್ದರೆ ಅದು ಆಕಸ್ಮಿಕ ಎಂದು ನಾವು ಭಾವಿಸಬಹುದು. ಈ ಅಧ್ಯಾಯದಲ್ಲಿ 'ಸುಧಾರಣೆ'ಗಳಿಗೆ ಸಂಬಂಧಿಸಿದಂತೆ ನಾಲ್ಕು ಕ್ಷೇತ್ರಗಳಲ್ಲಿ ವಿವೇಚನೆ ನಡೆಸಲಾಗಿದೆ. ಕಂದಾಯ, ಇಂಗ್ಲಿಷ್ ಶಿಕ್ಷಣ, ಆರ್ಥಿಕ ಪ್ರಭಾವ ಮತ್ತು ಶಾಸನಾತ್ಮಕ ಬೆಳವಣಿಗೆ ಇವೇ ಆ ನಾಲ್ಕು ಕ್ಷೇತ್ರಗಳು.

ಸಾಮರ್ಥ್ಯಗಳು

1] ಕಂದಾಯ ವ್ಯವಸ್ಥೆಯಲ್ಲಿ ಜಾರಿಗೆ ತಂದ ಖಾಯಂ ಜಮೀನ್ದಾರಿ ಪದ್ಧತಿ, ಮಹಲ್ವಾರಿ ಪದ್ಧತಿ, ರೈತವಾರಿ ಪದ್ಧತಿಯ ಗುಣಾವಗುಣಗಳನ್ನು ಗುರುತಿಸುವುದು.

2] ಭಾರತಕ್ಕೆ ಪ್ರವೇಶ ಮಾಡಿದ ಇಂಗ್ಲಿಷ್ ಶಿಕ್ಷಣ ಪದ್ಧತಿಯ ಕುರಿತು ಮಾಹಿತಿ ಪಡೆಯುವುದು.

3] ಆರ್ಥಿಕ ಪ್ರಭಾವಗಳನ್ನು ಪಟ್ಟಿಮಾಡುವುದು.

4] ಶಾಸನಾತ್ಮಕ ಬೆಳವಣಿಗೆಗಳನ್ನು ತಿಳಿದುಕೊಳ್ಳುವುದು.

ಭೂಕಂದಾಯ ನೀತಿ

ಒಂದು ನಿಗದಿತ ಪ್ರಮಾಣದ ಆದಾಯವು ಸರ್ಕಾರದ ಖಜಾನೆಗೆ ಬರುವಂತೆ ಮಾಡುವುದಕ್ಕಾಗಿ ಬ್ರಿಟಿಷರು ಭೂಕಂದಾಯ ನೀತಿಗಳನ್ನು ಜಾರಿಗೆ ತಂದರು. ಅಲ್ಲದೆ, ಭಾರತದಲ್ಲಿ ಯುದ್ಧಗಳ ವೆಚ್ಚವನ್ನು ತುಂಬುವುದಕ್ಕಾಗಿ, ಕೈತುಂಬ ಸಂಬಳ ಪಡೆಯುತ್ತಿದ್ದ ಸಾವಿರಾರು

ಜನ ಬ್ರಿಟಿಷ್ ಸಿಬ್ಬಂದಿಗಳ ವೇತನಕ್ಕಾಗಿ ಹಾಗೂ ಇತರ ಉದ್ದೇಶಗಳಿಗಾಗಿ ಕಂಪನಿಗೆ ಅಗಾಧ ಹಣಕಾಸಿನ ಅವಶ್ಯಕತೆಯಿತ್ತು. ಅದಕ್ಕಾಗಿ ಕಂಪನಿಯು ಭಾರತದ ರೈತರಿಂದ ದುಬಾರಿಯಾದ ಭೂಕಂದಾಯವನ್ನು ವಸೂಲು ಮಾಡಲಾರಂಭಿಸಿತು.

ಗವರ್ನರ್ ಜನರಲ್ ವಾರನ್ ಹೇಸ್ಟಿಂಗ್ ತನ್ನ ಅಧಿಕಾರಾವಧಿಯಲ್ಲಿ ಕಂದಾಯ ವಸೂಲಿಗಾಗಿ ಹರಾಜು ಮಾಡುವ ವ್ಯವಸ್ಥೆಯನ್ನು ಜಾರಿಗೆ ತಂದನು. ಹರಾಜಿನ ವೇಳೆ ಜಮೀನ್ದಾರರು ಪರಸ್ಪರ ಪೈಪೋಟಿಯಿಂದ ಹೆಚ್ಚು ಮೊತ್ತದ ಕಂದಾಯ ಕೊಡಲು ಒಪ್ಪಿದರೂ ನಂತರ ವಸೂಲಿಯಲ್ಲಿ ವಿಫಲರಾಗುತ್ತಿದ್ದರು. ಹೀಗೆ ಕಂದಾಯದ ಪ್ರಮಾಣವು ಏರುಪೇರಾಗುತ್ತಿತ್ತು. ತಮ್ಮ ಸಮಸ್ಯೆಗೆ ಪರಿಹಾರವಾಗಿ ಬ್ರಿಟಿಷರು ಇನ್ನಿತರ ಮೂರು ರೀತಿಯ ಕಂದಾಯ ಪದ್ಧತಿಗಳನ್ನು ಜಾರಿಗೆ ತಂದರು.

1. ಖಾಯಂ ಜಮೀನ್ದಾರಿ ಪದ್ಧತಿ (ಸಾ.ಶ. 1793)

ಗವರ್ನರ್ ಜನರಲ್ ಕಾರ್ನ್‌ವಾಲೀಸನು ಬಂಗಾಳ, ಬಿಹಾರ, ಒರಿಸ್ಸಾಗಳಲ್ಲಿ ಭೂಕಂದಾಯವನ್ನು ಖಾಯಂ ನೆಲೆಯಲ್ಲಿ ನಿಗದಿಪಡಿಸಲು ನಿರ್ಧರಿಸಿದನು. ಕಂದಾಯ ಸಂಗ್ರಹಕ್ಕೆ ಸಂಬಂಧಿಸಿದಂತೆ, ಅವನು ಜಮೀನ್ದಾರರೊಡನೆ ಮಾಡಿಕೊಂಡ ಒಪ್ಪಂದವನ್ನು ಖಾಯಂ ಜಮೀನ್ದಾರಿ ಪದ್ಧತಿ ಎನ್ನುವರು. ಖಾಯಂ ಜಮೀನ್ದಾರಿ ಪದ್ಧತಿಯಡಿಯಲ್ಲಿ ಜಮೀನ್ದಾರರು ಬ್ರಿಟಿಷ್ ಸರ್ಕಾರದ ಏಜೆಂಟರಂತೆ ಕಾರ್ಯ ನಿರ್ವಹಿಸಿದರು. ಕಂಪನಿಯ ಗೇಣಿ ಪಾಲು ಖಾಯಂ ಆಗಿ ನಿಗಧಿಯಾಗಿತ್ತು. ಆದುದರಿಂದ ಸರ್ಕಾರಕ್ಕೆ ನಿರ್ದಿಷ್ಟ ಪ್ರಮಾಣದ ಆದಾಯ ಬರುವಂತಾಯಿತು. ಕಂದಾಯ ವಸೂಲಿಗಾಗಿ ಸರ್ಕಾರ ಮಾಡುವ ವೆಚ್ಚ ಕಡಿಮೆಯಾಯಿತು. ಭೂಮಾಲೀಕರಾದ ಪ್ರಬಲ ಜಮೀನ್ದಾರರು ಅನೇಕ ಕಠಿಣ ಸಂದರ್ಭಗಳಲ್ಲಿ ಸರ್ಕಾರಕ್ಕೆ ಬೆಂಬಲ ನೀಡಿದರು. ತಮ್ಮನ್ನು ಬೆಂಬಲಿಸಲು ಮತ್ತು ಸಮರ್ಥಿಸಲು ಇಂತಹ ಅನೇಕ ಹೊಸ ವರ್ಗಗಳನ್ನು ಬ್ರಿಟಿಷರು ಸೃಷ್ಟಿಮಾಡಿದರು.

ರೈತರ ಮೇಲೆ ಪರಿಣಾಮ : ಅಧಿಕವಾದ ಕಂದಾಯ ಸಂಗ್ರಹಿಸುವ ಮೂಲಕ ಜಮೀನ್ದಾರರು ಕೃಷಿಕರ ಮೇಲೆ ದಬ್ಬಾಳಿಕೆ ನಡೆಸಿದರು. ಭೂಮಾಲೀಕರು ಕೃಷಿ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಯಾವುದೇ ಆಸಕ್ತಿವಹಿಸಲಿಲ್ಲ. ಬೆಳೆನಾಶವಾಗಿದ್ದರೂ ರೈತರು ಗೇಣಿಯನ್ನು ಪಾವತಿಸಬೇಕಿತ್ತು. ಒಟ್ಟಿನಲ್ಲಿ ಖಾಯಂ ಜಮೀನ್ದಾರಿ ಪದ್ಧತಿಯಿಂದ ಕೃಷಿರಂಗ ಕುಸಿಯಿತು. ತಮ್ಮ ಕೈಗಾರಿಕೆಗಳಿಗೆ ಬೇಕಾದ ವಾಣಿಜ್ಯ ಬೆಳೆಗಳನ್ನು ಬೆಳೆಯಲು ರೈತರನ್ನು ಒತ್ತಾಯಿಸುವ ಮೂಲಕ ರೈತರನ್ನು ಮತ್ತಷ್ಟು ಬಡವರನ್ನಾಗಿಸಿದರು. ಈ ಕಾರಣದಿಂದ ಜೀತಪದ್ಧತಿಯು ತೀವ್ರವಾಗಿ ಬೆಳೆಯಿತು.

2. ರೈತವಾರಿ ಪದ್ಧತಿ (ಸಾ.ಶ. 1820)

ಮಧ್ಯವರ್ತಿಗಳ ಸಹಾಯವಿಲ್ಲದೆ ರೈತನೇ ನೇರವಾಗಿ ಸರ್ಕಾರಕ್ಕೆ ಕಂದಾಯ ಸಂದಾಯ ಮಾಡುವುದೇ ರೈತವಾರಿ ಪದ್ಧತಿಯಾಗಿದೆ. ಸರ್ಕಾರ ಮತ್ತು ಸಾಗುವಳಿದಾರನ ನಡುವಿನ ನೇರ ಸಂಬಂಧವೇ ರೈತವಾರಿ ಪದ್ಧತಿಯ ಮುಖ್ಯ ಲಕ್ಷಣವಾಗಿದೆ. ಈ ಪದ್ಧತಿಯನ್ನು ದಕ್ಷಿಣ ಮತ್ತು ಪಶ್ಚಿಮ ಭಾರತದಲ್ಲಿ ಜಾರಿಗೆ ತರಲಾಯಿತು. ಪರಿಣಾಮದಲ್ಲಿ ಇದು ಖಾಯಂ ಜಮೀನ್ದಾರಿ ಪದ್ಧತಿಗಿಂತ ಭಿನ್ನವಾಗಿರಲಿಲ್ಲ.

ರೈತವಾರಿ ಪದ್ಧತಿಯಡಿ ಭೂಮಿಯನ್ನು ಅಳತೆಮಾಡಿ, ಭೂಮಿಯ ಫಲವತ್ತತೆ, ನೀರಾವರಿ ಅನುಕೂಲತೆಗಳನ್ನು ಗಮನಿಸಿ ಕಂದಾಯವನ್ನು ನಿಗಧಿ ಮಾಡಲಾಯಿತು. ಉತ್ಪನ್ನದ ಅರ್ಧಭಾಗವನ್ನು ಕಂದಾಯವಾಗಿ ನೀಡಬೇಕಾಗಿತ್ತು. ಕಾಲಕಾಲಕ್ಕೆ ಕಂದಾಯವನ್ನು ನಿರ್ಣಯಿಸಲಾಗುತ್ತಿತ್ತು. ನಿಗಧಿಪಡಿಸಿದ ಭೂಕಂದಾಯವು ವಿಪರೀತ ಹೆಚ್ಚಾಗಿರುತ್ತಿತ್ತು. ಕ್ಷಾಮ ಅಥವಾ ಪ್ರವಾಹದಿಂದ ಬೆಳೆ ಪೂರ್ಣವಾಗಿ ಹಾನಿಗೀಡಾದರೂ ರೈತರು ಕಂದಾಯವನ್ನು ತಪ್ಪದೆ ಪಾವತಿಸಬೇಕಾಯಿತು. ಈ ಪದ್ಧತಿಯನ್ನು ಮದ್ರಾಸ್ ಪ್ರಾಂತ್ಯದಾದ್ಯಂತ ಸರ್ ಥಾಮಸ್ ಮನ್ರೊ ಅವರು 1820 ರಲ್ಲಿ ಜಾರಿಗೆ ತಂದರು.

3. ಮಹಲ್ವಾರಿ ಪದ್ಧತಿ (ಸಾ.ಶ. 1833)

ಮಹಲ್ ಎಂದರೆ ಗ್ರಾಮ ಅಥವಾ ಎಸ್ಟೇಟ್ ಎಂದರ್ಥ. ಮಹಲ್‌ಗೆ ಭೂಕಂದಾಯವನ್ನು ನಿಗಧಿಪಡಿಸಲಾಗುತ್ತಿತ್ತು. ಸ್ಥಳೀಯ ಜಮೀನ್ದಾರನು ಎಲ್ಲ ರೈತರ ಭೂಕಂದಾಯಕ್ಕೆ ಹೊಣೆಗಾರನಾಗಿರುತ್ತಿದ್ದನು. 19 ನೇ ಶತಮಾನದಲ್ಲಿ ಜಾರಿಗೆ ಬಂದ ಈ ಪದ್ಧತಿಯನ್ನು ಉತ್ತರ ಪ್ರದೇಶ, ಮಧ್ಯ ಪ್ರದೇಶದ ಕೆಲವು ಭಾಗಗಳು ಮತ್ತು ಪಂಜಾಬಿನಲ್ಲಿ ಜಾರಿಗೆ ತರಲಾಯಿತು.

ಭೂಕಂದಾಯ ಪದ್ಧತಿಗಳ ಒಟ್ಟು ಪರಿಣಾಮಗಳು

- ಜಮೀನನ್ನು ಮಾರಾಟದ ವಸ್ತುವನ್ನಾಗಿ ಬ್ರಿಟಿಷರು ಪರಿವರ್ತಿಸಿದರು.
- ಜಮೀನಿನ ಹರಾಜು ಮತ್ತು ಮಾರಾಟ ಪ್ರಕರಣಗಳು ಹೆಚ್ಚಿದವು.
- ಭೂಕಂದಾಯವನ್ನು ನಗದು ರೂಪದಲ್ಲಿ ನೀಡಬೇಕಾದ ಕಾರಣ ಹಣದ ಮಹತ್ವ ಹೆಚ್ಚಾಯಿತು.
- ಆದಾಯವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಜಮೀನ್ದಾರರು ಆಹಾರ ಧಾನ್ಯಗಳಿಗೆ ಬದಲಾಗಿ ಹತ್ತಿ, ಸೆಣಬು, ನೆಲಗಡಲೆ, ತಂಬಾಕು, ಕಬ್ಬಿನಂತಹ ವಾಣಿಜ್ಯ ಬೆಳೆಗಳನ್ನು ಬೆಳೆಯಲು ರೈತರನ್ನು ಒತ್ತಾಯಿಸಿದರು. ವಾಣಿಜ್ಯ ಬೆಳೆಗಳು ರಪ್ತು ಮಾಡಲು ಯೋಗ್ಯವಾಗಿದ್ದು ಆ ಮೂಲಕ ಬ್ರಿಟಿಷರಿಗೆ ಲಾಭದಾಯಕವೆನಿಸಿತು. ಇದರ ಫಲವಾಗಿ ಆಹಾರ ವಸ್ತುಗಳ ಕೊರತೆ ತಲೆದೋರಿತು.
- ಜಮೀನ್ದಾರಿ ಪದ್ಧತಿಯಲ್ಲೇ ಅನೇಕ ಹೊಸ ರೈತ ವರ್ಗಗಳು ಹುಟ್ಟಿಕೊಂಡವು.

ಇಂಗ್ಲೀಷ್ ಶಿಕ್ಷಣ

ಶಿಕ್ಷಣವು ಪ್ರತಿ ವ್ಯಕ್ತಿಯನ್ನು ಸ್ವತಂತ್ರನನ್ನಾಗಿಸುವ ಸಾಧನ. ಶಿಕ್ಷಣದ ಮೂಲಕ ದೊರೆಯುವ ಅರಿವಿನಿಂದ ಬದುಕನ್ನು ಸುಮಧುರವಾಗಿ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಬ್ರಿಟಿಷರು ಇಂಗ್ಲಿಷ್ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಿದ್ದರಿಂದ ಭಾರತೀಯರು ಅದರ ಲಾಭವನ್ನು ಪಡೆದರು. ಎಲ್ಲ ವರ್ಗದವರಿಗೂ ಶಿಕ್ಷಣ ದೊರೆಯುವಂತಾಯಿತು.

1813ರ ಚಾರ್ಟರ್ ಕಾಯ್ದೆಯಲ್ಲಿ ಭಾರತೀಯರ ಶಿಕ್ಷಣಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಮೀಸಲಿಡಲಾಯಿತು. ಆದರೆ ಈ ಹಣದಲ್ಲಿ ಸರ್ಕಾರವು 1823 ರ ತನಕ ಒಂದು ರೂಪಾಯಿಯನ್ನು ಸಹ ಶಿಕ್ಷಣಕ್ಕಾಗಿ ಖರ್ಚು ಮಾಡಿರಲಿಲ್ಲ. ಭಾರತೀಯ ಚಿಂತಕರು ಮತ್ತು ವಿದೇಶಿ ಕ್ರೈಸ್ತ ಮತಪ್ರಚಾರಕರು ಆಧುನಿಕ ಶಿಕ್ಷಣ ನೀಡಿಕೆಯ ಪರವಾಗಿ ಚಳವಳಿ ನಡೆಸಿದರು. ಈ ನಿಟ್ಟಿನಲ್ಲಿ ಕಂಪನಿಯ ಲೆಕ್ಕಾಚಾರ ಭಿನ್ನವಾಗಿತ್ತು. ತನ್ನ ಆಡಳಿತದಲ್ಲಿ ಕೆಳ ಹಂತದ ಸರ್ಕಾರಿ ನೌಕರರಾಗಿ ಕೆಲಸ ಮಾಡಲು ಅದಕ್ಕೆ ಇಂಗ್ಲಿಷ್ ಬಲ್ಲ ಭಾರತೀಯರು ಕಡಿಮೆ ವೇತನದಲ್ಲಿ ಬೇಕಾಗಿದ್ದರು. ತಮಗೆ ನಿಷ್ಠರಾಗಿರುವ ಭಾರತೀಯ ವಿದ್ಯಾವಂತ ವರ್ಗವನ್ನು ಸೃಷ್ಟಿಸುವುದು ಅವರ ಉದ್ದೇಶವಾಗಿತ್ತು. ಹೊಸ ಶಿಕ್ಷಣ ನೀತಿಯನ್ನು ಜಾರಿಗೊಳಿಸಿದ ಕೀರ್ತಿ ಲಾರ್ಡ್ ಮೆಕಾಲೆ ಮತ್ತು ಚಾರ್ಲ್ಸ್ ವುಡ್ ಅವರಿಗೆ ಸಲ್ಲಬೇಕು.



ಲಾರ್ಡ್ ಮೆಕಾಲೆ

ಚಾರ್ಲ್ಸ್ ವುಡ್

ಶಿಕ್ಷಣ ಮಾಧ್ಯಮದ ಬಗೆಗಿನ ವಿವಾದ

ಶಿಕ್ಷಣ ಮಾಧ್ಯಮಕ್ಕೆ ಸಂಬಂಧಿಸಿದಂತೆ ಕೆಲವು ಆಂಗ್ಲ ವಿದ್ವಾಂಸರು ಭಾರತೀಯ ಭಾಷೆಗಳ ಮೂಲಕ ಭಾರತೀಯ ವಿಷಯಗಳನ್ನು ಕಲಿಸಬೇಕೆಂದು ವಾದಿಸಿದರು. ಇನ್ನು ಕೆಲವರು ಪಾಶ್ಚಾತ್ಯ ವಿಜ್ಞಾನ ಮತ್ತು ಸಾಹಿತ್ಯವನ್ನು ಇಂಗ್ಲಿಷ್ ಭಾಷೆಯಲ್ಲಿ ನೀಡಬೇಕೆಂದು ವಾದಿಸಿದರು. ವಿವಾದವು ಅಂತಿಮವಾಗಿ ಪರಿಹಾರ ಕಂಡ ನಂತರ (1835ರಲ್ಲಿ), ಗವರ್ನರ್ ಜನರಲ್ ವಿಲಿಯಂ ಬೆಂಟಿಂಕನು ಪಾಶ್ಚಾತ್ಯ ವಿಜ್ಞಾನ ಮತ್ತು ಇಂಗ್ಲಿಷ್ ಮಾಧ್ಯಮದ ಪರವಾಗಿ ಶಿಕ್ಷಣ ನೀತಿಯನ್ನು ಘೋಷಿಸಿದನು.

ಕೆಲವು ಐರೋಪ್ಯ ವಿದ್ವಾಂಸರು ಪ್ರಾಚೀನ ಭಾರತದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಪಶ್ಚಿಮದ ಜಗತ್ತಿಗೆ ಪರಿಚಯಿಸಿದರು. 1784 ರಲ್ಲಿ ಸುಪ್ರೀಂ ಕೋರ್ಟ್ ನ್ಯಾಯಾಧೀಶನಾಗಿ ಬಂದ ಸರ್ ವಿಲಿಯಂ ಜೋನ್ಸನು ಕಲ್ಕತ್ತದಲ್ಲಿ 'ಏಷಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್' ಸ್ಥಾಪಿಸಿದನು. ಸಂಸ್ಕೃತ ಭಾಷೆಯ ಹಿರಿಮೆಯನ್ನು ಸಾರಿದನು. ಸರ್ ಚಾರ್ಲ್ಸ್ ವಿಲ್ಕಿನ್ಸ್ 1785 ರಲ್ಲಿ ಭಗವದ್ಗೀತೆಯನ್ನು ಇಂಗ್ಲಿಷಿಗೆ ಭಾಷಾಂತರಿಸಿದನು. ಮ್ಯಾಕ್ಸ್ ಮುಲ್ಲರ್ ಋಗ್ವೇದ ಮತ್ತು ಇತರ ಕೃತಿಗಳನ್ನು ಭಾಷಾಂತರಿಸಿದನು.

ಬೆಂಟಿಂಕನ ಶಿಕ್ಷಣ ನೀತಿಯ ಘೋಷಣೆಗೆ ಆತನ ಕಾರ್ಯಕಾರಿ ಸಮಿತಿಯ ಸದಸ್ಯನಾಗಿದ್ದ ಮೆಕಾಲೆಯ ಟಿಪ್ಪಣಿ ಆಧಾರವಾಗಿತ್ತು. ಮೆಕಾಲೆ ಓರ್ವ ಕಟ್ಟಾ ಆಂಗ್ಲವಾದಿಯಾಗಿದ್ದನು. ಭಾರತೀಯ ಜ್ಞಾನವು ಕೀಳುಮಟ್ಟದ್ದೆಂದು ಆತನ ವಾದ. ಸಂಸ್ಕೃತ ವ್ಯಾಕರಣವನ್ನು ಆತ ಕಟುವಾಗಿ ಅಪಹಾಸ್ಯ ಮಾಡಿದನು. ಭಾರತೀಯರನ್ನು ಅವರ ಸಾಂಸ್ಕೃತಿಕ ಬೇರುಗಳಿಂದ ದೂರಮಾಡುವುದು ಅವನ ಅಂತಿಮ ಗುರಿಯಾಗಿತ್ತು. "ಒಂದು ಒಳ್ಳೆಯ ಐರೋಪ್ಯ ಗ್ರಂಥಾಲಯದ ಒಂದು ಕಪಾಟಿನ ಒಂದು ಸಾಲಿನ ಪುಸ್ತಕಗಳಿಗೆ ಇಡೀ ಪೂರ್ವದ ಜ್ಞಾನ ಭಂಡಾರ ಸರಿಸಾಟಿಯಲ್ಲ" ಎನ್ನುವ ಅವನ ಮಾತುಗಳು ಅವನಲ್ಲಿನ ಪೂರ್ವಾಗ್ರಹವನ್ನು ತೋರಿಸುತ್ತದೆ.

1854 ರಲ್ಲಿ ಬ್ರಿಟಿಷರು ಹೊಸ ಶಿಕ್ಷಣ ನೀತಿಯನ್ನು ರೂಪಿಸಿದರು. ಇದು ಚಾರ್ಲ್ಸ್‌ವುಡ್ ವರದಿಯನ್ನು ಆಧರಿಸಿತ್ತು. ಅಲ್ಪಕಾಲದಲ್ಲೇ ಕೋಲ್ಕತ್ತ, ಮುಂಬೈ ಮತ್ತು ಮದ್ರಾಸುಗಳಲ್ಲಿ ವಿಶ್ವವಿದ್ಯಾಲಯಗಳನ್ನು (1857) ಸ್ಥಾಪನೆ ಮಾಡಲಾಯಿತು. ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಕಾಲೇಜು, ವಿಶ್ವವಿದ್ಯಾಲಯ ಹೀಗೆ ಹಂತಹಂತವಾಗಿ ಶಿಕ್ಷಣ ವ್ಯವಸ್ಥೆ ಜಾರಿಗೆ ಬಂತು. ಶಿಕ್ಷಣ ಕ್ಷೇತ್ರದ ಮೇಲ್ವಿಚಾರಣೆಗಾಗಿ ಶಿಕ್ಷಣ ಇಲಾಖೆಗಳನ್ನು ಪ್ರಾಂತಗಳಲ್ಲಿ ರಚಿಸಲಾಯಿತು. 1844 ರಲ್ಲಿ ಇಂಗ್ಲಿಷ್ ಭಾಷೆಯು ಆಡಳಿತದ ಅಧಿಕೃತ ಭಾಷೆಯಾಯಿತು.

ಬಾಂಬೆ ವಿಶ್ವವಿದ್ಯಾಲಯ

ಮದ್ರಾಸ್ ವಿಶ್ವವಿದ್ಯಾಲಯ

ಪಾಶ್ಚಾತ್ಯ ಶಿಕ್ಷಣದ ಪರಿಣಾಮ

ಪರಂಪರಾನುಗತ ಶಿಕ್ಷಣ ಪದ್ಧತಿಯು ಕ್ರಮೇಣ ಅವನತಿಯ ಹಾದಿ ಹಿಡಿಯಿತು. ಹೊಸ ಶಿಕ್ಷಣ ಕ್ರಮದಿಂದ ವಿವಿಧ ಭಾಷಿಕ ಭಾರತೀಯರು ಇಂಗ್ಲಿಷ್ ಭಾಷೆಯಲ್ಲಿ ಪರಸ್ಪರ ಸಂವಾದಿಸಲು ಸಾಧ್ಯವಾಯಿತು. ಇದು ರಾಷ್ಟ್ರೀಯತೆಯ ಭಾವನೆಗಳನ್ನು ಜನರಲ್ಲಿ ಬೆಳೆಸಲು ಸಹಕಾರಿಯಾಯಿತು. ಯುರೋಪಿನ ಬೌದ್ಧಿಕ ಚಿಂತನೆಗಳು ಕ್ರಮೇಣ ಭಾರತೀಯ ಸಮಾಜವನ್ನು ಪ್ರವೇಶಿಸಿ ದೂರಗಾಮಿ ಪರಿಣಾಮಗಳನ್ನುಂಟು ಮಾಡಿದವು. ಭಾರತೀಯ ಸಾಹಿತ್ಯದ ಮೇಲೂ ಗಂಭೀರ ಪರಿಣಾಮವನ್ನುಂಟು ಮಾಡಿ ಹೊಸ ಸಾಹಿತ್ಯಕ ಚಳವಳಿಗಳಿಗೆ ಈ ಶಿಕ್ಷಣ ಪದ್ಧತಿ ಕಾರಣವಾಯಿತು. ಇದರಿಂದ ಅನೇಕ ವರ್ಗಗಳು ಹೊಸ ಸಾಮಾಜಿಕ ಎಚ್ಚರವನ್ನು ಪಡೆದವು.

ಆರ್ಥಿಕ ಪ್ರಭಾವ

18 ಮತ್ತು 19 ನೇ ಶತಮಾನದಲ್ಲಾದ ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯು ಭಾರತದ ವ್ಯಾಪಾರ ಮತ್ತು ವಾಣಿಜ್ಯದ ಮೇಲೆ ಗಂಭೀರ ಪರಿಣಾಮಗಳನ್ನುಂಟು ಮಾಡಿತು. 1600 ರಿಂದ 1757 ರ ತನಕ ಕಂಪನಿಯು ಕೇವಲ ಒಂದು ವ್ಯಾಪಾರಿ ಕಂಪನಿಯಾಗಿತ್ತು. ಪ್ಲಾಸಿ ಕದನದ ಬಳಿಕ ಅದು ಭಾರತದ ವ್ಯಾಪಾರ ಮತ್ತು ಉತ್ಪಾದನೆಯ ಮೇಲೆ ಏಕಸ್ವಾಮ್ಯವನ್ನು ಸಾಧಿಸುವುದಕ್ಕೆ ಬಂಗಾಳದಲ್ಲಿನ ತನ್ನ ರಾಜಕೀಯ ಅಧಿಕಾರವನ್ನು ಚೆನ್ನಾಗಿ ಬಳಸಿಕೊಂಡಿತು. ಅದೇ ವೇಳೆ ಕಚ್ಚಾಹತ್ತಿಯ ಮಾರಾಟದ ಮೇಲೂ ಅದು ಏಕಸ್ವಾಮ್ಯ ಸ್ಥಾಪಿಸಿತು. ಇದರ ಪರಿಣಾಮವಾಗಿ ನೇಕಾರರು ಕಚ್ಚಾವಸ್ತುವನ್ನು ದುಬಾರಿ ಬೆಲೆಗೆ ಕೊಳ್ಳುವಂತಾಯಿತು. ಒಟ್ಟಿನಲ್ಲಿ ಬ್ರಿಟಿಷ್ ವಾಣಿಜ್ಯ

ನೀತಿಯ ಗುರಿ ಬ್ರಿಟಿಷ್ ಕೈಗಾರಿಕೆಯ ಅವಶ್ಯಕತೆಯನ್ನು ಪೂರೈಸುವುದಲ್ಲದೆ ಬೇರೇನೂ ಆಗಿರಲಿಲ್ಲ. ಭಾರತವು ಬ್ರಿಟನ್ನಿನ ಯಂತ್ರನಿರ್ಮಿತ ಸರಕುಗಳ ಆಮದುದಾರ ಮತ್ತು ಬ್ರಿಟನಿಗೆ ಬೇಕಾದ ಕಚ್ಚಾವಸ್ತುಗಳ ರಪ್ತುದಾರ ಆಗಬೇಕೆಂಬುದಷ್ಟೇ ಅದರ ಮುಖ್ಯ ಗುರಿಯಾಗಿತ್ತು. ಮುಕ್ತ ವ್ಯಾಪಾರ ನೀತಿಯನ್ನು ಜಾರಿಗೊಳಿಸುವ ಮೂಲಕ ಭಾರತದ ಗುಡಿ ಕೈಗಾರಿಕೆಗಳನ್ನು ಅವನತಿಯತ್ತ ದೂಡಿತು.

ಬ್ರಿಟಿಷ್ ಆಳ್ವಿಕೆಯ ವೇಳೆ ಭಾರತವು ಬಡ ರಾಷ್ಟ್ರವಾಗಿ ಮಾರ್ಪಾಡುಗೊಳ್ಳಲು ಮುಖ್ಯ ಕಾರಣವೆಂದರೆ ದೇಶದ ಸಂಪತ್ತು ಇಂಗ್ಲೆಂಡಿಗೆ ಹರಿದು ಹೋದದ್ದು. ದಾದಾಬಾಯಿ ನವರೋಜಿಯವರು ಹೇಳುವಂತೆ ಸಂಪತ್ತಿನ ಸೋರಿಕೆಯೇ (Drain of wealth) ಇದಕ್ಕೆ ಮುಖ್ಯ ಕಾರಣವಾಗಿತ್ತು. ಭಾರತದಲ್ಲಿನ ಬ್ರಿಟಿಷ್ ನಾಗರಿಕರು ವಿವಿಧ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿ ಗಳಿಸಿದ ಲಾಭವು ಸಂಪತ್ತಿನ ಸೋರಿಕೆಯ ಇನ್ನೊಂದು ಪ್ರಮುಖ ಮೂಲವಾಗಿತ್ತು.

ದಾದಾಬಾಯಿ ನವರೋಜಿ

ಸಂಪತ್ತಿನ ಸೋರಿಕೆಯ ಪರಿಣಾಮವಾಗಿ ಭಾರತ ಬಡ ರಾಷ್ಟ್ರವಾಯಿತಲ್ಲದೆ ದೇಶದಲ್ಲಿ ಬಂಡವಾಳದ ಕೊರತೆ ಉಂಟಾಯಿತು. ಇದರಿಂದ ಇಲ್ಲಿನ ಕೈಗಾರಿಕಾ ಅಭಿವೃದ್ಧಿಗೆ ಅಡ್ಡಿಯಾಯಿತು. 'ಅರ್ಥಶಾಸ್ತ್ರದ ಪಿತಾಮಹ' ಆಡಂಸ್ಮಿತ್ ಭಾರತದಲ್ಲಿ ಆಳ್ವಿಕೆ ನಡೆಸುತ್ತಿದ್ದ ಬ್ರಿಟಿಷರನ್ನು 'ಸುಲಿಗೆಕೋರರು' ಎಂದು ಬಣ್ಣಿಸಿದ್ದಾನೆ.

ಶಾಸನಾತ್ಮಕ ಬೆಳವಣಿಗೆ

ರೆಗ್ಯುಲೇಟಿಂಗ್ ಕಾಯ್ದೆ (ಸಾ.ಶ. 1773)

ಭಾರತದ ಸಂವಿಧಾನ ಸುಧಾರಣೆಗಳು ಬ್ರಿಟಿಷರ ಆಡಳಿತ ಕಾಲದಿಂದ ಆರಂಭವಾಯಿತೆನ್ನಬಹುದು. ಈ ದೇಶದ ಸಂವಿಧಾನ ಇತಿಹಾಸದಲ್ಲಿ ರೆಗ್ಯುಲೇಟಿಂಗ್ ಕಾಯ್ದೆ ಒಂದು ಪ್ರಮುಖ ಕಾಲ ಘಟ್ಟ. ಭಾರತದಲ್ಲಿ ಗೌರ್ನರ್ ಜನರಲ್ ವಾರನ್ ಹೇಸ್ಟಿಂಗ್ಸ್ ಈ ಶಾಸನವನ್ನು 1773 ರಲ್ಲಿ ಜಾರಿಗೆ ತಂದನು. ಭಾರತದಲ್ಲಿ ಬ್ರಿಟಿಷರ ಆಡಳಿತಕ್ಕೆ ಈ ಶಾಸನವೇ ಅಡಿಗಲ್ಲಾಯಿತು. ಅದು ಈಸ್ಟ್ ಇಂಡಿಯಾ ಕಂಪನಿಗೆ ಸಂವಿಧಾನವನ್ನು ಒದಗಿಸಿಕೊಟ್ಟಿತು.



ವಾರನ್‌ಹೆಸ್ಟಿಂಗ್ಸ್

ಪಿಟ್ ಇಂಡಿಯಾ ಕಾಯ್ದೆ (ಸಾ.ಶ. 1784)

ಭಾರತದ ಅಡಳಿತ ಕ್ರಮದ ಬಗೆಗೆ ಇಂಗ್ಲೆಂಡಿನ ಸರ್ಕಾರಕ್ಕೆ ತೃಪ್ತಿಯಿರಲಿಲ್ಲ. ಅದರ ಕಡೆ ಇನ್ನೂ ಹೆಚ್ಚಿನ ಗಮನ ಕೊಡಬೇಕೆಂದು ನಿರ್ಧರಿಸಿತು. ಅದುದರಿಂದ ಪ್ರಧಾನಮಂತ್ರಿ ಪಿಟ್ ಒಂದು ಕಾಯ್ದೆಯನ್ನು ತಂದರು. ಈ ಕಾಯ್ದೆಯು ಈಸ್ಟ್

ಇಂಡಿಯಾ ಕಂಪನಿಯನ್ನು ಬ್ರಿಟಿಷ್ ರಾಜ್ಯದ ಅಧೀನಕ್ಕೊಳಪಡಿಸಿ ಅದನ್ನು ಒಂದು ವಿಭಾಗವೆಂದು ಪರಿಗಣಿಸಿತು. ನಂತರ ಅನೇಕ ಶಾಸನಗಳನ್ನು ಬ್ರಿಟಿಷರು ಹೊರಡಿಸಿದರು.

ಮಾರ್ಲೆ–ಮಿಂಟೋ ಸುಧಾರಣೆಗಳು (ಸಾ.ಶ. 1909)

ಲಾರ್ಡ್ ಮಿಂಟೋ ಭಾರತದಲ್ಲಿ ವೈಸ್‌ರಾಯ್ ಆಗಿದ್ದನು. ಅದೇ ಅವಧಿಯಲ್ಲಿ ಲಾರ್ಡ್ ಮಾರ್ಲೆ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದನು. ಲಾರ್ಡ್ ಕರ್ಜನ್‌ನ ದರ್ಪದ ಆಳ್ವಿಕೆ, ಭಾರತೀಯ ಕ್ರಾಂತಿಕಾರರು ನಡೆಸಿದ ಉಗ್ರ ಚಳವಳಿ ಮೊದಲಾದ ಕಾರಣಗಳಿಂದ ಮಾರ್ಲೆ ಮಿಂಟೋ ಸುಧಾರಣೆಗಳು ಜಾರಿಗೆ ಬರುವಂತೆ ಮಾಡಿದವು. ಈ ಕಾಯಿದೆಯ ಪ್ರಕಾರ ಸರ್ಕಾರದ ಕಾರ್ಯಕ್ರಮಗಳಲ್ಲಿ ಅರ್ಹರಾದ ಭಾರತೀಯರನ್ನು ಸೇರಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟವು. ಕೇಂದ್ರ ಶಾಸನಸಭೆಯಲ್ಲಿ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ನಿರ್ಣಯಿಸಲಾಯಿತು. ಪ್ರಾಂತ್ಯ ಶಾಸನಸಭೆಯನ್ನು ವಿಸ್ತರಿಸಲಾಯಿತು.

ಮಾರ್ಲೆ ಮಿಂಟೋ ಸುಧಾರಣೆಗಳು ಭಾರತದ ರಾಜ್ಯಾಂಗ ಘಟನೆಯಲ್ಲಿ ಯಾವುದೇ ಕ್ರಾಂತಿಕಾರಕವಾದ ಬದಲಾವಣೆ ತರಲಿಲ್ಲ. ಪ್ರಜಾಪ್ರತಿನಿಧಿಗಳಿಗೆ ಯಾವ ಹೊಣೆಗಾರಿಕೆಯನ್ನೂ ಕೊಡಲಿಲ್ಲ.

ಮಾಂಟೆಗ್ಯು – ಚಲ್ಮ್ಸ್ ಫರ್ಡ್ ಸುಧಾರಣೆಗಳು (ಸಾ.ಶ. 1919)

ಮಾರ್ಲೆ ಮಿಂಟೋ ಸುಧಾರಣೆಗಳು ಭಾರತೀಯರಿಗೆ ಸಮಾಧಾನವನ್ನುಂಟು ಮಾಡಲಿಲ್ಲ. 1917 ರಲ್ಲಿ ಆಗ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಮಾಂಟೆಗ್ಯು ಅವರು ಒಂದು ಘೋಷಣೆ ಹೊರಡಿಸಿದರು. ಭಾರತೀಯರಿಗೆ ಆಡಳಿತದಲ್ಲಿ ಹೆಚ್ಚಿನ ಪಾತ್ರ ನೀಡಿ ಸ್ವಯಂ ಅಧಿಕಾರ ಸಂಸ್ಥೆಗಳು ಬೆಳೆಯುವಂತೆ ಮಾಡುವುದೇ ಬ್ರಿಟಿಷ್ ಸರ್ಕಾರದ ನೀತಿಯಾಗಿದೆ ಎಂದು ಈ ಘೋಷಣೆಯಲ್ಲಿ ಸ್ಪಷ್ಟಪಡಿಸಿದರು. ಅಂದು ಭಾರತದ ವೈಸರಾಯಿಯಾಗಿದ್ದ ಲಾರ್ಡ್ ಮಿಂಟೋ ಈ ಕಾಯಿದೆಗಳನ್ನು ಭಾರತದಲ್ಲಿ ಜಾರಿಗೆ ತಂದನು. ಸೆಕ್ರೆಟರಿ ಆಫ್ ಸ್ಟೇಟ್‌ನ ಇಂಡಿಯಾ ಕೌನ್ಸಿಲ್ಲಿನಲ್ಲಿ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲಾಯಿತು. ಇವರ ಅಧಿಕಾರಾವಧಿ 5 ವರ್ಷಗಳೆಂದು ನಿರ್ಧರಿಸಲಾಯಿತು. ಭಾರತದ ಹೈಕಮಿಷನರ್ ಒಬ್ಬನನ್ನು ಲಂಡನ್ನಿನಲ್ಲಿ ನೇಮಕ ಮಾಡಲಾಯಿತು.

1935 ರ ಶಾಸನ

ಮಾರ್ಲೆ ಮಿಂಟೋ ಸುಧಾರಣೆಗಳು ಭಾರತೀಯರಿಗೆ ತೃಪ್ತಿ ತರಲಿಲ್ಲ. ಜನರನ್ನು ಸಮಾಧಾನಪಡಿಸಲು 1935 ರ ಭಾರತ ಸರ್ಕಾರದ ಕಾಯಿದೆಯು ಮಹತ್ವದ ಬದಲಾವಣೆಯನ್ನುಂಟು ಮಾಡಿತು. ಪ್ರಾಂತಗಳು ಮತ್ತು ರಾಜ್ಯಗಳ ಒಕ್ಕೂಟದಿಂದ ಭಾರತದ ಒಕ್ಕೂಟದ ರಚನೆಯಾಯಿತು. ಕೇಂದ್ರ ಸರ್ಕಾರದಲ್ಲಿ ದ್ವಿಮುಖ ಆಡಳಿತ ಪದ್ಧತಿಯನ್ನು ರೂಢಿಗೆ ತರಲಾಯಿತು. ಪ್ರಾಂತೀಯ ಸರಕಾರದಲ್ಲಿ ಜವಾಬ್ದಾರಿ ಸರಕಾರಗಳು ಅಸ್ತಿತ್ವಕ್ಕೆ ಬಂದವು. ಈ ಶಾಸನ ಭಾರತದ ಘಟನಾತ್ಮಕ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿದೆ.

ಅಭ್ಯಾಸಗಳು

I. ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದವರು ಯಾರು?
2. ರೈತವಾರಿ ಪದ್ಧತಿ ಎಂದರೇನು?
3. 1813ರ ಚಾರ್ಟರ್ ಕಾಯ್ದೆಯಲ್ಲಿ ಭಾರತೀಯ ಶಿಕ್ಷಣಕ್ಕೆ ಮೀಸಲಿಟ್ಟ ಹಣದ ಮೊತ್ತವೆಷ್ಟು?
4. ಭಾರತದಲ್ಲಿ ರೆಗ್ಯುಲೇಟಿಂಗ್ ಕಾಯ್ದೆಯನ್ನು ಯಾರು, ಯಾವಾಗ ಜಾರಿಗೆ ತಂದರು?
5. 1857 ರಲ್ಲಿ ಸ್ಥಾಪನೆಗೊಂಡ ಭಾರತೀಯ ವಿಶ್ವವಿದ್ಯಾಲಯಗಳು ಯಾವುವು?

II. ಈ ಕೆಳಕಂಡ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿರಿ.

1. ಖಾಯಂ ಜಮೀನ್ದಾರಿ ಪದ್ಧತಿಯು ರೈತರ ಮೇಲೆ ಬೀರಿದ ಪರಿಣಾಮಗಳೇನು?
2. ಪಾಶ್ಚಾತ್ಯ ಶಿಕ್ಷಣದ ಪರಿಣಾಮಗಳನ್ನು ತಿಳಿಸಿರಿ.
3. ಭಾರತದಲ್ಲಿ ಪ್ರಮುಖ ಶಾಸನಾತ್ಮಕ ಸುಧಾರಣೆಗಳನ್ನು ಹೆಸರಿಸಿ.

III ಈ ಕೆಳಗಿನ 'ಎ' ಪಟ್ಟಿಗೆ ಸಂಬಂಧಿಸಿದ 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.

ಎ	ಬಿ
ವಾರನ್ ಹೇಸ್ಟಿಂಗ್	ಖಾಯಂ ಜಮಿನ್ದಾರಿ ಪದ್ಧತಿ
ಕಾರ್ನ್‌ವಾಲೀಸ್	ಇಂಗ್ಲಿಷ್ ಶಿಕ್ಷಣ ನೀತಿ
ಥಾಮಸ್ ಮನ್ರೋ	ಕಂದಾಯ ವಸೂಲಿಯ ಹರಾಜು ವ್ಯವಸ್ಥೆ
ವಿಲಿಯಂ ಬೆಂಟಿಂಕ್	ಸಂಪತ್ತಿನ ಸೋರಿಕೆ ಸಿದ್ಧಾಂತ
ದಾದಾಬಾಯಿನವರೋಜಿ	ರೈತವಾರಿ ಪದ್ಧತಿ

IV ಚರ್ಚಿಸಿರಿ

1. ಬ್ರಿಟಿಷ್ ಅವಧಿಯಲ್ಲಿನ ಕಂದಾಯ ಪದ್ಧತಿ ಮತ್ತು ಪ್ರಚಲಿತ ಕಂದಾಯ ಪದ್ಧತಿ.

☆ ☆ ☆

ಪಾಠ 04	ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆ

ಪಾಠದ ಪರಿಚಯ

ಪಾಶ್ಚಿಮಾತ್ಯ ಶಿಕ್ಷಣದ ಅನುಷ್ಠಾನ ಭಾರತೀಯರಲ್ಲಿ ಒಂದು ಹೊಸ ಜಾಗೃತಿಯನ್ನು ಮೂಡಿಸಿತು. ಅಲ್ಲದೆ ಅದು ಭಾರತೀಯ ಸಮಾಜದ ದೌರ್ಬಲ್ಯಗಳು ಮತ್ತು ಅವನತಿಯನ್ನು ಬಹಿರಂಗಗೊಳಿಸಿತು. ಇದರಿಂದಾಗಿ ಭಾರತೀಯರಿಗೆ ತಮ್ಮ ಸಮಾಜದಲ್ಲಿನ ನ್ಯೂನತೆಗಳ ಬಗ್ಗೆ ಅರಿವುಂಟಾಯಿತಲ್ಲದೆ, ಅವುಗಳನ್ನು ಸರಿಪಡಿಸಲು ಹಲವಾರು ಮಾರ್ಗಗಳನ್ನು ಹುಡುಕತೊಡಗಿದರು. ಈ ನಿಟ್ಟಿನಲ್ಲಿ ಸಂಘಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಭಾರತೀಯ ಸಮಾಜವನ್ನು ಸುಧಾರಿಸಲು ಶ್ರಮಿಸಿದ 19 ನೇ ಶತಮಾನದ ಧಾರ್ಮಿಕ ನಾಯಕರ ಕಾರ್ಯಗಳು ಈ ಪಾಠದಲ್ಲಿದೆ.

ಸಾಮರ್ಥ್ಯಗಳು

1] 19 ನೇ ಶತಮಾನದಲ್ಲಿ ಭಾರತೀಯ ಸಮಾಜದ ಜಾಗೃತಿಗೆ ಕಾರಣವಾದ ಅಂಶಗಳು ಮತ್ತು ಚಿಂತನಶೀಲರ ಪ್ರಯತ್ನಗಳನ್ನು ಕುರಿತು ಅರಿಯುವುದು.

2] ಸಮಾಜದ ಜಾಗೃತಿಗೆ ಸಂಘಸಂಸ್ಥೆಗಳು ಮತ್ತು ಸುಧಾರಕರು ನೀಡಿದ ಕೊಡುಗೆಗಳನ್ನು ಸ್ಮರಿಸುವುದು.

3] ಸಾಮಾಜಿಕ ಸುಧಾರಣಾ ಚಳವಳಿಯಿಂದುಂಟಾದ ಪರಿಣಾಮಗಳನ್ನು ಅರ್ಥೈಸಿಕೊಳ್ಳುವುದು.

ಆಧುನಿಕ ಪಾಶ್ಚಿಮಾತ್ಯ ವಿಚಾರಧಾರೆಯ ಪರಿಣಾಮವಾಗಿ ಭಾರತದಲ್ಲಿ ಒಂದು ನೂತನ ಜಾಗೃತಿ ಉಂಟಾಯಿತು. ಪಾಶ್ಚಿಮಾತ್ಯ ಸಂಸ್ಕೃತಿ, ವೇಷಭೂಷಣ, ನಡಾವಳಿಗಳು, ಸಮಾಜ, ಧಾರ್ಮಿಕ ವಿಚಾರಗಳು, ನಂಬಿಕೆಗಳು ಮತ್ತು ಆಂಗ್ಲರ ಸಾಮಾಜಿಕ ಆದರ್ಶಗಳು ಭಾರತೀಯರ ಮೇಲೆ ಗಾಢವಾದ ಪ್ರಭಾವ ಬೀರಿದವು. ವಿಶೇಷವಾಗಿ ಭಾರತೀಯರು ಪಾಶ್ಚಿಮಾತ್ಯರ ವೈಜ್ಞಾನಿಕ ವಿಚಾರಧಾರೆ, ಮಾನವತಾವಾದ ಹಾಗೂ ಕಾರ್ಯಕಾರಣ ಸಿದ್ಧಾಂತಗಳಿಂದ ಪ್ರಭಾವಿತರಾದರು. ಈ ಬೆಳವಣಿಗೆಗಳ ಪರಿಣಾಮವು ವಸಾಹತುಶಾಹಿ ಕಾಲದ ಭಾರತದಲ್ಲಿ ನವೋದಯದ ಹುಟ್ಟಿಗೆ ನಾಂದಿಯಾಯಿತು. ಸಮಾನತೆಯ ಆಶಯಗಳನ್ನು ಸಾರುವ ಹೊಸ ಅರಿವೇ ಈ ನವೋದಯ ಚಳವಳಿ. ಇದನ್ನು ಸಾಮಾಜಿಕ ಮತ್ತು ಧಾರ್ಮಿಕ ಚಳವಳಿಯ ಹೆಸರಿನಿಂದಲೂ ಕರೆಯುವರು. ಈ ಚಳವಳಿಗಳು ದಲಿತ ಮತ್ತು ಮಹಿಳಾ ವರ್ಗಗಳ ಸಾಮಾಜಿಕ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡಿದವು. ಬ್ರಿಟಿಷರು ಇಂಗ್ಲಿಷ್ ಶಿಕ್ಷಣವನ್ನು ಭಾರತೀಯರ ವಿಮೋಚನೆಗೆ ದಾರಿಯಾಗಿದೆಯೆಂದು ಪ್ರತಿಪಾದಿಸುತ್ತಲೆ, ವಸಾಹತು ಸಿದ್ಧಾಂತವನ್ನು ಭಾರತೀಯರ ಮೇಲೆ ಹೇರುತ್ತಾ ಹೋದರು. ನಮ್ಮ ದೇಶಕ್ಕೆ ದೊಡ್ಡ ಪರಂಪರೆಯಿದೆ. ಆದರೆ ಪರಂಪರೆಯ ಎಲ್ಲ ಸಂಗತಿಗಳು ಅನುಕರಣೀಯವಲ್ಲ. ಅದರಲ್ಲಿನ ಮೂಢ ನಂಬಿಕೆಗಳನ್ನು ತೊಡೆದು ಹಾಕುವ ಅಗತ್ಯವಿದೆ.

ರಾಜಾ ರಾಮಮೋಹನರಾಯ್ (ಬ್ರಹ್ಮಸಮಾಜ – ಸಾ.ಶ. 1828)

ಆಧುನಿಕ ಕಾಲಘಟ್ಟದ ಭಾರತದಲ್ಲಿ ಸಾಮಾಜಿಕ ಜಾಗೃತಿ ಮೂಡಿಸಿದವರಲ್ಲಿ ರಾಜಾರಾಮಮೋಹನ ರಾಯ್ ಮೊದಲಿಗರು. ಇವರನ್ನು 'ಭಾರತದ ನವೋದಯದ ಪಿತಾಮಹ' ಎಂದು ರವೀಂದ್ರನಾಥ ಟ್ಯಾಗೋರ್ ಕರೆದಿರುವುದು ಸಮರ್ಥನೀಯವಾಗಿದೆ.



ರಾಜಾ ರಾಮಮೋಹನ ರಾಯ್

ಜಡ ಭಾರತೀಯ ಸಮಾಜದಲ್ಲಿ ಚೇತನ ತುಂಬುವ ಉದ್ದೇಶವನ್ನು ಹೊಂದಿದ್ದ ರಾಜಾ ರಾಮಮೋಹನರಾಯ್ 'ಆತ್ಮೀಯಸಭಾ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ನಂತರ 1828 ರಲ್ಲಿ 'ಬ್ರಹ್ಮಸಭಾ'ವನ್ನು ಸ್ಥಾಪಿಸಿದರು. ಅದು ಮರು ವರ್ಷ 'ಬ್ರಹ್ಮಸಮಾಜ' ಎಂದು ನಾಮಕರಣಗೊಂಡಿತು. ರಾಜಾ ರಾಮಮೋಹನರಾಯ್ ಪೂರ್ವ ಮತ್ತು ಪಶ್ಚಿಮದ ಚಿಂತನೆಗಳ ಸಮನ್ವಯದ ಪ್ರತಿನಿಧಿಯಾಗಿದ್ದರು. ಸತಿ ಪದ್ಧತಿ, ಜಾತಿ ಪದ್ಧತಿ, ಮೂರ್ತಿ ಪೂಜೆ, ಬಹುಪತ್ನಿತ್ವ, ಬಾಲ್ಯ ವಿವಾಹ ಹಾಗೂ ಎಲ್ಲಾ ತರಹ ಮೂಢ ನಂಬಿಕೆಗಳನ್ನು ಬ್ರಹ್ಮಸಮಾಜವು ಬಲವಾಗಿ ವಿರೋಧಿಸಿತು. ರಾಮಮೋಹನರಾಯ್ ಮತ್ತು ಅವರ ಸಹವರ್ತಿಗಳು ಅರ್ಥಹೀನ ಸತಿಪದ್ಧತಿಯನ್ನು ನಿರ್ಮೂಲನಗೊಳಿಸುವಂತೆ ಬ್ರಿಟಿಷ್ ಸರ್ಕಾರವನ್ನು ಕೋರಿದರು.

ವಿಧವೆಯರ ಶೋಚನೀಯ ಸ್ಥಿತಿ

ಇದರಿಂದ ಅಂದಿನ ಗವರ್ನರ್ ಜನರಲ್ ಆಗಿದ್ದ ವಿಲಿಯಮ್ ಬೆಂಟಿಂಕ್‌ನು ಸತಿ ಪದ್ಧತಿ ಆಚರಣೆಯನ್ನು ಕಾನೂನು ಬಾಹಿರವೆಂದು ಘೋಷಿಸಿದನು (ಸಾ.ಶ. 1829). ಪಾಶ್ಚಿಮಾತ್ಯ ಶಿಕ್ಷಣವನ್ನು ಪ್ರತಿಪಾದಿಸಿದ ರಾಮಮೋಹನರಾಯ್ ಆ ಮೂಲಕ ಅಮಾನವೀಯ ಪದ್ಧತಿಗಳನ್ನು ತೊಡೆದು ಹಾಕಬಹುದೆಂದು ಬಲವಾಗಿ ನಂಬಿದ್ದರು. ವಿಧವಾ ವಿವಾಹ ಮತ್ತು ಏಕದೇವತಾರಾಧನೆಯ ಪರವಾಗಿದ್ದ ರಾಮಮೋಹನ ರಾಯ್ ಅವರು 'ಸಂವಾದ ಕೌಮುದಿ' ಪತ್ರಿಕೆಯ ಮೂಲಕ ಸಾಮಾಜಿಕ ಸುಧಾರಣಾ ಚಳವಳಿಯ ಪ್ರಕ್ರಿಯೆಯನ್ನು ಆರಂಭಿಸಿದರು. ವೈಚಾರಿಕತೆಯ ಮೂಲಕ ಹಿಂದೂ ಧರ್ಮವನ್ನು ಪರಿಶುದ್ಧಗೊಳಿಸಲು ರಾಮಮೋಹನರಾಯ್ ಯತ್ನಿಸಿದರು.

ರಾಮಮೋಹನರಾಯ್ ಇಂಗ್ಲಿಷ್ ಶಿಕ್ಷಣವನ್ನು ಪ್ರತಿಪಾದಿಸಿದ ಮೊದಲಿಗರಲ್ಲಿ ಒಬ್ಬರು. ತಮ್ಮ ಖರ್ಚಿನಲ್ಲಿ ಇಂಗ್ಲಿಷ್ ಶಾಲೆ ನಡೆಸುತ್ತಿದ್ದರು. ಅವರು ವೇದಾಂತ ಕಾಲೇಜನ್ನು ಕೂಡ ಸ್ಥಾಪಿಸಿದರು. ರಾಮಮೋಹನರಾಯ್ ಭಾರತೀಯ ಪತ್ರಿಕೋದ್ಯಮದ ಆದ್ಯ ಪ್ರವರ್ತಕರಲ್ಲಿ ಒಬ್ಬರಾಗಿದ್ದಾರೆ. ಹಲವು ನಿಯತಕಾಲಿಕೆಗಳನ್ನು ಅವರು ಪ್ರಕಟಿಸಿದರು. ಒಟ್ಟಿನಲ್ಲಿ ಅವರು ಜೀವನವಿಡೀ ಸಾಮಾಜಿಕ

ಅನ್ಯಾಯದ ವಿರುದ್ಧ ಹೋರಾಡಿದರು. ಅವರ ಸಮಾಜಮುಖಿ ಕಾರ್ಯಗಳನ್ನು ಮುಂದೆ ದೇವೇಂದ್ರನಾಥ ಟ್ಯಾಗೋರ್ ಮತ್ತು ಕೇಶವಚಂದ್ರ ಸೇನ್ ಮುಂದುವರಿಸಿದರು.

ನಿಮಗೆ ತಿಳಿದಿರಲಿ: **'ರಾಜಾ'** ಎಂಬುದು ರಾಮಮೋಹನ ರಾಯ್ ಅವರಿಗೆ ಮೊಗಲ್ ಬಾದಷಹ 1829ರಲ್ಲಿ ನೀಡಿದ ಬಿರುದಾಗಿತ್ತು.

ಆತ್ಮಾರಾಮ್ ಪಾಂಡುರಂಗ (ಪ್ರಾರ್ಥನಾ ಸಮಾಜ –ಸಾ.ಶ. 1867)

ಎಂ.ಜಿ. ರಾನಡೆ

ಪ್ರಾರ್ಥನಾ ಸಮಾಜವನ್ನು ಆತ್ಮಾರಾಮ್ ಪಾಂಡುರಂಗರು ಪ್ರಾರಂಭಿಸಿದರು. ಇದು ಬ್ರಹ್ಮ ಸಮಾಜದ ನಂತರ ಮುಂಬೈ ಪ್ರದೇಶದಲ್ಲಿ ಪ್ರಾರಂಭವಾದ ಪ್ರಮುಖ ಸಮಾಜ ಸುಧಾರಣಾ ಸಂಸ್ಥೆ. ಬಾಲ್‌ವಾಗ್ಲೆ, ಎನ್.ಜಿ. ಚಂದಾವರ್ಕರ್, ಎಂ.ಜಿ. ರಾನಡೆ ಮತ್ತು ಇತರರು ಇದರ ಪ್ರಮುಖ ನಾಯಕರು. ಇವರು ವಿಧವಾ ವಿವಾಹ, ಅಂತರ್ಜಾತಿ ವಿವಾಹ, ಮಹಿಳೆಯರ ಸ್ಥಾನಮಾನದ ಉನ್ನತೀಕರಣ ಮತ್ತು ಶೋಷಿತ ವರ್ಗದವರ ಅಭಿವೃದ್ಧಿಯ ಕಡೆಗೆ ಗಮನ ಹರಿಸಿದರು. ಅಲ್ಲದೆ ನಿರ್ಗತಿಕರಿಗೆ ಮತ್ತು ಅನಾಥರಿಗೆ ಆಶ್ರಮಗಳನ್ನು ಸ್ಥಾಪಿಸಿದರು. ವಿಧವೆಯರ ಉದ್ಧಾರಕ್ಕಾಗಿ ಶಿಕ್ಷಣ ಸಂಸ್ಥೆಗಳನ್ನು ತೆರೆದರು.

ಮಹಾತ್ಮ ಜ್ಯೋತಿಬಾ ಫುಲೆ (ಸತ್ಯಶೋಧಕ ಸಮಾಜ– ಸಾ.ಶ. 1873)

ಮಹಾತ್ಮ ಜ್ಯೋತಿಬಾ ಫುಲೆ

ಮಹಾತ್ಮ ಜ್ಯೋತಿಬಾ ಫುಲೆಯವರಿಂದ ಮಹಾರಾಷ್ಟ್ರದಲ್ಲಿ ಬ್ರಾಹ್ಮಣೇತರ ಚಳುವಳಿ ಆರಂಭವಾಯಿತು. ಮಹಾರಾಷ್ಟ್ರದ ಕೆಳವರ್ಗದವರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಅವರು ಸತ್ಯಶೋಧಕ ಸಮಾಜವನ್ನು ಸ್ಥಾಪಿಸಿದರು. ಅಸ್ಪೃಶ್ಯರು, ಅನಾಥರು ಮತ್ತು ವಿಧವೆಯರಿಗಾಗಿ ಶಾಲೆಗಳನ್ನು ತೆರೆದರು. ಬ್ರಾಹ್ಮಣ ಪುರೋಹಿತಶಾಹಿಯನ್ನು ಖಂಡಿಸಿದ ಅವರು 'ಗುಲಾಮಗಿರಿ' ಎಂಬ ಕೃತಿಯನ್ನು ರಚಿಸಿ ತಮ್ಮ ಚಿಂತನೆಗಳನ್ನು ಸಂವಾದದ ರೂಪದಲ್ಲಿ ವಿವರಿಸಿದರು. ಪತ್ನಿ ಸಾವಿತ್ರಿಬಾಯಿಯನ್ನು ಜೊತೆಗೂಡಿ ಪುಣೆಯಲ್ಲಿ ಬಾಲಕಿಯರ ಶಾಲೆಯನ್ನು ಆರಂಭಿಸಿದರು. ಬಾಲ ವಿಧವೆಯರಿಗೆ 1863 ರಲ್ಲಿ ಪುನರ್ ವಸತಿ ಕೇಂದ್ರವನ್ನು ತೆರೆಯುವ ಮೂಲಕ ನಡೆಯುತ್ತಿದ್ದ ಶಿಶುಹತ್ಯೆ ಪ್ರಕರಣಗಳನ್ನು ಕೊನೆಗಾಣಿಸುವ ಪ್ರಯತ್ನ ಮಾಡಿದರು. ವಿಧವಾ ವಿವಾಹವನ್ನು ಉತ್ತೇಜಿಸಿದರು. ವಾಸ್ತವವಾಗಿ ಫುಲೆ ಅವರನ್ನು ಬಿ.ಆರ್. ಅಂಬೇಡ್ಕರ್ ತಮ್ಮ ತಾತ್ವಿಕ ಮಾರ್ಗದರ್ಶಕರನ್ನಾಗಿ ಸ್ವೀಕರಿಸಿದ್ದರು.

ತರುಣ ಬಂಗಾಲಿ ಚಳವಳಿ

ರಾಜಾರಾಮಮೋಹನರಾಯ್ ಅವರ ಸುಧಾರಣಾ ತುಡಿತ ಬಂಗಾಳದ ಅನೇಕ ಯುವ ಚಿಂತನಶೀಲರನ್ನು ಪ್ರೇರೇಪಿಸಿತು. ಇದು ತರುಣ ಬಂಗಾಳಿ ಚಳುವಳಿಗೆ ನಾಂದಿಯಾಯಿತು. ಆಂಗ್ಲೋಇಂಡಿಯನ್ ಯುವಕ ಹೆನ್ರಿ ವಿವಿಯನ್ ಡಿರೋಜಿಯರವರು ಈ ಚಳುವಳಿಯ ನೇತಾರರಾಗಿದ್ದರು. ಸ್ವಂತಿಕೆ ಮತ್ತು ವಿವೇಚನೆಯಿಂದ ಆಲೋಚಿಸುವಂತೆ ಅವರು ಯುವಕರಿಗೆ ಕರೆ ನೀಡಿದರು. ಆದರೆ ಭಾರತೀಯರು ಆ ಸಮಯದಲ್ಲಿ ಅವರ ಕರೆಗೆ ಸೂಕ್ತವಾಗಿ ಸ್ಪಂದಿಸಲಿಲ್ಲ.

ಸ್ವಾಮಿ ದಯಾನಂದ ಸರಸ್ವತಿ (ಆರ್ಯ ಸಮಾಜ – ಸಾ.ಶ. 1875)

ಸ್ವಾಮಿ ದಯಾನಂದ ಸರಸ್ವತಿ

ಸ್ವಾಮಿ ದಯಾನಂದ ಸರಸ್ವತಿಯವರು ಆರ್ಯ ಸಮಾಜವನ್ನು ಸ್ಥಾಪಿಸಿದರು. ಅವರ ಮೊದಲ ಹೆಸರು ಮೂಲಶಂಕರ ಎಂದಾಗಿತ್ತು. ವೇದಗಳ ಕಾಲದ ಭಾರತದಲ್ಲಿ ಆದರ್ಶ ಸಮಾಜ ಅಸ್ತಿತ್ವದಲ್ಲಿತ್ತು; ಅಂತಹದೇ ಸಮಾಜ ಇನ್ನೊಮ್ಮೆ ಸ್ಥಾಪನೆಯಾಗಬೇಕು ಎಂಬುದು ಅವರ ಆಶಯವಾಗಿತ್ತು. ಈ ಹಿನ್ನೆಲೆಯಲ್ಲಿ ದಯಾನಂದ ಸರಸ್ವತಿಯವರು "ವೇದಗಳಿಗೆ ಹಿಂದಿರುಗಿ" ಎಂದು ಕರೆ ನೀಡಿದರು. ಮೂರ್ತಿಪೂಜೆ, ಅಸ್ಪೃಶ್ಯತೆ, ಬಾಲ್ಯವಿವಾಹ ಮತ್ತು ಜಾತಿ ಪದ್ಧತಿಯನ್ನು ಅವರು ಖಂಡಿಸಿದರು. ದಯಾನಂದ ಸರಸ್ವತಿಯವರು ಅಂತರ್ಜಾತೀಯ ಮತ್ತು ವಿಧವಾ ವಿವಾಹವನ್ನು ಪ್ರೋತ್ಸಾಹಿಸಿದರು. ಅಲ್ಲದೆ ಏಕದೇವತಾರಾಧನೆಯನ್ನು ಪ್ರತಿಪಾದಿಸಿದರು.

ದಯಾನಂದ ಸರಸ್ವತಿಯವರು ತಮ್ಮ ವಿಚಾರಧಾರೆಯನ್ನು ಪ್ರಸಿದ್ಧ ಕೃತಿಯಾದ 'ಸತ್ಯಾರ್ಥ ಪ್ರಕಾಶ'ದಲ್ಲಿ ಅಭಿವ್ಯಕ್ತಿಸಿದ್ದಾರೆ. ಆರ್ಯ ಸಮಾಜವು ಭಾರತೀಯ ಶಿಕ್ಷಣಾಭಿವೃದ್ಧಿಗೆ ಶ್ರಮಿಸಿದ್ದಲ್ಲದೆ ರಾಷ್ಟ್ರೀಯ ಚಳವಳಿಗೆ ಸ್ಫೂರ್ತಿ ನೀಡಿತ್ತು. ಆರ್ಯ ಸಮಾಜದ ನಾಯಕರಾದ ಲಾಲಾ ಹಂಸರಾಜ್ ಅವರು ಲಾಹೋರಿನಲ್ಲಿ "ದಯಾನಂದ ಆಂಗ್ಲೋವೇದಿಕ್ ಶಾಲೆ"ಯನ್ನು ಸ್ಥಾಪಿಸಿದರು. ತಿಲಕ್, ಲಾಲಾ ಲಜಪತ್ ರಾಯ್‌ರಂತಹ ರಾಷ್ಟ್ರೀಯ ನಾಯಕರು ಆರ್ಯ ಸಮಾಜದ ತತ್ವ ಮತ್ತು ಚಿಂತನೆಗಳಿಂದ ಗಾಢವಾಗಿ ಪ್ರಭಾವಿತರಾದರು. ಮತಾಂತರಗೊಂಡಿದ್ದವರನ್ನು ಮತ್ತೆ ಹಿಂದೂ ಧರ್ಮಕ್ಕೆ ಕರೆತರುವುದಕ್ಕಾಗಿ ದಯಾನಂದರ ಶಿಷ್ಯರಾದ ಶ್ರದ್ಧಾನಂದರು "ಶುದ್ಧಿ ಚಳವಳಿ"ಯನ್ನು ಆರಂಭಿಸಿದರು.

ದಯಾನಂದರು ಕೇವಲ ಜನ್ಮದ ಆಧಾರದಲ್ಲಿ ಬ್ರಾಹ್ಮಣರು ಅಧಿಕಾರ ಪಡೆಯುವುದನ್ನು ತಿರಸ್ಕರಿಸಿದರು. ಸ್ತ್ರೀಯರ ಸಹಿತ ಎಲ್ಲರಿಗೂ ವೇದಗಳನ್ನು ಕಲಿಯುವ ಅಧಿಕಾರವಿದೆಯೆಂದು ಘೋಷಿಸಿದರು. ಗೋಪೂಜೆಯನ್ನು ಪ್ರತಿಪಾದಿಸಿದರು. ಸಂಕ್ಷಿಪ್ತವಾಗಿ ಹೇಳುವುದಾದರೆ ಆರ್ಯ ಸಮಾಜವು ಸ್ವರಾಜ್ಯ ಮತ್ತು ಸ್ವದೇಶಿ ಭಾವನೆಯನ್ನು ಪ್ರಚೋದಿಸಿದ ಒಂದು ಆಂದೋಲನವಾಗಿತ್ತು.



ಸ್ವಾಮಿ ವಿವೇಕಾನಂದ (ರಾಮಕೃಷ್ಣ ಮಿಷನ್ – ಸಾ.ಶ. 1897)

"ಏಳಿ! ಎದ್ದೇಳಿ! ಗುರಿ ಮುಟ್ಟುವ ತನಕ ನಿಲ್ಲದಿರಿ" ಇದು ಸ್ವಾಮಿ ವಿವೇಕಾನಂದರು ಭಾರತೀಯ ಯುವಜನತೆಗೆ ನೀಡಿದ ಕರೆ. ಇವರ ಮೊದಲ ಹೆಸರು ನರೇಂದ್ರನಾಥ ದತ್ತ. ಇವರು

ಕೋಲ್ಕತ್ತಾಯಲ್ಲಿ 1863 ಜನವರಿ 12 ರಂದು ಜನಿಸಿದರು. ರಾಮಕೃಷ್ಣ ಪರಮಹಂಸರ ಶಿಷ್ಯರಾಗಿದ್ದ ಇವರು ತದನಂತರದಲ್ಲಿ ಸನ್ಯಾಸ ಸ್ವೀಕರಿಸಿದರು. ರಾಮಕೃಷ್ಣರ ಮರಣದ ನಂತರ ಅವರ ಶಿಷ್ಯರನ್ನು ಒಗ್ಗೂಡಿಸಿ ಮಾರ್ಗದರ್ಶನ ನೀಡುವ ಜವಾಬ್ದಾರಿ ಸ್ವಾಮಿ ವಿವೇಕನಂದರ ಹೆಗಲ ಮೇಲೆ ಬಿತ್ತು. ಅಮೆರಿಕದ ಚಿಕಾಗೋ ನಗರದಲ್ಲಿ ನಡೆದ ಪ್ರಥಮ ವಿಶ್ವಧರ್ಮ ಸಮ್ಮೇಳನದಲ್ಲಿ (1893) ಅವರು ವೇದಾಂತವನ್ನು ಕುರಿತು ಮಾಡಿದ ಭಾಷಣ ಅವರನ್ನು ವಿಶ್ವವಿಖ್ಯಾತರನ್ನಾಗಿಸಿತು. ಪಶ್ಚಿಮ ಸಂಸ್ಕೃತಿಯ ಹಲವು ಸಾಧನೆಗಳು, ಮಹಿಳಾ ಸಮಾನತೆಯ ಆಶಯಗಳು ಅವರಿಗೆ ಹಿಡಿಸಿದವು.

ಭಾರತವನ್ನು ಕಾಲ್ನಡಿಗೆಯಲ್ಲಿ ಸಂಚರಿಸಿದ ವಿವೇಕಾನಂದರು ಭಾರತದ ಅಂದಿನ ಸಾಮಾಜಿಕ ಸ್ಥಿತಿಗತಿಯನ್ನು ಕಂಡು ಮರುಗಿದರು. ಎಲ್ಲಿಯವರೆಗೆ ಜನರು ಹಸಿವು, ಬಡತನ ಮತ್ತು ಅಜ್ಞಾನದಲ್ಲಿರುವರೋ ಅಲ್ಲಿಯವರೆಗೆ ನಾನು ಮತ್ತೆ ಮತ್ತೆ ಜನ್ಮತಾಳಿ ಅದನ್ನು ಹೋಗಲಾಡಿಸಲು ಶ್ರಮಿಸುತ್ತೇನೆ, ಎನ್ನುತ್ತಿದ್ದರು.

ಶ್ರೀ ರಾಮಕೃಷ್ಣ ಪರಮಹಂಸರು

ಸ್ವಾಮಿ ವಿವೇಕಾನಂದರು

ಪಂಡಿತ ಈಶ್ವರಚಂದ್ರ ವಿದ್ಯಾಸಾಗರರವರು ಬ್ರಾಹ್ಮಣೇತರ ವಿದ್ಯಾರ್ಥಿಗಳಿಗಾಗಿ ಸಂಸ್ಕೃತ ಕಾಲೇಜನ್ನು ತೆರೆದರು. 1856ರಲ್ಲಿ ಮೊದಲಬಾರಿಗೆ ಮೇಲ್ವರ್ಗದಲ್ಲಿ ಕಾನೂನುಬದ್ಧ ವಿಧವಾ ಪುನರ್‌ವಿವಾಹವು ಕಲ್ಕತ್ತದಲ್ಲಿ ವಿದ್ಯಾಸಾಗರರವರ ನೇತೃತ್ವದಲ್ಲಿ ನಡೆಯಿತು.

ಮಾನವ ಹಿತ ಮತ್ತು ಸಮಾಜಸೇವೆಯನ್ನು ನಿರಂತರವಾಗಿ ನಡೆಸಿಕೊಂಡು ಹೋಗಲು ಅವರು ರಾಮಕೃಷ್ಣ ಮಿಷನ್ ಸ್ಥಾಪಿಸಿದರು. ಸ್ತ್ರೀಯರ ಬಗ್ಗೆ ಅಪಾರ ಕಾಳಜಿ ಹಾಗೂ ಗೌರವ ಹೊಂದಿದ ಸ್ವಾಮೀಜಿಯವರು "ಸ್ತ್ರೀಯರ ಉದ್ಧಾರ ನಮ್ಮ ರಾಷ್ಟ್ರದ ಉದ್ಧಾರ" ಎಂದು ಒತ್ತಿ ಹೇಳಿದರು. 'ದರಿದ್ರ ನಾರಾಯಣ'ರ (ಬಡವರ) ಸೇವೆಗೆ ಕರೆ ನೀಡಿದರು. ಒಟ್ಟಾರೆ ಭಾರತದ ಉನ್ನತಿಯ ಕನಸನ್ನು ಕಂಡರು.

ಸ್ವಾಮಿ ವಿವೇಕಾನಂದರನ್ನು ಬಾಲ ಗಂಗಾಧರ ತಿಲಕರು 'ಭಾರತದ ರಾಷ್ಟ್ರೀಯತೆಯ ನಿಜವಾದ ಪಿತಾಮಹ' ಎಂದು ಬಣ್ಣಿಸಿದ್ದಾರೆ. ಸುಭಾಷಚಂದ್ರ ಬೋಸರನ್ನು ಒಳಗೊಂಡಂತೆ ಅನೇಕ ರಾಷ್ಟ್ರೀಯ ಹೋರಾಟಗಾರರು ಇವರ ಬರವಣಿಗೆಗಳಿಂದ ಪ್ರೇರಣೆಗೊಂಡರು.

ಸ್ವಾಮಿ ವಿವೇಕಾನಂದರು ವಿಶ್ವ ಧರ್ಮಸಮ್ಮೇಳನಕ್ಕೆ ಹೋಗುವ ಮುನ್ನ ಮೈಸೂರು ಸಂಸ್ಥಾನಕ್ಕೆ ಭೇಟಿ ನೀಡಿದ್ದರು. ವಿವೇಕಾನಂದರನ್ನು ತಮ್ಮ ಅರಮನೆಗೆ ಆಹ್ವಾನಿಸಿದ 10ನೇ ಚಾಮರಾಜ ಒಡೆಯರ್ ಅವರು ಸಮ್ಮೇಳನಕ್ಕೆ ಹೋಗಲು ಧನಸಹಾಯ ನೀಡಿದರು. ವಿವೇಕಾನಂದರ ಸಲಹೆ ಮೇರೆ ದಲಿತರಿಗೆ ಮೂರು ಪ್ರತ್ಯೇಕ ಶಾಲೆಗಳನ್ನು ಮೈಸೂರು ಒಡೆಯರ್ ತೆರೆದರು.

ಚಟುವಟಿಕೆ : ವಿವೇಕಾನಂದರು ಚಿಕಾಗೋ ವಿಶ್ವ ಧರ್ಮಸಮ್ಮೇಳನದಲ್ಲಿ ಮಾಡಿದ ಭಾಷಣದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿರಿ.

ಮ್ಯಾಡಂ ಎಚ್.ಪಿ. ಬ್ಲಾವಟ್‌ಸ್ಕಿ ಹಾಗೂ ಕರ್ನಲ್ ಎಚ್.ಎಸ್. ಅಲ್ಕಾಟ್

(ಥಿಯಸಾಫಿಕಲ್ ಸೊಸೈಟಿ – ಸಾ.ಶ. 1875)

ಥಿಯಸಾಫಿಕಲ್ ಸೊಸೈಟಿ (ಬ್ರಹ್ಮವಿದ್ಯಾ ಸಮಾಜ)ಯನ್ನು ರಷ್ಯನ್ ಮಹಿಳೆ ಮ್ಯಾಡಂ ಎಚ್.ಪಿ. ಬ್ಲಾವಟ್‌ಸ್ಕಿ ಮತ್ತು ಅಮೆರಿಕದ ಕರ್ನಲ್ ಎಚ್.ಎಸ್. ಅಲ್ಕಾಟ್ ಇವರು ನ್ಯೂಯಾರ್ಕ್‌ನಲ್ಲಿ ಸ್ಥಾಪಿಸಿದರು. ಭಾರತಕ್ಕೆ ಆಗಮಿಸಿ ಚೆನ್ನೈ ಬಳಿಯ ಅಡಿಯಾರ್ ಎಂಬ ಸ್ಥಳದಲ್ಲಿ ಸೊಸೈಟಿಯ ಅಂತರ್‌ರಾಷ್ಟ್ರೀಯ ಕೇಂದ್ರವನ್ನು ಆರಂಭಿಸಿದರು. ನಂತರ ಡಾ. ಆನಿಬೆಸೆಂಟ್ ಇದರ ಅಧ್ಯಕ್ಷರಾಗಿದ್ದರು.

ಮ್ಯಾಡಂ ಎಚ್.ಪಿ. ಬ್ಲಾವಟ್‌ಸ್ಕಿ

ಆನಿಬೆಸೆಂಟ್

ಎಚ್.ಪಿ. ಬ್ಲಾವಟ್‌ಸ್ಕಿರವರು ಬರಹಗಾರರಾಗಿದ್ದು ಹಲವಾರು ಪ್ರಮುಖ ಕೃತಿಗಳನ್ನು ರಚಿಸಿರುವರು. ಈ ಕೃತಿಗಳಲ್ಲಿ ಮಾನವತೆಯ ವಿಶ್ವ ಬ್ರಾತೃತ್ವ, ತತ್ವಶಾಸ್ತ್ರ, ತುಲನಾತ್ಮಕ ಧರ್ಮ ಮತ್ತು ಪ್ರಕೃತಿಯ ಸತ್ಯ ಅರಿಯುವುದಾಗಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ.

ಡಾ. ಆನಿಬೆಸೆಂಟ್ ಭಾರತೀಯ ಸಂಸ್ಕೃತಿಯಿಂದ ಪ್ರಭಾವಿತರಾಗಿದ್ದ ಅವರು ಭಗವದ್ಗೀತೆಯನ್ನು ಇಂಗ್ಲಿಷ್ ಭಾಷೆಗೆ ಅನುವಾದ ಮಾಡಿದರು. 'ನ್ಯೂ ಇಂಡಿಯಾ' ಎಂಬ ಪತ್ರಿಕೆಗಳನ್ನು ಹೊರಡಿಸಿದರು. ಭಾರತದಲ್ಲಿ ಥಿಯಸಾಫಿಕಲ್ ಚಳವಳಿಯ ಕೇಂದ್ರ ಶಕ್ತಿಯಾಗಿ ಮುನ್ನಡೆಸಿದರು.

ಥಿಯಸಾಫಿಕಲ್ ಸೊಸೈಟಿಯ ಉದ್ದೇಶಗಳೆಂದರೆ :

1. ಭೇದವೆಲ್ಲವ ಬಿಟ್ಟು ವಿಶ್ವ ಭಾತೃತ್ವವನ್ನು ನೆಲೆಗೊಳಿಸುವುದು.
2. ಧರ್ಮ, ತತ್ತ್ವಶಾಸ್ತ್ರ ಮತ್ತು ವಿಜ್ಞಾನ ಇವುಗಳ ತುಲನಾತ್ಮಕ ಅಧ್ಯಯನ ನಡೆಸುವುದು.
3. ಪ್ರಕೃತಿಯ ನಿಗೂಢ ತತ್ವಗಳು ಮತ್ತು ಮನುಷ್ಯನಲ್ಲಿ ಅಡಗಿರುವ ಸುಪ್ತಶಕ್ತಿಗಳನ್ನು ಕುರಿತು ಶೋಧ ನಡೆಸುವುದು.

ಆನಿಬೆಸೆಂಟ್ ಬನಾರಸಿನಲ್ಲಿ ಸೆಂಟ್ರಲ್ ಹಿಂದೂ ಕಾಲೇಜನ್ನು ಸ್ಥಾಪಿಸಿದರು. ಇದೇ ಮುಂದೆ ಬನಾರಸ್ ಹಿಂದೂ ವಿಶ್ವವಿದ್ಯಾಲಯ ಎಂಬ ಹೆಸರನ್ನು ಪಡೆಯಿತು. ಬಾಲ್ಯವಿವಾಹವನ್ನು ತಡೆಯಲು ಮತ್ತು ಮೂಢನಂಬಿಕೆ ವಿರುದ್ಧ ಪ್ರಚಾರ ನಡೆಸಲು 'ಮುಂದಾಳುಗಳು' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಅವರು ಮುಂದೆ ಹೋಂರೂಲ್ ಚಳವಳಿಯನ್ನು ಸಹ ಆರಂಭಿಸಿದರು. ಹಾಗೆಯೇ ಭಾರತೀಯ ರಾಷ್ಟ್ರೀಯ ಕಾಂಗ್ರೆಸಿನ ಮೊದಲ ಮಹಿಳಾ ಅಧ್ಯಕ್ಷೆಯಾಗಿದ್ದರು.

ಸರ್ ಸಯ್ಯದ್ ಅಹ್ಮದ್‌ಖಾನ್ (ಅಲಿಘರ್ ಚಳವಳಿ)

ಬಹುತೇಕ ಮುಸ್ಲಿಮರು ಪಾಶ್ಚಾತ್ಯ ಶಿಕ್ಷಣವನ್ನು ಸಂಶಯದಿಂದ ನೋಡುತ್ತಿದ್ದರು ಮತ್ತು ತಮ್ಮ ಧರ್ಮ ಹಿತಾಸಕ್ತಿಗೆ ಮಾರಕವೆಂದು ನಂಬಿದ್ದರು. ಆರಂಭದಲ್ಲಿ ನವಾಬ್ ಅಬ್ದುಲ್ ಲತೀಫರು 1863 ರಲ್ಲಿ 'ಮಹಮಡನ್ ಲಿಟರರಿ ಸೊಸೈಟಿ' ಸ್ಥಾಪಿಸಿದರು. ಈ ಸಂಸ್ಥೆಯ ಮೂಲಕ ಮುಸ್ಲಿಮರಲ್ಲಿ ಇಂಗ್ಲಿಷ್ ಶಿಕ್ಷಣ ವಿಸ್ತರಿಸಲು ಪ್ರಯತ್ನಿಸಿದರು. ಜೊತೆಗೆ ಹಿಂದೂ–ಮುಸ್ಲಿಮರ ನಡುವೆ ಸಾಮರಸ್ಯ ತರುವ ಪ್ರಯತ್ನ ಮಾಡಿದರು. ಈ ಪ್ರಯತ್ನಕ್ಕೆ ಚಳವಳಿಯ ಸ್ವರೂಪ ನೀಡಿದವರು ಸರ್ ಸಯ್ಯದ್ ಅಹ್ಮದ್‌ಖಾನ್. 1817 ರಲ್ಲಿ ದಿಲ್ಲಿಯಲ್ಲಿ ಜನಿಸಿದ ಇವರು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯಲ್ಲಿ ನ್ಯಾಯಾಂಗ ಅಧಿಕಾರಿಯಾಗಿ ನೇಮಕಗೊಂಡರು. ತನ್ನ ಸಮುದಾಯದವರು. ಇಂಗ್ಲಿಷ್ ಶಿಕ್ಷಣದಿಂದ ವಂಚಿತರಾಗಿ ಆರ್ಥಿಕ ಹಾಗೂ ಸಾಮಾಜಿಕ ಅವಕಾಶಗಳನ್ನು ಕಳೆದುಕೊಂಡಿದ್ದಾರೆ ಎಂದು ಭಾವಿಸಿದರು. ಶಿಕ್ಷಣವನ್ನು ಪಡೆಯುವ ಮೂಲಕ ಸರ್ಕಾರದಲ್ಲಿ ಮುಸ್ಲಿಂ ಸಮುದಾಯ ಸೂಕ್ತ ಪ್ರಾತಿನಿಧ್ಯ ಪಡೆಯಬೇಕೆಂಬುದು ಅವರ ಮಹದಾಸೆಯಾಗಿತ್ತು.



ಸರ್ ಸಯ್ಯದ್ ಅಹ್ಮದ್ ಖಾನ್

ಅಂತೆಯೇ ಒಬ್ಬ ಸಮಾಜ ಸುಧಾರಕರಾಗಿ ಪರ್ದಾಪದ್ಧತಿ, ಬಹುಪತ್ನಿತ್ವ ಹಾಗೂ ವಿವಾಹ ವಿಚ್ಛೇದನ ಪದ್ಧತಿಗಳನ್ನು ವಿರೋಧಿಸಿದರು. ಇಂಗ್ಲಿಷಿನ ವೈಜ್ಞಾನಿಕ ಮತ್ತು ಸಾಹಿತ್ಯಕ ಕೃತಿಗಳನ್ನು ಉರ್ದುವಿಗೆ ಭಾಷಾಂತರಿಸಲು ಟ್ರಾನ್ಸ್‌ಲೇಷನ್ ಸೊಸೈಟಿಯನ್ನು ಪ್ರಾರಂಭಿಸಿದರು. ಅನಂತರದಲ್ಲಿ ಈ ಸಂಸ್ಥೆ 'ಸೈಂಟಿಫಿಕ್ ಸೊಸೈಟಿ' ಎಂದು ನಾಮಕರಣಗೊಂಡಿತು. ವೈಜ್ಞಾನಿಕ ಆಲೋಚನೆಗಳನ್ನು ಮುಸ್ಲಿಮರಲ್ಲಿ ಪ್ರಚಾರ ಪಡಿಸಲು 'ಆಲಿಘರ್ ಇನ್‌ಸ್ಟಿಟ್ಯೂಟ್ ಗೆಸೆಟ್' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಈ ಪತ್ರಿಕೆಯು ಇಂಗ್ಲಿಷ್ ಮತ್ತು ಉರ್ದು ಭಾಷೆಗಳಲ್ಲಿ ಪ್ರಕಟವಾಗುತ್ತಿತ್ತು. 1875 ಮಹಮಡನ್ ಆಂಗ್ಲೊ ಓರಿಯಂಟಲ್ ಕಾಲೇಜನ್ನು ಆರಂಭಿಸಿದರು. ಈ ಸಂಸ್ಥೆಯೇ 1920 ರಲ್ಲಿ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು.

ಶ್ರೀ ನಾರಾಯಣಗುರು


ಶ್ರೀ ನಾರಾಯಣಗುರು

ಶ್ರೀ ನಾರಾಯಣಗುರು ಓರ್ವ ಪ್ರಮುಖ ಸಂತ ಮತ್ತು ಸಮಾಜ ಸುಧಾರಕರಾಗಿ ಪ್ರಸಿದ್ಧಿ ಹೊಂದಿದ್ದಾರೆ. ಅವರ 1854 ರಲ್ಲಿ ತಿರುವಾಂಕೂರಿನ 'ಈಳವ' ಸಮುದಾಯದ ಕುಟುಂಬವೊಂದರಲ್ಲಿ ಜನಿಸಿದರು. "ಶ್ರೀ ನಾರಾಯಣ ಧರ್ಮ ಪರಿಪಾಲನಾ ಯೋಗಂ" ಎಂಬ ಸಂಸ್ಥೆಯನ್ನು 1903 ರಲ್ಲಿ ಸ್ಥಾಪಿಸಿದರು. ಅದರ ಮೂಲಕ ಅವರು ಕೇರಳದ ಈಳವರು ಸೇರಿದಂತೆ ಹಿಂದುಳಿದ ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಗತಿಗಾಗಿ ಶ್ರಮಿಸಿದರು. ಜಾತಿ ಪದ್ಧತಿಯನ್ನು, ಪ್ರಾಣಿಬಲಿಯನ್ನು ವಿರೋಧಿಸಿದರು. ಸಂಸ್ಕೃತ ಶಾಲೆಗಳನ್ನು ತೆರೆದು ಅಲ್ಲಿ ಜಾತಿಮತ ಭೇದರಹಿತವಾಗಿ ಎಲ್ಲರಿಗೂ ಪ್ರವೇಶ ನೀಡಿದರು. ಅವರು ಸುಮಾರು ಮೂವತ್ತು ದೇವಸ್ಥಾನಗಳನ್ನು ನಿರ್ಮಿಸಿದರು. ಕೇರಳದ ಅಸ್ಪೃಶ್ಯರೂ ಸೇರಿದಂತೆ ಎಲ್ಲಾ ಜಾತಿಯವರಿಗೂ ಪ್ರವೇಶ ಕಲ್ಪಿಸಿದರು. ದೇವಾಲಯಗಳಲ್ಲಿ ಎಲ್ಲ ಮತಧರ್ಮಗಳ ಗ್ರಂಥಗಳನ್ನು ಒಳಗೊಂಡ ಉತ್ತಮ ಗ್ರಂಥಾಲಯ ಇರಬೇಕೆಂದು ಬಯಸಿದರು. ಶ್ರೀ ನಾರಾಯಣಗುರು ಅವರ ಆಶಯವು ಈ ಹೇಳಿಕೆಯಲ್ಲಿ ವ್ಯಕ್ತವಾಗುತ್ತದೆ: "ಒಬ್ಬ ದೇವರು, ಒಂದು ಧರ್ಮ ಮತ್ತು ಒಂದು ಜಾತಿ" (one God, one Religion and one caste). ಇವರ ಪ್ರಭಾವ ಕರ್ನಾಟಕದ ಮೇಲೂ ಉಂಟಾಗಿರುವುದನ್ನು ಗಮನಿಸಬಹುದು. ನಾರಾಯಣಗುರು ಅವರು 1928ರಲ್ಲಿ ನಿಧನರಾದರು.

ಚಟುವಟಿಕೆ

ಶ್ರೀ ನಾರಾಯಣಗುರು ಮತ್ತು ತಮಿಳುನಾಡಿನಲ್ಲಿ 1920ರ ದಶಕದಲ್ಲಿ ಆತ್ಮಗೌರವ **ಚಳವಳಿ**ಯನ್ನು ಪ್ರಾರಂಭಿಸಿದ ಪೆರಿಯಾರ್ ಅವರುಗಳನ್ನು ಕುರಿತು ಹೆಚ್ಚಿನ ಮಾಹಿತಿಯನ್ನು ಕಲೆ ಹಾಕಿರಿ.

ಮಹಿಳಾ ಸಮಾಜ ಸುಧಾರಕಿಯರು

ಮೇಡಂ ಹೆಚ್.ಪಿ. ಬ್ಲಾವಟ್‌ಸ್ಕಿ, ಅನಿಬೆಸೆಂಟ್, ಸಾವಿತ್ರಿಬಾಯಿಪುಲೆ, ತಾರಾಬಾಯಿಶಿಂದೆ, ಪಂಡಿತ್ ರಮಾಬಾಯಿ ಮುಂತಾದವರು ಭಾರತದ ಪ್ರಮುಖ ಸಾಮಾಜಿಕ ಸುಧಾರಕರು.

ಸಾವಿತ್ರಿಬಾಯಿ ಫುಲೆ

ಸಾವಿತ್ರಿಬಾಯಿ ಫುಲೆ

ಸಾವಿತ್ರಿಬಾಯಿ ಫುಲೆ ಭಾರತದ ಪ್ರಸಿದ್ಧ ಸಮಾಜ ಸುಧಾರಕರು, ಶೈಕ್ಷಣಿಕ ಸುಧಾರಕರು ಹಾಗೂ ಕವಯಿತ್ರಿ. ತಮ್ಮ ಪತಿ ಜ್ಯೋತಿ ಬಾ ಫುಲೆಯವರೊಡಗೂಡಿ ಪುಣೆಯಲ್ಲಿ ಬಾಲಕಿಯರ ಶಾಲೆಯನ್ನು ಆರಂಭಿಸಿದರಲ್ಲದೆ ತಾವೇ ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿದರು. ಬಾಲ ವಿಧವೆಯವರಿಗಾಗಿ ಪುನರ್ ವಸತಿ ಕೇಂದ್ರಗಳನ್ನು ತೆರೆಯುವ ಮೂಲಕ ನಡೆಯುತ್ತಿದ್ದ ಶಿಶುಹತ್ಯೆ ಪ್ರಕರಣಗಳನ್ನು ಕೊನೆಗಾಣಿಸಲು ಪ್ರಯತ್ನ ಮಾಡಿದರು. ಜಾತಿ ಪದ್ಧತಿ ಮತ್ತು ಲಿಂಗ ಅಸಮಾನತೆಯ ವಿರುದ್ಧ ಹೋರಾಡಿದರು. ಅದಕ್ಕಾಗಿ ಅವರು ಸಮಾಜದ ವಿರೋಧವನ್ನು ಎದುರಿಸಬೇಕಾಯಿತು.

ಪತಿ ಜ್ಯೋತಿ ಬಾ ಫುಲೆಯ ಸಾಮಾಜಿಕ ಹೋರಾಟಗಳಲ್ಲಿ ಹೆಗಲಿಗೆ ಹೆಗಲುಗೊಟ್ಟು ದುಡಿದರು. ಅವರ ಸಾವಿನ ನಂತರ 'ಸತ್ಯ ಶೋಧಕ ಸಮಾಜ'ವನ್ನು ಮುನ್ನಡೆಸಿದರು. ಪ್ಲೇಗ್ ಮಹಾಮಾರಿಯ ರೋಗಕ್ಕೆ ತುತ್ತಾದವರ ಸೇವೆಯನ್ನು ತಮ್ಮ ಮಗನೊಡನೆ ಸೇರಿ ಮಾಡುತ್ತಿರುವಾಗಲೇ ಪ್ಲೇಗ್ ರೋಗಕ್ಕೆ ತುತ್ತಾದರು.

ತಾರಾಬಾಯಿ ಶಿಂದೆ

ತಾರಾಬಾಯಿ ಶಿಂದೆ

ತಾರಾಬಾಯಿ ಶಿಂದೆ ಮಹಾರಾಷ್ಟ್ರದ ಮೊದಲ ಮಹಿಳಾ ಹೋರಾಟಗಾರ್ತಿ. ಜ್ಯೋತಿ ಬಾ ಫುಲೆಯವರ ಸತ್ಯಶೋಧಕ ಸಮಾಜದ ಸಕ್ರಿಯ ಸದಸ್ಯರಾಗಿ ಸಾಮಾಜಿಕ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಬಾಲ ವಿಧವೆಯರ ರಕ್ಷಣೆ ಮತ್ತು ವಿಧವಾ ಪುನರ್ವಿವಾಹಕ್ಕೆ ಬೆಂಬಲ ನೀಡಿದರು. ತಮ್ಮ ಕೃತಿ 'ಸ್ತ್ರೀ–ಪುರುಷ ತುಲನಾ'ದಲ್ಲಿ ಮಹಿಳೆಯ ಶೋಷಣೆಯನ್ನು ಉಗ್ರವಾಗಿ ಪ್ರತಿಭಟಿಸಿದ್ದಾರೆ.

ಪಂಡಿತ್ ರಮಾಬಾಯಿ

ಪಂಡಿತ್ ರಮಾಬಾಯಿ

ಪಂಡಿತ್ ರಮಾಬಾಯಿ ಅವರು ಭಾರತದ ಪ್ರಸಿದ್ಧ ಕ್ರೈಸ್ತ ಸಮಾಜ ಸುಧಾರಕಿ. ಅನಂತಶಾಸ್ತ್ರಿ ಡೊಂಗ್ರೆ ಹಾಗೂ ಲಕ್ಷ್ಮೀಬಾಯಿ ದಂಪತಿಗಳ ಪುತ್ರಿಯಾಗಿ ಪಶ್ಚಿಮಘಟ್ಟದ ಗಂಗಾಮೂಲ ಎಂಬಲ್ಲಿ ಜನಿಸಿದರು. ಅಂದಿನ ಸಾಮಾಜಿಕ ಪರಿಸ್ಥಿತಿಗೆ ವಿರುದ್ಧವಾಗಿ ಶಿಕ್ಷಣ ಪಡೆದರು. ಇಂಗ್ಲೆಂಡಿನಲ್ಲಿ ಓದುವಾಗ ಕ್ರೈಸ್ತಧರ್ಮೀಯರಾದರು. ಭಾರತೀಯ ಮಹಿಳೆಯ ಉದ್ಧಾರಕ್ಕಾಗಿ ಜೀವನವನ್ನೇ ಮುಡುಪಿಟ್ಟು 1889 ರಲ್ಲಿ 'ಮುಕ್ತಿ ಮಿಷನ್' ಸಂಸ್ಥೆಯನ್ನು ಹುಟ್ಟು ಹಾಕಿದರು. ಈ ಸಂಸ್ಥೆಯು ವಿಧವೆಯರು, ಅನಾಥರು ಹಾಗೂ ಕುಡುಕರಿಗೆ ಜೀವನೋಪಾಯ ಕಲ್ಪಿಸುತ್ತಾ ಇಂದಿಗೂ ಕಾರ್ಯಶೀಲವಾಗಿದೆ.

I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

1. ಸಂವಾದ ಕೌಮುದಿ ಪತ್ರಿಕೆಯನ್ನು_____ ಅವರು ಆರಂಭಿಸಿದರು.
2. ಗುಲಾಮಗಿರಿ ಎಂಬ ಕೃತಿಯನ್ನು ರಚಿಸಿದವರು_____
3. ಲಾಹೋರಿನಲ್ಲಿ 'ದಯಾನಂದ ಆಂಗ್ಲೋವೇದಿಕ್ ಶಾಲೆಯನ್ನು ಆರಂಭಿಸಿದವರು_____
4. ಮಹಿಳೆಯರ ಉದ್ಧಾರಕ್ಕಾಗಿ 'ಮುಕ್ತಿಮಿಷನ್' ಸಂಸ್ಥೆಯನ್ನು ಸ್ಥಾಪಿಸಿದವರು_____

II. ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. 'ಭಾರತದ ನವೋದಯ ಪಿತಾಮಹ' ಎಂದು ಯಾರನ್ನು ಕರೆಯುತ್ತಾರೆ?
2. ಮಹಾದೇವ ಗೋವಿಂದ ರಾನಡೆ ಯಾರು?
3. ಸತ್ಯಶೋಧಕ ಸಮಾಜದ ಸ್ಥಾಪಕರು ಯಾರು?
4. "ಏಳಿ! ಎದ್ದೇಳಿ! ಗುರಿ ಮುಟ್ಟುವ ತನಕ ನಿಲ್ಲದಿರಿ" ಇದು ಯಾರ ಕರೆಯಾಗಿತ್ತು?
5. ಅನಿಬೆಸೆಂಟ್ ಯಾರು?
6. ಅಲಿಘರ್ ಚಳುವಳಿಯ ನೇತಾರ ಯಾರಾಗಿದ್ದರು?
7. ಶ್ರೀ ನಾರಾಯಣಗುರು ಸ್ಥಾಪಿಸಿದ ಸಂಸ್ಥೆ ಯಾವುದು?
8. 'ಸ್ತ್ರೀಪುರುಷ ತುಲನಾ' ಕೃತಿಯ ಲೇಖಕಿ ಯಾರು?
9. ಭಾರತದ ಪ್ರಸಿದ್ಧ ಕ್ರೈಸ್ತ ಸಮಾಜ ಸುಧಾರಕಿ ಯಾರು?

III. ಈ ಕೆಳಕಂಡ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿರಿ.

1. ರಾಮಮೋಹನ್ ರಾಯರ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣ ಕ್ರಮಗಳನ್ನು ತಿಳಿಸಿ.
2. ಸಮಾಜ ಸುಧಾರಣೆಯಲ್ಲಿ ಜ್ಯೋತಿ ಬಾಫುಲೆಯವರ ಪಾತ್ರವೇನು?
3. ಥಿಯಸಾಫಿಕಲ್ ಸೊಸೈಟಿಯ ಉದ್ದೇಶಗಳೇನು?
4. ಮುಸ್ಲಿಂ ಸಮುದಾಯವನ್ನು ಸುಧಾರಿಸುವಲ್ಲಿ ಸಯ್ಯದ್ ಅಹ್ಮದ್ ಖಾನರ ಪಾತ್ರವೇನು?
5. ಹಿಂದುಳಿದ ಸಮುದಾಯಗಳನ್ನು ಸುಧಾರಿಸುವಲ್ಲಿ ನಾರಾಯಣ ಗುರು ಕೈಗೊಂಡ ಕ್ರಮಗಳೇನು?
6. ಮಹಿಳಾ ಸುಧಾರಣೆಯಲ್ಲಿ ಪಂಡಿತ್ ರಮಾಬಾಯಿ ಅವರ ಪಾತ್ರವೇನು?

IV ಈ ಕೆಳಗಿನ 'ಎ' ಪಟ್ಟಿಗೆ ಸಂಬಂಧಿಸಿದ 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.

ಎ	ಬಿ
ಸ್ವಾಮಿ ವಿವೇಕಾನಂದ	ಅಲಿಘರ್ ಚಳವಳಿ
ಸ್ವಾಮಿ ದಯಾನಂದ ಸರಸ್ವತಿ	ಸತ್ಯಶೋಧಕ ಸಮಾಜ
ಸಯ್ಯದ್ ಅಹ್ಮದ್‌ಖಾನ್	ಥಿಯಸಾಫಿಕಲ್ ಸೊಸೈಟಿ
ಜ್ಯೋತಿ ಬಾಫುಲೆ	ರಾಮಕೃಷ್ಣ ಮಿಷನ್
ಅನಿಬೆಸೆಂಟ್	ಆರ್ಯಸಮಾಜ

V ಚರ್ಚಿಸಿ

"ಸ್ತ್ರೀಯರ ಉದ್ಧಾರ ನಮ್ಮ ರಾಷ್ಟ್ರದ ಉದ್ಧಾರ" ಸ್ವಾಮಿ ವಿವೇಕಾನಂದರ ಈ ಮಾತು ಇಂದಿಗೂ ಪ್ರಸ್ತುತವೇ? ಗುಂಪಾಗಿ ಚರ್ಚಿಸಿರಿ.

ಚಟುವಟಿಕೆ

ಎಂ.ಜಿ. ರಾನಡೆ, ಜ್ಯೋತಿಬಾ ಫುಲೆ, ರಾಜಾ ರಾಮಮೋಹನರಾಯ್, ಸ್ವಾಮಿ ವಿವೇಕಾನಂದ, ಸ್ವಾಮಿ ದಯಾನಂದಸರಸ್ವತಿ, ಸರ್ ಸಯ್ಯದ್ ಅಹ್ಮದ್‌ಖಾನ್ ಮತ್ತು ಶ್ರೀ ನಾರಾಯಣಗುರು ಇವರ ಜೀವನ ಚರಿತ್ರೆಗಳನ್ನು ಓದಿರಿ.

☆ ☆ ☆

ಪಾಠ 05	ಸ್ವಾತಂತ್ರ್ಯ ಹೋರಾಟಗಳು

ಪಾಠದ ಪರಿಚಯ

ಭಾರತೀಯರು ತಮ್ಮ ಸ್ವಾತಂತ್ರ್ಯಕ್ಕಾಗಿ ಅನೇಕ ಹೋರಾಟಗಳನ್ನು ಮಾಡಿದರು. ಭಾರತೀಯ ಇತಿಹಾಸದಲ್ಲಿ ಇದೊಂದು ಮಹತ್ವದ ಮೈಲಿಗಲ್ಲು. ಭಾರತದಲ್ಲಿ ಪೋರ್ಚುಗೀಸರು, ಡಚ್ಚರು, ಫ್ರೆಂಚರು ಮತ್ತು ಬ್ರಿಟಿಷರು ತಮ್ಮ ವ್ಯಾಪಾರದ ನೆಲೆಗಳನ್ನು ಸ್ಥಾಪಿಸಿದರು. ಭಾರತೀಯರನ್ನು ನಿರಂತರವಾಗಿ ಶೋಷಣೆಗೊಳಪಡಿಸಿದರು. ಅವರ ಆಕ್ರಮಣಕಾರಿ ನೀತಿ, ಅನ್ಯಾಯ, ಆರ್ಥಿಕ ಶೋಷಣೆಯ ವಿರುದ್ಧ ಭಾರತೀಯರು ತೊಡೆತಟ್ಟಿ ನಿಂತರು. ಬ್ರಿಟಿಷರನ್ನು ಭಾರತದಿಂದ ಹೊರಹಾಕಬೇಕೆಂಬ ಸಂಕಲ್ಪ ತೊಟ್ಟರು. ಹೋರಾಟಕ್ಕೆ ಅಣಿಯಾದರು. ಈ ಹೋರಾಟದ ವಿವಿಧ ಮಜಲುಗಳನ್ನು ಇಲ್ಲಿ ವಿವರಿಸಲಾಗಿದೆ.

ಸಾಮರ್ಥ್ಯಗಳು

1] ಬ್ರಿಟಿಷರ ವಿರುದ್ಧ ನಡೆದ ಆರಂಭಿಕ ಪ್ರತಿಭಟನೆಗಳನ್ನು ಅರಿಯುವುದು.

2] 1857 ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣವಾದ ಅಂಶಗಳನ್ನು ತಿಳಿಯುವುದು.

3] ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟ ನಡೆಸಿದ ಪ್ರಮುಖ ನಾಯಕರ ಹೋರಾಟವನ್ನು ಸ್ಮರಿಸುವುದು.

4] 19ನೇ ಶತಮಾನದಲ್ಲಿ ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣವಾದ ಪ್ರಮುಖ ಅಂಶಗಳನ್ನು ಅರಿಯುವುದು.

5] ಮಂದಗಾಮಿಗಳು, ತೀವ್ರಗಾಮಿಗಳು ಮತ್ತು ಕ್ರಾಂತಿಕಾರಿಗಳ ತಾತ್ವಿಕ ನಿಲುವು, ನೀತಿಗಳನ್ನು ಅರ್ಥೈಸಿಕೊಳ್ಳುವುದು.

6] ಬ್ರಿಟಿಷರ ವಿರುದ್ಧ ಗಾಂಧೀಜಿಯವರು ಪ್ರಯೋಗಿಸಿದ ಅಹಿಂಸಾ ಮತ್ತು ಸತ್ಯಾಗ್ರಹ ನೀತಿಯನ್ನು ಪ್ರಶಂಸಿಸುವುದರ ಮೂಲಕ ಹೆಮ್ಮೆಪಡುವುದು.

7] ಗಾಂಧೀಜಿಯವರ ನಾಯಕತ್ವದ ಗುಣ, ಧೈರ್ಯ, ಸತ್ಯ, ಸರಳತೆ, ಮಾನವೀಯತೆ ಮತ್ತು ವಿನಯಗಳನ್ನು ಮೆಚ್ಚುವುದು.

ಬ್ರಿಟಿಷರ ವಿರುದ್ಧ ನಡೆದ ಆರಂಭಿಕ ಪ್ರತಿಭಟನೆಗಳು

ಬ್ರಿಟಿಷರ ಪ್ರಾಬಲ್ಯದ ವಿರುದ್ಧ ಭಾರತೀಯರು ಪ್ರತಿಭಟಿಸಿದರು. ಬಂಗಾಳದ ನವಾಬ ಮೀರ್‌ಜಾಫರ್‌ನು ಬ್ರಿಟಿಷರ ಆಸೆ ಆಕಾಂಕ್ಷೆಗಳನ್ನು ಈಡೇರಿಸಲು ವಿಫಲನಾದ್ದರಿಂದ ಅಧಿಕಾರದಿಂದ ವಜಾಗೊಳಿಸಿದನು. ಆತನ ಅಳಿಯ ಮೀರಖಾಸಿಂನಿಗೆ ತಾತ್ಕಾಲಿಕ ಅಧಿಕಾರ ನೀಡಿ ಆಸೆ ತೋರಿಸಿ ವಂಚಿಸಿದರು. ಅಲ್ಲದೆ ಸಾ.ಶ 1767 ರಿಂದ 1799ರ ವರೆಗೆ ಆಂಗ್ಲೋ–ಮೈಸೂರು ಯುದ್ಧಗಳು, ಸಾ.ಶ 1775 ರಿಂದ 1818ವರೆಗೆ ಆಂಗ್ಲೋ–ಮರಾಠ ಯುದ್ಧಗಳು ನಡೆದವು.

ಬ್ರಿಟಿಷರು ಸಿಖ್ಖರು, ಆಫ್ಘನ್ನರು, ನೇಪಾಳಿಗಳು, ಬರ್ಮಿಯರ ಮೇಲೆ ಯುದ್ಧಗಳನ್ನು ಮಾಡಿ ಭಾರತೀಯ ಉಪಖಂಡದ ಮೇಲೆ ತಮ್ಮ ರಾಜಕೀಯ ಪ್ರಭುತ್ವವನ್ನು ಸ್ಥಾಪಿಸಿದರು. ಕರ್ನಾಟಕದಲ್ಲೂ ಇಂತಹ ಅನೇಕ ಹೋರಾಟಗಳು ನಡೆದವು.

ಸಾ.ಶ. 1800ರಲ್ಲಿ ದೊಂಡಿಯವಾಘನು ಬ್ರಿಟಿಷರ ವಿರುದ್ಧ ದಂಗೆ ಎದ್ದನು. ಆದರೆ ಬ್ರಿಟಿಷರು ಮರಾಠ ಮತ್ತು ನಿಜಾಮರ ಸಹಾಯದಿಂದ ವಾಘನನ್ನು ಬಂಧಿಸಿದ ಅರ್ಥರ್ ವೆಲ್ಲೆಸ್ಲಿ ಕೋನಗನ್‌ನಲ್ಲಿ ಕೊಂದನು. ಸಾ.ಶ 1819ರಲ್ಲಿ ಕೊಪ್ಪಳದಲ್ಲಿ ವೀರಪ್ಪ ಎಂಬ ಜಮೀನ್ದಾರನು ನಿಜಾಮನ ವಿರುದ್ಧ ದಂಗೆ ಎದ್ದನು. ಆದರೆ ಬ್ರಿಟಿಷರು ಈತನನ್ನು ಸದೆಬಡಿದರು.

ಸಾ.ಶ 1824ರಲ್ಲಿ ವಿಜಯಪುರ ಜಿಲ್ಲೆಯ ಸಿಂದಗಿಯಲ್ಲಿ ದಿವಾಕರ ದೀಕ್ಷಿತ ಮತ್ತು ಬಾಲಾಜಿ ದೇಶಪಾಂಡೆಯವರು ಬ್ರಿಟಿಷರ ವಿರುದ್ಧ ದಂಗೆ ಎದ್ದು ಅಲ್ಲಿ ಸ್ವತಃ ತಾವೇ ಕಂದಾಯ ಸಂಗ್ರಹಿಸಿದರು. ಆದರೆ ಬ್ರಿಟಿಷರು ಇದನ್ನು ತಡೆದು ಇವರನ್ನು ಸೆರೆಮನೆಗೆ ತಳ್ಳಿದರು. ಸಾ.ಶ 1824ರಿಂದ 1830ರಲ್ಲಿ ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿ ಬ್ರಿಟಿಷರ ವಿರುದ್ಧ ರಾಣಿ ಚೆನ್ನಮ್ಮ ಮತ್ತು ನಿಷ್ಠಾವಂತ ಸೇವಕ ಸಂಗೊಳ್ಳಿ ರಾಯಣ್ಣರು ವೀರಾವೇಶದಿಂದ ಹೋರಾಡಿ ವೀರ ಸ್ವರ್ಗವನ್ನು ಕಂಡರು.

ಇದರೊಂದಿಗೆ ಬಾದಾಮಿ, ಬಿದನೂರಿನ ನಗರ ದಂಗೆ ಮತ್ತು ಕೊಡಗು ಬಂಡಾಯ ಪ್ರಮುಖವಾಗಿ ನಡೆದವು. ಆದರೆ ಬ್ರಿಟಿಷರು ಸುಲಭವಾಗಿ ಭಾರತೀಯರ ಪ್ರತಿಭಟನೆಗಳನ್ನು ನಿಯಂತ್ರಿಸಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡರು.

ಇಲ್ಲಿ ನಡೆದ ಭಾರತದ ಸ್ವಾತಂತ್ರ್ಯದ ಪ್ರತಿಭಟನೆಗಳು ಸಶಸ್ತ್ರ ಬಂಡಾಯದ ಪ್ರತಿಭಟನೆಗಳೆಂದು ಗುರುತಿಸಿಕೊಂಡಿವೆ. ಇಂತಹ ಅನೇಕ ಪ್ರತಿಭಟನೆಗಳು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ನಾಂದಿಯಾದವು.

ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (ಸಾ.ಶ. 1857–58)

ಆಧುನಿಕ ಭಾರತದ ಇತಿಹಾಸದಲ್ಲಿ ಸಾ.ಶ. 1857ರ ವರ್ಷ ಒಂದು ಪ್ರಮುಖ ಐತಿಹಾಸಿಕ ಮೈಲಿಗಲ್ಲಾಗಿದೆ. ಬ್ರಿಟಿಷರು ಸಾ.ಶ. 1857ರ ಐತಿಹಾಸಿಕ ಘಟನೆಯನ್ನು ಕೇವಲ 'ಸಿಪಾಯಿಗಳ ದಂಗೆ' ಎಂದು ಪರಿಗಣಿಸಿದರೆ, ಭಾರತೀಯ ರಾಷ್ಟ್ರೀಯವಾದಿಗಳು 'ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಎಂದು ಸಾರಿದರು. ಇದು ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ನಡೆದ ಮಹಾಹೋರಾಟವಾಗಿತ್ತು. ಸಿಪಾಯಿಗಳು ಮತ್ತು ನಾಗರಿಕರು ಸಾಮ್ರಾಜ್ಯಶಾಹಿ ಧೋರಣೆಗಳನ್ನು ಬೇರುಸಹಿತ ಕಿತ್ತೊಗೆಯಲು ಬಯಸಿದರು.

ಕಾರಣಗಳು

ಬ್ರಿಟಿಷರ ದೀರ್ಘಾವಧಿಯ ಆಡಳಿತದಿಂದ ಭಾರತದ ಆರ್ಥಿಕ ವ್ಯವಸ್ಥೆಯು ದುರ್ಬಲಗೊಂಡಿತ್ತು. ಜನತೆಯು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದರು. ರೈತರು ತೆರಿಗೆಗಳ ಭಾರಕ್ಕೆ ಕುಸಿದಿದ್ದರು. ಕರಕುಶಲ ಕೈಗಾರಿಕೆಗಳು ನಾಶವಾಗತೊಡಗಿ, ಪರಂಪರಾಗತವಾಗಿ ನಂಬಿಕೊಂಡು ಬಂದಿದ್ದ ವೃತ್ತಿಗಳು ಶಕ್ತಿಯನ್ನು ಕಳೆದುಕೊಂಡು ಜನರು ಬೀದಿಪಾಲಾದರು. ಹೀಗಾಗಿ ಬ್ರಿಟಿಷರ ವಿರುದ್ಧ ಸಂಗ್ರಾಮಕ್ಕೆ ಅಣಿಯಾದರು. ಈ ಹೋರಾಟಕ್ಕೆ ಪ್ರೇರಣೆಯಾದ ಅಂಶಗಳನ್ನು ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ಆಡಳಿತಾತ್ಮಕ ಮತ್ತು ಸೈನಿಕ ಕಾರಣಗಳೆಂದು ವಿಂಗಡಿಸಬಹುದು.

1. ರಾಜಕೀಯ ಕಾರಣ

ಲಾರ್ಡ್ ವೆಲ್ಲೆಸ್ಲಿಯ 'ಸಹಾಯಕ ಸೈನ್ಯ ಪದ್ಧತಿ' ಮತ್ತು ಲಾರ್ಡ್ ಡಾಲ್‌ಹೌಸಿಯ 'ದತ್ತುಮಕ್ಕಳಿಗೆ ಹಕ್ಕಿಲ್ಲ'ವೆಂಬ ನೀತಿಗಳಿಂದಾಗಿ ಅನೇಕ ಅರಸರು ಮತ್ತು ನವಾಬರು ಪದಚ್ಯುತಿಗೊಳ್ಳುವಂತಾಯಿತು. ಸತಾರ, ಜೈಪುರ, ಸಂಬಲ್‌ಪುರ, ಉದಯಪುರ, ಝಾನ್ಸಿ, ಅವದ್ ಇವೇ ಮೊದಲಾದ ಪ್ರದೇಶಗಳು ಡಾಲ್‌ಹೌಸಿಯ ನೀತಿಗೆ ಬಲಿಯಾದ ರಾಜ್ಯಗಳು. ಅಲ್ಲದೆ ಕೆಲವು ರಾಜರ ವಿಶ್ರಾಂತಿ ವೇತನ ತಡೆಹಿಡಿಯಲಾಯಿತು. ರಾಜರ ಬಿರುದುಗಳು ರದ್ದಾದವು. ಇವು ಸಹಜವಾಗಿಯೇ ಭಾರತೀಯ ಆಳುವ ವರ್ಗ ಮತ್ತು ಜನರ ಭಾವನೆಗಳಿಗೆ ಆಘಾತವನ್ನುಂಟು ಮಾಡಿತು.

2. ಆಡಳಿತಾತ್ಮಕ ಕಾರಣ

ಬ್ರಿಟಿಷರು ಎಲ್ಲಾ ನಾಗರಿಕ ಮತ್ತು ಸೈನಿಕ ಉನ್ನತ ಹುದ್ದೆಗಳನ್ನು ಯುರೋಪಿಯನ್‌ರಿಗೆ ಮೀಸಲಿಡುವ ಉದ್ದೇಶದಿಂದ ಹೊಸ ಆಡಳಿತ ವ್ಯವಸ್ಥೆಯನ್ನು ರೂಪಿಸಿದರು. ಆಡಳಿತದಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿತ್ತು. ಕಾನೂನಿನ ಆಳ್ವಿಕೆಯು ಸಾಮಾಜಿಕ ಶ್ರೇಣಿ ವ್ಯವಸ್ಥೆಯ ಕುಸಿತಕ್ಕೆ ದಾರಿಮಾಡಿಕೊಟ್ಟಿತು. ಪರ್ಷಿಯನ್ ಭಾಷೆಗೆ ಬದಲಾಗಿ ಇಂಗ್ಲಿಷ್ ನ್ಯಾಯಾಲಯದ ಭಾಷೆಯಾಗಿದ್ದು ಜನತೆಗೆ ಮತ್ತು ಭಾರತೀಯ ಆಳುವ ವರ್ಗಕ್ಕೆ ಸರಿಹೊಂದಲಿಲ್ಲ.

3. ಆರ್ಥಿಕ ಕಾರಣ

ಬಹದ್ದೂರ್ ಷಾ

ಬ್ರಿಟಿಷರು ತಮ್ಮ ಲಾಭಕ್ಕಾಗಿ ಭಾರತದ ಆರ್ಥಿಕ ಸಂಪತ್ತನ್ನು ದೋಚುವುದಕ್ಕಾಗಿ ತಮ್ಮ ರಾಜಕೀಯ ಅಧಿಕಾರವನ್ನು ಬಳಸಿಕೊಂಡರು. ಬ್ರಿಟಿಷರ ವ್ಯಾಪಾರಿ ಹಿತಾಸಕ್ತಿಯಿಂದಾಗಿ ಭಾರತೀಯ ಗುಡಿ ಕೈಗಾರಿಕೆ ಮತ್ತು ಸ್ಥಳೀಯ ಕೈಗಾರಿಕೆಗಳು ನಾಶ ಹೊಂದಿದವು. ಭೂಕಂದಾಯ ನೀತಿಯು ಅತ್ಯಂತ ಶೋಷಣಾತ್ಮಕವಾಗಿತ್ತು. ತಾಲ್ಲೂಕುದಾರರ ಮತ್ತು ಜಮೀನ್ದಾರರ ಸ್ಥಾನಮಾನ ಮತ್ತು ವರಮಾನದ ಮೂಲವನ್ನು ಕಿತ್ತುಕೊಳ್ಳಲಾಯಿತು. ದೊಡ್ಡ ಪ್ರಮಾಣದ ಸಂಪತ್ತಿನ ಹೊರಹರಿವು ಸೃಷ್ಟಿಯಾಯಿತು. ವ್ಯವಸಾಯದ ವಾಣಿಜ್ಯೀಕರಣದಿಂದಾಗಿ ರೈತರ ಆರ್ಥಿಕ ಶಕ್ತಿಯು

ಕ್ಷೀಣಿಸಿತು. ಅಂದಿನತೀವ್ರ ಬರಗಾಲಗಳು ಲಕ್ಷಾಂತರ ಜನರನ್ನು ಬಲಿತೆಗೆದುಕೊಂಡವು. ಇವೇ ಮುಂತಾದ ಅಂಶಗಳು ಭಾರತವನ್ನು ಬಡತನಕ್ಕೆ ತಳ್ಳಿದವು.

ಸಾಂಪ್ರದಾಯಿಕ ನೇಯ್ಗೆ

4. ಸಾಮಾಜಿಕ ಮತ್ತು ಧಾರ್ಮಿಕ ಕಾರಣ

ಸಾಮಾಜಿಕ ಮತ್ತು ಧಾರ್ಮಿಕ ಅಂಶಗಳು ಸಹ ದಂಗೆಯ ಸ್ಫೋಟಕ್ಕೆ ಕಾರಣವಾದವು. ಬ್ರಿಟಿಷರು ಭಾರತೀಯರನ್ನು "ಸಂಸ್ಕೃತಿ ಮತ್ತು ನಾಗರಿಕತೆಯ ಗಂಧವಿಲ್ಲದ ಅನಾಗರಿಕರು" ಎಂದರು. ಭಾರತೀಯರನ್ನು 'ಹಂದಿ', 'ಕರಿ ಮನುಷ್ಯ'ರು ಸಂಬೋಧಿಸುತ್ತಿದ್ದರು. ಯೂರೋಪಿಯನ್‌ರ ಮೇಲುಸ್ತುವಾರಿಯಲ್ಲಿದ್ದ ಹೊಟೇಲ್ ಮತ್ತು ಕ್ಲಬ್‌ಗಳಿಗೆ ಭಾರತೀಯರಿಗೆ ಪ್ರವೇಶವಿರಲಿಲ್ಲ. "ನಾಯಿಗಳಿಗೆ ಮತ್ತು ಭಾರತೀಯರಿಗೆ ಪ್ರವೇಶವು ನಿಷಿದ್ಧ" ಎಂಬ ನಾಮಫಲಕಗಳನ್ನು ದ್ವಾರದಲ್ಲಿ ತೂಗುಹಾಕುತ್ತಿದ್ದರು. ಮೇಲಾಗಿ ಸತಿಪದ್ಧತಿ ಮತ್ತು ಬಾಲ್ಯವಿವಾಹ ನಿಷೇಧ, ವಿಧವಾ ಪುನರ್‌ವಿವಾಹಕ್ಕೆ ಪ್ರೋತ್ಸಾಹ ಇವೆಲ್ಲವುಗಳಿಂದ ಭಾರತೀಯರು ತಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಬ್ರಿಟಿಷರು ಮಾಡುತ್ತಿರುವ ಹಸ್ತಕ್ಷೇಪ ಎಂದು ಭಾವಿಸಿದರು. ಅಷ್ಟೇ ಅಲ್ಲದೆ ರೈಲ್ವೆಯ ಆಗಮನವು ಮಡಿವಂತ ಭಾರತೀಯರಿಗೆ ನುಂಗಲಾರದ ತುತ್ತಾಯಿತು. ಎಲ್ಲಾ ವರ್ಗದ ಜನರು ಒಂದೇ ಬೋಗಿಯಲ್ಲಿ ಪ್ರಯಾಣ ಮಾಡಬೇಕಾದುದು ಮೇಲ್ವರ್ಗದವರಲ್ಲಿ ಸಿಟ್ಟು ತರಿಸಿತು.

5. ಸೈನಿಕ ಕಾರಣ

ಭಾರತೀಯ ಸೈನಿಕರಲ್ಲಿ ಅನೇಕ ಅಸಂತೃಪ್ತಿಗಳಿದ್ದವು. ಸೈನಿಕರು ಪಾರಂಪರಿಕವಾಗಿ ಬಳಸುತ್ತಿದ್ದ ಧಾರ್ಮಿಕ ಚಿಹ್ನೆ ಮತ್ತು ಪೇಟಗಳನ್ನು ಧರಿಸಬಾರದೆಂಬ ನಿಷೇಧಕ್ಕೊಳಪಟ್ಟಿದ್ದರು. ಭಾರತೀಯ ಸೈನಿಕರಿಗೆ ಅತ್ಯಂತ ಕಡಿಮೆ ವೇತನ ನೀಡುತ್ತಿದ್ದರು. ಮುಂಬಡ್ತಿಯ ಅವಕಾಶಗಳು ಇಲ್ಲದಾಗಿದ್ದವು. ಬ್ರಿಟಿಷ್ ಸೈನಿಕರಿಗೆ ಮಾತ್ರ ಹೆಚ್ಚಿನ ಸಂಬಳ ಮತ್ತು ಇತರೆ ಸೌಲಭ್ಯಗಳನ್ನು ನೀಡಲಾಗಿತ್ತು. ಭಾರತೀಯ ಸೈನಿಕರನ್ನು ಕಾರ್ಯನಿಮಿತ್ತ ಹೆಚ್ಚುವರಿ ವೇತನ ನೀಡದೆ ಅತ್ಯಂತ ದೂರ ಪ್ರದೇಶಗಳಿಗೆ ನಿಯೋಜಿಸಲಾಗುತ್ತಿತ್ತು. ಲಾರ್ಡ್ ಕ್ಯಾನಿಂಗನ "ಸಾಮಾನ್ಯ ಸೇನಾಸೇವಾ ಕಾಯಿದೆ"ಯ ಪ್ರಕಾರ ಎಲ್ಲಾ ಸೈನಿಕರು ಬ್ರಿಟಿಷ್ ಆದೇಶದಂತೆ ಎಲ್ಲೆಂದರಲ್ಲಿ ಕಾರ್ಯನಿಮಿತ್ತ ತೆರಳಬೇಕಿತ್ತು. ಇವೆಲ್ಲವೂ ಭಾರತೀಯ ಸೈನಿಕರಲ್ಲಿ ಅಸಹನೆಯನ್ನು ಉಂಟುಮಾಡಿದವು.

6. ತಕ್ಷಣದ ಕಾರಣ

ಜನಸಮೂಹದ ದಂಗೆಗೆ ಕಾಲ ಸನಿಹಿತವಾಗಿತ್ತು. ಅವರಲ್ಲಿ ಕಿಚ್ಚೆಬ್ಬಿಸಲು ಒಂದೇ ಒಂದು ಕಿಡಿ ಸಾಕಾಗಿತ್ತು. ಸಾ.ಶ. 1857ರಲ್ಲಿ ಒಂದು ಹೊಸ ಮಾದರಿಯ ಬಂದೂಕನ್ನು (ಎನ್‌ಫೀಲ್ಡ್ ರೈಫಲ್) ಸೇನೆಯಲ್ಲಿ ತೊಡಗಿಸಿದ್ದು ಸಿಪಾಯಿ ದಂಗೆಗೆ ತಕ್ಷಣದ ಕಾರಣವಾಯಿತು. ಎನ್‌ಫೀಲ್ಡ್ ಬಂದೂಕುಗಳಿಗೆ ತೋಟಾ (ಕಾರ್ಟ್‌ರಿಡ್ಜ್) ಗಳನ್ನು ತುಂಬುವ ಮುನ್ನ ಅದಕ್ಕೆ ಹೊದಿಸಿದ ಕಾಗದವನ್ನು ಹಲ್ಲಿನಿಂದ ಕಚ್ಚಿ ಹರಿಯಬೇಕಿತ್ತು. ಈ ಕಾಗದಕ್ಕೆ ಹಂದಿ ಮತ್ತು ಗೋವಿನ ಕೊಬ್ಬು ಬಳಸಲಾಗಿದೆ ಎಂಬ ಸುದ್ದಿ ಕಾಳ್ಗಿಚ್ಚಿನಂತೆ ಸೈನಿಕರಲ್ಲಿ ಹಬ್ಬಿತು. ಇದು ಮುಸ್ಲಿಂ ಮತ್ತು ಹಿಂದೂ ಸಿಪಾಯಿಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆಯುಂಟು ಮಾಡುವುದಾಗಿತ್ತು. ಅವುಗಳನ್ನು ಬಳಸಲು ನಿರಾಕರಿಸಿದ ಸೈನಿಕರು ಬ್ರಿಟಿಷರಿಂದ ಶಿಕ್ಷೆಗೊಳಗಾದರು.

ದಂಗೆಯ ಗತಿ

ಮೀರತ್‌ನಲ್ಲಿ ದಂಗೆಯು ಸಾ.ಶ. 1857ರ ಮೇ 10ರಂದು ಆರಂಭವಾಯಿತು. ಆನಂತರ ಉತ್ತರ ಭಾರತದ ಪ್ರಾಂತ್ಯಗಳಾದ್ಯಂತ ವ್ಯಾಪಕವಾಗಿ ತೀವ್ರಗೊಂಡಿತು. ಮೀರತ್‌ನಲ್ಲಿ ದಂಗೆ ಸ್ಫೋಟಗೊಳ್ಳುವ ಮೊದಲೇ ಬ್ಯಾರಕ್‌ಪುರದ (ಬಂಗಾಲ) ಭಾರತೀಯ ಸಿಪಾಯಿ ಮಂಗಲ್‌ಪಾಂಡೆ ಕೊಬ್ಬು ಸವರಿದ ಬಂದೂಕನ್ನು ಬಳಸಲು ತಿರಸ್ಕರಿಸಿ, ಬಹಿರಂಗವಾಗಿಯೇ ಬ್ರಿಟಿಷ್ ಅಧಿಕಾರಿಯೊಬ್ಬನಿಗೆ ಗುಂಡಿಕ್ಕಿಕೊಂದನು. ನಂತರ ಅವನು ಸಹ ಕೊಲ್ಲಲ್ಪಟ್ಟನು. ಆಗ ಮೀರತ್‌ನಲ್ಲಿ ಕಣ್ಣಿಗೆ ಬಿದ್ದ ಪ್ರತಿಯೊಬ್ಬ ಯೂರೋಪಿಯನರನ್ನು ಸಿಪಾಯಿಗಳು ಕೊಂದರು. 'ಮಾರೋ ಫರಂಗಿಕೋ' (ಯುರೋಪಿಯನರನ್ನು ಕೊಲ್ಲಿ) ಎಂದು ಉದ್ರಿಕ್ತರು ಕೂಗುತ್ತಾ ದಿಲ್ಲಿಯ ಕಡೆಗೆ ಧಾವಿಸಿದರು. ದಿಲ್ಲಿಯಲ್ಲಿ ಸಿಪಾಯಿಗಳು ವಯೋವೃದ್ಧ ಹಾಗೂ ದುರ್ಬಲ ಮೊಗಲ್ ದೊರೆ ಎರಡನೇ ಬಹಾದೂರ್‌ಷಾನನ್ನು ಭಾರತದ ಚಕ್ರವರ್ತಿ ಎಂದು ಘೋಷಣೆ ಮಾಡಿದರು.

ಮಂಗಲ್‌ಪಾಂಡೆ

ಫರಂಗಿ : ಫರಂಗಿ ಪದವು ಪರ್ಷಿಯನ್ ಮೂಲದ್ದಾಗಿದೆ. ಇದನ್ನು ಉರ್ದು ಮತ್ತು ಹಿಂದಿಗಳಲ್ಲಿ ಯೂರೋಪಿಯನರನ್ನು ಕೀಳಾಗಿ ಸೂಚಿಸಲು ಬಳಸಲಾಗುತ್ತಿತ್ತು.



ಮಹಾದಂಗೆಯ ಪ್ರದೇಶಗಳು

ಅಲ್ಪಕಾಲದಲ್ಲೇ ದಂಗೆಯು ವ್ಯಾಪಕವಾಗಿ ಹಬ್ಬಿತು. ಕ್ರಾಂತಿಯ ಪ್ರಮುಖ ಕೇಂದ್ರಗಳೆಂದರೆ ದಿಲ್ಲಿ, ಕಾನ್ಪುರ, ಲಕ್ನೋ, ಬರೇಲಿ, ಝಾನ್ಸಿ ಮತ್ತು ಬಿಹಾರದ ಆರಾ.

ಝಾನ್ಸಿ ರಾಣಿ ಲಕ್ಷ್ಮೀಬಾಯಿ

ದಿಲ್ಲಿಯಲ್ಲಿ ಸೇನಾಪತಿ ಬಖ್ತ್‌ಖಾನ್, ಕಾನ್ಪುರದಲ್ಲಿ ನಾನಾ ಸಾಹೇಬ್ ಮತ್ತು ತಾಂತ್ಯಾ ಟೋಪೆ, ಲಕ್ನೋದಲ್ಲಿ ಬೇಗಮ್ ಹಜ್ರತ್ ಮಹಲ್, ಝಾನ್ಸಿಯಲ್ಲಿ ಲಕ್ಷ್ಮೀಬಾಯಿ ಮತ್ತು ಬಿಹಾರದಲ್ಲಿ ಕುಂವರ್ ಸಿಂಗ್‌ರವರ ನೇತೃತ್ವದಲ್ಲಿ ದಂಗೆಗಳು ನಡೆದವು. ಬ್ರಿಟಿಷರು ದಂಗೆಯನ್ನು ಒಂದೊಂದಾಗಿ ದಮನಮಾಡಿದರು. ಬಂಡಾಯವು ಉತ್ತರ ಭಾರತಕ್ಕೆ ಸೀಮಿತವಾಗಿರದೆ, ದಕ್ಷಿಣ ಭಾರತಕ್ಕೂ ಹಬ್ಬಿತು. ಕರ್ನಾಟಕದಲ್ಲಿ ಮುಂಡರಗಿ ಭೀಮರಾವ್, ಹಲಗಲಿ ಬೇಡರು, ಸುರಪುರದ ನಾಲ್ಕನೇ ವೆಂಕಟಪ್ಪ ನಾಯಕ ಮತ್ತು ನರಗುಂದದ ಬಾಬಾಸಾಹೇಬ ಮುಖ್ಯ ನಾಯಕರಾಗಿದ್ದರು. ಉತ್ತರ ಮತ್ತು ದಕ್ಷಿಣ ಭಾರತದ ಎಲ್ಲೆಡೆ ಬಂಡಾಯವು ವ್ಯಾಪಕವಾಗಿ ನಡೆದರೂ ಕೂಡ ಅಲ್ಪ ಸಮಯದೊಳಗೆ ಬ್ರಿಟಿಷರು ದಂಗೆಯನ್ನು ದಮನ ಮಾಡಿದರು.

ಚಟುವಟಿಕೆ: ಝಾನ್ಸಿ ರಾಣಿ ಲಕ್ಷ್ಮೀಬಾಯಿ ಬ್ರಿಟಿಷರ ವಿರುದ್ಧ ಹೋರಾಡಿದ ಸಂಗತಿಯನ್ನು ಸಂಗ್ರಹಿಸಿರಿ.

ಕುಂವರ್ ಸಿಂಗ್

ನಾನಾ ಸಾಹೇಬ್

ಫಲಿತಾಂಶಗಳು

ಈ ಹೋರಾಟವು ವಿಫಲಗೊಂಡರೂ ಅದು ದೀರ್ಘಕಾಲೀನ ಪರಿಣಾಮಗಳನ್ನು ಉಂಟುಮಾಡಿತು. ಈ ಹೋರಾಟದ ಪರಿಣಾಮವಾಗಿ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆ ಅಂತ್ಯಗೊಂಡು ಅದರ ಕೈಯಲ್ಲಿದ್ದ ಭಾರತದ ಆಳ್ವಿಕೆಯನ್ನು ಬ್ರಿಟಿಷ್ ರಾಣಿ ವಹಿಸಿಕೊಂಡಳು. ಸಾ.ಶ. 1858ರಲ್ಲಿ ಬ್ರಿಟನ್ನಿನ ರಾಣಿ ವಿಕ್ಟೋರಿಯಾ ಒಂದು 'ಘೋಷಣೆ' ಯನ್ನು ಹೊರಡಿಸಿದಳು. ಈ ಘೋಷಣೆಯು ಭಾರತೀಯರ ಧಾರ್ಮಿಕ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪಮಾಡುವುದಿಲ್ಲವೆಂದು ಸ್ಪಷ್ಟಪಡಿಸಿತು.

ಸಾ.ಶ. 1857–58ರ ಹೋರಾಟವು ಮುಂದೆ ಆಧುನಿಕ ರಾಷ್ಟ್ರೀಯ ಚಳವಳಿಯ ಉದಯಕ್ಕೆ ನಾಂದಿ ಹಾಡಿತು. ಇದು ಮುಂದಿನ ಸ್ವಾತಂತ್ರ್ಯ ಹೋರಾಟಕ್ಕೆ ನಿರಂತರ ಸ್ಫೂರ್ತಿಯಾಗಿ ಪರಿಣಮಿಸಿತು.

1857ರ ಮಹಾದಂಗೆಯ ಸ್ವರೂಪ

ಬ್ರಿಟಿಷ್ ಇತಿಹಾಸಕಾರರು ಸಾ.ಶ. 1857ರ ಭಾರತೀಯರ ಹೋರಾಟವನ್ನು ಕೇವಲ 'ಸಿಪಾಯಿಗಳ ದಂಗೆ' ಎಂದು ಪರಿಗಣಿಸಿದರು. ಆದರೆ ಭಾರತದ ರಾಷ್ಟ್ರೀಯ ಇತಿಹಾಸಕಾರರು ಅದನ್ನು ಜನತೆಯ ಮಹಾನ್ ಬಂಡಾಯವೆಂದು ಸಾರಿದರಲ್ಲದೆ, 'ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಎಂದು ಕರೆದರು.

ಈ ಹೋರಾಟವನ್ನು ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಪ್ರಥಮ ಯುದ್ಧವೆಂದು ಕರೆದವರಲ್ಲಿ ವಿನಾಯಕ ದಾಮೋದರ ಸಾವರ್ಕರ್ ಮೊದಲಿಗರು. ಪಟ್ಟಾಭಿ ಸೀತಾರಾಮಯ್ಯ ಅವರು ಕೂಡ ಇದನ್ನು ಭಾರತದ ಮೊದಲ ಸ್ವಾತಂತ್ರ್ಯ ಸಮರವೆಂದು ಸಾರಿದರು. ಅದು ದೇಶದ ಬಹುತೇಕ ಜನಸಮುದಾಯಗಳು ಒಂದಾಗಿ ನಡೆಸಿದ ಹೋರಾಟವಾಗಿತ್ತು.

ಸಾ.ಶ. 1857ರ ಹೋರಾಟವು ಭಾರತದ ಇತಿಹಾಸದಲ್ಲಿ ಹೊಸ ರಾಜಕೀಯ ಪ್ರಜ್ಞೆಯನ್ನು ಸೃಷ್ಟಿಸಿತು. ಇದರ ಫಲವಾಗಿ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಳು ವಿವಿಧ ರೂಪಗಳಲ್ಲಿ ಹುಟ್ಟಿ ಬೆಳೆದವು. ಈ ಹೋರಾಟಗಳಲ್ಲಿ ಭಾಗವಹಿಸಿ ಹುತಾತ್ಮರಾದವರು ಬಹುಬೇಗ ದೇಶದಲ್ಲಿ ಮನೆಮಾತಾದರು. ಅವರ ತ್ಯಾಗ ಬಲಿದಾನಗಳನ್ನು ನಾವು ನಿರಂತರವಾಗಿ ಸ್ಮರಿಸಿಕೊಳ್ಳಬೇಕಾಗಿದೆ.

I ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ತಕ್ಷಣದ ಕಾರಣ ಯಾವುದಾಗಿತ್ತು?
2. ಮಂಗಲ ಪಾಂಡೆ ಯಾರು?
3. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಯಾವುದಾದರೂ ಒಂದು ಪರಿಣಾಮವನ್ನು ತಿಳಿಸಿರಿ.
4. 1857ರ ಹೋರಾಟವನ್ನು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದು ಮೊದಲು ಕರೆದವರು ಯಾರು?
5. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಮೊಗಲ್ ದೊರೆ ಯಾರು?
6. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದ ಮಹಿಳಾ ನಾಯಕಿಯನ್ನು ಹೆಸರಿಸಿ.

II ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿರಿ

1. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಕಾರಣಗಳನ್ನು ಪಟ್ಟಿ ಮಾಡಿ.
2. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಕರ್ನಾಟಕದ ನಾಯಕರನ್ನು ಹೆಸರಿಸಿ.

ಚಟುವಟಿಕೆ

ಮಂಗಲ್ ಪಾಂಡೆ, ಝಾನ್ಸಿ ಲಕ್ಷ್ಮೀಬಾಯಿ, ತಾಂತ್ಯಾ ಟೋಪೆ, ನಾನಾ ಸಾಹೇಬ್, ಬೇಗಮ್ ಹಜ್ರತ್ ಮಹಲ್, ಕುಂವರ್ ಸಿಂಗ್, ಮುಂಡರಗಿ ಭೀಮರಾವ್ ಮುಂತಾದ ಕ್ರಾಂತಿಕಾರರ ಜೀವನ ಕಥನವನ್ನು ಓದಿರಿ.

ಸ್ವಾತಂತ್ರ್ಯ ಚಳವಳಿ (1885–1919)

ಬ್ರಿಟಿಷರ ಶೋಷಣಾತ್ಮಕ ನೀತಿಗಳಿಂದಾಗಿ 19ನೇ ಶತಮಾನದ ಉತ್ತರಾರ್ಧದಲ್ಲಿ ರಾಷ್ಟ್ರೀಯತೆ ಚಿಗುರೊಡೆಯಿತು. ಇಂಗ್ಲಿಷ್ ಶಿಕ್ಷಣ ಪಡೆದ ಹೊಸ ವಿದ್ಯಾವಂತ ವರ್ಗವು ಬ್ರಿಟಿಷ್ ಆಳ್ವಿಕೆಯ ನಿಜವಾದ ಉದ್ದೇಶವನ್ನು ಅರ್ಥಮಾಡಿಕೊಂಡಿತು. ರೈತಾಪಿಗಳು, ಆದಿವಾಸಿಗಳು ಮತ್ತಿತರ ವರ್ಗಗಳು ಸಹ ಬ್ರಿಟಿಷರಿಂದ ತೀವ್ರ ಸಂಕಷ್ಟಕ್ಕೊಳಗಾಗಿದ್ದು, ಬ್ರಿಟಿಷರ ವಿರುದ್ಧ ತೀವ್ರ ಪ್ರತಿಭಟನೆಗಾಗಿ ಮಿಡಿಯುತ್ತಿದ್ದವು.

ರಾಷ್ಟ್ರೀಯತೆಯ ಬೆಳವಣಿಗೆ

ಭಾರತವು ವೈವಿಧ್ಯಮಯ ಸಂಸ್ಕೃತಿಗಳನ್ನು ಹೊಂದಿರುವ ದೇಶ. ನಮಗೆ ಸುದೀರ್ಘ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಪರಂಪರೆ ಇದೆ. ಇವು 19ನೇ ಶತಮಾನದ ಉತ್ತರಾರ್ಧದಲ್ಲಿ ರಾಷ್ಟ್ರೀಯತೆಯ ಬೆಳವಣಿಗೆಗೆ ಒಂದು ತಾತ್ವಿಕ ಬುನಾದಿಯನ್ನು ಹಾಕಿಕೊಟ್ಟವು. "ರಾಷ್ಟ್ರೀಯತೆ ಎಂದರೆ ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದ ಜನರ ಮನದಲ್ಲಿ ಮೂಡುವ 'ನಾವೆಲ್ಲರೂ ಒಂದೇ' ಎಂಬ ಏಕತೆಯ ಭಾವನೆಯಾಗಿದೆ."

ಸಾ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತೀಯರಲ್ಲಿ ಸರಿಯಾದ ಹೊಂದಾಣಿಕೆ ಇಲ್ಲದೆ ಹೋರಾಟ ವಿಫಲಗೊಂಡಿತು. ಇದು ಪ್ರಜ್ಞಾವಂತ ಭಾರತೀಯರಲ್ಲಿ ಸಂಘಟನೆಯ ಅರಿವನ್ನು ಉಂಟುಮಾಡಿತು. ಕ್ರಮೇಣ ರಾಷ್ಟ್ರೀಯ ಹೋರಾಟವಾಗಿ ರೂಪುಗೊಂಡಿತು. ರಾಷ್ಟ್ರೀಯತೆಯ ಬೆಳವಣಿಗೆಗೆ ಹಲವು ಅಂಶಗಳು ಪ್ರೇರಣೆ ನೀಡಿದವು. ಅವು ಈ ರೀತಿ ಇವೆ.

- **ಪಾಶ್ಚಿಮಾತ್ಯ ಶಿಕ್ಷಣ ಮತ್ತು ಆಧುನಿಕ ಜ್ಞಾನವಿಜ್ಞಾನದ ಪರಿಚಯ :** ಇಂಗ್ಲೀಷ್ ಶಿಕ್ಷಣ ಪಡೆದ ಭಾರತೀಯರು ಯೂರೋಪಿನ ಚಿಂತನಶೀಲ ಕೃತಿಗಳನ್ನು ಓದುವುದರ ಮೂಲಕ ರಾಷ್ಟ್ರೀಯ ರಾಜಕೀಯ ಮನೋಭಾವವನ್ನು ಅರಗಿಸಿಕೊಂಡರು. ಯೂರೋಪಿನಲ್ಲಿ ಹುಟ್ಟಿಕೊಂಡ ಪರಿಕಲ್ಪನೆಗಳಾದ ಸ್ವಾತಂತ್ರ, ಸಮಾನತೆ ಮತ್ತು ಭ್ರಾತೃತ್ವಗಳು ಇವರನ್ನು ರಾಜಕೀಯವಾಗಿ ಪ್ರೇರೇಪಿಸಿದವು. ಸ್ವಾತಂತ್ರ್ಯದ ಅಭಿಲಾಷೆಗೆ ಸ್ಫೂರ್ತಿ ನೀಡಿತು. "ಇಂಗ್ಲಿಷ್ ಕಲಿತ ಭಾರತೀಯರು ತಮ್ಮ ಬೆಂಬಲಕ್ಕಿರುತ್ತಾರೆ" ಎನ್ನುವ ಬ್ರಿಟಿಷರ ಲೆಕ್ಕಾಚಾರವನ್ನು ಹುಸಿಗೊಳಿಸಿದರು.

• **ಏಕರೂಪ ಆಡಳಿತಾತ್ಮಕ ವ್ಯವಸ್ಥೆ :** ಬ್ರಿಟಿಷರು ಭಾರತವನ್ನು ಏಕರೂಪ ಆಡಳಿತ ವ್ಯವಸ್ಥೆಗೆ ಒಳಪಡಿಸಿದರು. ಇದರಿಂದ ಒಂದೇ ರೀತಿಯ ನಿಯಮಗಳಿಗೆ ಒಳಪಟ್ಟ ಭಾರತೀಯರು ನಾವೆಲ್ಲರೂ ಸಮಾನರು ಎಂಬ ಭಾವನೆಯನ್ನು ಬೆಳೆಸಿಕೊಳ್ಳುವಂತಾಯಿತು. ಅದೇ ರೀತಿ ಬ್ರಿಟಿಷರು ಜಾರಿಗೆ ತಂದ ಜನ ವಿರೋಧಿ ಕಾಯ್ದೆ ಕಾನೂನುಗಳನ್ನು ಎಲ್ಲರೂ ಒಕ್ಕೊರಲಿನಿಂದ ವಿರೋಧಿಸಲಾರಂಭಿಸಿದರು. ಇದು ಭಾರತೀಯರಲ್ಲಿ ರಾಷ್ಟ್ರೀಯ ಪ್ರಜ್ಞೆ ಬೆಳೆಯಲು ಕಾರಣವಾಯಿತು.

• **ಆರ್ಥಿಕ ಶೋಷಣೆ :** ಬ್ರಿಟಿಷರು ತಮ್ಮ ಆರ್ಥಿಕ ನೀತಿಗಳ ಮೂಲಕ ಭಾರತೀಯರ ವ್ಯಾಪಾರ, ಕೃಷಿ, ಕೈಗಾರಿಕೆಗಳ ಅವನತಿಗೆ ಕಾರಣರಾದರು. ಭೂಮಿಯನ್ನು ಮಾರಾಟದ ವಸ್ತುವನ್ನಾಗಿ ಪರಿವರ್ತಿಸಿದರು. ದಾದಾಬಾಯಿ ನವರೋಜಿಯವರು ಭಾರತದ ಸಂಪತ್ತನ್ನು ಬ್ರಿಟಿಷರು ದೋಚುತ್ತಿದ್ದ ಕ್ರಮವನ್ನು ತಮ್ಮ 'ಸಂಪತ್ತಿನ ಸೋರಿಕೆ ಸಿದ್ಧಾಂತ'ದ ಮೂಲಕ ಪ್ರತಿಪಾದಿಸಿದರು.

• **ಪರಂಪರೆಯ ಪರಿಚಯ :** ಸರ್ ವಿಲಿಯಂ ಜೋನ್ಸ್, ಕೋಲ್‌ಬ್ರೂಕ್, ಮ್ಯಾಕ್ಸ್ ಮುಲ್ಲರ್, ಕನ್ನಿಂಗ್‌ಹ್ಯಾಮ್ ಮುಂತಾದ ವಿದೇಶಿ ವಿದ್ವಾಂಸರು ಭಾರತದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ತಮ್ಮ ಅಧ್ಯಯನದ ಮೂಲಕ ಭಾರತೀಯರಿಗೆ ಪರಿಚಯಿಸಿದರು. ಇದರಿಂದ ಭಾರತೀಯ ಪರಂಪರೆ ಗ್ರೀಕ್, ರೋಮ್‌ಗಳಿಗೇನೂ ಕಡಿಮೆ ಇಲ್ಲ ಎಂಬುದು ದೃಢಪಟ್ಟಿತು. ಆ ಮೂಲಕ ರಾಷ್ಟ್ರೀಯತೆಯ ಬೇರುಗಳು ಅರಿವಿನ ರೂಪದಲ್ಲಿ ಮತ್ತೆ ಆಳಕ್ಕೆ ಇಳಿಯತೊಡಗಿದವು.

• **ಸಾಮಾಜಿಕ ಧಾರ್ಮಿಕ ಚಳವಳಿಗಳು :** 19ನೇ ಶತಮಾನದ ಭಾರತೀಯ ಸಮಾಜ ಸುಧಾರಕರಾದ ರಾಮಮೋಹನ ರಾಯ್, ಈಶ್ವರಚಂದ್ರ ವಿದ್ಯಾಸಾಗರ, ಸ್ವಾಮಿ ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ ಮೊದಲಾದವರು ವಂಚಿತ ಮತ್ತು ಶೋಷಿತ ಸಮುದಾಯಗಳಿಗೆ ಶಿಕ್ಷಣದ ಪ್ರಾಮುಖ್ಯತೆಯನ್ನು ತಿಳಿಸಿಕೊಟ್ಟರು. ದಯಾನಂದರು ಸ್ವರಾಜ್ಯ ಮತ್ತು ಸ್ವದೇಶಿ ವಿಚಾರಧಾರೆಯನ್ನು ಬಿತ್ತಿದರೆ, ವಿವೇಕಾನಂದರು ಜಡಗೊಂಡಿದ್ದ ಸಮುದಾಯವನ್ನು ಎಚ್ಚರಗೊಳಿಸುವ ಕೆಲಸ ಮಾಡಿದರು. ಇದು ರಾಷ್ಟ್ರೀಯತೆಯ ಬೆಳವಣಿಗೆಗೆ ಹೊಸ ಆಯಾಮ ತಂದುಕೊಟ್ಟಿತು. ವಿದ್ಯಾವಂತ ಭಾರತೀಯರನ್ನು ಕ್ರಿಯಾಶೀಲರನ್ನಾಗಿಸಿತು.

• **ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಸ್ಫೂರ್ತಿ :** ಈ ಘಟನೆಯು ಭಾರತೀಯರು ರಾಜಕೀಯವಾಗಿ ಹೆಚ್ಚು ಸಂಘಟಿತರಾಗಬೇಕೆಂಬುದನ್ನು ಮನವರಿಕೆ ಮಾಡಿಕೊಟ್ಟಿತು. ಅಲ್ಲದೆ ಈ ಹೋರಾಟದಲ್ಲಿ ಹುತಾತ್ಮರಾದ ಮಂಗಲ್‌ಪಾಂಡೆ, ಲಕ್ಷ್ಮೀಬಾಯಿ, ಹಜ್ರತ್ ಮಹಲ್ ಮೊದಲಾದ ನಾಯಕರು ಮುಂದಿನ ತಲೆಮಾರಿನ ನಾಯಕರಿಗೆ ಸ್ಫೂರ್ತಿಯ ಸೆಲೆಯಾದರು.

• **ಜನಾಂಗೀಯ ತಾರತಮ್ಯ :** ಬ್ರಿಟಿಷರು ತಾವು ಶ್ರೇಷ್ಠರೆಂದು ಭಾವಿಸಿ, ಭಾರತೀಯರನ್ನು ಅನಾಗರಿಕರೆಂದು ಕರೆದರು. ಆಡಳಿತದ ಉನ್ನತ ಹುದ್ದೆಗಳು ಬ್ರಿಟಿಷರಿಗಷ್ಟೇ ಮೀಸಲಾಗಿದ್ದವು.

ಇದರಿಂದ ಒಂದೇ ನೀತಿ, ನಿಯಮಗಳಿಗೆ ಒಳಪಟ್ಟ ಭಾರತೀಯರಲ್ಲಿ ಸಹಜವಾಗಿ ನಾವೆಲ್ಲರೂ ಸಮಾನರು ಎಂಬ ಭಾವನೆಯನ್ನು ಉಂಟುಮಾಡಿತು. ಬ್ರಿಟಿಷರು ತಂದ ಜನವಿರೋಧಿ ಕಾಯ್ದೆ ಕಾನೂನುಗಳನ್ನು ಎಲ್ಲರೂ ಒಕ್ಕೊರಲಿನಿಂದ ವಿರೋಧಿಸಲಾರಂಭಿಸಿದರು. ಹೀಗಾಗಿ ಭಾರತೀಯರಲ್ಲಿ ನಾವೆಲ್ಲ ಒಂದೇ ಎಂಬ ರಾಷ್ಟ್ರೀಯ ಪ್ರಜ್ಞೆ ಬೆಳೆಯಲು ಕಾರಣವಾದವು.

ಭಾರತ ರಾಷ್ಟ್ರೀಯ ಕಾಂಗ್ರೆಸ್ (1885)

ಭಾರತ ರಾಷ್ಟ್ರೀಯ ಕಾಂಗ್ರೆಸ್ ನಿವೃತ್ತ ಬ್ರಿಟಿಷ್ ನಾಗರಿಕ ಸೇವಾಧಿಕಾರಿ ಎಲನ್ ಆಕ್ಟೇವಿಯನ್ ಹ್ಯೂಮ್ (ಎ.ಓ.ಹ್ಯೂಮ್) ಅವರ ಕನಸಿನ ಕೂಸಾಗಿತ್ತು. ಇದು ಸಾ.ಶ. 1885ರಲ್ಲಿ ಮುಂಬೈಯಲ್ಲಿ ಸ್ಥಾಪಿತವಾಯಿತು. ಉಮೇಶಚಂದ್ರ ಬ್ಯಾನರ್ಜಿಯವರು ಕಾಂಗ್ರೆಸಿನ ಮೊದಲ ಅಧ್ಯಕ್ಷರಾಗಿದ್ದರು. ಮುಂಬೈಯಲ್ಲಿ ನಡೆದ ಕಾಂಗ್ರೆಸಿನ ಮೊದಲ ಅಧಿವೇಶನದಲ್ಲಿ 72 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು. ಅವರಲ್ಲಿ ಹೆಚ್ಚಿನವರು ವಕೀಲರು, ಪತ್ರಕರ್ತರು ಮತ್ತು ಸಮಾಜದ ಪ್ರತಿಷ್ಠಿತ ವರ್ಗದವರಾಗಿದ್ದರು. ವಾಸ್ತವಾಗಿ ಇದು ಕಾಂಗ್ರೆಸ್ ರಾಷ್ಟ್ರೀಯ ಚಳವಳಿಗೆ ಚಾಲನೆ ನೀಡಿದ ಮೊದಲ ರಾಜಕೀಯ ವೇದಿಕೆಯಾಗಿತ್ತು.



ಎ.ಓ. ಹ್ಯೂಮ್
ಕಾಂಗ್ರೆಸಿನ ಸ್ಥಾಪಕರು

ಉಮೇಶಚಂದ್ರ ಬ್ಯಾನರ್ಜಿ
ಪ್ರಥಮ ಅಧಿವೇಶನದ ಅಧ್ಯಕ್ಷರು

ಭಾರತ ರಾಷ್ಟ್ರೀಯ ಕಾಂಗ್ರೆಸಿನ ಕೆಲವು ಅಧ್ಯಕ್ಷರು

ಸಯ್ಯದ್ ಬದ್ರುದ್ದೀನ್ ತ್ಯಾಬ್ಜಿ

ಫಿರೋಜ್‌ಷಾ ಮೆಹತಾ

ಭಾರತೀಯ ರಾಷ್ಟ್ರೀಯ ಕಾಂಗ್ರೆಸಿನ ಉದ್ದೇಶಗಳು:

- ದೇಶದ ವಿವಿಧ ಭಾಗಗಳಲ್ಲಿರುವ ರಾಜಕೀಯ ಕಾರ್ಯಕರ್ತರ ನಡುವೆ ಸ್ನೇಹ ಸಂಬಂಧವನ್ನು ಬೆಸೆಯುವುದು.
- ರಾಷ್ಟ್ರೀಯ ಏಕತೆಯನ್ನುಂಟುಮಾಡುವುದು.
- ಜನತೆಯ ಬೇಡಿಕೆಗಳನ್ನು ಸರ್ಕಾರದ ಮುಂದೆ ಮಂಡಿಸಿ, ಜನಾಭಿಪ್ರಾಯವನ್ನು ರೂಪಿಸುವುದು.
- ಪ್ರಾಂತೀಯತೆಯನ್ನು ತೊರೆದು ರಾಷ್ಟ್ರೀಯತೆಯನ್ನು ಮೂಡಿಸುವುದು.

ಮಂದಗಾಮಿಗಳ ಯುಗ (1885–1905)

ಭಾರತ ರಾಷ್ಟ್ರೀಯ ಕಾಂಗ್ರೆಸಿನ ಆರಂಭಿಕ ನಾಯಕರುಗಳನ್ನು ಮಂದಗಾಮಿಗಳು (ಸೌಮ್ಯವಾದಿಗಳು) ಎಂದು ಕರೆಯಲಾಗಿದೆ. ಸಾ.ಶ. 1885ರಿಂದ 1905ರ ನಡುವಿನ ಕಾಲಘಟ್ಟವನ್ನು 'ಮಂದಗಾಮಿಗಳ ಕಾಲ' ಎಂದು ಪರಿಗಣಿಸಲಾಗಿದೆ. ಅವರು ಸಂವಿಧಾನಾತ್ಮಕ ನೀತಿಯಲ್ಲಿ ನಂಬಿಕೆಯಿರಿಸಿದ್ದರು. ಬ್ರಿಟಿಷ್ ಆಳ್ವಿಕೆಗೆ ನಿಷ್ಠಾವಂತರಾದ ಅವರು ಪ್ರಾರ್ಥನೆ, ಭಿನ್ನಹ ಮತ್ತು ಪ್ರತಿಭಟನೆಯ ನೀತಿಯನ್ನು ಅನುಸರಿಸಿದರು. ಜೊತೆಗೆ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಸುಧಾರಣೆಗಳನ್ನು ಜಾರಿಗೆ ತರುವಂತೆ ಬ್ರಿಟಿಷರನ್ನು ಮನವೊಲಿಸಲು ಪ್ರಯತ್ನಿಸಿದರು. ಪ್ರಮುಖ ಮಂದಗಾಮಿ ನಾಯಕರೆಂದರೆ ದಾದಾಬಾಯಿ ನವರೋಜಿ, ಸುರೇಂದ್ರನಾಥ ಬ್ಯಾನರ್ಜಿ, ಗೋಪಾಲಕೃಷ್ಣ ಗೋಖಲೆ, ಮಹಾದೇವ ಗೋವಿಂದ ರಾನಡೆ ಮತ್ತು ಇನ್ನಿತರರು.

ಮಂದಗಾಮಿಗಳ ಹೋರಾಟದ ಫಲವಾಗಿ ಭಾರತೀಯರು ಶಾಸನ ಸಭೆಗಳನ್ನು ಪ್ರವೇಶಿಸಲು ಸಾಧ್ಯವಾಯಿತು. ಅಲ್ಲದೆ ಮಂದಗಾಮಿಗಳ ಪ್ರಯತ್ನದಿಂದ ಭಾರತದ ಬಡತನಕ್ಕೆ ಬ್ರಿಟಿಷರು ಕಾರಣ ಎಂಬುದು ತಿಳಿಯಿತು. ಜೊತೆಗೆ ಈ ಕಾಲಘಟ್ಟದಲ್ಲಿ ಭಾರತೀಯರು ರಾಜಕೀಯ ಸಂಘರ್ಷಕ್ಕೆ ಬೇಕಾದ ತರಬೇತಿ ಪಡೆಯುವ ಮೂಲಕ ಬ್ರಿಟಿಷ್ ವಿರೋಧಿ ಹೋರಾಟಕ್ಕೆ ರಾಷ್ಟ್ರೀಯ ವ್ಯಾಪ್ತಿಯನ್ನು ಸೃಷ್ಟಿಸಿಕೊಂಡರು.

ದಾದಾಬಾಯಿ ನವರೋಜಿ



ಸುರೇಂದ್ರನಾಥ ಬ್ಯಾನರ್ಜಿ

ಗೋಪಾಲಕೃಷ್ಣ ಗೋಖಲೆ

ಪ್ರಮುಖ ಮಂದಗಾಮಿ ನಾಯಕರು

ಮಂದಗಾಮಿಗಳ ಬೇಡಿಕೆಗಳು

ವಾಕ್ ಮತ್ತು ಮುದ್ರಣ ಸ್ವಾತಂತ್ರ್ಯ, ಕಾರ್ಯಾಂಗದಿಂದ ನ್ಯಾಯಾಂಗದ ಬೇರ್ಪಡೆ, ಸೈನಿಕ ವೆಚ್ಚದ ಕಡಿತ, ಪ್ರಾಥಮಿಕ, ಪ್ರೌಢ ಮತ್ತು ತಾಂತ್ರಿಕ ಶಿಕ್ಷಣದ ಅನುಷ್ಠಾನ, ಶಸ್ತ್ರಾಸ್ತ್ರ ನಿಷೇಧ ಕಾಯಿದೆಯ ರದ್ಧತಿ, ಬ್ಯಾಂಕಿಂಗ್, ನೀರಾವರಿ, ವೈದ್ಯಕೀಯ ಮತ್ತು ಆರೋಗ್ಯ ಸೌಲಭ್ಯಗಳು, ಉಪ್ಪಿನ ಸುಂಕದ ಸಂಪೂರ್ಣ ರದ್ದತಿ, ಇಂಗ್ಲೆಂಡ್ ಮತ್ತು ಇಂಡಿಯಾದಲ್ಲಿ ಏಕಕಾಲದಲ್ಲಿ ಐ.ಸಿ.ಎಸ್. ಪರೀಕ್ಷೆಯನ್ನು ನಡೆಸುವುದು, ಕೇಂದ್ರ ಹಾಗೂ ಪ್ರಾಂತೀಯ ಶಾಸನ ಸಭೆಗಳಲ್ಲಿ ಭಾರತೀಯರಿಗೆ ಪ್ರಾತಿನಿಧ್ಯ ನೀಡುವುದು, ಉನ್ನತ ಹುದ್ದೆಗಳಿಗೆ ಭಾರತೀಯರನ್ನು ನೇಮಿಸುವುದು ಮುಂತಾದವು.

ತೀವ್ರಗಾಮಿಗಳ ಯುಗ (1905–1919)

ಮಂದಗಾಮಿಗಳು ಜನತೆಯನ್ನು ಹೆಚ್ಚಾಗಿ ತಲುಪಲಿಲ್ಲ. ಅವರು ಅನುಸರಿಸಿದ ಪ್ರಾರ್ಥನೆ ಮತ್ತು ಮನವಿ ನೀತಿಗಳನ್ನು 'ತಿರುಪೆಯ ನೀತಿ' (ಪಾಲಿಸಿ ಆಫ್ ಮೆಂಡಿಕೆನ್ಸಿ) ಎಂದು ತೀವ್ರವಾದಿಗಳು ವ್ಯಂಗ್ಯವಾಡಿದರು. ಯುವವರ್ಗವು ಅವರ ನೀತಿಗಳಿಗೆ ಆಕರ್ಷಿತರಾಗಲಿಲ್ಲ. ಇವರ ಕಾಯ್ದುನೋಡುವ ವಿಧಾನವನ್ನು ಪ್ರಶ್ನಿಸುವ ಹೊಸ ನಾಯಕರ ಒಂದು ಗುಂಪು ಕಾಂಗ್ರೆಸಿನಲ್ಲಿ ಉದಯಿಸಿತು. ಅವರೇ ತೀವ್ರಗಾಮಿಗಳು. ಲಾಲಾ ಲಜಪತ್‌ರಾಯ್, ಬಾಲಗಂಗಾಧರ ತಿಲಕ್ ಮತ್ತು ಬಿಪಿನ್‌ಚಂದ್ರ ಪಾಲ್ ಇವರು ತೀವ್ರಗಾಮಿ ಗುಂಪಿನ ನಾಯಕರಾಗಿದ್ದು 'ಲಾಲ್‌ಬಾಲ್‌ಪಾಲ್' ಎಂದೇ ಜನಪ್ರಿಯರಾದರು. ಸಾ.ಶ. 1905–1919ರ ಕಾಲಾವಧಿಯನ್ನು ತೀವ್ರಗಾಮಿ ರಾಜಕೀಯದ ಕಾಲವೆಂದು ಗುರುತಿಸಲಾಗಿದೆ.

ಲಾಲಾ ಲಜಪತ್ ರಾಯ್
(ಲಾಲ್)

ಬಾಲಗಂಗಾಧರ ತಿಲಕ್
(ಬಾಲ್)



ಬಿಪಿನ್ ಚಂದ್ರಪಾಲ್
(ಪಾಲ್)

ಪ್ರಮುಖ ತೀವ್ರಗಾಮಿ ನಾಯಕರು

ತೀವ್ರಗಾಮಿಗಳ ಬೆಳವಣಿಗೆಗೆ ಕಾರಣಗಳು

- ಭಾರತೀಯರನ್ನು ಉನ್ನತ ಹುದ್ದೆಗಳಿಗೆ ಪರಿಗಣಿಸದಿದ್ದುದು.
- 1905ರಲ್ಲಿ ಲಾರ್ಡ್ ಕರ್ಜನ್‌ನು ಬಂಗಾಳವನ್ನು ವಿಭಜಿಸುವ ಮೂಲಕ ಮತೀಯ ರಾಜಕಾರಣಕ್ಕೆ ಪ್ರಯತ್ನಿಸಿದ್ದು.
- 1905ರಲ್ಲಿ ರಷ್ಯ ದೇಶವನ್ನು ಸಣ್ಣ ರಾಷ್ಟ್ರವಾದ ಜಪಾನ್ ಸೋಲಿಸಿದ ಘಟನೆಯು ಯೂರೋಪಿಯನ್‌ರನ್ನು ಏಷ್ಯನ್‌ರು ಸೋಲಿಸಬಹುದು ಎಂಬ ಆತ್ಮವಿಶ್ವಾಸ ಮೂಡಿಸಿತು.
- ಐರ್ಲೆಂಡ್, ರಷ್ಯ, ಚೀನ, ಟರ್ಕಿ, ಈಜಿಪ್ಟ್ ಮುಂತಾದ ರಾಷ್ಟ್ರಗಳಲ್ಲಿ ನಡೆಯುತ್ತಿದ್ದ ಕ್ರಾಂತಿಕಾರಿ ಆಂದೋಲನಗಳು ಭಾರತೀಯರನ್ನು ಪ್ರೇರೇಪಿಸಿದವು.

ಬಾಲಗಂಗಾಧರ ತಿಲಕರು ಒಬ್ಬ ಅಪ್ರತಿಮ ದೇಶಭಕ್ತ. "ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ನಾನು ಅದನ್ನು ಪಡೆದೇ ತೀರುತ್ತೇನೆ", ಎಂಬ ಅವರ ಘೋಷಣೆಯಲ್ಲಿ ಸ್ವಾತಂತ್ರ್ಯದ ಉತ್ಕಟತೆಯಿತ್ತು. ಜನರನ್ನು ಒಗ್ಗೂಡಿಸುವ ದೃಷ್ಟಿಯಿಂದ ತಿಲಕರು ಗಣೇಶ ಮತ್ತು ಶಿವಾಜಿ ಉತ್ಸವಗಳನ್ನು ಪರಿಚಯಿಸಿದರು. 'ಮರಾಠ' (ಇಂಗ್ಲಿಷ್) ಮತ್ತು 'ಕೇಸರಿ' (ಮರಾಠಿ) ಪತ್ರಿಕೆಗಳನ್ನು ಪ್ರಕಟಿಸುವ ಮೂಲಕ ಜನರನ್ನು ರಾಜಕೀಯವಾಗಿ ಪ್ರೇರೇಪಿಸಿದರು. ಬಿಪಿನ್‌ಚಂದ್ರ ಪಾಲರು 'ನ್ಯೂ ಇಂಡಿಯಾ' ಹಾಗೂ ಅರವಿಂದರು 'ವಂದೇ ಮಾತರಂ' ಪತ್ರಿಕೆಗಳನ್ನು ಪ್ರಾರಂಭಿಸಿದರು. ಲಾಲಾ ಲಜಪತ್‌ರಾಯ್ 'ಪಂಜಾಬಿನ ಸಿಂಹ' ಎಂದೇ ಜನಪ್ರಿಯರಾಗಿದ್ದರು. ಅವರು, "ನಾವು ಸ್ವರಾಜ್ಯವನ್ನು ಹಕ್ಕಿನ ರೂಪದಲ್ಲಿ ಪಡೆಯುತ್ತೇವೆಯೇ ಹೊರತು ಭಿಕ್ಷಾರೂಪದಲ್ಲಿ ಅಲ್ಲ" ಎಂದು ಹೇಳಿದರು. ಬಿಪಿನ್‌ಚಂದ್ರ ಪಾಲರು ಬಂಗಾಳದಲ್ಲಿ 'ಸಾಮೂಹಿಕ ಪ್ರತಿಭಟನೆ'ಯನ್ನು ಸಂಘಟಿಸಿದರು. ತೀವ್ರವಾದವನ್ನು ಪ್ರತಿನಿಧಿಸಿದ ಮತ್ತೊಬ್ಬ ನಾಯಕ ಅರವಿಂದ ಘೋಷ್. ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ವಸ್ತುಗಳನ್ನು ಮಾತ್ರವೇ ಬಳಸುವುದು ಮತ್ತು ರಾಷ್ಟ್ರೀಯ ಶಾಲೆಗಳನ್ನು ತೆರೆಯುವುದು ಇವರ ಕಾರ್ಯವಿಧಾನವಾಗಿತ್ತು.

ಬಂಗಾಳದ ವಿಭಜನೆ (1905)

ತೀವ್ರವಾದಿಗಳ ರಾಷ್ಟ್ರೀಯ ಹೋರಾಟವನ್ನು ಪ್ರೇರೇಪಿಸಿದ ಪ್ರಮುಖ ಘಟನೆಯೆಂದರೆ ಸಾ.ಶ. 1905ರ ಬಂಗಾಳದ ವಿಭಜನೆ. ಬಂಗಾಳದಲ್ಲಿ ರಾಷ್ಟ್ರೀಯತೆಯ ಅಲೆಯು ತೀವ್ರಗೊಳ್ಳುತ್ತಿರುವುದನ್ನು ಕಂಡು ಬ್ರಿಟಿಷರು ಆತಂಕಗೊಂಡರು. ಆದ್ದರಿಂದ ಬಂಗಾಳವನ್ನು ಹಿಂದೂ ಮತ್ತು ಮುಸಲ್ಮಾನ ಎಂಬ ಮತೀಯ ಭಿನ್ನತೆಯ ಆಧಾರದ ಮೇಲೆ ವಿಭಜಿಸುವ ಮೂಲಕ ರಾಷ್ಟ್ರೀಯತೆಯ ತೀವ್ರತೆಯನ್ನು ಹತ್ತಿಕ್ಕಲು ವೈಸರಾಯ್ ಲಾರ್ಡ್ ಕರ್ಜನ್ ಪ್ರಯತ್ನಿಸಿದನು. ಈ ವಿಭಜನೆಯನ್ನು ವಿರೋಧಿಸಿ 1905 ಅಕ್ಟೋಬರ್ 16ರಂದು ಬಂಗಾಳದಾದ್ಯಂತ 'ರಾಷ್ಟ್ರೀಯ ಶೋಕದಿನ'ವನ್ನಾಗಿ ಆಚರಿಸಿದರು. ರವೀಂದ್ರನಾಥ ಟಾಗೋರ್ 'ಅಮರ್ ಸೋನಾರ್ ಬಾಂಗ್ಲ' ಗೀತೆಯನ್ನು ರಾಷ್ಟ್ರೀಯ ಗೀತೆಯಾಗಿ ಹಾಡಿದರು. ಬಂಕಿಮ ಚಂದ್ರರ 'ವಂದೇ ಮಾತರಂ' ದೇಶಪ್ರೇಮಿಗಳ ಗೀತೆಯಾಗಿತ್ತು. ಬಂಗಾಳದ ಏಕತೆಯನ್ನು ಪ್ರತಿನಿಧಿಸಲು ಹಿಂದೂ ಮುಸಲ್ಮಾನರು ಪರಸ್ಪರ 'ರಕ್ಷಾ ಬಂಧನ್' ಕಟ್ಟಿಕೊಂಡರು. ಜನತೆಯ ತೀವ್ರ ಪ್ರತಿಭಟನೆಗಳಿಗೆ ಮಣಿದು ಸಾ.ಶ. 1911ರಲ್ಲಿ ವಿಭಜನೆಯನ್ನು ಬ್ರಿಟಿಷರು ರದ್ದು ಮಾಡಬೇಕಾಯಿತು.

ಲಾರ್ಡ್ ಕರ್ಜನ್

ಬಂಕಿಮಚಂದ್ರ ಚಟರ್ಜಿ

ಮುಸ್ಲಿಮ್ ಲೀಗ್ ಸ್ಥಾಪನೆ (1906)

ಬ್ರಿಟಿಷರು ಒಡೆದು ಆಳುವ ನೀತಿಯನ್ನು ಅನುಸರಿಸುತ್ತ ರಾಷ್ಟ್ರೀಯ ಚಳವಳಿಯಿಂದ ಮುಸ್ಲಿಮರನ್ನು ದೂರವಿಡಲು ಪ್ರಯತ್ನಿಸುತ್ತಿದ್ದರು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾದ ಕಾಲದಿಂದಲೇ ಮುಸ್ಲಿಮರು ತಮ್ಮ ಸಮುದಾಯ ಹಿತಾಸಕ್ತಿಯ ಹಿನ್ನೆಲೆಯಲ್ಲಿ ಪ್ರತ್ಯೇಕ ಸಂಘಟನೆಯನ್ನು ರಚಿಸಿಕೊಳ್ಳುವಂತೆ ಬ್ರಿಟಿಷರು ಅವರನ್ನು ಪ್ರೋತ್ಸಾಹಿಸಿದರು. ಸಾ.ಶ. 1906ರಲ್ಲಿ ಮುಸ್ಲಿಂ ನಿಯೋಗವೊಂದು ಭಾರತದ ವೈಸರಾಯ್ ಆಗಿದ್ದ ಮಿಂಟೋ ಅವರನ್ನು ಭೇಟಿ ಮಾಡಿತು. ಭೇಟಿಯ ಪ್ರೇರಣೆಯಿಂದಾಗಿ, ಸರ್ ಆಗಾಖಾನ್, ಢಾಕಾದ ನವಾಬ ಸಲಿಮುಲ್ಲ ಮತ್ತು ಇನ್ನಿತರರು ಸೇರಿ ಸಾ.ಶ. 1906ರಲ್ಲಿ ಭಾರತ ಮುಸ್ಲಿಮ್ ಲೀಗ್‌ನ್ನು ಢಾಕಾದಲ್ಲಿ (ಈಗಿನ ಬಾಂಗ್ಲಾದೇಶದ ರಾಜಧಾನಿ) ಸ್ಥಾಪಿಸಿದರು.

ಸೂರತ್ ಒಡಕು (1907)

ಬಂಗಾಳದ ವಿಭಜನೆಯ ವಿವಾದದ ಹಿನ್ನೆಲೆಯಲ್ಲಿ ತೀವ್ರಗಾಮಿಗಳು ದೇಶಾದ್ಯಂತ ಸ್ವದೇಶಿ ಮತ್ತು ಬಹಿಷ್ಕಾರ ಚಳವಳಿಯನ್ನು ವ್ಯಾಪಕವಾಗಿ ಹಮ್ಮಿಕೊಂಡರು. ಆದರೆ ಮಂದಗಾಮಿಗಳು ಅದನ್ನು ಬಂಗಾಳಕ್ಕೆ ಮಾತ್ರವೇ ಸೀಮಿತಗೊಳಿಸಲು ಬಯಸಿದ್ದರು. ಅಲ್ಲದೆ ಅವರು ಸರ್ಕಾರದೊಂದಿಗೆ ನೇರ ಸಂಘರ್ಷಕ್ಕಿಳಿಯಲು ಸಿದ್ಧರಿರಲಿಲ್ಲ. ತೀವ್ರಗಾಮಿಗಳು ಮತ್ತು ಮಂದಗಾಮಿಗಳ ನಡುವಿನ ಭಿನ್ನಾಭಿಪ್ರಾಯಗಳು ತೀವ್ರಗೊಂಡು ಕಾಂಗ್ರೆಸಿನಲ್ಲಿ ರಾಜಕೀಯ ಒಡಕುಂಟಾಯಿತು. ಸಾ.ಶ. 1907ರಲ್ಲಿ ಸೂರತ್‌ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಮಂದಗಾಮಿಗಳು ಮತ್ತು ತೀವ್ರಗಾಮಿಗಳ ನಡುವೆ ಕಾಂಗ್ರೆಸ್ ಇಬ್ಭಾಗವಾಯಿತು.

ಕಾಂಗ್ರೆಸಿನಲ್ಲಾದ ಒಡಕಿನ ನಂತರ ಸರ್ಕಾರವು ತೀವ್ರಗಾಮಿಗಳ ವಿರುದ್ಧ ದಮನಕಾರಿ ಕ್ರಮಗಳನ್ನು ಕೈಗೊಂಡಿತು. ಅವರಲ್ಲಿ ಅನೇಕರನ್ನು ಸೆರೆಮನೆಗೆ ಕಳುಹಿಸಲಾಯಿತು, ಕೆಲವರನ್ನು ಗಡಿಪಾರು ಮಾಡಲಾಯಿತು. ತಿಲಕರಿಗೆ ಕರಿನೀರು ಶಿಕ್ಷೆಯನ್ನು ವಿಧಿಸಿ ಮಾಂಡೆಲೆ (ಬರ್ಮಾ) ಸೆರೆಮನೆಗೆ ಗಡಿಪಾರು ಮಾಡಲಾಯಿತು.

ತೀವ್ರಗಾಮಿಗಳನ್ನು ರಾಜಕೀಯವಾಗಿ ನಿಷ್ಕ್ರಿಯಗೊಳಿಸುವ ಸಲುವಾಗಿ ಬ್ರಿಟಿಷರು ಮಂದಗಾಮಿಗಳು ಮತ್ತು ಮುಸ್ಲಿಮರಿಗೆ ಶಾಸಕಾಂಗದಲ್ಲಿ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಿ ಒಲೈಸಲೆತ್ನಿಸಿದರು. ಈ ನಿಟ್ಟಿನಲ್ಲಿ ಮಿಂಟೋಮಾರ್ಲೆ ಸುಧಾರಣೆಗಳನ್ನು ಸಾ.ಶ. 1909ರಲ್ಲಿ ಜಾರಿಗೆ ತಂದರು. ಈ ಕಾಯಿದೆಯಲ್ಲಿ ಮುಸ್ಲಿಮರಿಗೆ 'ಪ್ರತ್ಯೇಕ ಮತಕ್ಷೇತ್ರ'ವನ್ನು ಕಲ್ಪಿಸಿದರು. ಈ ಮಧ್ಯೆ ಮೊದಲ ಮಹಾಯುದ್ಧವು ಹಠಾತ್ ಆರಂಭವಾಯಿತು (ಸಾ.ಶ. 1914). ಇದು ರಾಷ್ಟ್ರೀಯ ಚಳುವಳಿಗೆ ಹೊಸ ಹುರುಪನ್ನು ನೀಡಿತು. ಸಾ.ಶ. 1916ರಲ್ಲಿ ಲೋಕಮಾನ್ಯ ತಿಲಕರು ಮತ್ತು ಆ್ಯನಿ ಬೆಸೆಂಟರು ಹೋಂ ರೂಲ್ ಚಳವಳಿಯನ್ನು ಹಮ್ಮಿಕೊಂಡರು.

ಹೋಂ ರೂಲ್

ಇದು ಐರಿಷ್ ಹೋಂ ರೂಲ್ ಚಳವಳಿಯಿಂದ ಪ್ರೇರೇಪಿತವಾಗಿತ್ತು. ಇದರ ಮುಖ್ಯ ಉದ್ದೇಶವೆಂದರೆ ಭಾರತಕ್ಕೆ ಸ್ವಯಂ ಆಡಳಿತ ತರುವುದು. ತಿಲಕ್ ಮತ್ತು ಆ್ಯನಿಬೆಸೆಂಟರು 1916ರಲ್ಲಿ ಪ್ರತ್ಯೇಕವಾಗಿ ಹೋಂ ರೂಲ್ ಚಳವಳಿಗಳನ್ನು ಮಹಾರಾಷ್ಟ್ರ ಮತ್ತು ತಮಿಳುನಾಡು ಪ್ರಾಂತ್ಯಗಳಲ್ಲಿ ಆರಂಭಿಸಿದರು.

ರೌಲಟ್ ಕಾಯಿದೆ (1919)

ಸಾ.ಶ. 1917ರ ಡಿಸೆಂಬರ್‌ನಲ್ಲಿ ನ್ಯಾಯಮೂರ್ತಿ ರೌಲಟ್‌ನ ಮಾರ್ಗದರ್ಶನದಲ್ಲಿ ಒಂದು ಸಮಿತಿ ರಚನೆಯಾಯಿತು. ಇದರ ಉದ್ದೇಶ ಭಾರತದ ಕ್ರಾಂತಿಕಾರಿ ಚಟುವಟಿಕೆಗಳನ್ನು ಹತ್ತಿಕ್ಕುವುದಾಗಿತ್ತು. ಅಂತಿಮವಾಗಿ ರೌಲಟ್ ಕಾಯಿದೆ ಸಾ.ಶ. 1919ರ ಫೆಬ್ರವರಿಯಲ್ಲಿ ಜಾರಿಯಾಯಿತು. ಈ ಕಾಯಿದೆಯ ಪ್ರಕಾರ ಅನುಮಾನ ಬಂದ ಯಾವುದೇ ವ್ಯಕ್ತಿಯನ್ನು ಯಾವ ಕಾರಣವೂ ನೀಡದೆ ಸರ್ಕಾರ ಬಂಧಿಸಬಹುದಾಗಿತ್ತು. ಮುನ್ಸೂಚನೆ ನೀಡದೆ ಯಾವುದೇ ಪ್ರದೇಶವನ್ನು ಶೋಧ ಮಾಡಬಹುದಾಗಿತ್ತು. ಬಂಧಿತ ವ್ಯಕ್ತಿಗೆ ವಕೀಲರನ್ನು ನೇಮಿಸಿಕೊಳ್ಳುವ ಹಕ್ಕು ಕೂಡ ಇರಲಿಲ್ಲ. ಹೀಗಾಗಿ ಭಾರತೀಯರು ಇದನ್ನು ತೀವ್ರವಾಗಿ ವಿರೋಧಿಸಿದರು.

ಜಲಿಯನ್‌ವಾಲಾಬಾಗ್ ಹತ್ಯಾಕಾಂಡ (1919)

ರೌಲಟ್ ಕಾಯಿದೆಯ ವಿರುದ್ಧ ಗಾಂಧೀಜಿ ಹಮ್ಮಿಕೊಂಡಿದ್ದ ಸತ್ಯಾಗ್ರಹದಿಂದಾಗಿ ಪಂಜಾಬಿನ ಬಹುತೇಕ ಭಾಗಗಳಲ್ಲಿ ಪ್ರತಿಭಟನೆಗಳು ಆರಂಭವಾದವು. ಸಾ.ಶ. 1919 ಏಪ್ರಿಲ್ 13ರಂದು ಅಮೃತಸರದ ಸುವರ್ಣ ಮಂದಿರದಿಂದ ಸ್ವಲ್ಪ ದೂರದಲ್ಲಿರುವ ಜಲಿಯನ್‌ವಾಲಾಬಾಗ್ ಎಂಬ ಉದ್ಯಾನದಲ್ಲಿ ಸಭೆಯೊಂದನ್ನು ಆಯೋಜಿಸಲಾಗಿತ್ತು. ಸಭೆಯಲ್ಲಿ ತಮ್ಮ ನಾಯಕರಾಗಿದ್ದ ಸೈಫುದ್ದೀನ್ ಕಿಚ್ಲೂ ಮತ್ತು ಡಾ. ಸತ್ಯಪಾಲರ ಬಂಧನದ ವಿರುದ್ಧ ಪ್ರತಿಭಟನೆ ಮಾಡುವುದಾಗಿತ್ತು.

ಅಮೃತಸರದ ರಕ್ಷಣಾ ಪಾಲಕನಾಗಿದ್ದ ಜನರಲ್ ಡೈಯರ್‌ನು ಪ್ರತಿಭಟನೆ ಮಾಡುತ್ತಿದ್ದ ಜನರಿಗೆ ಬುದ್ಧಿ ಕಲಿಸಬೇಕೆಂದು ಉದ್ಯಾನದ ಏಕೈಕ ನಿರ್ಗಮನ ದ್ವಾರವನ್ನು ಮುಚ್ಚಿಸಿ ನಿರಾಯುಧರಾಗಿದ್ದ ಜನತೆಯ ಮೇಲೆ ಗುಂಡು ಹಾರಿಸಲು ಆಜ್ಞಾಪಿಸಿದನು. ಭಯಭೀತಿಯಿಂದ ಜನಸ್ತೋಮ ಒಮ್ಮೆಲೆ ಹೌಹಾರಿತು. ಸರ್ಕಾರಿ ವರದಿಯ ಪ್ರಕಾರ ಕೊಲ್ಲಲ್ಪಟ್ಟವರು ಕೇವಲ 379 ಮಂದಿ ಮಾತ್ರವಾಗಿತ್ತು. ಆದರೆ ವಾಸ್ತವವಾಗಿ ವರದಿಯ ಹೇಳಿಕೆಗಿಂತಲೂ ಹೆಚ್ಚು ಜನರು ಸತ್ತಿದ್ದರು.

ಜಲಿಯನ್‌ವಾಲಾಬಾಗ್ ಹತ್ಯಾಕಾಂಡದ ಭೀಕರ ದೃಶ್ಯ

ಕ್ರಾಂತಿಕಾರಿ ರಾಷ್ಟ್ರೀಯತೆ

ತೀವ್ರವಾದಿಗಳಲ್ಲಿ ಕೆಲವು ಮಂದಿ ಸಶಸ್ತ್ರ ಕ್ರಾಂತಿಗೆ ಮುಂದಾದರು. ಇವರನ್ನು 'ಕ್ರಾಂತಿಕಾರಿ ರಾಷ್ಟ್ರೀಯವಾದಿಗಳು' ಎನ್ನುವರು. ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ತುರ್ತಾಗಿ ದೊರಕಿಸುವ ಧ್ಯೇಯ ಇವರದಾಗಿತ್ತು. ಗಾಢವಾದ ದೇಶಭಕ್ತಿ ಮತ್ತು ತ್ಯಾಗಮನೋಭಾವವು ಕ್ರಾಂತಿಕಾರಿ ರಾಷ್ಟ್ರೀಯವಾದದ ಮೂಲತತ್ವವಾಗಿತ್ತು.

ರಹಸ್ಯ ಸಂಘಟನೆಯನ್ನು ರೂಪಿಸಿಕೊಂಡ ಕ್ರಾಂತಿಕಾರಿಗಳಲ್ಲಿ ವಾಸುದೇವ ಬಲವಂತ ಫಡ್ಕೆ ಮೊದಲಿನವರು. ದಾಮೋದರ ಮತ್ತು ಬಾಲಕೃಷ್ಣ ಚಾಪೇಕರ್ ಸಹೋದರರು ಅವರ ರಹಸ್ಯ ಸಂಘಟನೆಯ ಜೀವನಾಡಿಗಳಾಗಿದ್ದರು. ಇವರಿಬ್ಬರನ್ನೂ ಬಂಧಿಸಿ ಗಲ್ಲಿಗೇರಿಸಲಾಯಿತು.

ನಮ್ಮ ದೇಶದ ಇತರ ಕ್ರಾಂತಿಕಾರಿಗಳೆಂದರೆ ವಿನಾಯಕ ದಾಮೋದರ ಸಾವರ್ಕರ್, ಖುದಿರಾಮ್ ಬೋಸ್, ಚಂದ್ರಶೇಖರ ಆಜಾದ್ ಮತ್ತು ಭಗತ್ ಸಿಂಗ್. ಖುದಿರಾಮ್ ಸ್ವಾತಂತ್ರ್ಯ ಹೋರಾಟದಲ್ಲಿ ನೇಣುಗಂಬ ಏರಿದ ಭಾರತದ ಮೊದಲ ಹುತಾತ್ಮ (ಸಾ.ಶ. 1908). ಆಗ ಅವನ ವಯಸ್ಸು ಕೇವಲ 19 ವರ್ಷ.

ಪ್ರಮುಖ ಕ್ರಾಂತಿಕಾರಿ ನಾಯಕರು

ಖುದಿರಾಮ್ ಬೋಸ್

ವಿನಾಯಕ ದಾಮೋದರ ಸಾವರ್ಕರ್



ಚಂದ್ರಶೇಖರ ಆಜಾದ್

ಭಗತ್ ಸಿಂಗ್

ವಿನಾಯಕ ದಾಮೋದರ ಸಾವರ್ಕರ್ ಮತ್ತೋರ್ವ ಕ್ರಾಂತಿಕಾರಿ. 1899ರಲ್ಲಿ ಅವರು 'ಮಿತ್ರಮೇಳ' ಎನ್ನುವ ಪ್ರಥಮ ಗುಪ್ತ ಸಂಘಟನೆಯನ್ನು ಕಟ್ಟಿದರು. ಅವರಿಗೆ ಬ್ರಿಟಿಷ್ ಸರ್ಕಾರ ಜೀವಾವಧಿ ಕಾರಾಗೃಹವಾಸವನ್ನು ವಿಧಿಸಿ ಅಂಡಮಾನ್ ಜೈಲಿಗೆ ರವಾನಿಸಿತು. ಅವರು ಕ್ರೂರ ದೈಹಿಕ ಚಿತ್ರಹಿಂಸೆಯನ್ನು ಅನುಭವಿಸಿದ ಅಂಡಮಾನ್ ಜೈಲಿನಲ್ಲಿ ಭಾರತ ಸರ್ಕಾರ ಅವರ ಸ್ಮಾರಕವನ್ನು ನಿರ್ಮಿಸಿದೆ.

ಚಂದ್ರಶೇಖರ ಆಜಾದ್ 'ಹಿಂದೂಸ್ಥಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್'ಗೆ ಸೇರಿ ಕಾಕೋರಿ ಪಿತೂರಿ, ಶಾಸನ ಸಭೆಯ ಬಾಂಬ್ ಘಟನೆ ಹಾಗೂ ಲಾಹೋರಿನಲ್ಲಿ ಬ್ರಿಟಿಷ್ ಅಧಿಕಾರಿ ಸ್ಯಾಂಡರ್ಸ್‌ನ ಮೇಲೆ ಗುಂಡಿನ ದಾಳಿ ಮುಂತಾದ ಹಲವು ಪ್ರಕರಣಗಳಲ್ಲಿ ಭಾಗಿಯಾಗಿದ್ದರು.

ಬ್ರಿಟಿಷ್ ಸೈನಿಕರಿಂದ ತಪ್ಪಿಸಿಕೊಳ್ಳಲು ಆಜಾದ್ ಒಂದು ಸಣ್ಣ ಪಿಸ್ತೂಲಿನೊಂದಿಗೆ ಏಕಾಂಗಿ ಹೋರಾಟ ನಡೆಸಿದರು. ಕೇವಲ ಒಂದು ಗುಂಡು ಉಳಿದಿದ್ದಾಗ ತನ್ನ ಕಪೋಲಕ್ಕೆ ಗುರಿಯಿಟ್ಟು

ಹಾರಿಸಿಕೊಂಡು, ತಾನು ಬಂಧನಕ್ಕೊಳಗಾಗುವುದಿಲ್ಲ ಎನ್ನುವ ತನ್ನ ಪ್ರತಿಜ್ಞೆಯನ್ನು ಉಳಿಸಿಕೊಂಡರು. ಭಗತ್ ಸಿಂಗ್, ರಾಜಗುರು, ಸುಖದೇವ್, ಭಗವತೀ ಚರಣ್ ಹಾಗೂ ಗಯಾಪ್ರಸಾದರಂತಹ ಅನೇಕ ಹುತಾತ್ಮರು ಬ್ರಿಟಿಷರ ದಾಸ್ಯದಿಂದ ಭಾರತ ಬಿಡುಗಡೆ ಹೊಂದಲು ತಮ್ಮನ್ನೇ ಅರ್ಪಿಸಿಕೊಂಡರು.

ಭಗತ್ ಸಿಂಗ್ ಹಿಂದೂಸ್ಥಾನ್ ಸಮಾಜವಾದಿ ರಿಪಬ್ಲಿಕನ್ ಸಂಘಟನೆಯನ್ನು ಸೇರಿ ಅದರ ಪ್ರಧಾನ ಕಾರ್ಯದರ್ಶಿಯಾದರು. ಸಾ.ಶ. 1929ರಲ್ಲಿ ಭಗತ್ ಸಿಂಗ್, ರಾಜಗುರು ಮತ್ತು ಸುಖದೇವ್ ದಿಲ್ಲಿಯಲ್ಲಿ ಕೇಂದ್ರೀಯ ಶಾಸನಸಭೆಯ ಮೇಲೆ ಬಾಂಬೆಸೆದರು. ಲಾಹೋರ್ ಸೆಂಟ್ರಲ್ ಜೈಲಿನಲ್ಲಿ ಈ ಮೂವರನ್ನು ಗಲ್ಲಿಗೇರಿಸಲಾಯಿತು. ಭಗತ್‌ಸಿಂಗ್ "ಇಂಕ್ವಿಲಾಬ್ ಜಿಂದಾಬಾದ್" (ಕ್ರಾಂತಿ ಚಿರಾಯುವಾಗಲಿ) ಎಂಬ ಘೋಷಣೆಯನ್ನು ಮೊದಲ ಬಾರಿಗೆ ಮೊಳಗಿಸಿದ ಭಾರತೀಯರಾಗಿದ್ದಾರೆ.

ಮುಖ್ಯ ಇಸವಿಗಳು

ಭಾರತ ರಾಷ್ಟ್ರೀಯ ಕಾಂಗ್ರೆಸಿನ ಸ್ಥಾಪನೆ	1885
ಮಂದಗಾಮಿಗಳ ಕಾಲ	1885–1905
ತೀವ್ರಗಾಮಿಗಳ ಕಾಲ	1905–1919
ಬಂಗಾಳದ ವಿಭಜನೆ	1905
ಮುಸ್ಲಿಂ ಲೀಗ್‌ನ ಸ್ಥಾಪನೆ	1906
ಸೂರತ್ ಒಡಕು	1907
ಜಲಿಯನ್‌ವಾಲಾಬಾಗ್ ಹತ್ಯಾಕಾಂಡ	1919

I ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ರಾಷ್ಟ್ರೀಯತೆ ಎಂದರೇನು?
2. ಭಾರತೀಯ ರಾಷ್ಟ್ರೀಯ ಕಾಂಗ್ರೆಸನ್ನು ಯಾರು, ಯಾವಾಗ ಸ್ಥಾಪಿಸಿದವರು?
3. ಬಂಗಾಳ ವಿಭಜನೆ ಯಾವಾಗ ಆಯಿತು?
4. ಬಾಲಗಂಗಾಧರ ತಿಲಕರ ಪ್ರಸಿದ್ಧ ಘೋಷಣೆ ಯಾವುದು?
5. ಭಾರತ ಮುಸ್ಲಿಂ ಲೀಗ್ ಯಾವಾಗ ಸ್ಥಾಪನೆಯಾಯಿತು?
6. 'ಲಾಲ್, ಬಾಲ್, ಮತ್ತು ಪಾಲ್' ಎಂದು ಜನಪ್ರಿಯರಾದ ರಾಷ್ಟ್ರೀಯ ನಾಯಕರು ಯಾರು?
7. ಹೋಂ ರೂಲ್ ಚಳವಳಿಗಳನ್ನು ಆರಂಭಿಸಿದವರು ಯಾರು?
8. ಜಲಿಯನ್‌ವಾಲಾಬಾಗ್ ಹತ್ಯಾಕಾಂಡ ಯಾವಾಗ ಸಂಭವಿಸಿತು? ಈ ಘಟನೆಗೆ ಕಾರಣವಾದ ಬ್ರಿಟಿಷ್ ಪೊಲೀಸ್ ಅಧಿಕಾರಿ ಯಾರು?

9. ಯಾವುದಾದರೂ ಒಂದು ಗುಪ್ತ ಕ್ರಾಂತಿಕಾರಿ ಸಂಘವನ್ನು ಹೆಸರಿಸಿರಿ.

10. 'ಇಂಕ್ವಿಲಾಬ್ ಜಿಂದಾಬಾದ್' ಘೋಷಣೆ ನೀಡಿದವರು ಯಾರು?

II ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿರಿ.

1. ಭಾರತದ ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣವಾದ ಅಂಶಗಳನ್ನು ತಿಳಿಸಿ.
2. ಭಾರತೀಯ ರಾಷ್ಟ್ರೀಯ ಕಾಂಗ್ರೆಸಿನ ಉದ್ದೇಶಗಳನ್ನು ಪಟ್ಟಿ ಮಾಡಿ.
3. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಿಗಳ ಪಾತ್ರವೇನು?

ಚಟುವಟಿಕೆಗಳು

1. ದಾದಾಬಾಯಿ ನವರೋಜಿ ಮತ್ತು ಬಾಲಗಂಗಾಧರ ತಿಲಕ್ ಅವರ ಜೀವನ ಚರಿತ್ರೆಯನ್ನು ಓದಿರಿ.
2. ಕ್ರಾಂತಿಕಾರಿಗಳ ಭಾವಚಿತ್ರಗಳನ್ನು ಮಾಹಿತಿಯೊಂದಿಗೆ ಸಂಗ್ರಹಿಸಿ ಆಲ್ಬಂ ತಯಾರಿಸಿರಿ.
3. ಈ ಕೆಳಗಿನ ಕ್ರಾಂತಿಕಾರರ ಜೀವನ ಚರಿತ್ರೆಯನ್ನು ಓದಿ, ಲೇಖನವೊಂದನ್ನು ಬರೆದು ಶಾಲೆಯ ಬುಲೆಟಿನ್ ಬೋರ್ಡಿನಲ್ಲಿ ಪ್ರಕಟಿಸಿರಿ.

   ವಾಸುದೇವ ಬಲವಂತ ಫಡ್ಕೆ, ಖುದಿರಾಮ್ ಬೋಸ್, ಚಂದ್ರಶೇಖರ ಆಜಾದ್, ಭಗತ್ ಸಿಂಗ್, ಮೇಡಂ ಕಾಮಾ.

3. ಗಾಂಧಿ ಯುಗ (1919–1947)

ಮಹಾತ್ಮ ಗಾಂಧೀಜಿಯವರನ್ನು ನಾವು ಪ್ರೀತಿಯಿಂದ **'ಬಾಪು'** ಎಂದು ಸ್ಮರಿಸಿಕೊಳ್ಳುತ್ತೇವೆ. ಭಾರತದ ರಾಷ್ಟ್ರೀಯ ಹೋರಾಟದಲ್ಲಿ ಅವರು ಮಹಾನ್ ನಾಯಕರಾಗಿದ್ದರು. ಅಲ್ಲದೆ ಶೋಷಣೆ, ಅಸ್ಪೃಶ್ಯತೆಯ ನಿವಾರಣೆ ಮತ್ತು ಹಿಂದೂಮುಸ್ಲಿಂ ಸಾಮರಸ್ಯಕ್ಕಾಗಿ ತಮ್ಮನ್ನು ಪೂರ್ಣವಾಗಿ ಮುಡಿಪಾಗಿಟ್ಟಿದ್ದರು. ಅವರ ನೇತೃತ್ವದ ರಾಜಕೀಯ ಹೋರಾಟದ ಈ ಕಾಲಾವಧಿಯನ್ನು 'ಗಾಂಧೀ ಯುಗ' (ಸಾ.ಶ. 1919–1947) ಎಂದು ಕರೆಯಲಾಗಿದೆ.

1. ಮಹಾತ್ಮ ಗಾಂಧಿ

ಅಹಿಂಸೆ ಮತ್ತು ಸತ್ಯಾಗ್ರಹ ನೀತಿಯು ಗಾಂಧೀಜಿಯವರ ಹೋರಾಟದ ಅಸ್ತ್ರಗಳಾಗಿದ್ದವು. ಅವರು ಸ್ವಾತಂತ್ರ್ಯ ಚಳುವಳಿಗೆ ಜನಾಂದೋಲನದ ಸ್ವರೂಪವನ್ನು ತಂದುಕೊಟ್ಟರು. ಸರಳತೆ, ಸಜ್ಜನಿಕೆ, ಸತ್ಯಸಂದತೆ ಅವರ ಯಶಸ್ಸಿನ ಸೂತ್ರಗಳಾಗಿದ್ದವು.

ಆರಂಭಿಕ ಜೀವನ: ಗಾಂಧೀಜಿಯವರು ಸಾ.ಶ. 1869ರ ಅಕ್ಟೋಬರ್ 2ರಂದು ಗುಜರಾತ್ ರಾಜ್ಯದ ಪೋರಬಂದರ್ ಎಂಬಲ್ಲಿ ಕರಮಚಂದ ಗಾಂಧಿ ಮತ್ತು ಪುತಲೀಬಾಯಿಯವರ ಮಗನಾಗಿ ಜನಿಸಿದರು.

ಗಾಂಧೀಜಿಯವರ ಜೀವನದ ಮೇಲೆ ಪ್ರಭಾವ ಬೀರಿದ ಪ್ರಮುಖ ಕೃತಿಗಳೆಂದರೆ: ಭಗವದ್ಗೀತೆ, ಜಾನ್ ರಸ್ಕಿನನ 'ಕೊನೆಯ ತನಕ' (Unto this Last), ಟಾಲ್‌ಸ್ಟಾಯ್ ಅವರ 'ನಿನ್ನಂತರಂಗವೇ ದೇವರ ರಾಜ್ಯ' (The Kingdom of God is Within You) ಮತ್ತು 'ಸತ್ಯ ಹರಿಶ್ಚಂದ್ರ ನಾಟಕ.'

ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿ

ಗಾಂಧೀಜಿಯವರ ಆರಂಭಿಕ ಶಿಕ್ಷಣ ಪೋರಬಂದರಿನಲ್ಲಾಯಿತು. ಉನ್ನತ ಶಿಕ್ಷಣಕ್ಕಾಗಿ ಅವರು ಇಂಗ್ಲೆಂಡಿಗೆ ತೆರಳಿದರು. ಅವರು ಬ್ರಿಟನಿನಲ್ಲಿ ಕಾನೂನು ಪದವಿ ಪಡೆದರು. 1891ರಲ್ಲಿ ಭಾರತಕ್ಕೆ ಹಿಂದಿರುಗಿ ರಾಜ್‌ಕೋಟ್ ಮತ್ತು ಮುಂಬೈಯಲ್ಲಿ ವಕೀಲಿ ವೃತ್ತಿಯಲ್ಲಿ ತೊಡಗಿದರು. ನಂತರ ದಾದಾ ಅಬ್ದುಲ್ಲಾ ಕಂಪನಿಯ ಆಹ್ವಾನದ ಮೇರೆಗೆ ಕಾನೂನು ಸಲಹೆಗಾರರಾಗಿ ದಕ್ಷಿಣ ಆಫ್ರಿಕಾಕ್ಕೆ ತೆರಳಿದರು.

ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿದ್ದಾಗ, ಭಾರತೀಯರು ಅಲ್ಲಿ ಕೆಳದರ್ಜೆಯವರಾಗಿ ಬಾಳುವುದನ್ನು ಕಂಡು ಆಘಾತಕ್ಕೊಳಗಾದರು. 'ಬಿಳಿ' ಸರ್ಕಾರದ ಜನಾಂಗೀಯ ನೀತಿಯನ್ನು ಅವರು ವಿರೋಧಿಸಿದರು. ಅವರು ಸತ್ಯಾಗ್ರಹ ಮತ್ತು ಅಹಿಂಸಾ ಮಾರ್ಗಗಳ ಮೂಲಕ ಸರ್ಕಾರದ ಜನಾಂಗೀಯ ಪೂರ್ವಾಗ್ರಹವನ್ನು ಬದಲಾಯಿಸುವಲ್ಲಿ ಸಾಕಷ್ಟು ಯಶಸ್ಸನ್ನು ಕಂಡರು.

ಸತ್ಯಾಗ್ರಹ ಸಿದ್ಧಾಂತವು ಸಂಸ್ಕೃತದ ಎರಡು ಪದಗಳಿಂದ ಕೂಡಿದೆ: 'ಸತ್ಯ' ಎಂದರೆ ವಾಸ್ತವಿಕ ಸಂಗತಿ, 'ಆಗ್ರಹ' ಎಂದರೆ ಒತ್ತಾಯ. ಇದರರ್ಥ "ಸತ್ಯದಪರ ದೃಢವಾಗಿ ನಿಲ್ಲು".

ಚಟುವಟಿಕೆ: ಗಾಂಧೀಜಿಯವರು ದಕ್ಷಿಣ ಆಫ್ರಿಕದಲ್ಲಿ ನಡೆಸಿದ ಸತ್ಯಾಗ್ರಹ ಮತ್ತು ಅಹಿಂಸಾತ್ಮಕ ಹೋರಾಟಗಳನ್ನು ಕುರಿತು ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿರಿ.

ಆರಂಭಿಕ ರಾಜಕೀಯ ಜೀವನ

ಸಾ.ಶ. 1915ರಲ್ಲಿ ಭಾರತಕ್ಕೆ ಹಿಂತಿರುಗಿದ ನಂತರ ಗಾಂಧೀಜಿಯವರು ಅಹಮದಾಬಾದ್ ಬಳಿ ಸಾಬರಮತಿ ಆಶ್ರಮವನ್ನು (ಸಾ.ಶ. 1916) ಸ್ಥಾಪಿಸಿದರು. ತಮ್ಮ ರಾಜಕೀಯ ಗುರು ಗೋಪಾಲಕೃಷ್ಣ ಗೋಖಲೆಯವರ ಮಾರ್ಗದರ್ಶನದ ಮೇರೆಗೆ ಭಾರತಾದ್ಯಂತ ಪ್ರವಾಸ ಮಾಡಿ ಜನತೆಯ ಶೋಚನೀಯ ಸ್ಥಿತಿಯನ್ನು ಕಂಡರು. ಚಂಪಾರಣ್ ಮತ್ತು ಖೇಡಾಗಳಲ್ಲಿ ರೈತರ ಪರ ಹೋರಾಟ ನಡೆಸಿದರು.

ಚಂಪಾರಣ್: ಚಂಪಾರಣ್ (ಬಿಹಾರ) ರೈತರು ಪ್ಲಾಂಟರುಗಳ ವಿರುದ್ಧ ಹೊಂದಿರುವ ಅಸಮಾಧಾನ ಮತ್ತು ಪ್ರತಿಭಟನೆಗೆ ಸುದೀರ್ಘ ಇತಿಹಾಸವಿದೆ. ಪ್ಲಾಂಟರ್‌ಗಳು ಬಲವಂತವಾಗಿ ನೀಲಿ ಬೆಳೆಯುವಂತೆ ರೈತರನ್ನು ಒತ್ತಾಯಿಸುತ್ತಿದ್ದರು. ಗಾಂಧೀಜಿ ಅವರ ವಿರುದ್ಧ ಸಾ.ಶ. 1917ರಲ್ಲಿ ಚಂಪಾರಣ್ ಸತ್ಯಾಗ್ರಹವನ್ನು ಆರಂಭಿಸಿದರು. ಕೊನೆಯಲ್ಲಿ ರೈತರ ಸಮಸ್ಯೆ ಪರಿಹಾರ ಕಂಡಿತು. ಈ ಚಳವಳಿಯ ಮೂಲಕ ಬಾಬು ರಾಜೇಂದ್ರ ಪ್ರಸಾದ್ ಪ್ರಮುಖ ನಾಯಕರಾಗಿ ರೂಪುಗೊಂಡರು.

ಖೇಡಾ ರೈತ ಹೋರಾಟ: ಖೇಡಾ ಗುಜರಾತ್ ರಾಜ್ಯದ ಪ್ರಮುಖ ಜಿಲ್ಲೆ. ಸಾ.ಶ. 1918ರ ಸಂದರ್ಭದಲ್ಲಿ ಬೆಳೆಗಳು ವಿಫಲವಾಗಿ ರೈತರು ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿದರು. ಈ ಹಿನ್ನೆಲೆಯಲ್ಲಿ ಅವರು ಕಂದಾಯ ಕಟ್ಟುವುದರಿಂದ ವಿನಾಯಿತಿ ನೀಡಬೇಕೆಂದು ಸರಕಾರಕ್ಕೆ ಮನವಿ ಸಲ್ಲಿಸಿದರು. ಸರಕಾರ ಇವರ ಮನವಿಯನ್ನು ತಿರಸ್ಕರಿಸಿದ್ದಲ್ಲದೆ, ಕಂದಾಯ ಸಂಗ್ರಹಣೆಗೆ ಒತ್ತಾಯಿಸಿತು. ಪರಿಣಾಮವಾಗಿ ಖೇಡಾದಲ್ಲಿ ರೈತ ಹೋರಾಟ ಪ್ರಾರಂಭವಾಯಿತು. ಗಾಂಧೀಜಿಯವರು ಈ ಹೋರಾಟಕ್ಕೆ ತಮ್ಮ ಪೂರ್ಣ ಬೆಂಬಲವನ್ನು ನೀಡಿದ್ದಲ್ಲದೆ, ರೈತರು ಕಂದಾಯವನ್ನು ಕಟ್ಟಬಾರದೆಂದು ತಿಳಿಸಿದರು. ಅಂತಿಮವಾಗಿ ತಮ್ಮ ನಿರ್ಧಾರವನ್ನು ಬದಲಾಯಿಸಿಕೊಂಡ ಸರಕಾರ, ಯಾರಿಗೆ ಸಾಧ್ಯವಾಗುವುದೋ ಅಂತಹ ರೈತರು ಕಂದಾಯವನ್ನು ಕಟ್ಟಬಹುದೆಂದು ತಿಳಿಸಿತು. ಇದನ್ನು ಒಪ್ಪಿದ ಗಾಂಧೀಜಿಯವರು ಚಳವಳಿಯನ್ನು ಕೈಬಿಡಲು ಒಪ್ಪಿದರು. ಈ ಹೋರಾಟದ ಮೂಲಕ ರಾಜಕೀಯವಾಗಿ ಬೆಳೆದ ನಾಯಕರೆಂದರೆ ಸರದಾರ ವಲ್ಲಭಭಾಯಿ ಪಟೇಲರು.

ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿ

ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಸಾ.ಶ. 1919ನೇ ಇಸವಿ ಒಂದು ಮಹತ್ವದ ಮೈಲಿಗಲ್ಲಾಗಿದೆ. ಇದು ಗಾಂಧೀಜಿಯವರು ಭಾರತದ ರಾಜಕೀಯ ರಂಗವನ್ನು ಪ್ರವೇಶಿಸಿದ ವರ್ಷ. ಬ್ರಿಟಿಷರನ್ನು ದೈಹಿಕ ಬಲದ ಮೂಲಕ ಹೊರದೂಡಲು ಸಾಧ್ಯವಿಲ್ಲವೆಂಬ ಸತ್ಯವನ್ನು ಅವರು ಮನಗಂಡಿದ್ದರು. ಸಾ.ಶ. 1919ರಲ್ಲಿ ಗಾಂಧೀಯವರು ರೌಲಟ್ ಕಾಯಿದೆಯ ಜಾರಿ ಮತ್ತು ಜಲಿಯನ್‌ವಾಲಾಬಾಗ್ ಘೋರ ಹಿಂಸಾಕೃತ್ಯದ ವಿರುದ್ಧ ಚಳವಳಿ ಹೂಡಿದರು. ಅಲ್ಲದೆ ಖಿಲಾಫತ್ ಚಳವಳಿಯ ನಾಯಕತ್ವ ವಹಿಸಿದರು. ಈ ಮೂಲಕ ಹಿಂದೂ ಮತ್ತು ಮುಸ್ಲಿಮರ ನಡುವೆ ಸಾಮರಸ್ಯ ಏರ್ಪಡಿಸುವುದು ಅವರ ಉದ್ದೇಶವಾಗಿತ್ತು.

ಖಿಲಾಫತ್ ಚಳವಳಿ ಎಂದರೇನು?

ಟರ್ಕಿ ಸಾಮ್ರಾಜ್ಯವು ಖಲೀಫರ ಕೈಕೆಳಗಿತ್ತು. ಖಲೀಫ ಜಗತ್ತಿನ ಎಲ್ಲಾ ಮುಸಲ್ಮಾನರ ಪರಮೋಚ್ಚ ಧಾರ್ಮಿಕ ಮುಖಂಡರು. ಒಂದನೆಯ ವಿಶ್ವಸಮರದಲ್ಲಿ ಟರ್ಕಿ ಬ್ರಿಟನಿನ ವಿರುದ್ಧವಾಗಿ ನಿಂತಿದ್ದು, ಯುದ್ಧದಲ್ಲಿ ಪರಾಭವಗೊಂಡಿತು. ಟರ್ಕಿಯ ಭಾಗವಾಗಿದ್ದ ಅರೇಬಿಯಾ, ಜೋರ್ಡಾನ್, ಇರಾಕ್ ಇತ್ಯಾದಿಗಳು ಸ್ವತಂತ್ರ ರಾಜ್ಯಗಳಾದವು. 1919ರಲ್ಲಿ ಕಮಾಲ್ ಪಾಷಾ ಎಂಬ ನಾಯಕನು ಟರ್ಕಿಯ ಖಲೀಫರ ಅರಸೊತ್ತಿಗೆಯನ್ನು ಮೂಲೆಗೊತ್ತಿ ಅಧಿಕಾರಕ್ಕೇರಿದನು. ಇದಕ್ಕೆ ಪ್ರತಿಕ್ರಿಯಿಸಿದ ಭಾರತೀಯ ಮುಸ್ಲಿಮರು ಖಲೀಫರ ಪರವಾಗಿಯೂ ಬ್ರಿಟನಿನ ವಿರುದ್ಧವಾಗಿಯೂ ಆಂದೋಲನ ನಡೆಸಿದರು. ಇದನ್ನು ಖಿಲಾಫತ್ 'ಚಳವಳಿ' ಎನ್ನುವರು. ಗಾಂಧೀಜಿಯವರು ಚಳವಳಿಯ ಮುಂದಾಳುತನವನ್ನು ವಹಿಸಿದರು. ಮೊಹಮ್ಮದ್ ಆಲಿ ಮತ್ತು ಶೌಕತ್ ಆಲಿ (ಆಲಿ ಸಹೋದರರು) ಈ ಚಳವಳಿಯ ಪ್ರಮುಖ ನಾಯಕರಾಗಿದ್ದರು.

2. ಅಸಹಕಾರ ಚಳವಳಿ (1920–22)

ಗಾಂಧೀಜಿಯವರ ನಾಯಕತ್ವದಲ್ಲಿ ಅಸಹಕಾರ ಚಳವಳಿಯು ಸಾ.ಶ. 1920ರಲ್ಲಿ ಆರಂಭವಾಯಿತು. ಅವರು ಸರ್ಕಾರದೊಂದಿಗೆ ಅಸಹಕಾರ ತೋರಬೇಕೆಂದು ಜನತೆಗೆ ಕರೆಕೊಟ್ಟರಲ್ಲದೆ

'ಸ್ವರಾಜ್ಯ'ಕ್ಕಾಗಿ ಒತ್ತಾಯಿಸಬೇಕೆಂದರು. ಈ ಕಾರ್ಯಕ್ರಮದ ಅಂಗವಾಗಿ ನ್ಯಾಯಾಲಯಗಳು, ಶೈಕ್ಷಣಿಕ ಸಂಸ್ಥೆಗಳು, ಶಾಸಕಾಂಗ ಸಭೆಗಳಿಗೆ ಚುನಾವಣೆ ಮತ್ತು ಬ್ರಿಟಿಷ್ ಸರಕುಗಳನ್ನು ಬಹಿಷ್ಕರಿಸಲಾಯಿತು. ಇದರೊಂದಿಗೆ ಸರ್ಕಾರಿ ಕಾರ್ಯಕ್ರಮಗಳನ್ನು ಬಹಿಷ್ಕರಿಸುವುದಲ್ಲದೆ, ಸರ್ಕಾರ ನೀಡಿದ್ದ ಬಿರುದುಗಳನ್ನು ಹಿಂತಿರುಗಿಸಲಾಯಿತು.

ಈ ಕಾಲಘಟ್ಟದಲ್ಲಿ ಪ್ರಮುಖ ನಾಯಕರಾದ ಚಿತ್ತರಂಜನ್ ದಾಸ್, ಮೋತಿಲಾಲ್ ನೆಹರು, ವಲ್ಲಭಭಾಯ್ ಪಟೇಲ್, ಸುಭಾಷ್‌ಚಂದ್ರ ಬೋಸ್ ಇವರುಗಳು ಚಳವಳಿಗೆ ಸೇರಿದರು. ಅವರ ಅಹಿಂಸಾತ್ಮಕ ಮತ್ತು ಸತ್ಯಾಗ್ರಹದಂತಹ ವಿಧಾನಗಳಿಂದ ಸಮಾಜದ ಎಲ್ಲಾ ಸ್ತರದ ವರ್ಗದವರು ಆಕರ್ಷಿತರಾಗಿ ಚಳವಳಿಯಲ್ಲಿ ಭಾಗಿಯಾದರು. ಈ ಚಳವಳಿಯಲ್ಲಿ ವಿದ್ಯಾರ್ಥಿಗಳು, ರೈತರು ಮತ್ತು ಮಹಿಳೆಯರಿದ್ದರು. ಇದು ಭಾರತೀಯರಿಗೆ ಹೊಸ ಅನುಭವವಾಗಿತ್ತು. ರವೀಂದ್ರನಾಥ್ ಟಾಗೋರ್ ತಮ್ಮ 'ನೈಟ್‌ಹುಡ್' ಪ್ರಶಸ್ತಿಯನ್ನು ಹಾಗೂ ಗಾಂಧೀಜಿಯವರು ತಮ್ಮ 'ಕೈಸರ್‌ಐಹಿಂದ್' ಪದವಿಯನ್ನು ಬ್ರಿಟಿಷ್ ಸರ್ಕಾರಕ್ಕೆ ಹಿಂತಿರುಗಿಸಿದರು. ಇದೇ ವೇಳೆ ಸರ್ಕಾರವು ಚಳವಳಿಯನ್ನು ಹತ್ತಿಕ್ಕಲು ದಮನಕಾರಿ ಕ್ರಮಗಳನ್ನು ಅನುಸರಿಸಿತು. ಇದಕ್ಕೆ ಉತ್ತರವೆಂಬಂತೆ ಉತ್ತರ ಪ್ರದೇಶದ ಚೌರಿಚೌರಾದಲ್ಲಿ ಉದ್ರಿಕ್ತ ಜನಸ್ತೋಮ ಹಿಂಸಾಕೃತ್ಯದಲ್ಲಿ ತೊಡಗಿ ಅಲ್ಲಿನ ಠಾಣೆಯ 22 ಜನ ಪೊಲೀಸರನ್ನು ಜೀವಂತ ಸುಟ್ಟಿತು (ಸಾ.ಶ. 1922). ಗಾಂಧೀಜಿಯವರು ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದರು.

ಗಾಂಧೀಜಿಯವರು ಸಾ.ಶ 1924ರಿಂದ 1929ರವರೆಗೆ ರಚನಾತ್ಮಾಕ ಕಾರ್ಯಕ್ರಮಗಳಾದ ಖಾದಿಯನ್ನು ಜನಪ್ರಿಯಗೊಳಿಸುವುದು ಮತ್ತು ಹರಿಜನ ಉದ್ಧಾರ ಕಾರ್ಯಗಳಲ್ಲಿ ತಮ್ಮನ್ನು ಸಮರ್ಪಿಸಿಕೊಂಡರು. ಸ್ವರಾಜ್ಯವಾದಿಗಳಾದ ಸಿ.ಆರ್. ದಾಸ್ ಮತ್ತು ಮೋತಿಲಾಲ್ ನೆಹರು ಅವರ ನೇತೃತ್ವದಲ್ಲಿ ರಾಷ್ಟ್ರೀಯ ಹೋರಾಟದ ಚಟುವಟಿಕೆಗಳು ಮುಂದುವರಿದವು.

ಗಾಂಧೀಜಿಯವರ ಪ್ರಮುಖ ಕೃತಿಗಳು ಮತ್ತು ಪತ್ರಿಕೆಗಳು

'ಸತ್ಯದೊಂದಿಗೆ ನನ್ನ ಪ್ರಯೋಗಗಳು', 'ಹಿಂದ್ ಸ್ವರಾಜ್', 'ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ', ಇವು ಗಾಂಧೀಜಿ ಅವರ ಕೃತಿಗಳು. 'ಹರಿಜನ' ಮತ್ತು 'ಯಂಗ್ ಇಂಡಿಯಾ' ಇವು ಅವರು ಸಂಪಾದಕರಾಗಿದ್ದ ವೃತ್ತಪತ್ರಿಕೆಗಳು.

ನೆಹರು ವರದಿ (ಸಾ.ಶ. 1927)

ಬ್ರಿಟಿಷರು ಭಾರತೀಯ ರಾಜಕೀಯ ನಾಯಕರಿಗೆ ಎಲ್ಲಾ ಸಮುದಾಯದವರು ಒಪ್ಪುವಂತಹ ಸಂವಿಧಾನವನ್ನು ರಚಿಸಿಕೊಳ್ಳುವಂತೆ ಸವಾಲೆಸೆದರು. ಭಾರತೀಯ ಸರ್ವಪಕ್ಷಗಳ ಸಮ್ಮೇಳನದಲ್ಲಿ ಮೋತಿಲಾಲ್ ನೆಹರು ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಅದು ಬ್ರಿಟಿಷ್ ಪ್ರಭುತ್ವದಡಿಯಲ್ಲಿ ಸ್ವಯಂ ಆಡಳಿತದ ಸ್ಥಾನಮಾನವನ್ನು ಒಪ್ಪಿದ್ದಲ್ಲದೆ ಅಂತಿಮವಾಗಿ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯುವ ಗುರಿಯನ್ನೂ ವ್ಯಕ್ತಪಡಿಸಿತು.

ಸೈಮನ್ ನಿಯೋಗ (ಸಾ.ಶ. 1928)

ಬ್ರಿಟಿಷ್ ಸರ್ಕಾರ ಸಾ.ಶ. 1919ರ ಸುಧಾರಣೆಗಳು ಭಾರತದ ಪ್ರಾಂತಗಳಲ್ಲಿ ಹೇಗೆ ಕಾರ್ಯಗತಗೊಂಡಿವೆ ಎಂದು ಅಧ್ಯಯನ ಮಾಡಿ ವರದಿ ನೀಡಲು ಸೈಮನ್ ನಿಯೋಗವನ್ನು (ಸಾ.ಶ. 1928) ಭಾರತಕ್ಕೆ ಕಳುಹಿಸಿತು. ನಿಯೋಗದಲ್ಲಿದ್ದ ಎಲ್ಲಾ ಸದಸ್ಯರೂ ಇಂಗ್ಲಿಷರೇ ಆಗಿದ್ದು, ಭಾರತೀಯರಿಗೆ ಅದರಲ್ಲಿ ಪ್ರಾತಿನಿಧ್ಯವಿರಲಿಲ್ಲ.

ಸೈಮನ್ ನಿಯೋಗದ ಬಹಿಷ್ಕಾರದ ದೃಶ್ಯ

ಆದ್ದರಿಂದ ಭಾರತೀಯರು "ಸೈಮನ್ನರೆ ಹಿಂತಿರುಗಿ" ಎಂಬ ಘೋಷಣೆಯನ್ನು ಮೊಳಗಿಸುವುದರೊಂದಿಗೆ ನಿಯೋಗವನ್ನು ಬಹಿಷ್ಕರಿಸಿದರು. ಲಾಹೋರಿನಲ್ಲಿ ನಡೆದ ಬಹಿರಂಗ ಪ್ರತಿಭಟನೆಯು ತೀವ್ರ ಸ್ವರೂಪವನ್ನು ತಾಳಿತು. ಈ ಸಂದರ್ಭದಲ್ಲಿ ನಡೆದ ಲಾಠಿ ಪ್ರಯೋಗದಲ್ಲಿ ಲಾಲಾ ಲಜಪತ್ ರಾಯ್ ಅವರು ಚೇತರಿಸಿಕೊಳ್ಳಲಾಗದೆ ಮರಣ (ಸಾ.ಶ. 1928) ಹೊಂದಿದರು.

ಪೂರ್ಣ ಸ್ವರಾಜ್ಯ (ಸಾ.ಶ. 1929)

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನೊಳಗಿನ ಯುವಪೀಳಿಗೆಯನ್ನು ಪ್ರತಿನಿಧಿಸುತ್ತಿದ್ದ ಜವಾಹರಲಾಲ್ ನೆಹರು ಮತ್ತು ಸುಭಾಷ್‌ಚಂದ್ರ ಬೋಸ್ ಅವರು ನೆಹರು ವರದಿಯಲ್ಲಿ ಪ್ರಸ್ತಾಪಿಸಲಾಗಿದ್ದ ಬ್ರಿಟಿಷ್ ಚಕ್ರಾಧಿಪತ್ಯದ ಪರಿಧಿಯೊಳಗಿನ ಸ್ವಯಂ ಆಡಳಿತದ ಸ್ಥಾನಮಾನವನ್ನು ಒಪ್ಪಿಕೊಳ್ಳಲಿಲ್ಲ. ಇದರ ಪರಿಣಾಮವಾಗಿ ಸಾ.ಶ. 1929ರಲ್ಲಿ ಲಾಹೋರಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ "ಸಂಪೂರ್ಣ ಸ್ವಾತಂತ್ರ್ಯ"ದ ನಿರ್ಣಯವನ್ನು ಮಂಡಿಸಲಾಯಿತು. ಸಾ.ಶ. 1930ರ ಜನವರಿ 26ರಂದು "ಪೂರ್ಣ ಸ್ವರಾಜ್ಯದಿನ" ಎಂದು ಆಚರಿಸಲು ಅಧಿವೇಶನದಲ್ಲಿ ನಿರ್ಧರಿಸಲಾಯಿತು. ಈ ಐತಿಹಾಸಿಕ ಸಂಭ್ರಮಾಚರಣೆಯ ದಿನದ ನೆನಪನ್ನು ಹಸಿರಾಗಿಸಲು, ಸ್ವತಂತ್ರ ಭಾರತದ ಸಂವಿಧಾನವನ್ನು ಜನವರಿ 26, 1950ರಂದು ಅಂಗೀಕರಿಸಲಾಯಿತು. ಅಂದಿನಿಂದ ಪ್ರತಿವರ್ಷ ಆ ದಿನವನ್ನು ಗಣರಾಜ್ಯೋತ್ಸವ ದಿನವಾಗಿ ಆಚರಿಸಲಾಗುತ್ತಿದೆ.

ನಾಗರಿಕ ಕಾನೂನುಭಂಗ ಚಳವಳಿ

ದಂಡಿಯಾತ್ರೆಯ ದೃಶ್ಯ

ನಾಗರಿಕ ಕಾನೂನುಭಂಗ ಚಳವಳಿಯನ್ನು ಸಾ.ಶ. 1930ರ ಮಾರ್ಚ್ 12ರಂದು ಗಾಂಧೀಜಿ ಅವರು ಪ್ರಸಿದ್ಧ ದಂಡಿಯಾತ್ರೆಯೊಂದಿಗೆ ಆರಂಭಿಸಿದರು. ಆಯ್ದ 78 ಮಂದಿ ಅನುಯಾಯಿಗಳೊಡನೆ ಗಾಂಧೀಜಿ ಸಾಬರಮತಿ ಆಶ್ರಮದಿಂದ ಗುಜರಾತಿನ ಕಡಲತೀರದ ದಂಡಿಯವರೆಗೂ ಸುಮಾರು 375 ಕಿ.ಮೀ. ದೂರವನ್ನು ಕ್ರಮಿಸಿದರು. ಜನರಿಂದ ಉಪ್ಪನ್ನು ಉತ್ಪಾದಿಸುವುದರ ಮೂಲಕ ಉಪ್ಪಿನ ಕಾನೂನನ್ನು ಮುರಿಯುವುದು ಈ ಯಾತ್ರೆಯ ಮುಖ್ಯ ಉದ್ದೇಶವಾಗಿತ್ತು.

ಕಾನೂನುಭಂಗ ಚಳವಳಿಯು ಬಹುಬೇಗ ದೇಶದಾದ್ಯಂತ ಹರಡಿತು. ಎಲ್ಲೆಡೆ ಜನರು ಹರತಾಳ, ವಿದೇಶಿ ವಸ್ತುಗಳ ಬಹಿಷ್ಕಾರ, ಖಾದಿಪ್ರಚಾರ, ಮದ್ಯದ ಅಂಗಡಿಗಳ ಮುಂದೆ ಪ್ರತಿಭಟನೆ, ಅರಣ್ಯ ಸತ್ಯಾಗ್ರಹ, ಕರನಿರಾಕರಣೆ ಮೊದಲಾದವುಗಳಲ್ಲಿ ಭಾಗವಹಿಸಿದರು. ಅಂಕೋಲೆಯ ಉಪ್ಪಿನ ಸತ್ಯಾಗ್ರಹವು ದಾಖಲೆಯನ್ನು ನಿರ್ಮಿಸಿ ಭಾರತಾದ್ಯಂತ ಖ್ಯಾತಿ ಗಳಿಸಿತು.

ಇದೇ ವೇಳೆ ವಾಯವ್ಯ ಭಾರತದಲ್ಲಿ 'ಗಡಿನಾಡ ಗಾಂಧಿ' ಖಾನ್ ಅಬ್ದುಲ್ ಗಫಾರ್ ಖಾನರು 'ಖುದಾಯಿ ಖಿದ್ಮತ್‌ಗಾರ' (ದೇವರ ಸೇವಕರು) ಎಂಬ ಸಂಘವನ್ನು ಸ್ಥಾಪಿಸಿದರು. ನಾಗಾಲ್ಯಾಂಡಿನಲ್ಲಿ 13 ವರ್ಷದ ಬಾಲೆ ರಾಣಿ ಗಾಯ್ಡಿಲ್ಯೂ ಬ್ರಿಟಿಷರ ವಿರುದ್ಧ ಬಂಡಾಯ ನಡೆಸಿದಳು. ಹೀಗಾಗಿ ಅವರು ಭಾರತೀಯರಿಗೆ ಕೆಲವು ರಾಜಕೀಯ ರಿಯಾಯಿತಿಗಳನ್ನು ನೀಡಲು ಮುಂದಾದರು.

ದುಂಡು ಮೇಜಿನ ಸಮ್ಮೇಳನಗಳು (1930–32)

ದಂಡಿ ಯಾತ್ರೆಯ ಬಳಿಕ ಬ್ರಿಟಿಷ್ ಸರ್ಕಾರ ಮೂರು ದುಂಡುಮೇಜಿನ ಸಮ್ಮೇಳನಗಳನ್ನು ಲಂಡನಿನಲ್ಲಿ ಆಯೋಜಿಸಿತು. ಕಾಂಗ್ರೆಸ್ ಪರವಾಗಿ ಗಾಂಧೀಜಿಯವರು ಎರಡನೇ ದುಂಡುಮೇಜಿನ ಸಮ್ಮೇಳನದಲ್ಲಿ ಭಾಗವಹಿಸಿದರು. ಆದರೆ ಈ ಸಮ್ಮೇಳನಗಳು ಭಾರತೀಯ ರಾಜಕೀಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ವಿಫಲಗೊಂಡವು.

ಆದರೆ ಬ್ರಿಟನ್ ಪ್ರಧಾನಿ ರಾಮ್ಸೆ ಮ್ಯಾಕ್‌ಡೊನಾಲ್ಡ್ ಅವರು ದುಂಡು ಮೇಜಿನ ಸಮ್ಮೇಳನದ ನಂತರ 'ಮತೀಯ ತೀರ್ಪು' (ಕಮ್ಯೂನಲ್ ಎವಾರ್ಡ್) (1932) ಘೋಷಿಸಿದರು. ಅದರಲ್ಲಿ ದಲಿತ ವರ್ಗಕ್ಕೆ ಪ್ರತ್ಯೇಕ ಚುನಾವಣಾ ಕ್ಷೇತ್ರವನ್ನು ಕಲ್ಪಿಸಿತು. ಈ ತೀರ್ಪ ಭಾರತೀಯರ ಒಗ್ಗಟ್ಟನ್ನು ಒಡೆಯುವ ತಂತ್ರವೆಂದು ಗಾಂಧೀಜಿಯವರು ವಿರೋಧಿಸಿ ಪೂನಾದ ಯರವಾಡಾ ಜೈಲಿನಲ್ಲಿ ಆಮರಣ ಉಪವಾಸವನ್ನು ಕೈಗೊಂಡರು. ಅಂತಿಮವಾಗಿ ಗಾಂಧೀಜಿ ಮತ್ತು ಅಂಬೇಡ್ಕರ್ ನಡುವೆ ಪೂನಾ ಒಪ್ಪಂದ (1932) ಏರ್ಪಟ್ಟಿತು. ಆ ಮೂಲಕ ಸಮಸ್ಯೆ ಅಂತ್ಯವಾಯಿತು.

ಬ್ರಿಟಿಷ್ ಸರ್ಕಾರವು ಸಾ.ಶ. 1935ರಲ್ಲಿ ಭಾರತೀಯರಿಗೆ ಸರ್ಕಾರದಲ್ಲಿ ರಾಜಕೀಯ ಮತ್ತು ಆಡಳಿತಾತ್ಮಕ ಸಹಭಾಗಿತ್ವವನ್ನು ಹೆಚ್ಚಿನ ಪ್ರಮಾಣದಲ್ಲಿ ಕಲ್ಪಿಸಿಕೊಡುವ ದೃಷ್ಟಿಯಿಂದ "ಭಾರತ ಸರ್ಕಾರ ಕಾಯಿದೆ"ಯನ್ನು ಜಾರಿಗೆ ತಂದಿತು.

ಭಾರತ ಬಿಟ್ಟು ತೊಲಗಿ ಚಳವಳಿ (1942)

ಕ್ರಿಪ್ಸ್ ಆಯೋಗದ ವೈಫಲ್ಯವು ಭಾರತೀಯರನ್ನು ಕೆರಳಿಸಿತು. ಗಾಂಧೀಜಿ ಅವರು ಸಾ.ಶ. 1942ರ ಆಗಸ್ಟ್ 8ರಂದು ಮುಂಬೈನಲ್ಲಿ ಕಾಂಗ್ರೆಸಿನ ಸಭೆ ಕರೆದರು. ಅಲ್ಲಿ ಪ್ರಸಿದ್ಧ 'ಭಾರತ ಬಿಟ್ಟು ತೊಲಗಿ' ಎಂಬ ನಿರ್ಣಯವನ್ನು ಅಂಗೀಕರಿಸಿದರು. ಭಾರತೀಯರಿಗೆ 'ಮಾಡು ಇಲ್ಲವೆ ಮಡಿ' ಎಂಬ ಘೋಷಣೆ ನೀಡಿದರು. ಸರ್ಕಾರವು ಮರುದಿನವೆ ಗಾಂಧೀಜಿ ಮತ್ತು ಇತರ ನಾಯಕರನ್ನು ಬಂಧಿಸಿತು.

ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಭಾಗವಹಿಸಿದ ಜನಸಾಗರ

ಬಂಧನದ ಸುದ್ದಿ ಹರಡುತ್ತಿದ್ದಂತೆಯೆ ದೇಶದಾದ್ಯಂತ ಹರತಾಳಗಳು, ಶಾಲಾಕಾಲೇಜು ಮತ್ತು ಕಾರ್ಖಾನೆಗಳಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ಪ್ರತಿಭಟನೆಗಳು ನಡೆದವು. ಪೊಲೀಸ್ ಠಾಣೆಗಳು, ಅಂಚೆ ಕಚೇರಿಗಳು, ರೈಲ್ವೆ ನಿಲ್ದಾಣಗಳ ಮೇಲೆ ವಿವಿಧೆಡೆ ಆಕ್ರಮಣಗಳು ಜರುಗಿದವು. ವಿದ್ಯಾರ್ಥಿಗಳು, ಕಾರ್ಮಿಕರು ಮತ್ತು ರೈತರು 'ಬಂಡಾಯ'ವನ್ನು ಬೆಂಬಲಿಸಿದರು.

"ಭಾರತ ಬಿಟ್ಟು ತೊಲಗಿ" ಚಳವಳಿಯು ಕೂಡ ತತ್‌ಕ್ಷಣದ ರಾಜಕೀಯ ಉದ್ದೇಶವನ್ನು ಸಾಧಿಸುವಲ್ಲಿ ವಿಫಲವಾಯಿತು. ಆದರೆ ಭಾರತದ ಜನತೆ ಸ್ವತಂತ್ರರಾಗಲು ದೃಢ ನಿರ್ಧಾರ ತಳೆದಿದ್ದಾರೆ ಎಂಬ ಸಂದೇಶ ಸ್ಪಷ್ಟವಾಗಿತ್ತು. ಇದು ಗಾಂಧಿ ಯುಗದ ಬಹುದೊಡ್ಡ ಜನಾಂದೋಲನವಾಗಿತ್ತು.

ಸುಭಾಷ್‌ಚಂದ್ರ ಬೋಸ್ ಮತ್ತು ಭಾರತೀಯ ರಾಷ್ಟ್ರೀಯ ಸೇನೆ (ಐ.ಎನ್.ಎ)

ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್‌ಚಂದ್ರ ಬೋಸರ ಪಾತ್ರ ಅನನ್ಯವಾದುದು. ಅವರು ಕೋಲ್ಕತ ವಿಶ್ವವಿದ್ಯಾನಿಲಯದ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು. ಲಂಡನಿನಲ್ಲಿ ಐ.ಸಿ.ಎಸ್. ಪರೀಕ್ಷೆಯಲ್ಲಿ ನಾಲ್ಕನೇ ರ್‍ಯಾಂಕ್ ಪಡೆದಿದ್ದರು. ಅವರು 'ದೇಶಬಂಧು' ಚಿತ್ತರಂಜನ್ ದಾಸರ ಪ್ರಭಾವದಿಂದ ಚಳವಳಿಗೆ ಆಕರ್ಷಿತರಾಗಿ ರಾಜಕೀಯಕ್ಕೆ ಧುಮುಕಿದರು. ವಿಶೇಷವಾಗಿ ಸ್ವಾಮಿ ವಿವೇಕಾನಂದರ ಬದುಕು ಮತ್ತು ಬರವಣಿಗೆಗಳಿಂದ ಅವರು ಸ್ಫೂರ್ತಿ ಪಡೆದಿದ್ದರು.

ಸುಭಾಷರು ಗಾಂಧೀಜಿಯವರ ಬಗೆಗೆ ಅಪಾರ ಗೌರವ ಹೊಂದಿದ್ದರು. ಆದರೆ ಅವರ ರಾಜನೀತಿಯನ್ನು ವಿರೋಧಿಸಿದರು. ಕೊನೆಗೆ ಗಾಂಧೀಜಿ ಅವರೊಂದಿಗೆ ತೀವ್ರ ಭಿನ್ನಾಭಿಪ್ರಾಯ ತಳೆದು 1939ರಲ್ಲಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ ಪಕ್ಷದಿಂದ ಹೊರಬಂದರು. ನಂತರ 'ಫಾರ್ವರ್ಡ್ ಬ್ಲಾಕ್' ಎಂಬ ಹೊಸ ಪಕ್ಷವನ್ನು ಸಂಘಟಿಸಿದರು.

ಈ ವೇಳೆಗೆ ಎರಡನೆಯ ಮಹಾಯುದ್ಧ ಆರಂಭವಾಗಿತ್ತು(1939). ಬ್ರಿಟಿಷರು ಬೋಸರ ಕ್ರಾಂತಿಕಾರಿ ನಿಲುವನ್ನು ಗಮನಿಸಿ, ಅವರು ಅಪಾಯಕಾರಿ ಎಂದು ಪರಿಗಣಿಸಿ ಗೃಹಬಂಧನದಲ್ಲಿ ಇರಿಸಿದರು. ಆದರೆ ಬೋಸರು ಬಂಧನದಿಂದ ರಹಸ್ಯವಾಗಿ ತಪ್ಪಿಸಿಕೊಂಡು ಪೇಷಾವರ ಮತ್ತು ಕಾಬೂಲ್ (ಅಫ್ಘಾನಿಸ್ತಾನ) ಮೂಲಕ ಮಾಸ್ಕೊಗೆ ಹೋಗುವ ಪ್ರಯಾಸಕಾರಿ ಪ್ರಯಾಣವನ್ನು ಕೈಗೊಂಡರು. ಅಲ್ಲಿಂದ ವಿಮಾನದ ಮೂಲಕ ಜರ್ಮನಿಯ ಬರ್ಲಿನ್ ನಗರಕ್ಕೆ ತೆರಳಿದರು. ಬ್ರಿಟಿಷರ ಶತ್ರುವಾದ ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್‌ನೊಂದಿಗೆ ಒಪ್ಪಂದ ಮಾಡಿಕೊಂಡರು. ಆ ಮೂಲಕ ಭಾರತದಿಂದ ಬ್ರಿಟಿಷರನ್ನು ಹೊರದೂಡಲು ನೆರವನ್ನು ಪಡೆಯುವಲ್ಲಿ ಯಶಸ್ವಿಯಾದರು.

ಸುಭಾಷ್‌ಚಂದ್ರ ಬೋಸ್

ಈ ನಡುವೆ ಜಪಾನ್ ಬ್ರಿಟಿಷರ ವಿರುದ್ಧ ಎರಡನೇ ಮಹಾಯುದ್ಧವನ್ನು ಪ್ರವೇಶಿಸಿತು. ಯುದ್ಧದಲ್ಲಿ ಬ್ರಿಟನಿನ ಪರ ಹೋರಾಡಿದ ಸುಮಾರು 40,000 ಭಾರತೀಯ ಸೈನಿಕರು ಜಪಾನಿನ ಯುದ್ಧ ಖೈದಿಗಳಾಗಿದ್ದರು. ಅವರು ಮೋಹನ್ ಸಿಂಗ್ ನೇತೃತ್ವದಲ್ಲಿ ಭಾರತೀಯ ರಾಷ್ಟ್ರೀಯ ಸೇನೆ (ಇಂಡಿಯನ್ ನೇಷನಲ್ ಆರ್ಮಿ – ಐ.ಎನ್.ಎ.) ಅಥವಾ ಆಜಾದ್ ಹಿಂದ್ ಫೌಜ್ ಎಂಬ ಹೆಸರಿನಿಂದ ಸಂಘಟಿತರಾಗಿದ್ದರು. 1943ರಲ್ಲಿ ಸುಭಾಷ್‌ಚಂದ್ರರು ಸಿಂಗಾಪುರಕ್ಕೆ ಬಂದು ಐ.ಎನ್.ಎ.ಯ ನಾಯಕತ್ವ ವಹಿಸಿಕೊಂಡರು. ಸುಭಾಷರನ್ನು 'ನೇತಾಜಿ' ಎಂದು ಕರೆಯಲಾಯಿತು. ಶೀಘ್ರವೇ ನೇತಾಜಿಯವರು ಸಿಂಗಾಪುರದಲ್ಲಿ 'ಸ್ವತಂತ್ರ ಭಾರತದ ಹಂಗಾಮಿ ಸರ್ಕಾರ'ವನ್ನು ಸ್ಥಾಪಿಸಿದರು. ಜರ್ಮನಿ, ಇಟಲಿ ಮತ್ತು ಜಪಾನ್ ದೇಶಗಳು ಅದಕ್ಕೆ ಮಾನ್ಯತೆ ನೀಡಿದವು. 'ಚಲೋ ದಿಲ್ಲಿ' ಎಂಬ ಘೋಷಣೆಯೊಂದಿಗೆ ನೇತಾಜಿಯವರ ನಾಯಕತ್ವದಲ್ಲಿ ಐ.ಎನ್.ಎ. ಬರ್ಮದ ಕಡೆಯಿಂದ ಭಾರತದ ಪ್ರದೇಶದಲ್ಲಿ (ಈಗಿನ ಮಣಿಪುರ) ಸುಮಾರು 150 ಮೈಲಿಗಳಷ್ಟು ಮುನ್ನುಗ್ಗಿತು. ಅಲ್ಲಿ ಭಾರತದ ತ್ರಿವರ್ಣ ಧ್ವಜವನ್ನು ಭಾರತೀಯ ನೆಲದ

ಮೇಲೆ ಹಾರಿಸಿತು. ಆದರೆ ಅಲ್ಪಕಾಲದಲ್ಲೇ ಬ್ರಿಟಿಷ್ ಸೇನೆ ಬರ್ಮದ ರಾಜಧಾನಿ ರಂಗೂನನ್ನು ವಶಪಡಿಸಿಕೊಂಡಿದ್ದರಿಂದ ಐ.ಎನ್.ಎ.ಗೆ ಹಿನ್ನಡೆ ಉಂಟಾಯಿತು. ಇದೇ ವೇಳೆ ಅಣುಬಾಂಬ್ ದಾಳಿಗೆ ಒಳಗಾದ ಜಪಾನ್ 1945 ಆಗಸ್ಟ್ ತಿಂಗಳಲ್ಲಿ ಶರಣಾಯಿತು. ಆಗಸ್ಟ್ 18 ರಂದು ನೇತಾಜಿ ಅವರು ವಿಮಾನದಲ್ಲಿ ಹೊರಟವರು ನಿಗೂಢವಾಗಿ ಕಣ್ಮರೆಯಾದರು.

ಐ.ಎನ್.ಎ. ತನ್ನ ತತ್‌ಕ್ಷಣದ ಗುರಿಸಾಧಿಸುವಲ್ಲಿ ವಿಫಲವಾದದ್ದೇನೊ ನಿಜ. ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ ಅದಕ್ಕೊಂದು ಮಹತ್ವದ ಸ್ಥಾನವಿದೆ. "ನೀವು ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯವನ್ನು ನೀಡುತ್ತೇನೆ" ಎಂದು ನೇತಾಜಿ ಅವರು ಭಾರತೀಯರಿಗೆ ಕರೆ ನೀಡಿದರು. ನೇತಾಜಿಯವರ ಅಪತ್ರಿಮ ಸಾಮರ್ಥ್ಯಗಳಿಗೆ ಐ.ಎನ್.ಎ. ಸಾಕ್ಷಿಯಾಗಿ ನಿಂತಿದೆ. ಕಲ್ಕತ್ತದಿಂದ ಮಾಸ್ಕೊಗೆ ಮತ್ತು ಜರ್ಮನಿಯಿಂದ ಜಪಾನಿಗೆ ಆ ಬಿಕ್ಕಟ್ಟಿನ ದಿನಗಳಲ್ಲಿ ಅವರು ಮಾಡಿರುವ ಪ್ರಯಾಣಗಳು ಭಾರತೀಯ ಇತಿಹಾಸದಲ್ಲಿ ಹಿಂದೆಂದೂ ಕಾಣದ ಸಾಹಸದ ಕ್ಷಣಗಳಾಗಿವೆ. ಬ್ರಿಟನಿನ ಶತ್ರುಗಳ ನೆರವಿನಿಂದ ಭಾರತವನ್ನು ಸ್ವತಂತ್ರಗೊಳಿಸುವುದು ಸುಭಾಷರ ಏಕೈಕ ಗುರಿಯಾಗಿತ್ತು. ಅವರು ಭಾರತದ ಜನತೆಗೆ ಧೈರ್ಯ, ಸಾಹಸ ಮತ್ತು ಉದಾತ್ತವಾದ ದೇಶಪ್ರೇಮದ ಉಜ್ವಲ ಪರಂಪರೆಯನ್ನೇ ಬಿಟ್ಟು ಹೋಗಿದ್ದಾರೆ.

ಅಂಬೇಡ್ಕರ್ ಮತ್ತು ಅವರ ಸುಧಾರಣೆಗಳು

ಡಾ. ಬಿ. ಆರ್. ಅಂಬೇಡ್ಕರ್

ಭಾರತವು ಬ್ರಿಟಿಷರಿಂದ ರಾಜಕೀಯ ಸ್ವಾತಂತ್ರಕ್ಕಾಗಿ ಹೋರಾಡುತ್ತಿರುವ ಸಂದರ್ಭದಲ್ಲಿಯೇ ಸಾಮಾಜಿಕ ಸ್ವಾತಂತ್ರದ ಪ್ರಶ್ನೆಯನ್ನು ಮುನ್ನೆಲೆಗೆ ತಂದವರು 'ಸಂವಿಧಾನ ಶಿಲ್ಪಿ' ಡಾ. ಬಿ.ಆರ್. ಅಂಬೇಡ್ಕರ್. ಬಾಲ್ಯದಲ್ಲಿಯೇ ಅಸ್ಪೃಶ್ಯತೆಯ ಕಹಿ ಅನುಭವಗಳನ್ನು ಉಂಡ ಅಂಬೇಡ್ಕರ್ ಅವರು ಅಸ್ಪೃಶ್ಯತೆಯ ನಿರ್ಮೂಲನೆಗೆ ಹೋರಾಟ ಕೈಗೊಂಡವರು.

ಅಂಬೇಡ್ಕರ್ ಅವರು ಮಧ್ಯಪ್ರದೇಶದ 'ಮ್ಹೋ' ಎಂಬಲ್ಲಿ 14 ಏಪ್ರಿಲ್ 1891ರಂದು ಜನಿಸಿದರು. ತಂದೆ ರಾಮ್‌ಜಿ ಸಕ್ಪಲ್, ತಾಯಿ ಭೀಮಾಬಾಯಿ. ಅಂಬೇಡ್ಕರರ ಬಾಲ್ಯದ ಹೆಸರು ಭೀಮರಾವ್. ಬಾಲ್ಯದ ಶಿಕ್ಷಣವನ್ನು ಸ್ಥಳೀಯವಾಗಿಯೇ ಪೂರೈಸಿದರು. ನಂತರ ಬಾಂಬೆಯ ಎಲ್ಫಿನ್‌ಸ್ಟನ್ ಪ್ರೌಢಶಾಲೆಯಲ್ಲಿ ಕಲಿತರು. ಉನ್ನತ ಶಿಕ್ಷಣವನ್ನು ಪ್ರತಿಷ್ಠಿತ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್, ಕೊಲಂಬಿಯ ವಿಶ್ವವಿದ್ಯಾಲಯದಿಂದ (ಅಮೆರಿಕ) ಪಿ.ಎಚ್.ಡಿ., ಎಲ್.ಎಲ್.ಡಿ. ಬಾರ್ ಅಟ್‌ಲಾ ಪದವಿಗಳನ್ನು ಪಡೆದುಕೊಂಡರು. ಅಧ್ಯಯನದ ಮೂಲಕ ಸ್ವಯಂ ವ್ಯಕ್ತಿತ್ವವನ್ನು ರೂಪಿಸಿಕೊಂಡರು.

ಸಾಮಾಜಿಕ ಅಸಮಾನತೆಯನ್ನು ತೊಲಗಿಸಲು ಸಂವಿಧಾನಾತ್ಮಕ ಮಾರ್ಗವೊಂದೇ ಸಾಧನವೆಂದು ನಂಬಿದ್ದರು. ಅಲ್ಲದೆ, ದಲಿತರು ಮತ್ತು ಶೋಷಿತರು ರಾಜಕೀಯ ಪ್ರಾತಿನಿಧ್ಯವನ್ನು ಪಡೆದಾಗ ಮಾತ್ರ ಅವರ ವಿಮೋಚನೆ ಸಾಧ್ಯ ಎಂಬುದು ಅವರ ನಿಲುವಾಗಿತ್ತು.

ಅದಕ್ಕಾಗಿ ಅಸ್ಪೃಶ್ಯತೆಯ ವಿರುದ್ಧ ಹಲವು ಹೋರಾಟಗಳನ್ನು ರೂಪಿಸಿದರು. ಅವುಗಳಲ್ಲಿ ಮಹಡ್ ಸತ್ಯಾಗ್ರಹ, ನಾಸಿಕ್‌ನ ಕಲಾರಾಮ ದೇವಾಲಯ ಪ್ರವೇಶದಂತಹ ಯಶಸ್ವಿ ಹೋರಾಟಗಳನ್ನು ಹಮ್ಮಿಕೊಂಡರು. ಹೀಗೆ ದಲಿತರಲ್ಲಿ ಜಾಗೃತಿ ಮತ್ತು ಸ್ವಾಭಿಮಾನವನ್ನುಂಟು ಮಾಡಿದರು. 'ಮೂಕನಾಯಕ' ಮತ್ತು 'ಬಹಿಷ್ಕೃತ ಭಾರತ' ಎಂಬ ಪತ್ರಿಕೆಗಳ ಸಂಪಾದಕರಾಗಿ ದಲಿತ, ಶೋಷಿತ ಮತ್ತು ಅಸ್ಪೃಶ್ಯರ ಧ್ವನಿಯಾದರು. ಬಹಿಷ್ಕೃತ ಹಿತಕಾರಿಣಿ ಸಭಾ ಎಂಬ ಸಂಘಟನೆಯನ್ನೂ ಸ್ಥಾಪಿಸಿದರು.

ಡಾ. ಅಂಬೇಡ್ಕರ್ ದಲಿತ ವರ್ಗಗಳ ಪ್ರತಿನಿಧಿಯಾಗಿ ಲಂಡನಿನಲ್ಲಿ ನಡೆದ ಮೂರೂ ದುಂಡುಮೇಜಿನ ಸಮ್ಮೇಳನಗಳಲ್ಲಿ ಭಾಗವಹಿಸಿದ್ದರು. ಬ್ರಿಟಿಷರಿಂದ ಘೋಷಿಸಲ್ಪಟ್ಟ 'ಮತೀಯ ತೀರ್ಪು' (ಕಮ್ಯೂನಲ್ ಎವಾರ್ಡ್) (1932) ದಲಿತ ವರ್ಗಕ್ಕೆ ಪ್ರತ್ಯೇಕ ಚುನಾವಣಾ ಕ್ಷೇತ್ರವನ್ನು ಕಲ್ಪಿಸಿತು. ಈ ತೀರ್ಪನ್ನು ಒಪ್ಪದ ಗಾಂಧೀಜಿಯವರು ಪೂನಾದ ಯರವಾಡಾ ಸೆರೆಮನೆಯಲ್ಲಿ ಆಮರಣ ಉಪವಾಸವನ್ನು ಕೈಗೊಂಡರು. ಅಂತಿಮವಾಗಿ ಗಾಂಧೀಜಿ ಮತ್ತು ಅಂಬೇಡ್ಕರ್ ನಡುವೆ ಪೂನಾ ಒಪ್ಪಂದದ (1932) ಮೂಲಕ ಸಮಸ್ಯೆ ಅಂತ್ಯಗೊಂಡಿತು. ಮುಂದೆ ಅಂಬೇಡ್ಕರ್ ಸ್ವತಂತ್ರ ಭಾರತದ ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ ಸಂವಿಧಾನ ರೂಪುಗೊಳಿಸುವ ಜವಾಬ್ದಾರಿಯನ್ನು ನಿರ್ವಹಿಸಿದರು. ಆದ್ದರಿಂದ 'ಸಂವಿಧಾನ ಶಿಲ್ಪಿ' ಎಂದೇ ಖ್ಯಾತರಾದರು.

ನಂತರ ಸ್ವತಂತ್ರ ಭಾರತದ ಮೊದಲ ಕಾನೂನು ಮಂತ್ರಿಯಾಗಿದ್ದರು. 1956 ಡಿಸೆಂಬರ್ 6ರಂದು ನಿಧನ ಹೊಂದಿದರು. ಇದಕ್ಕೆ ಕೆಲವೇ ತಿಂಗಳುಗಳ ಮೊದಲು ಬೌದ್ಧಧರ್ಮಕ್ಕೆ ಮತಾಂತರಗೊಂಡಿದ್ದರು. 1990ರಲ್ಲಿ ಅವರಿಗೆ ಮರಣೋತ್ತರವಾಗಿ ಭಾರತರತ್ನ ಪ್ರಶಸ್ತಿಯನ್ನು ಘೋಷಿಸಲಾಯಿತು. "ಶಿಕ್ಷಣ, ಸಂಘಟನೆ ಮತ್ತು ಹೋರಾಟ" ಇದು ಅಂಬೇಡ್ಕರರ ಪ್ರಸಿದ್ಧ ಘೋಷವಾಕ್ಯವಾಗಿದೆ.

ಸಮಾಜವಾದಿಗಳು



ಜವಾಹರಲಾಲ್ ನೆಹರು

ಜಯಪ್ರಕಾಶ್ ನಾರಾಯಣ್



ಆಚಾರ್ಯ ನರೇಂದ್ರ ದೇವ್

ಸಾ.ಶ. 1930ರ ದಶಕದಲ್ಲಿ ಕಾಂಗ್ರೆಸಿನ ಒಳಗೂ ಹೊರಗೂ ಸಮಾಜವಾದಿ ಚಿಂತನೆಗಳು ಪ್ರಚಾರವಾದವು. ಸಾ.ಶ. 1934ರ ಕಾಂಗ್ರೆಸ್ ಅಧಿವೇಶನದಲ್ಲಿ ಸಮಾಜವಾದಿ ಗುಂಪೊಂದು

ಕಾಂಗ್ರೆಸಿನಲ್ಲಿ ಸ್ಪಷ್ಟವಾಗಿ ಕಾಣಿಸಿಕೊಂಡಿತು. ಸಮಾಜವಾದಿಗಳು ಬಹುತೇಕ ಯುವಪೀಳಿಗೆಗೆ ಸೇರಿದವರಾಗಿದ್ದರು. ಅವರು ಅಲ್ಪಕಾಲದಲ್ಲೇ 'ಕಾಂಗ್ರೆಸ್ ಸೋಷಲಿಷ್ಟ್ ಪಕ್ಷ'ವನ್ನು ಸ್ಥಾಪಿಸಿದರು. ಅದರ ಮಹಾಕಾರ್ಯದರ್ಶಿ ಜಯಪ್ರಕಾಶ್ ನಾರಾಯಣ್. ಆಚಾರ್ಯ ನರೇಂದ್ರ ದೇವ್ ಪಕ್ಷದ ಇನ್ನೊಬ್ಬ ಪ್ರಮುಖ ನಾಯಕರು. ಕಾಂಗ್ರೆಸಿನಲ್ಲಿದ್ದ ಸಮಾಜವಾದಿಗಳಲ್ಲಿ ಖ್ಯಾತ ನಾಯಕರೆಂದರೆ ಜವಾಹರಲಾಲ್ ನೆಹರು ಮತ್ತು ಸುಭಾಷ್‌ಚಂದ್ರ ಬೋಸ್. ನೆಹರು ತಾವೊಬ್ಬ 'ಸಮಾಜವಾದಿ' ಎಂದು ಗುರುತಿಸಿಕೊಂಡರೂ ತಾತ್ವಿಕವಾಗಿ ಗಾಂಧೀಜಿಯ ಜೊತೆಗಿದ್ದರು.

ಸಮಾಜವಾದಿಗಳು ಅನೇಕ ರೈತ ಮತ್ತು ಕಾರ್ಮಿಕ ಸಂಘಟನೆಗಳನ್ನು ಕಟ್ಟುವ ಮೂಲಕ ಭಾರತೀಯ ಸಮಾಜದ ದುರ್ಬಲ ವರ್ಗಗಳ ಶ್ರೇಯೋಭಿವೃದ್ಧಿಗೆ ಶ್ರಮಿಸಿದರು. ಜಯಪ್ರಕಾಶ್ ನಾರಾಯಣ್, ರಾಮಮನೋಹರ ಲೋಹಿಯಾ, ಅರುಣಾ ಅಸಫ್ ಆಲಿ ಮುಂತಾದ ಸೋಷಲಿಸ್ಟ್ ನಾಯಕರು ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಮಹತ್ವದ ಪಾತ್ರವಹಿಸಿ ಜನಪ್ರಿಯ ನಾಯಕರಾಗಿ ಮೂಡಿಬಂದರು.

ಜಯಪ್ರಕಾಶ್ ನಾರಾಯಣ್ (ಜೆ.ಪಿ.)

ಜಯಪ್ರಕಾಶ್ ನಾರಾಯಣ್ ಅವರು ಸಾ.ಶ. 1902ರಲ್ಲಿ ಬಿಹಾರದಲ್ಲಿ ಜನಿಸಿದರು. ಉನ್ನತ ವಿದ್ಯಾಭ್ಯಾಸವನ್ನು ಏಳು ವರ್ಷಗಳ ಕಾಲ ಅಮೆರಿಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ನಡೆಸಿದರು. ಅಲ್ಲಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಅವರಿಗೆ ಸಮಾಜವಾದದ ಪರಿಚಯವಾಯಿತು. ಭಾರತಕ್ಕೆ ಹಿಂತಿರುಗಿದ ನಂತರ ಜವಾಹರಲಾಲ್ ನೆಹರು ಅವರ ಮಾರ್ಗದರ್ಶನದಂತೆ ಕಾಂಗ್ರೆಸ್ ಪಕ್ಷವನ್ನು ಸೇರಿದರು. ಸಾ.ಶ. 1934ರಲ್ಲಿ ಕಾಂಗ್ರೆಸ್ ಸೋಷಲಿಷ್ಟ್ ಪಕ್ಷವನ್ನು ಸ್ಥಾಪಿಸಿದರು. ಸಾ.ಶ. 1941ರಲ್ಲಿ ಬಂಧನಕ್ಕೆ ಒಳಗಾದ ಜಯಪ್ರಕಾಶ್ ನಾರಾಯಣರು ಮರುವರ್ಷ ಹಜಾರಿಬಾಗ್ ಜೈಲಿನಿಂದ ತಪ್ಪಿಸಿಕೊಂಡು ಭೂಗತವಾದರು. ಅಡಗುತಾಣದಿಂದಲೇ ಭಾರತ ಬಿಟ್ಟು ತೊಲಗಿ ಚಳವಳಿಗೆ ಬೆಂಬಲ ನೀಡಿದರು. ನಂತರ ಮಾರುವೇಷದಲ್ಲಿ ಭಾರತದಾದ್ಯಂತ ಸಂಚರಿಸಿದರು. ಅವರನ್ನು ಸಾ.ಶ. 1944ರಲ್ಲಿ ಮತ್ತೆ ಬಂಧಿಸಿದ ಸರಕಾರ ಲಾಹೋರಿನ ಕೋಟೆಯಲ್ಲಿಟ್ಟಿತು. ನಂತರ ಅಲ್ಲಿಂದ ಬಿಡುಗಡೆಗೊಂಡರು.

ಸ್ವಾತಂತ್ರ್ಯಾನಂತರದಲ್ಲಿ ಅವರು ವಿನೋಬಾ ಭಾವೆಯವರ ಭೂದಾನ ಚಳವಳಿಯಲ್ಲಿ ಗುರುತಿಸಿಕೊಂಡರು. ಸಾ.ಶ. 1974ರಲ್ಲಿ ಸಕ್ರಿಯ ರಾಜಕೀಯವನ್ನು ಪ್ರವೇಶಿಸಿದ್ದ ಜಯಪ್ರಕಾಶ್ ನಾರಾಯಣರು 'ಸಂಪೂರ್ಣ ಕ್ರಾಂತಿ' ಎಂಬ ಆಂದೋಲನವನ್ನು ಹುಟ್ಟಿಹಾಕಿದರು. ಇವರ ಚಳವಳಿಯ ಪರಿಣಾಮವಾಗಿ ಸಾ.ಶ. 1977ರಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದಿತು. ಆಂತರಿಕ ಕಚ್ಚಾಟಗಳಿಂದ ಜನತಾ ಪಕ್ಷವು ಇಬ್ಭಾಗವಾದಾಗ ಭ್ರಮನಿರಸನಗೊಂಡರು. ಅಂತಿಮವಾಗಿ ಸಾ.ಶ. 1979ರಲ್ಲಿ ನಿಧನ ಹೊಂದಿದರು. ಜನರು ಇವರನ್ನು ಪ್ರೀತಿಯಿಂದ 'ಲೋಕನಾಯಕ' ಎಂದೇ ಕರೆದರು.

ಸ್ವಾತಂತ್ರ್ಯದೆಡೆಗೆ

ಜನಾಂದೋಲನಗಳು ಸೃಷ್ಟಿಸಿದ ಒತ್ತಡ ಮತ್ತು ಎರಡನೇ ಮಹಾಯುದ್ಧದಿಂದ ಉಂಟಾದ ಸನ್ನಿವೇಶದಿಂದಾಗಿ ಬ್ರಿಟಿಷರು ಭಾರತದ ಸಮಸ್ಯೆಗೆ ಆದಷ್ಟು ಬೇಗ ಪರಿಹಾರವನ್ನು ಕಂಡು ಹಿಡಿಯಲು ಅನುವಾದರು. ಇದೇ ವೇಳೆ ಮಹಾಯದ್ಧದ ಪರಿಣಾಮವಾಗಿ ಬ್ರಿಟಿಷರ ಆರ್ಥಿಕ ಮತ್ತು ಸೈನಿಕ ಶಕ್ತಿ ಕುಂದಿತ್ತು.

ಎರಡನೇ ಮಹಾಯುದ್ಧದ ಅಂತ್ಯದಲ್ಲಿ (ಸಾ.ಶ. 1945) ಅಧಿಕಾರಕ್ಕೆ ಬಂದ ಲೇಬರ್ ಪಕ್ಷವು ಭಾರತದ ಜತೆ ರಾಜಕೀಯ ಒಪ್ಪಂದವೊಂದನ್ನು ಮಾಡಿಕೊಳ್ಳಬಯಸಿತು. ಈ ಅಂತಿಮ ಹಂತದಲ್ಲಿ ಭಾರತದ ಭವಿಷ್ಯಕ್ಕೆ ಸಂಬಂಧಿಸಿದ ನಿರ್ಣಾಯಕ ನಿರ್ಧಾರಗಳನ್ನು ಮೌಲಾನಾ ಅಬುಲ್ ಕಲಂ ಆಜಾದ್, ಜವಾಹರಲಾಲ್ ನೆಹರು ಮತ್ತು ವಲ್ಲಭಭಾಯ್ ಪಟೇಲ್ ತೆಗೆದುಕೊಂಡರು.

ಭಾರತಕ್ಕೆ ಅಧಿಕಾರವನ್ನು ಹಸ್ತಾಂತರಿಸಲು ಅನುಸರಿಸಬೇಕಾದ ಮಾರ್ಗಗಳನ್ನು ಕಂಡು ಕೊಳ್ಳಲು ಬ್ರಿಟಿಷ್ ಸರ್ಕಾರ ಸಾ.ಶ. 1946ರಲ್ಲಿ ಕ್ಯಾಬಿನೇಟ್ ಆಯೋಗವನ್ನು ಭಾರತಕ್ಕೆ ಕಳುಹಿಸಿತು. ಆದರೆ ಜಿನ್ನಾ ನೇತೃತ್ವದ ಮುಸ್ಲಿಂ ಲೀಗ್ ಪಾಕಿಸ್ತಾನವೆಂದು ಕರೆಯಲ್ಪಡುವ ಪ್ರತ್ಯೇಕ ಮುಸ್ಲಿಂ ದೇಶಕ್ಕಾಗಿ ಪಟ್ಟು ಹಿಡಿಯಿತು. ಹೀಗಾಗಿ ಭಾರತವನ್ನು ವಿಭಜಿಸುವುದು ಅನಿವಾರ್ಯವಾಯಿತು. 1947ರ ಜೂನ್ 3ರಂದು ಭಾರತದ 34ನೇ ಮತ್ತು ಕೊನೆಯ ಗವರ್ನರ್ ಜನರಲ್ ಹಾಗೂ ವೈಸ್‌ರಾಯ್ ಆದ ಲಾರ್ಡ್ ಮೌಂಟ್‌ಬ್ಯಾಟನ್ ಭಾರತವನ್ನು ವಿಭಜಿಸಿ ಅಧಿಕಾರವನ್ನು ಭಾರತೀಯರಿಗೆ ಹಸ್ತಾಂತರಿಸಲಾಗುವುದೆಂಬ ಐತಿಹಾಸಿಕ ನಿರ್ಣಯವನ್ನು ಘೋಷಿಸಿದರು.

ಮೌಲಾನಾ ಅಬುಲ್ ಕಲಂ ಆಜಾದ್

ವಲ್ಲಭಭಾಯ್ ಪಟೇಲ್

ಸಾ.ಶ. 1947ರ ಆಗಸ್ಟ್ 14ರಂದು ಪಾಕಿಸ್ತಾನ ಭಾರತದಿಂದ ಪ್ರತ್ಯೇಕಗೊಂಡಿತು. ಭಾರತ ಸಾ.ಶ. 1947ರ ಆಗಸ್ಟ್ 15ರಂದು ಸ್ವತಂತ್ರಗೊಂಡಿತು. ಜವಾಹರಲಾಲ್ ನೆಹರು ಸ್ವತಂತ್ರ ಭಾರತದ ಮೊದಲ ಪ್ರಧಾನಮಂತ್ರಿಯಾದರು. ಆರಂಭದಲ್ಲಿ ವ್ಯಾಪಾರಿ ಉದ್ದೇಶವನ್ನು ಇಟ್ಟುಕೊಂಡು ಬಂದಿದ್ದ ಬ್ರಿಟಿಷರು ಸುಮಾರು ಎರಡು ಶತಮಾನಗಳ ಕಾಲ ಭಾರತವನ್ನು ಆರ್ಥಿಕ ಮತ್ತು ರಾಜಕೀಯವಾಗಿ ದುರ್ಬಲಗೊಳಿಸಿದರು. ಭಾರತೀಯರು ನಡೆಸಿದ ಹೋರಾಟಗಳಿಂದ ಕೊನೆಗೂ ಸಾಮ್ರಾಜ್ಯವಾದಿಗಳು ಇಲ್ಲಿಂದ ನಿರ್ಗಮಿಸಲೇಬೇಕಾಯಿತು. ದೀರ್ಘಕಾಲ ಸಾಗಿದ ರಾಷ್ಟ್ರೀಯ ಹೋರಾಟವು ಅಂತ್ಯಗೊಂಡ ದಿನವಾದ 15 ಆಗಸ್ಟ್ ಸಾ.ಶ. 1947 ಭಾರತದ ಇತಿಹಾಸದಲ್ಲಿ ಒಂದು ಅವಿಸ್ಮರಣೀಯ ದಿನವಾಗಿದೆ.

ಲಾರ್ಡ್ ಮೌಂಟ್‌ಬ್ಯಾಟನ್

ಮುಖ್ಯ ಇಸವಿಗಳು

ಗಾಂಧೀಜಿಯವರ ಜನನ	1869 ಅಕ್ಟೋಬರ್ 2
ಅಸಹಕಾರ ಚಳವಳಿ	1920–1922
ಚೌರಿಚೌರ ದುರಂತ	1922
ಪೂರ್ಣ ಸ್ವರಾಜ್ಯದ ಘೋಷಣೆ	1929
ಪೂರ್ಣ ಸ್ವರಾಜ್ಯ ದಿನಾಚರಣೆ	1930 ಜನವರಿ 26
ಉಪ್ಪಿನ ಸತ್ಯಾಗ್ರಹ	1930 ಏಪ್ರಿಲ್
ಪೂನಾ ಒಪ್ಪಂದ	1932
ಎರಡನೇ ವಿಶ್ವಸಮರ	1939–1945
ಭಾರತ ಬಿಟ್ಟು ತೊಲಗಿ ಚಳವಳಿ	1942
ಭಾರತಕ್ಕೆ ಸ್ವಾತಂತ್ರ್ಯ	1947 ಆಗಸ್ಟ್ 15.

ಅಭ್ಯಾಸಗಳು

I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.

1. ಗಾಂಧೀಯವರ ರಾಜಕೀಯ ಗುರು _____ .
2. ಗಾಂಧೀಜಿ ಅವರು ಅಹಮದಾಬಾದ್ ಬಳಿ ಸ್ಥಾಪಿಸಿದ ಆಶ್ರಮ_____
3. ಚೌರಿಚೌರ ಘಟನೆಯು _____ ರಲ್ಲಿ ಸಂಭವಿಸಿತು.
4. "ಸಂಪೂರ್ಣ ಸ್ವರಾಜ್ಯ" ನಿರ್ಣಯವು _____ ರಲ್ಲಿ ಅಂಗೀಕರಿಸಲ್ಪಟ್ಟಿತು.
5. ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಮಹಾಕಾರ್ಯದರ್ಶಿ _____ ಆಗಿದ್ದರು.
6. ಸಂಪೂರ್ಣ ಕ್ರಾಂತಿ ಆಂದೋಲನವನ್ನು _____ರವರು ಹುಟ್ಟು ಹಾಕಿದರು.
7. ಸ್ವತಂತ್ರ ಭಾರತದ ಮೊದಲ ಪ್ರಧಾನಿಮಂತ್ರಿ _____ ಆಗಿದ್ದರು.

II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಗಾಂಧೀಜಿ ಅವರು ಎಲ್ಲಿ, ಯಾವಾಗ ಜನಿಸಿದರು?
2. ಗಾಂಧೀಜಿ ಅವರ ರಾಜಕೀಯ ಗುರು ಯಾರು?
3. ಪೂನಾ ಒಪ್ಪಂದ ಯಾರ್ಯಾರ ನಡುವೆ ಏರ್ಪಟ್ಟಿತು?
4. 'ಫಾರ್ವರ್ಡ್ ಬ್ಲಾಕ್' ಆರಂಭಿಸಿದವರು ಯಾರು?
5. ಐ.ಎನ್.ಎ ವಿಸ್ತರಿಸಿ.

6. 'ಭಾರತ ಬಿಟ್ಟು ತೊಲಗಿ' ಚಳವಳಿಯಲ್ಲಿ ಗಾಂಧೀಜಿ ನೀಡಿದ ಘೋಷಣೆ ಯಾವುದು?

7. 'ನನಗೆ ರಕ್ತ ಕೊಡಿ, ನಿಮಗೆ ಸ್ವಾತಂತ್ರ್ಯ ಕೊಡುತ್ತೇನೆ' ಎಂಬ ಘೋಷಣೆ ನೀಡಿದವರು ಯಾರು?

8. ಅಂಬೇಡ್ಕರ್ ಯಾವಾಗ ಜನಿಸಿದರು?

9. ಭಾರತದ 'ಸಂವಿಧಾನ ಶಿಲ್ಪಿ' ಎಂದು ಯಾರನ್ನು ಕರೆಯುತ್ತಾರೆ?

10. 'ಲೋಕ ನಾಯಕ' ಎಂದು ಯಾರನ್ನು ಕರೆಯುತ್ತಾರೆ?

III ಈ ಕೆಳಕಂಡ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.

1. ಗಾಂಧೀಜಿ ಅವರ ಕಾನೂನುಭಂಗ ಚಳವಳಿಯನ್ನು ಕುರಿತು ಬರೆಯಿರಿ.

2. ಭಾರತ ಬಿಟ್ಟು ತೊಲಗಿ ಚಳವಳಿಯನ್ನು ವಿವರಿಸಿ.

3. ಸುಭಾಷ್ ಚಂದ್ರ ಬೋಸರ ಸ್ವಾತಂತ್ರ್ಯ ಹೋರಾಟವನ್ನು ಸಂಕ್ಷಿಪ್ತವಾಗಿ ವಿವರಿಸಿ.

4. ಅಂಬೇಡ್ಕರ್ ಅವರು ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟದ ಕ್ರಮವನ್ನು ತಿಳಿಸಿ.

ಚಟುವಟಿಕೆ

'ದಂಡಿ ಯಾತ್ರೆ' ಮತ್ತು 'ಭಾರತ ಬಿಟ್ಟು ತೊಲಗಿ' ಚಳವಳಿಗಳ ಕುರಿತು ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿರಿ.

☆ ☆ ☆

ಪಾಠ 06	ಕರ್ನಾಟಕದ ಸಮಾಜಮುಖಿ ಚಳವಳಿಗಳು

ಪಾಠದ ಪರಿಚಯ

ಅಧಿಕಾರರೂಢರು ಜನಪರವಲ್ಲದ ನಿರ್ಧಾರ, ಕಾರ್ಯಕ್ರಮ ಮತ್ತು ಯೋಜನೆಗಳನ್ನು ಕಾರ್ಯಗತ ಮಾಡಲು ಮುಂದಾದಾಗ, ಅವನ್ನು ವಿರೋಧಿಸುವ ಹಕ್ಕು ಜನತೆಯ ಕೈಯಲ್ಲಿದೆ. ಕರ್ನಾಟಕದಲ್ಲಿ ಇಂಥ ಪ್ರಸಂಗಗಳು ಕಾಣಿಸಿಕೊಂಡಾಗ, ಪ್ರಜ್ಞಾವಂತ ನಾಗರಿಕರು ಸಿಡಿದೆದ್ದು ಆಂದೋಲನಗಳನ್ನು ನಡೆಸಿದರು. ಇದೇ ವೇಳೆ ದುರ್ಬಲ, ಶೋಷಿತ ಮತ್ತು ಹಿಂದುಳಿದ ವರ್ಗಗಳು ತಮ್ಮ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಶ್ರೇಯೋಭಿವೃದ್ಧಿಗಾಗಿ ಹೋರಾಟ ಮಾಡಿದರು. ಈ ಪಾಠದಲ್ಲಿ ಕರ್ನಾಟಕದ ಪರಿಸರವಾದಿಗಳು, ಮಹಿಳೆಯರು, ರೈತರು, ದಲಿತರು ಮತ್ತು ಕನ್ನಡಪರ ಸಂಘಟನೆಗಳು ಮಾಡಿರುವ ಚಳವಳಿಗಳನ್ನು ನಿರೂಪಣೆ ಮಾಡಲಾಗಿದೆಯಲ್ಲದೆ ಅಧಿಕಾರ ವಿಕೇಂದ್ರೀಕರಣದ ನಿಟ್ಟಿನಲ್ಲಿ ಜಾರಿಗೊಂಡ ಮಹತ್ವದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಕೂಡ ಪರಿಚಯಿಸಲಾಗಿದೆ.

ಸಾಮರ್ಥ್ಯಗಳು

1] ಪರಿಸರ ಚಳವಳಿಯನ್ನು ಕೆಲವು ನಿದರ್ಶನಗಳೊಂದಿಗೆ ಅರಿಯುವರು.

2] ಮಹಿಳೆಯ ಸಬಲೀಕರಣಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳನ್ನು ಮೆಚ್ಚುವರು.

3] ರೈತರು ತಮ್ಮ ಹಿತರಕ್ಷಣೆಗಾಗಿ ನಡೆಸಿದ ಹೋರಾಟಗಳನ್ನು ಅರ್ಥೈಸಿಕೊಳ್ಳುವರು.

4] ದಲಿತರ ಹೋರಾಟಗಳನ್ನು ಅರಿಯುವರು.

5] ಕನ್ನಡ ಕಾವಲು ಚಳವಳಿಗಳ ಪ್ರಸ್ತುತತೆಯನ್ನು ಅರಿತು ಅವುಗಳ ಬಗ್ಗೆ ಆಸಕ್ತಿ ವಹಿಸುವರು.

6] ಪಂಚಾಯತ್ ರಾಜ್ ವ್ಯವಸ್ಥೆಯ ಅವಶ್ಯಕತೆಯನ್ನು ಮೆಚ್ಚುವರು.

1. ಪರಿಸರ ಚಳವಳಿ

ನಮ್ಮ ಭೂಮಿಯ ಭಾಗವಾಗಿರುವ ಮಣ್ಣು ಕಲ್ಲು, ನೀರು, ಗಾಳಿ, ಬೆಳಕುಗಳನ್ನು ಅವಲಂಬಿಸಿ ಪಶುಪಕ್ಷಿಗಳು, ಗಿಡಮರಗಳು ಮತ್ತು ಮನುಷ್ಯ ಸೇರಿದಂತೆ ಉಳಿದೆಲ್ಲ ಜೀವಿಗಳು ಬದುಕಬೇಕಾಗಿದೆ. ಪ್ರಕೃತಿಯಲ್ಲಿ ಸಹಜ ಸಮತೋಲನವಿದೆ. ಮನುಷ್ಯ ನಾಗರಿಕನಾಗಿ ಬೆಳೆಯುತ್ತಿದ್ದಂತೆ ಪರಿಸರವನ್ನು ತನ್ನ ಅಂಕೆಯಿಲ್ಲದ ಆಸೆಗಳಿಗೆ ಬಲಿಕೊಡುತ್ತಿದ್ದಾನೆ. ಪ್ರಕೃತಿಯನ್ನು ಸೃಷ್ಟಿಯ ಬೆಡಗು ಎಂದು ಅರಿಯದೆ ಕೇವಲ ತನ್ನ ಉಪಯೋಗಕ್ಕಾಗಿ ಇರುವ ಕಚ್ಚಾವಸ್ತುವೆಂದು ಪರಿಗಣಿಸಿದ್ದಾನೆ. ಮನೆಮನೆಯಲ್ಲಿ ಕಾಣಿಸಿಕೊಳ್ಳುತ್ತಿದ್ದ ಗುಬ್ಬಚ್ಚಿಗಳನ್ನು ನೋಡಲು ಊರ ಹೊರಗಡೆ ಹೋಗಬೇಕಾದ ಪರಿಸ್ಥಿತಿ ಬಂದೊದಗಿದೆ.

ಭೂಮಿಯಲ್ಲಿರುವ ಜೈವಿಕ ಮತ್ತು ಅಜೈವಿಕ ಅಂಶಗಳೇ ಪರಿಸರ.

ಕೈಗಾರಿಕಾ ಕ್ರಾಂತಿ, ವಾಣಿಜ್ಯ ವ್ಯಾಪಾರದ ಕ್ರಾಂತಿಗಳುಂಟಾಗಿ ಪರಿಸರವು ತೀವ್ರವಾಗಿ ಹದಗೆಟ್ಟಿದೆ. ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳು ಪರಿಸರದ ಸಂಪತ್ತಿನ ಮೇಲೆ ತಮ್ಮ ಹಿಡಿತವನ್ನು ಸಾಧಿಸಲು ನಿರಂತರ ಪ್ರಯತ್ನಿಸುತ್ತಿದ್ದಾರೆ. ಇದರಿಂದ ಅನೇಕ ಹೊಸ ಸಮಸ್ಯೆಗಳು ಸೃಷ್ಟಿಯಾಗಿವೆ. ಜನ ಸಮುದಾಯಗಳು ಗಂಭೀರ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಿವೆ. ಒಟ್ಟಾರೆ ಪ್ರಾಕೃತಿಕ ಸಂಪತ್ತಿನ ನಾಶದಿಂದ ಬಹುಸಂಖ್ಯಾ ನಾಗರಿಕರು ತೀವ್ರ ಸಂಕಟವನ್ನು ಎದುರಿಸುತ್ತಿದ್ದಾರೆ. 20ನೇ ಶತಮಾನದ ಉತ್ತರಾರ್ಧದಲ್ಲಿ ಜನರಲ್ಲಿ ಹೊಸ ಎಚ್ಚರವನ್ನು ಮೂಡಿಸುವ ಸಲುವಾಗಿ ಪರಿಸರ ಜಾಗೃತಿ ಚಳವಳಿಗಳು ಆರಂಭವಾದವು. 1970ರ ದಶಕದಲ್ಲಿ ಪರಿಸರ ಚಳವಳಿ ಜಾಗತಿಕ ಮಟ್ಟದಲ್ಲಿ ಆರಂಭಗೊಂಡು ಕರ್ನಾಟಕವನ್ನು ತಲುಪಿತು.

ಗಾಂಧೀಜಿಯವರು ಹೇಳುವಂತೆ, "ಭೂಮಿಯು ಎಲ್ಲರ ಅವಶ್ಯಕತೆಯನ್ನು ಪೂರೈಸುತ್ತದೆ. ಆದರೆ ಅವರ ದುರಾಸೆಯನ್ನಲ್ಲ".

ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿ ಗಣಿಗಾರಿಕೆ ಪ್ರಾರಂಭವಾದುದರಿಂದ ಪರಿಸರ ಸಂರಕ್ಷಣಾ ಚಳವಳಿ ಅನಿವಾರ್ಯವಾಯಿತು. 'ಸಹ್ಯಾದ್ರಿ ಗಣಿ ವಿರೋಧಿ ವೇದಿಕೆ' ಪ್ರಾರಂಭವಾಗಿ ಕುದುರೆಮುಖ ಮತ್ತು ಇತರ ಪ್ರದೇಶಗಳ ಗಣಿಗಾರಿಕೆಯನ್ನು ವಿರೋಧಿಸಿತು. ಕೇಂದ್ರ ಸರಕಾರವೇ ಕಬ್ಬಿಣದ ಗಣಿಗಾರಿಕೆಯ ಕಂಪೆನಿಯನ್ನು ಪ್ರಾರಂಭಿಸಿತ್ತು. ಈ ಗಣಿಗಾರಿಕೆಯಿಂದ ಭದ್ರಾ ನದಿಯ ಮೂಲವೇ ಮಲಿನವಾಯಿತು. ಈ ಹೋರಾಟದಿಂದ ಸರಕಾರದ ಮೇಲೆ ತೀವ್ರ ಒತ್ತಡವುಂಟಾಗಿ ಕ್ರಮೇಣ ಸರ್ಕಾರವು ಪರಿಸರ ರಕ್ಷಣೆಯ ಕ್ರಮಗಳನ್ನು ಕೈಗೊಂಡಿತು.

ಸಾಲುಮರದ ತಿಮ್ಮಕ್ಕ: ಇಂದಿಗೂ ಹೋರಾಟ ನಡೆಸುತ್ತಿರುವ 'ಸಾಲುಮರದ ತಿಮ್ಮಕ್ಕ' 284 ಮರಗಳ ತಾಯಿ. ಅಕ್ಷರಸ್ಥರಲ್ಲದಿದ್ದರೂ ಪರಿಸರ ಸಂರಕ್ಷಣೆಯ ಪಾಠ ಹೇಳಿಕೊಟ್ಟ ನಿಸ್ವಾರ್ಥ ಬದುಕು ಇವರದು.

ಸಹ್ಯಾದ್ರಿ ಶ್ರೇಣಿಯ ಪ್ರಮುಖ ನದಿಯಾದ ತುಂಗಾ ಕಲುಷಿತವಾಗುತ್ತಿರುವುದನ್ನು ಗಮನಿಸಿ 'ತುಂಗಾ ಮೂಲವನ್ನು ಉಳಿಸಿ' ಆಂದೋಲನವನ್ನು ಆರಂಭಿಸಲಾಯಿತು. ಸಹ್ಯಾದ್ರಿ ಪರ್ವತ ಶ್ರೇಣಿಯ ಅರಣ್ಯ ಪ್ರದೇಶಗಳು ಕ್ರಮೇಣ ಬರಿದಾಗತೊಡಗಿದವು. ಗಿಡಮರಗಳನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ಅದರ ನಾಶವನ್ನು ತಡೆಯಲು ಭಾರತದ ವಿವಿಧ ಪ್ರದೇಶಗಳಲ್ಲಿ 'ಚಿಪ್ಕೊ' ಅಥವಾ 'ಅಪ್ಪಿಕೊ' ಚಳವಳಿಗಳು ಆರಂಭಗೊಂಡವು. ಚಿಪ್ಕೊ ಚಳವಳಿಯಲ್ಲಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಸುಂದರಲಾಲ್ ಬಹುಗುಣ ಅವರ ಪಾತ್ರವನ್ನು ನಾವು ಮರೆಯುವಂತಿಲ್ಲ.

ಚಟುವಟಿಕೆ : ಅಪ್ಪಿಕೊ ಚಳವಳಿಯ ಧ್ಯೇಯೋದ್ದೇಶಗಳನ್ನು ಪಟ್ಟಿಮಾಡಿರಿ.

ಅರಣ್ಯ ಇಲಾಖೆಯು ನೀಲಗಿರಿ, ಅಕೇಶಿಯಾಗಳಂತಹ ಆಮದು ಸಸ್ಯಗಳನ್ನು ನೆಡಲಾರಂಭಿಸಿತು. ಈ ಯೋಜನೆಯನ್ನು 'ಸಾಮಾಜಿಕ ಅರಣ್ಯ'ವೆನ್ನುವರು. ನೀಲಗಿರಿಯು ಅಂತರ್‌ಜಲದ ಮಟ್ಟವನ್ನು ಕೆಳಕ್ಕೆ ತಳ್ಳುತ್ತದೆ ಎಂದು ಅದರ ನೆಡುವಿಕೆಯನ್ನು ಪರಿಸರವಾದಿಗಳು ವಿರೋಧಿಸಿದರು.

ದಾವಣಗೆರೆ ಜಿಲ್ಲೆಯ ಹರಿಹರ ಪಾಲಿಫೈಬರ್ ಕೈಗಾರಿಕೆಯು ತಾಜ್ಯವಸ್ತುಗಳನ್ನು ತುಂಗಭದ್ರಾ ನದಿಗೆ ಬಿಟ್ಟು ನದಿಯ ನೀರನ್ನು ಹಾಳು ಮಾಡುವುದರ ವಿರುದ್ಧ ಹೋರಾಟ ನಡೆಯಿತು. ಇತರ ಚಳವಳಿಗಳೆಂದರೆ ಕಾರವಾರದ ಸೀಬರ್ಡ್ ನೌಕಾನೆಲೆಯ ವಿರುದ್ಧದ ಹೋರಾಟ, ಕರಾವಳಿಯಲ್ಲಿ ಕೋಜೆಂಟ್ರಿಕ್ಸ್ ನಾಗಾರ್ಜುನ ವಿದ್ಯುತ್ ಯೋಜನೆಯ ವಿರುದ್ಧ ಹೋರಾಟ. ಕೆರೆಗಳನ್ನು ಉಳಿಸಿ ಹೋರಾಟ, ಭದ್ರಾ ಮೇಲ್ದಂಡೆ ಯೋಜನೆಯ ವಿರುದ್ಧದ ಹೋರಾಟ, ಕಬ್ಬನ್ ಪಾರ್ಕ್ ಉಳಿಸಿ, ಕಾರ್ಗಿಲ್ ಸೀಡ್ಸ್ ಸಂಸ್ಥೆಯ ವಿರುದ್ಧದ ಹೋರಾಟ, ಕೈಗಾರಿಕಾ ನಗರಗಳ ವಿರುದ್ಧದ ಹೋರಾಟ ಮುಂತಾದವು.

ತೀರ ಇತ್ತೀಚಿಗೆ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಸುದ್ದಿ ಮಾಡಿದವುಗಳೆಂದರೆ ಕರ್ನಾಟಕದಲ್ಲಿ ನಡೆದ ಗಣಿಗಾರಿಕೆ ವಿರುದ್ಧದ ಚಳವಳಿಗಳು. ಬಳ್ಳಾರಿ, ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರು, ಉತ್ತರ ಕನ್ನಡ, ದಾವಣಗೆರೆ, ರಾಮನಗರ ಮುಂತಾದ ಜಿಲ್ಲೆಗಳಲ್ಲಿ ಗಣಿ ಸಂಪತ್ತನ್ನು ಲೂಟಿ ಹೊಡೆಯುವ ಶಕ್ತಿಗಳ ವಿರುದ್ಧ ಈ ಚಳವಳಿಗಳು ಪ್ರಾರಂಭವಾದವು. ಭಾರತದ ಸರ್ವೋಚ್ಚ ನ್ಯಾಯಾಲಯವು ಪರಿಸರ ಸಂರಕ್ಷಣೆಯನ್ನು ಗಂಭೀರವಾಗಿ ಪರಿಗಣಿಸಿ ತೀರ್ಪುಗಳನ್ನು ನೀಡುತ್ತಿದೆ.

ಕರ್ನಾಟಕ ಲೋಕಾಯುಕ್ತ ಸಂಸ್ಥೆಯು ಸಾರ್ವಜನಿಕ ಹಿತಾಸಕ್ತಿ ದಾವೆಗಳನ್ನು ಪರಿಗಣಿಸಿ ಅಕ್ರಮ ಗಣಿಗಾರಿಕೆಯ ಕುರಿತು ನಡೆಸಿದ ಕೂಲಂಕಷ ತನಿಖೆಗಳು ಹಾಗೂ ಸುದೀರ್ಘ ವರದಿಗಳು ಉಲ್ಲೇಖಾರ್ಹವಾದುದು. ಇವೆಲ್ಲವುಗಳ ಪರಿಣಾಮವಾಗಿ ಪ್ರಕೃತಿಯ ಶೋಷಣೆ ಕಡಿಮೆಯಾಗುತ್ತಿದೆ. ಇಂದೂ ಅನೇಕ ಹೋರಾಟಗಳು ಮುಂದುವರಿದಿವೆ. ಕೃತಕ ರಾಸಾಯನಿಕದಿಂದ ಭೂಮಿಯನ್ನು ಹಾಳುಮಾಡುವ ಪದ್ಧತಿಗೆ ಪರ್ಯಾಯವಾಗಿ ನೈಸರ್ಗಿಕ ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸುವಂತೆ ಒತ್ತಾಯಿಸುವ ಹೋರಾಟವು ಒಂದು ಕ್ರಾಂತಿಯ ರೂಪವನ್ನು ತಳೆಯುತ್ತಿರುವುದು. ಇದು ಸಮಾಧಾನದ ಸಂಗತಿಯಾಗಿದೆ. ಕರ್ನಾಟಕದಲ್ಲಿ 'ಸಾವಯವ ಕೃಷಿ ಮಿಷನ್' ಸ್ಥಾಪನೆಗೊಂಡು ಸಾವಯವ ಕೃಷಿಗೆ ಪ್ರೋತ್ಸಾಹ ಸಿಗುತ್ತಿದೆ. ನೂರಾರು ಮಂದಿ ಕೃಷಿಕರು ಸಾವಯವ ಕೃಷಿಯ ಲಾಭ ಪಡೆಯುತ್ತಿದ್ದಾರೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಭಾರತದಲ್ಲೇ ಮುಂಚೂಣಿಯಲ್ಲಿದೆ. ಆದರೂ ಸಾಗಬೇಕಾದ ದಾರಿ ತುಂಬ ಇದೆ.

2. ಮಹಿಳಾ ಚಳವಳಿ

ಮಹಿಳಾ ಚಳವಳಿಯು ಆರಂಭದಲ್ಲಿ ಮುಖ್ಯವಾಗಿ ಸ್ತ್ರೀಶಿಕ್ಷಣಕ್ಕೆ ಒತ್ತುನೀಡಿತು. ಕರ್ನಾಟಕದಲ್ಲಿ ಶ್ರೀರಂಗಮ್ಮ ಮತ್ತು ರುಕ್ಮಿಣಮ್ಮ ಎಂಬವರು ಬಿ.ಎ. ಆನರ್ಸ್ ಪದವಿ ಗಳಿಸಿದ ಮೊದಲ ಮಹಿಳೆಯರು. ಇಂದಿರಮ್ಮ ಎಂಬುವರು ಬೆಂಗಳೂರಿನ ಪ್ರಥಮ ಮಹಿಳಾ ಮೇಯರ್ ಆಗಿದ್ದರು. ಇಷ್ಟಾದರೂ ಮಹಿಳೆಯರ ಸಬಲೀಕರಣವೆನ್ನುವುದು ಮರೀಚಿಕೆಯಾಗಿತ್ತು. ಮಹಿಳೆಯರಿಗೆ ಆಸ್ತಿಯಲ್ಲಿ

ಪಾಲು ಸಿಗುತ್ತಿರಲಿಲ್ಲ. ವಿವಿಧ ಧರ್ಮೀಯ ಮಹಿಳೆಯರು ಬೇರೆ ಬೇರೆ ಬಗೆಯಲ್ಲಿ ಶೋಷಣೆಗೆ ಒಳಗಾಗಿದ್ದಾರೆ.

ಚಟುವಟಿಕೆ : ವಿವಿಧ ಕ್ಷೇತ್ರಗಳಲ್ಲಿ ಸಾಧನೆಯನ್ನು ಮಾಡಿರುವ ಮಹಿಳೆಯರನ್ನು ಪಟ್ಟಿಮಾಡಿರಿ.

ಅನೇಕ ಮಂದಿ ಮಹಿಳೆಯರು ಕುಟುಂಬದ ಚೌಕಟ್ಟಿನಿಂದ ಹೊರಗೆ ಬಂದು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, ದೇಶಸೇವೆಗೆ ಮುಂದಾದರು. ಕಮಲಾದೇವಿ ಚಟ್ಟೋಪಾಧ್ಯಾಯ, ಸರೋಜಿನಿ ನಾಯ್ಡು, ಅರುಣಾ ಅಸಫ್ ಅಲಿ, ಡಾ. ಮುತ್ತುಲಕ್ಷ್ಮಿ ರೆಡ್ಡಿ ಮುಂತಾದವರನ್ನು ನಾವಿಲ್ಲಿ ಸ್ಮರಿಸಬಹುದು.

ಅರುಣಾ ಅಸಫ್ ಅಲಿ

1975ರಲ್ಲಿ ಅಂತರ್‌ರಾಷ್ಟ್ರೀಯ ಮಹಿಳಾ ವರ್ಷಾಚರಣೆ ಪ್ರಾರಂಭವಾಯಿತು. ಕರ್ನಾಟಕ ಸರಕಾರ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡಿತು. ಕ್ರಮೇಣ ಮಹಿಳಾ ಸಂಘಟನೆಗಳು ಸಕ್ರಿಯವಾದವು. ಎಡಪಂಥೀಯ ಸಂಘಟನೆಗಳು ಕಾರ್ಮಿಕ ಮಹಿಳೆಯರನ್ನು ಸಂಘಟಿಸುವ ಕೆಲಸವನ್ನು ಮಾಡಿದವು. ಮಹಿಳಾ ಸಂಘಟನೆಗಳು ವರದಕ್ಷಿಣೆ, ಅತ್ಯಾಚಾರ, ಕೌಟುಂಬಿಕ ಹಿಂಸೆಯನ್ನು ವಿರೋಧಿಸಿದವು. ಹಾಗೆಯೇ ಮಹಿಳೆಯರ ಹಕ್ಕುಗಳ ಪ್ರತಿಪಾದನೆಗೆ ಕಾನೂನು ಮಾರ್ಗವನ್ನು ಬಲಪಡಿಸಲು ಒತ್ತಡ ಹೇರಲಾಯಿತು. ಚುನಾವಣೆಯಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ಸ್ಥಾನಗಳನ್ನು ಮೀಸಲಿಡುವ ಮೂಲಕ ಶಾಸನಸಭೆಗಳಲ್ಲಿ ಅವರ ನಿರ್ಣಾಯಕ ಪಾತ್ರವಿರಬೇಕೆಂದು ಈ ಸಂಘಟನೆಗಳು ಹೋರಾಡುತ್ತಿವೆ.

ಈ ಎಲ್ಲಾ ಹೋರಾಟಗಳ ಫಲವಾಗಿ ಸರ್ಕಾರ ಅನೇಕ ಸುಧಾರಣಾ ಕ್ರಮಗಳನ್ನು ಜಾರಿಗೊಳಿಸಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡಾ 50ರಷ್ಟು ಸ್ಥಾನವನ್ನು ಮಹಿಳೆಯರಿಗೆ ಕಾದಿರಿಸುವ ಆದೇಶ ಹೊರಡಿಸಿದ ಮೊದಲ ರಾಜ್ಯ ಕರ್ನಾಟಕ. ಸರಕಾರಿ ನೇಮಕಾತಿಯಲ್ಲಿಯೂ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿ ನೀಡಿರುವ ಮೂಲಕ ಸ್ವಲ್ಪ ಮಟ್ಟಿಗೆ ಮಹಿಳೆಯರಿಗೆ ನ್ಯಾಯ ಒದಗಿಸಿದೆ. ಹೆಣ್ಣುಮಕ್ಕಳ ಹಾಗೂ ಮಹಿಳೆಯರ ಹಿತರಕ್ಷಣೆಗಾಗಿ ಸರ್ಕಾರವು ಮಹಿಳಾ ಆಯೋಗವನ್ನು ಸ್ಥಾಪಿಸಿದೆ. ಇದು ಸ್ತ್ರೀಯರ ಶೋಷಣೆಯ ವಿರುದ್ಧ ಧ್ವನಿ ಎತ್ತುವುದರ ಮೂಲಕ ಅವರಿಗೆ ನ್ಯಾಯ ದೊರಕಿಸಿಕೊಡಲು ಪ್ರಯತ್ನಿಸುತ್ತಿದೆ.

3. ರೈತ ಚಳವಳಿ

ರೈತರನ್ನು ನಮ್ಮ ದೇಶದ ಬೆನ್ನೆಲುಬು ಎಂದು ಮೊದಲಿನಿಂದಲು ಕರೆಯಲಾಗಿದೆ. ಆದರೆ ಈ ಬೆನ್ನಲುಬು ಗಟ್ಟಿಯಾಗಿರಲು ಬೇಕಾದ ಅವಶ್ಯಕತೆಗಳನ್ನು ಒದಗಿಸಿಲ್ಲ. ಇಂದೂ ಸಹ ನಮ್ಮ ರೈತರು ಸರಕಾರದ ನೆರವಿಲ್ಲದೆ ಬದುಕಲಾರದ ಸ್ಥಿತಿಯಲ್ಲಿದ್ದಾರೆ. ಕೈಗಾರಿಕೋದ್ಯಮಿಗಳು ತಾವು ಉತ್ಪಾದಿಸಿದ ವಸ್ತುವಿನ ಬೆಲೆಯನ್ನು ತಾವೇ ನಿರ್ಧರಿಸುತ್ತಾರೆ. ಆದರೆ ರೈತರು ಇಂದಿಗೂ ತಮ್ಮ ಉತ್ಪನ್ನಗಳ ಬೆಲೆ

ನಿರ್ಧರಿಸುವ ಹಂತಕ್ಕೆ ಬೆಳೆದಿಲ್ಲ. ಅವರು ವರುಣನ ಕೃಪೆ ಅಥವಾ ಅವಕೃಪೆಗೆ ಸದಾ ಒಳಗಾಗಿದ್ದಾರೆ. ತಮ್ಮನ್ನು ರಕ್ಷಿಸಬೇಕಾದ ಸರಕಾರಗಳು ತಮ್ಮ ಕಷ್ಟದ ದಿನಗಳಲ್ಲಿ ನೆರವಿಗೆ ಬಾರದಿದ್ದಾಗ ರೈತರು ಹೋರಾಟದ ಹಾದಿಗಳನ್ನು ತುಳಿದಿದ್ದಾರೆ. ಅನೇಕ ರೈತರು ಈ ಹೋರಾಟಗಳಲ್ಲಿ ಪ್ರಾಣತೆತ್ತು ಹುತಾತ್ಮರಾಗಿದ್ದಾರೆ. ಶತಮಾನಗಳಿಂದಲೂ ರೈತರು ಹೋರಾಟ ಮಾಡಿಕೊಂಡೇ ಬಂದಿದ್ದರೂ ಅವರ ಹಸನಾದ ಬದುಕಿನ ಕನಸು ಇನ್ನೂ ದೂರವಿದೆ.

ರೈತ ಹೋರಾಟಗಳು ಪ್ರಮುಖವಾಗಿ ಭೂಮಾಲೀಕರ ವಿರುದ್ಧ ನಡೆದವು. ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ನಾವು ಕಾಣುವ ಪ್ರಥಮ ರೈತ ಹೋರಾಟ 1951ರಲ್ಲಿ ಶಿವಮೊಗ್ಗ ಜಿಲ್ಲೆಯ ಕಾಗೋಡಿನಲ್ಲಿ ನಡೆಯಿತು. ರೈತರು ಗೇಣಿಯನ್ನು ಅಳತೆ ಮಾಡುವ 'ಕೊಳಗ'ದ ವಿರುದ್ಧ ಹೋರಾಟ ಪ್ರಾರಂಭಮಾಡಿದರು. ಕ್ರಮೇಣ ರೈತರ ಶೋಷಣೆಯ ವಿಷಯಗಳಾದ ಸಾಲದ ವಸೂಲಿ, ಗೇಣಿದಾರರಿಗೆ ನೀಡುತ್ತಿದ್ದ ಕಿರುಕುಳ ಮುಂತಾದ ಪ್ರಮುಖ ಸಮಸ್ಯೆಗಳ ವಿರುದ್ಧ ರೈತರು ಹೋರಾಟ ಮುಂದುವರೆಸಿದರು. ಸಮಾಜವಾದಿ ಪಕ್ಷದ ಶಾಂತವೇರಿ ಗೋಪಾಲ ಗೌಡರು ಈ ಹೋರಾಟದ ಮುಂಚೂಣಿಯಲ್ಲಿದ್ದರು. ಡಾ. ರಾಮಮನೋಹರ ಲೋಹಿಯಾ ಅವರು ಭೇಟಿ ನೀಡಿ ಈ ಹೋರಾಟಕ್ಕೆ ಹೊಸ ಶಕ್ತಿಯನ್ನು ತಂದುಕೊಟ್ಟರು.

ಚಟುವಟಿಕೆ : ನಾ. ಡಿ'ಸೋಜ ಅವರ 'ಕೊಳಗ' ಕಾದಂಬರಿಯನ್ನು ಓದಿ ರೈತರ ಸ್ಥಿತಿಗತಿಯನ್ನು ಕುರಿತು ಪ್ರಬಂಧ ಬರೆಯಿರಿ.

1950ರ ದಶಕದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮಾಜವಾದಿಗಳು ರೈತ ಹೋರಾಟ ನಡೆಸಿದರು. 1972ರಲ್ಲಿ ಕೋಲಾರದಲ್ಲಿ ಭೂಆಕ್ರಮಣ ಚಳವಳಿ ನಡೆಯಿತು. 1980ರಲ್ಲಿ ಮಲಪ್ರಭಾ ನದಿ ಭಾಗದ ರೈತರು ಹತ್ತಿ ಬೆಳೆ ನೆಲಕಚ್ಚಿದಾಗ ಪ್ರತಿಭಟಿಸಿದರು. ಕೆಲವರು ಪೊಲೀಸರ ಗುಂಡಿಗೆ ಬಲಿಯಾದರು. ರೈತರು ಸರಕಾರದ ವಿರುದ್ಧ ಅಸಹಕಾರ ಚಳವಳಿಯನ್ನು ಮುಂದುವರಿಸಿದರು. ಈ ಸಂದರ್ಭದಲ್ಲಿ ಇಪ್ಪತ್ತಕ್ಕೂ ಹೆಚ್ಚು ರೈತರು ನವಲಗುಂದ, ನರಗುಂದ ಮತ್ತು ಸವದತ್ತಿಯಲ್ಲಿ ಪ್ರಾಣತೆತ್ತರು.

ಈ ಹಿನ್ನೆಲೆಯಲ್ಲಿ ರೈತರು ತಮ್ಮದೆ ಆದ ಸಂಘಟನೆಗಳನ್ನು ಕಟ್ಟಿಕೊಂಡರು. ಕರ್ನಾಟಕ ರಾಜ್ಯ ರೈತ ಸಂಘ ಶಿವಮೊಗ್ಗ ಜಿಲ್ಲೆಯಲ್ಲಿ ಆರಂಭಗೊಂಡು, ಸ್ಥಳೀಯ ಸಮಸ್ಯೆಗಳನ್ನು ಕೈಗೆತ್ತಿಕೊಂಡಿತು. ದೂರಗಾಮಿ ನೇತ್ಯಾತ್ಮಕ ಪರಿಣಾಮಗಳನ್ನು ಸೃಷ್ಟಿ ಮಾಡಹೊರಟ ವಿದೇಶಿ ಕಂಪನಿಗಳ ಆಗಮನವನ್ನು ವಿರೋಧಿಸಿತು. ಕರ್ನಾಟಕ ಪ್ರಾಂತ ರೈತ ಸಂಘ, ಕಿಸಾನ್ ಸಭಾ, ದಲಿತ ಸಂಘರ್ಷ ಸಮಿತಿ, ರೈತ ಕೂಲಿ ಕಾರ್ಮಿಕರ ಸಂಘ ಮುಂತಾದ ಸಂಘಟನೆಗಳು ರೈತರ ಸಮಸ್ಯೆಗಳಿಗೆ ಹೋರಾಟದ ದನಿಯಾದವು.

ಚಟುವಟಿಕೆ : ಬಾಗೂರು ನವಿಲೆ ಚಳವಳಿಯನ್ನು ಕುರಿತು ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿರಿ.



ಎಂ.ಡಿ. ನಂಜುಂಡ ಸ್ವಾಮಿ

ರೈತ ಚಳವಳಿಯ ಮುಖಂಡರಲ್ಲಿ ಎಂ.ಡಿ. ನಂಜುಂಡಸ್ವಾಮಿ, ಸುಂದರೇಶ್, ಪುಟ್ಟಣ್ಣಯ್ಯ, ಕಡಿದಾಳು ಶಾಮಣ್ಣ ಮೊದಲಾದವರು ಪ್ರಮುಖರಾಗಿದ್ದಾರೆ.

4. ದಲಿತ ಚಳಚಳಿ

ಪ್ರಸಿದ್ಧ ಮನಃಶಾಸ್ತ್ರಜ್ಞ ಆರ್.ಡಿ. ಲಿಯಾಂಗ್ ಒಂದು ಅದ್ಭುತವಾದ ಮಾತನ್ನು ದಾಖಲಿಸುತ್ತಾರೆ: "ಇತರರ ಅನುಭವವನ್ನು ನೀವು ಅರ್ಥಮಾಡಿಕೊಳ್ಳಲು ಸಾಧ್ಯವಿದೆ. ಆದರೆ ಆ ಅನುಭವವನ್ನು ನೀವು ಅನುಭವಿಸಲು ಸಾಧ್ಯವೇ ಇಲ್ಲ". ದಲಿತ ಮತ್ತು ಮಹಿಳಾ ನೆಲೆಗಳಿಗೆ ಇದು ಅಕ್ಷರಶಃ ಅನ್ವಯವಾಗುತ್ತದೆ. ದಲಿತರಿಗೆ ವರ್ಣವ್ಯವಸ್ಥೆಯಲ್ಲೂ ಸ್ಥಾನವಿರಲಿಲ್ಲ. ಅವರು ಶೂದ್ರಾತಿ ಶೂದ್ರರಾಗಿದ್ದರು. ಸಾಮಾಜಿಕವಾಗಿ ಯಾವುದೇ ಸ್ಥಾನವನ್ನು ಹೊಂದಿರದ ಅಸ್ಪೃಶ್ಯ ಜಾತಿಗಳಲ್ಲಿ ಹುಟ್ಟಿದ ಒಂದೇ ಕಾರಣಕ್ಕಾಗಿ ಈ ಸಮುದಾಯ ಸಮಾಜದ ಮುಖ್ಯ ವಾಹಿನಿಯಿಂದ ಹೊರಗುಳಿಯಿತು. ಇದರ ವಿರುದ್ಧ ನಡೆದ ಅನೇಕ ಹೋರಾಟಗಳನ್ನು ಚರಿತ್ರೆಯ ಉದ್ದಕ್ಕೂ ನಾವು ಕಾಣುತ್ತೇವೆ. ಆದರೆ ವಸಾಹತುಶಾಹಿ ಕಾಲಘಟ್ಟದಲ್ಲಿ ದಲಿತರಿಗೆ ಸಂಬಂಧಿಸಿದ ವಿಷಯಗಳು ರಾಷ್ಟ್ರೀಯ ಹಂತದಲ್ಲಿ ಚರ್ಚೆ, ಸಂವಾದಗಳಿಗೆ ಒಳಗಾದವು. ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ನಡುವಿನ 1930ರ ದಶಕದ ಚರ್ಚೆಗಳೇ ಇದಕ್ಕೆ ಪ್ರಮುಖ ಸಾಕ್ಷಿ. ಇಬ್ಬರ ಗುರಿ ಒಂದೇ ಆದರೂ ಸಾಗಿದ ಮಾರ್ಗಗಳು ಬೇರೆಯಾಗಿದ್ದವು.

ಸ್ವಾಮಿ ವಿವೇಕಾನಂದರ ಮೈಸೂರಿನ ಭೇಟಿಯ ನಂತರ ಅವರ ಸಲಹೆಯ ಮೇರೆಗೆ ದಲಿತ ವರ್ಗದ ಪ್ರಮುಖ ಪ್ರಶ್ನೆಗಳನ್ನು ಅಂದಿನ ಮೈಸೂರಿನ ಮಹಾರಾಜರಾದ ಹತ್ತನೇ ಚಾಮರಾಜ ಒಡೆಯರು ಗಂಭೀರವಾಗಿ ಪರಿಗಣಿಸಿ ದಲಿತರಿಗೆ ಪ್ರತ್ಯೇಕ ಶಾಲೆಗಳನ್ನು ತೆರೆದರು.

1936ರಲ್ಲಿ ದಕ್ಷಿಣ ಭಾರತದ ದಲಿತ ನಾಯಕರಲ್ಲಿ ಪ್ರಮುಖರಾದ ಎಂ.ಸಿ. ರಾಜಾ ಅವರ ಸಮ್ಮುಖದಲ್ಲಿ ಮೈಸೂರು ಅರಮನೆಗೆ ದಲಿತರ ಪ್ರವೇಶವಾಯಿತು.

ಹಿಂದೆ ದಲಿತರ ಪರವಾಗಿ ಬಹುತೇಕ ದಲಿತೇತರರು ಹೋರಾಟ ಮಾಡಿದರು. ಈಗ ದಲಿತರೇ ತಮ್ಮ ಸಮಸ್ಯೆಗಳನ್ನು ತಾವೇ ಪ್ರತಿನಿಧಿಸತೊಡಗಿದ್ದಾರೆ. ಇವರಿಗೆ ಮೂಲ ಸ್ಫೂರ್ತಿ ಅಂಬೇಡ್ಕರರ ಸೈದ್ಧಾಂತಿಕ ನಿಲುವುಗಳು. ಶಿಕ್ಷಣ, ಸಂಘಟನೆ ಮತ್ತು ಹೋರಾಟಗಳು ದಲಿತ ಚಳವಳಿಗಳ ಬೀಜಮಂತ್ರಗಳಾದವು. ದಲಿತರ ಸಮಸ್ಯೆಗಳ ಪರಿಹಾರಕ್ಕೆ ರಾಜಕೀಯ ಸಾಧನೆಯನ್ನು ತಮ್ಮ ಧ್ಯೇಯವಾಗಿಸಿಕೊಂಡು ಸಂಘಟನಾತ್ಮಕವಾಗಿ ಜಾಗೃತರಾಗತೊಡಗಿದರು.

ದಲಿತ ವರ್ಗಗಳಲ್ಲಿ ಅಂಬೇಡ್ಕರರು ಅವರ ಸ್ವಾಭಿಮಾನದ ಸಂಕೇತವಾದರಲ್ಲದೆ 'ದಲಿತ ಸೂರ್ಯ' ಎಂಬ ಕೀರ್ತಿಗೆ ಪಾತ್ರರಾದರು. ಈ ಎಲ್ಲ ಬೆಳವಣಿಗೆಗಳ ಪ್ರತಿಧ್ವನಿಗಳು ಕರ್ನಾಟಕದಲ್ಲಿ ಮೊಳಗುವಂತಾಯಿತು.

ಇಪ್ಪತ್ತನೇ ಶತಮಾನದಲ್ಲಿ ಹುಟ್ಟಿ ಬೆಳೆದ ಬ್ರಾಹ್ಮಣೇತರ ಚಳವಳಿಗಳು ದಲಿತರನ್ನು ಹೆಚ್ಚು ಒಳಗೊಳ್ಳಲಿಲ್ಲ. ಇದನ್ನು ಪ್ರಶ್ನಿಸುತ್ತಾ 1970ರ ದಶಕದಲ್ಲಿ 'ದಲಿತ ಚಳವಳಿ'ಯು ರೂಪುಗೊಂಡು ಒಂದು ನಿರ್ಣಾಯಕ ಶಕ್ತಿಯಾಗಿ ಬೆಳೆಯಿತು. ಹೈದರಾಬಾದ್‌ಕರ್ನಾಟಕ ಪ್ರದೇಶದಲ್ಲಿ ಶಾಮಸುಂದರ್ ಅವರು 1970ರಲ್ಲಿ ಭೀಮಸೇನಾ ಸಂಘಟನೆಯನ್ನು ಹುಟ್ಟುಹಾಕಿದರು. ದಲಿತ ಚಳವಳಿಗೆ ಒಂದು ಹೊಸ ತಿರುವನ್ನು ಕೊಟ್ಟಿದ್ದು 'ಬಸವಲಿಂಗಪ್ಪ ಬೂಸಾ ಪ್ರಕರಣ' (1973).

ಸಚಿವರಾಗಿದ್ದ ಬಸವಲಿಂಗಪ್ಪನವರು ಮೈಸೂರಿನ ಕಾರ್ಯಕ್ರಮವೊಂದರಲ್ಲಿ ಕನ್ನಡ ಸಾಹಿತ್ಯ ಬೂಸಾ ಸಾಹಿತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು. ಇದರ ವಿರುದ್ಧವಾಗಿ ಕರ್ನಾಟಕದಾದ್ಯಂತ ಹೋರಾಟಗಳಾದವು. ಕೊನೆಗೆ ಬಸವಲಿಂಗಪ್ಪನವರು ಮಂತ್ರಿ ಪದವಿಗೆ ರಾಜೀನಾಮೆ ಸಲ್ಲಿಸಿದರು. ಈ ಪ್ರಕರಣ ಕ್ರಮೇಣ ದಲಿತ ಪ್ರಜ್ಞೆಯನ್ನು ತೀವ್ರವಾಗಿ ಬೆಳೆಸಲು ಕಾರಣವಾಯಿತು.

ಅನಂತರ 1976ರಲ್ಲಿ ಭದ್ರಾವತಿಯಲ್ಲಿ 'ದಲಿತ ಲೇಖಕ ಕಲಾವಿದರ ಒಕ್ಕೂಟ' ಸ್ಥಾಪನೆಯಾಯಿತು. ಕರ್ನಾಟಕದ ದಲಿತ ಚಳವಳಿಯ ಆರಂಭದ ಗಟ್ಟಿ ಹೆಜ್ಜೆಯನ್ನು ಈ ಒಕ್ಕೂಟದ ಪ್ರಾರಂಭದಲ್ಲಿ ಕಾಣಬಹುದು. ಮುಂದೆ ಇದರ ಆಶ್ರಯದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸ್ಥಾಪನೆಗೊಂಡಿತು. ಪ್ರೊ. ಬಿ. ಕೃಷ್ಣಪ್ಪ ಅದರ ರಾಜ್ಯ ಸಂಚಾಲಕರಾದರು. ಹೀಗೆ ಡಿ.ಎಸ್.ಎಸ್. ಒಂದು ಸಾಂಸ್ಥಿಕ ರೂಪ ಪಡೆಯಿತು.

ಕ್ರಮೇಣ ದಲಿತ ಸಂಘರ್ಷ ಸಮಿತಿಯು ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು. ನೌಕರರು, ಮಹಿಳೆಯರು, ಪೌರಕಾರ್ಮಿಕರು, ವಿದ್ಯಾರ್ಥಿಗಳು ಮತ್ತು ಲೇಖಕರು ಹಾಗೂ ಕಲಾವಿದರ ಒಕ್ಕೂಟಗಳೆಂಬ ಅದರ ಶಾಖೆಗಳು ಆರಂಭಗೊಂಡವು. ಪಾರಂಪರಿಕವಾಗಿ ಭೂಮಿಯೇ ಇಲ್ಲದಿದ್ದ ದಲಿತರು ಭೂಮಿಯನ್ನು ಪಡೆಯುವ ಹೋರಾಟವನ್ನು ಆರಂಭಿಸಿದರು. ಶೈಕ್ಷಣಿಕ ಪ್ರಗತಿಯನ್ನು ಸಾಧಿಸುವ ಮೂಲಕ ಆಧಿಕಾರದ ಕೇಂದ್ರಗಳಿಗೆ ಪ್ರವೇಶ ಪಡೆಯುವುದು ದಲಿತ ಚಳವಳಿಯ ಮತ್ತೊಂದು ಕಾರ್ಯಸೂಚಿಯಾಗಿತ್ತು. ಆದರೆ ಕಾಲಕ್ರಮೇಣ ದಲಿತ ಸಂಘರ್ಷ ಚಳವಳಿಯಲ್ಲಿ ಬಿರುಕುಗಳು ಕಾಣಿಸಲಾರಂಭಿಸಿದವು. ಬೇರೆ ಬೇರೆ ಹೆಸರುಗಳಲ್ಲಿ ಹೊಸ ಸಂಘಟನೆಗಳು ಹುಟ್ಟಿಕೊಂಡವು.

ಚಟುವಟಿಕೆ: ದೇವನೂರು ಮಹಾದೇವ ಮತ್ತು ಸಿದ್ಧಲಿಂಗಯ್ಯನವರ ಕೃತಿಗಳನ್ನು ಕುರಿತು ಹೆಚ್ಚಿನ ಮಾಹಿತಿ ಸಂಗ್ರಹಿಸಿರಿ.

ಸಾಹಿತಿಗಳಾದ ದೇವನೂರು ಮಹಾದೇವ ಮತ್ತು ಸಿದ್ಧಲಿಂಗಯ್ಯನವರು ಸಾಹಿತ್ಯದ ಮೂಲಕ ದಲಿತರ ಒಳಜಗತ್ತನ್ನು ದಲಿತೇತರಿಗೆ ತೆರೆದುಕೊಟ್ಟರು. ಇತರ ದಲಿತ ಲೇಖಕರು ಈ ಸಮುದಾಯಗಳು ಜಾಗತೀಕರಣದ ಹಿನ್ನೆಲೆಯಲ್ಲಿ ಎದುರಿಸುತ್ತಿರುವ ಸವಾಲುಗಳನ್ನು ಅನಾವರಣ ಮಾಡುತ್ತಿದ್ದಾರೆ. ಇಂದು ದಲಿತರು ಸಮಾಜದ ಎಲ್ಲ ಆಗುಹೋಗುಗಳಲ್ಲಿ ನಿರ್ಣಾಯಕ ಪಾತ್ರವಹಿಸುವ ಸಾಮರ್ಥ್ಯವನ್ನು ತೋರುತ್ತಿದ್ದಾರೆ. ಆದರೆ ಸಾಗಬೇಕಾದ ದಾರಿ ಬಹಳಷ್ಟಿದೆ.

5. ಕನ್ನಡ ಉಳಿಸಿ ಚಳವಳಿ ಅಥವಾ ಕನ್ನಡ ಕಾವಲು ಚಳವಳಿ

ಏಕೀಕರಣ ಚಳವಳಿಯು ಕನ್ನಡಿಗರಲ್ಲಿ ಆತ್ಮವಿಶ್ವಾಸ ಮತ್ತು ಅನ್ಯೋನ್ಯತೆಯನ್ನು ತಂದಿತು. ಸಾಹಿತ್ಯ ಸೃಷ್ಟಿಯ ಮೂಲಕ ಕನ್ನಡದ ಲೇಖಕರು ಜನರ ಕನ್ನಡತನವನ್ನು ಜೀವಂತವಾಗಿ ಇಟ್ಟಿದ್ದರು. ಈ ನಿಟ್ಟಿನಲ್ಲಿ ಸಾಂಸ್ಕೃತಿಕ ಹಾಗೂ ಕನ್ನಡಪರ ಸಂಘಟನೆಗಳ ಪಾತ್ರ ಹಿರಿದಾಗಿದೆ. 1960ರ ದಶಕದ ನಂತರ ಬೆಂಗಳೂರಿನಲ್ಲಿ ಅನ್ಯಭಾಷಿಕರ ಅಬ್ಬರ ಹೆಚ್ಚಾದಾಗ ಅ.ನ.ಕೃ., ಚಿದಾನಂದಮೂರ್ತಿ, ಮ. ರಾಮಮೂರ್ತಿ, ವಾಟಾಳ ನಾಗರಾಜ್ ಮುಂತಾದವರು ಹಾಗೂ ಕರ್ನಾಟಕ ಯುವಜನ ಸಭಾ, ಕನ್ನಡ ಜಾಗೃತ ಪರಿಷತ್, ಕನ್ನಡ ಶಕ್ತಿಕೇಂದ್ರ ಮುಂತಾದ ಸಂಘಟನೆಗಳು ಕನ್ನಡ, ಕನ್ನಡಿಗ ಮತ್ತು ಕರ್ನಾಟಕದ ಮೇಲ್ಗೈಯನ್ನು ಸಾಧಿಸುವಲ್ಲಿ ಸಫಲರಾದರು. ಇವಲ್ಲದೆ ಇನ್ನೂ ಅನೇಕ ಕನ್ನಡಪರ ಸಂಘಟನೆಗಳು ಇಂದು ಕನ್ನಡ ನೆಲ, ಜಲ ಮತ್ತು ಭಾಷೆಯ ಸಂರಕ್ಷಣೆಯ ವಿಷಯದಲ್ಲಿ ಹೆಚ್ಚು ಕ್ರಿಯಾಶೀಲವಾಗಿವೆ.

6. ಗೋಕಾಕ್ ಚಳವಳಿ

ಒಂದರ್ಥದಲ್ಲಿ 1980ರ ದಶಕವು ಕನ್ನಡ ಭಾಷೆಯ ಅಸ್ತಿತ್ವಕ್ಕೆ ನಡೆದ ಹೋರಾಟದ ಕಾಲ. 1982ರಲ್ಲಿ ಗೋಕಾಕ ವರದಿಯ ಅನುಷ್ಠಾನಕ್ಕಾಗಿ ಒಂದು ನಿರ್ಣಾಯಕ ಚಾರಿತ್ರಿಕ ಹೋರಾಟ ಪ್ರಾರಂಭವಾಯಿತು. ಇಡೀ ಕನ್ನಡ ಸಮುದಾಯ ಅಭೂತಪೂರ್ವ ರೀತಿಯಲ್ಲಿ ಈ ಹೋರಾಟವನ್ನು ನಡೆಸಿತು. ಕರ್ನಾಟಕದಲ್ಲಿದ್ದ ಭಾಷಾ ಅಲ್ಪಸಂಖ್ಯಾತರು ಕನ್ನಡವನ್ನು ಕಡ್ಡಾಯವಾಗಿ ಕಲಿಯದೆ ಅವರ ಮಾತೃಭಾಷೆಯಲ್ಲೇ ಶಿಕ್ಷಣ ಪಡೆಯುತ್ತೇವೆಂಬ ಹಠಕ್ಕೆ ಬಿದ್ದರು. ಅಂದಿನ ಮುಖ್ಯಮಂತ್ರಿಗಳಾದ ಆರ್. ಗುಂಡೂರಾಯರು ಉಡುಪಿಗೆ ಹೋಗಿದ್ದ ಸಂದರ್ಭದಲ್ಲಿ ಅಲ್ಲಿಯ ಮಠಾಧಿಪತಿಗಳು ಸಂಸ್ಕೃತಕ್ಕೆ ಪ್ರಾಶಸ್ತ್ಯ ಕೊಡಬೇಕೆಂದು ಒತ್ತಾಯಿಸಿದರು. ಇದರ ಪರಿಣಾಮವಾಗಿ ಶಿಕ್ಷಣ ಯಾವ ಮಾಧ್ಯಮದಲ್ಲಿ ಇರಬೇಕು ಎನ್ನುವ ಪ್ರಶ್ನೆಯನ್ನು ಬಿಟ್ಟು ಶಿಕ್ಷಣದಲ್ಲಿ ಭಾಷೆಗಳ ಸ್ಥಾನಗಳು ಹೇಗಿರಬೇಕು ಎಂಬುದನ್ನು ನಿರ್ಧರಿಸಲು ಒಂದು ಸಮಿತಿ ರಚನೆಯಾಯಿತು. ಡಾ. ವಿನಾಯಕ ಕೃಷ್ಣ ಗೋಕಾಕರ ಅಧ್ಯಕ್ಷತೆಯಲ್ಲಿ ಭಾಷಾ ಸಮಿತಿ ರಚನೆಯಾಯಿತು. ಈ ಸಮಿತಿಯು ಕನ್ನಡ ಭಾಷೆಗೆ ಪ್ರಥಮ ಆದ್ಯತೆ ಮತ್ತು ಕಡ್ಡಾಯ ಮಾಡಬೇಕೆಂದು ಶಿಫಾರಸು ಮಾಡಿತು. ಈ ಸಮಿತಿಯು ತ್ರಿಭಾಷಾ ಸೂತ್ರಕ್ಕೆ 350 ಅಂಕಗಳನ್ನು ನಿಗದಿಪಡಿಸಿತು. ತ್ರಿಭಾಷಾ ಪರೀಕ್ಷೆಯಲ್ಲಿ ಕನ್ನಡವು 150 ಅಂಕಗಳ ಪ್ರಥಮ ಭಾಷೆ ಆಗಿರಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಿತು.

ಗೋಕಾಕ್ ವರದಿಯನ್ನು ಅಂದಿನ ಸರಕಾರ ಒಪ್ಪಲಿಲ್ಲ. ಡಾ. ರಾಜಕುಮಾರ್ ಅವರ ನೇತೃತ್ವದಲ್ಲಿ ಕರ್ನಾಟಕದಾದ್ಯಂತ ಬೃಹತ್ ಆಂದೋಲನ ನಡೆಯಿತು. ಕುವೆಂಪು, ಪಾಟೀಲ ಪುಟ್ಟಪ್ಪ ಮುಂತಾದ ಹಿರಿಯ ಸಾಹಿತಿಗಳು ಈ ಹೋರಾಟಕ್ಕೆ ಬೆಂಬಲವನ್ನು ನೀಡಿದರು.

ಗೋಕಾಕ್ ಚಳವಳಿಯ ಪ್ರಮುಖ ಘೋಷಣೆಗಳೆಂದರೆ "ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ", "ಏನೇ ಬರಲಿ ಕನ್ನಡ ಇರಲಿ", "ಗೋಕಾಕ್ ವರದಿ ಜಾರಿಗೆ ಬರಲಿ", "ಕರ್ನಾಟಕದಲ್ಲಿ ಕನ್ನಡದ ಉಸಿರು ತುಂಬಲಿ", ಮುಂತಾದವು.

ವಿನಾಯಕ ಕೃಷ್ಣ ಗೋಕಾಕ್

ಡಾ॥ ರಾಜ್ ಕುಮಾರ್

ಚಟುವಟಿಕೆ : ಗೋಕಾಕ್ ವರದಿಯ ಶಿಫಾರಸುಗಳನ್ನು ಕುರಿತು ಹೆಚ್ಚಿನ ಮಾಹಿತಿ ಸಂಗ್ರಹಿಸಿರಿ.

7. ಪಂಚಾಯತ್ ರಾಜ್ ವ್ಯವಸ್ಥೆ

ಪಂಚಾಯತ್ ರಾಜ್ ವ್ಯವಸ್ಥೆಯನ್ನು ಆಡಳಿತದ ವಿಕೇಂದ್ರೀಕರಣ ವ್ಯವಸ್ಥೆ ಎಂದು ಸರಳ ಭಾಷೆಯಲ್ಲಿ ಹೇಳಬಹುದು. ಸ್ಥಳೀಯರಿಗೆ ಆಡಳಿತದಲ್ಲಿ ಭಾಗವಹಿಸುವ ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು ಕೊಡುವುದೇ ಈ ವ್ಯವಸ್ಥೆಯ ಕೇಂದ್ರ ಆಶಯ. ಭಾರತಕ್ಕೆ ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಯ ಪರಿಚಯವಿದ್ದರೂ ಸ್ವಾತಂತ್ರ್ಯಾನಂತರ ಅದಕ್ಕೆ ಸಂವಿಧಾನಾತ್ಮಕ ರೂಪಕೊಡುವ ಕಾರ್ಯ ಚಾಲನೆಗೆ ಬಂದಿತು. ಕೇಂದ್ರ ಸರಕಾರವು 1955ರಲ್ಲಿ ಬಲವಂತರಾಯ್ ಮೆಹತಾ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತು. ಸಮಿತಿಯು ಮೂರು ಹಂತದ ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಶಿಫಾರಸು ಮಾಡಿತು.

ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ಅಂದಿನ ರಾಜ್ಯ ಸರಕಾರವು ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ಆಶಯಕ್ಕನುಗುಣವಾಗಿ 1959ರಲ್ಲಿ ಮೈಸೂರು ಗ್ರಾಮ ಪಂಚಾಯಿತಿಗಳ ಅಧಿನಿಯಮವನ್ನು ಜಾರಿಗೊಳಿಸಿತು. ತನ್ಮೂಲಕ ಕರ್ನಾಟಕದಲ್ಲಿ ಪ್ರಜಾಸತ್ತಾತ್ಮಕ ಸಂಸ್ಥೆಗಳಿಗೆ ಖಾಯಂ ನೆಲೆಯನ್ನು ಕಲ್ಪಿಸಿತು. ಹೊಸ ಕಾನೂನಿನ ಪ್ರಕಾರ ಆಡಳಿತ ವ್ಯವಸ್ಥೆಯ ಮೂರು ಹಂತಗಳು ಇವಾಗಿವೆ.

- ಗ್ರಾಮ ಪಂಚಾಯತ್,
- ತಾಲ್ಲೂಕ್ ಪಂಚಾಯತ್, ಮತ್ತು
- ಜಿಲ್ಲಾ ಪಂಚಾಯತ್.

ಕರ್ನಾಟಕದಲ್ಲಿ 1983ರಲ್ಲಿ ಅಸ್ತಿತ್ವಕ್ಕೆ ಬಂದ ಜನತಾ ಸರಕಾರ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿತು. ಇದರ ರೂವಾರಿ ಅಂದಿನ ಪಂಚಾಯತ್ ರಾಜ್ ಖಾತೆ ಸಚಿವ ನಜೀರ್ ಸಾಬ್ ಅವರು. ದಲಿತ, ಹಿಂದುಳಿದ ಮತ್ತು ಮಹಿಳಾ ವರ್ಗಗಳಿಗೆ ಸ್ವಯಮಾಡಳಿತದಲ್ಲಿ ಪಾಲ್ಗೊಳ್ಳುವ ಹೆಚ್ಚಿನ ಅವಕಾಶವನ್ನು ಪಂಚಾಯತ್ ರಾಜ್ ವ್ಯವಸ್ಥೆ ಒದಗಿಸಿತು. ಈ ಹೊಸ ವ್ಯವಸ್ಥೆಯು ಕ್ರಮೇಣ ಕರ್ನಾಟಕದ ಸಾಮಾಜಿಕ ಮತ್ತು ರಾಜಕೀಯ ನಕ್ಷೆಯನ್ನೇ ಬದಲಿಸಿತು.

ನಜೀರ್ ಸಾಬ್

ಚಟುವಟಿಕೆ : ನಿಮ್ಮ ಊರಿನ ಗ್ರಾಮ ಪಂಚಾಯಿತಿಯ ರಚನೆ ಮತ್ತು ಕಾರ್ಯವ್ಯಾಪ್ತಿಯ ಬಗ್ಗೆ ಮಾಹಿತಿ ಸಂಗ್ರಹಿಸಿರಿ.

ಅಭ್ಯಾಸಗಳು

I ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ.

1. 'ತುಂಗಾಮೂಲವನ್ನು ಉಳಿಸಿ' ಆಂದೋಲನ ಏಕೆ ಆರಂಭವಾಯಿತು?
2. 'ಅಪ್ಪಿಕೋ' ಚಳವಳಿ ಎಂದರೇನು?
3. 'ಸಾಮಾಜಿಕ ಅರಣ್ಯ' ಎಂದರೇನು?
4. ಕರ್ನಾಟಕದ ಮೊದಲ ಮಹಿಳಾ ಬಿ.ಎ. ಆನರ್ಸ್ ಪದವೀಧರರು ಯಾರು?

II ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

1. ನಾವೇಕೆ ಪ್ರಾಚೀನ ಕೆರೆಗಳನ್ನು ಉಳಿಸಬೇಕು?
2. ಪ್ರಮುಖ ಪರಿಸರ ಚಳವಳಿಗಳನ್ನು ಹೆಸರಿಸಿರಿ.
3. ದಲಿತ ಚಳವಳಿ ಏಕೆ ಪ್ರಾರಂಭವಾಯಿತು?
4. ದಲಿತ ಚಳವಳಿಯ ಬೀಜಮಂತ್ರಗಳು ಯಾವುವು?
5. ಪಂಚಾಯತ್ ರಾಜ್ ವ್ಯವಸ್ಥೆ ಏಕೆ ಮಹತ್ವದ್ದಾಗಿದೆ?

III ಚರ್ಚಿಸಿರಿ.

1. ನಿಮ್ಮ ಪ್ರದೇಶದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಿಂದ ಆಗಿರುವ ಸಾಮಾಜಿಕ ಆರ್ಥಿಕ ಬದಲಾವಣೆಗಳು.
2. ದಲಿತ ಚಳವಳಿಗಳ ಸಾಧನೆಗಳು.

ಚಟುವಟಿಕೆ

ಶಾಲೆಯಲ್ಲಿ ಗ್ರಾಮ ಪಂಚಾಯಿತಿಯ ಮಾದರಿ ಸಭೆಯನ್ನು ಏರ್ಪಡಿಸುವುದು. (ಶಿಕ್ಷಕರ ನೆರವನ್ನು ಪಡೆಯಿರಿ).

☆ ☆ ☆

ಪಾಠ 07	ಕರ್ನಾಟಕದ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆ

ಪಾಠದ ಪರಿಚಯ

ಈ ಪಾಠದಲ್ಲಿ ಕರ್ನಾಟಕದಲ್ಲಿ ಸ್ವಾತಂತ್ರ್ಯಾನಂತರದ ಕಾಲಘಟ್ಟದಲ್ಲಿ ಆದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಮೂಲ ಅಂಶಗಳನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ.

ಕೆಲವು ವರ್ಗಗಳು ಅಭಿವೃದ್ಧಿಯ ಸಿಂಹಪಾಲನ್ನು ಪಡೆದರೆ ಉಳಿದವು ವಿವಿಧ ಕಾರಣಗಳಿಗಾಗಿ ಅಭಿವೃದ್ಧಿಯಿಂದ ದೂರ ಉಳಿದಿವೆ. ಇದರ ಪರಿಣಾಮವೇ ಸಾಮಾಜಿಕ ಅಸಮತೋಲನ. ಇದನ್ನು ಹೋಗಲಾಡಿಸಲು ಸಂವಿಧಾನದ ಆಶಯಗಳ ಚೌಕಟ್ಟಿನಲ್ಲಿ ಸರ್ಕಾರವು ಭೂಸುಧಾರಣೆಗಳು, ಹಿಂದುಳಿದ ವರ್ಗಗಳ ಆಯೋಗಗಳ ನೇಮಕಾತಿ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಸಾಮರ್ಥ್ಯಗಳು

1] ಸ್ವಾತಂತ್ರ್ಯದ ನಂತರ ಕರ್ನಾಟಕದಲ್ಲಿ ಆಗಿರುವ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳ ಸಾಧನೆಯನ್ನು ತಿಳಿಯುವರು.

2] ಭೂಸುಧಾರಣೆ ಕಾಯಿದೆಯ ಉದ್ದೇಶ ಹಾಗೂ ಪರಿಣಾಮಗಳನ್ನು ಅರ್ಥೈಸಿಕೊಳ್ಳುವರು.

3] ಹಿಂದುಳಿದ ವರ್ಗಗಳ ಆಯೋಗಗಳು ನೀಡಿರುವ ಕೊಡುಗೆಗಳನ್ನು ಮೆಚ್ಚುವರು.

1 ಭೂಸುಧಾರಣೆ

ಭೂಮಿಯ ಹಿಡುವಳಿಗಳಲ್ಲಿ ಇರುವ ಸಮಸ್ಯೆಗಳನ್ನು ಹೋಗಲಾಡಿಸಲು ಜಾರಿಗೊಳಿಸಲಾಗಿರುವ ಕ್ರಮಗಳನ್ನು ಭೂಸುಧಾರಣೆ ಎನ್ನುವರು. ಭೂಮಿಯು ಮನುಷ್ಯನ ಬದುಕಿನ ಅವಿಭಾಜ್ಯ ಅಂಗ. ಅವನು ತನ್ನ ಬದುಕನ್ನು ರೂಪಿಸಿಕೊಳ್ಳಲು ಭೂಮಿಯನ್ನು ಅವಲಂಬಿಸಿದ್ದಾನೆ. ಆದರೆ ಭೂಮಿಯು ಎಲ್ಲಾ ಸಮುದಾಯಗಳಿಗೆ ಸಮಾನವಾಗಿ ಹಂಚಿಕೆಯಾಗಿಲ್ಲ. ಈ ಭೂಒಡೆತನದಲ್ಲಿರುವ ಅಸಮಾನತೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಭೂಸುಧಾರಣೆಯನ್ನು ಕೈಗೊಳ್ಳಲಾಯಿತು.

ಹಿಂದೆ ಭೂಮಾಲಿಕರ ಪರವಾದ ಕಾನೂನುಗಳು ಇದ್ದವೇ ವಿನಹ ಗೇಣಿದಾರನ ಪರವಾದ ಕಾನೂನುಗಳು ಇರಲಿಲ್ಲ. ಇದರಿಂದ ಸಂಪತ್ತಿನ ಕ್ರೋಢೀಕರಣ ಮತ್ತು ಹಂಚಿಕೆಯಲ್ಲಿ ಗಣನೀಯ ಅಸಮತೋಲನ ಏರ್ಪಟ್ಟಿತು. ಭೂಸುಧಾರಣೆಯ ಮೂಲಕ ಸಮ ಸಮಾಜವನ್ನು ರೂಪಿಸುವ ಪ್ರಯತ್ನವನ್ನು 1970ರ ದಶಕದಲ್ಲಿ ಕಾಣುತ್ತೇವೆ. ಕೂಲಿ ರೈತರ ಮತ್ತು ದಲಿತ ಚಳವಳಿಗಳ ಪರಿಣಾಮವಾಗಿ ಭೂಹಂಚಿಕೆಯ ಪ್ರಶ್ನೆಗಳು ಉದ್ಭವಿಸಿದವು. ಭೂಹೀನ ಕೆಳ ಸಮುದಾಯಗಳಿಗೆ ಭೂಮಿಯನ್ನು ನೀಡಬೇಕೆಂದು ಆಗ್ರಹಿಸಿ ಅನೇಕ ಹೋರಾಟಗಳು ನಡೆದವು. ಇದರ ಪರಿಣಾಮವಾಗಿ ಭೂಸುಧಾರಣೆಗಳು ಜಾರಿಯಾದವು. ಈ ಸುಧಾರಣೆಗಳ ಪ್ರಮುಖ ಅಂಶಗಳು ಇವಾಗಿವೆ.

1. ಜಮೀನ್ದಾರಿ ಪದ್ಧತಿಯ ನಿರ್ಮೂಲನ

ಭೂಮಿಯ ಮೇಲಿನ ಭೂಮಾಲೀಕ ವರ್ಗದ ಹಿಡಿತವನ್ನು ಮಿತಿಗೊಳಿಸುವುದು ಈ ಕ್ರಮದ ಉದ್ದೇಶವಾಗಿದೆ. 1955ರಲ್ಲಿ ಭಾರತದ ಮಾಜಿ ಉಪರಾಷ್ಟ್ರಪತಿ ಬಿ.ಡಿ. ಜತ್ತಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು ಭೂಸುಧಾರಣೆಯನ್ನು ಕೈಗೊಳ್ಳುವ ಹಿನ್ನೆಲೆಯಲ್ಲಿ ಕೆಲವು ಶಿಫಾರಸುಗಳನ್ನು ಮಾಡಿತು. ಈ ಸಮಿತಿಯು ಪ್ರತಿ ಕುಟುಂಬಕ್ಕೆ ಗರಿಷ್ಠ ಪ್ರಮಾಣ, ಅಂದರೆ 116 ಎಕರೆ ಒಣ ಭೂಮಿಯನ್ನು ಅಥವಾ 27 ಎಕರೆ ನೀರಾವರಿ ಭೂಮಿಯನ್ನು ಹೊಂದಬಹುದೆಂದು ಶಿಫಾರಸು ಮಾಡಿತು. ಈ ಶಿಫಾರಸುಗಳು ಉಳ್ಳವರ ಪರವಾಗಿದ್ದವು. 1957ರಲ್ಲಿ ಜಾರಿಗೊಂಡ ಈ ಶಿಫಾರಸುಗಳು ಇದ್ದ ವ್ಯವಸ್ಥೆಯನ್ನು ನಿರ್ಣಾಯಕವಾಗಿ ಬದಲಾಯಿಸಲು ಸಾಧ್ಯವಾಗಲಿಲ್ಲ. 1974ರ ಭೂಸುಧಾರಣೆ ಕಾನೂನುಗಳು ಈ ಪದ್ಧತಿಯನ್ನು ಹೋಗಲಾಡಿಸುವಲ್ಲಿ ನಿರ್ಣಾಯಕವಾದವು.

ಒಂದು ಎಕರೆಗೆ 100 ಸೆಂಟ್ಸ್ ಅಥವಾ 40 ಗುಂಟೆ.

2. ಗೇಣಿ ಪದ್ಧತಿಯಲ್ಲಿ ಸುಧಾರಣೆ

ಭಾರತದ ಗೇಣಿದಾರರು ಅನೇಕ ಸಮಸ್ಯೆಯನ್ನು ಎದುರಿಸುತ್ತಿದ್ದರು. ಅವುಗಳೆಂದರೆ ಹೆಚ್ಚಿನ ಪ್ರಮಾಣದ ಗೇಣಿ, ಭೂಹಿಡುವಳಿಯಲ್ಲಿ ಅಭದ್ರತೆ ಮತ್ತು ಒಡೆತನವಿಲ್ಲದ ಭೂಹೀನ ಸ್ಥಿತಿ. ಈ ಸಮಸ್ಯೆಯನ್ನು ಹೋಗಲಾಡಿಸಲು 1974ರಲ್ಲಿ ಮುಖ್ಯಮಂತ್ರಿ ಡಿ. ದೇವರಾಜ ಅರಸ್ ಅವರು ಭೂಹಿಡುವಳಿ ಬಗ್ಗೆ ಕ್ರಾಂತಿಕಾರಕ ಕಾನೂನನ್ನು ಕರ್ನಾಟಕದಲ್ಲಿ ಜಾರಿಗೊಳಿಸಿದರು. ತಲೆಮಾರುಗಳಿಂದ ಗೇಣಿಯನ್ನು ಮಾಡುತ್ತಿದ್ದ ಅನೇಕ ಭೂಹೀನರು ನವಭೂಮಾಲೀಕರಾದರು.

1974ರ ಭೂಸುಧಾರಣಾ (ತಿದ್ದುಪಡಿ) ಕಾಯ್ದೆಯ ಪ್ರಮುಖ ಅಂಶಗಳು

1. ಅದು ಎಲ್ಲ ರೀತಿಯ ಗೇಣಿಯನ್ನು ರದ್ದುಗೊಳಿಸಿತು.
2. ರೈತನಿಗೆ ತಾನು ಉಳುಮೆ ಮಾಡುತ್ತಿದ್ದ ಭೂಮಿಯ ಮೇಲೆ ತನ್ನ ಹಕ್ಕನ್ನು ಸ್ಥಾಪಿಸಲು ಅವಕಾಶ ನೀಡಲಾಯಿತು.
3. ಗೇಣಿಯ ಎಲ್ಲ ಭೂಮಿಯು ಸರಕಾರದ ಸ್ವಾಧೀನಕ್ಕೆ ಸೇರಿತು. ಭೂಮಿಯ ಮೇಲೆ ಹಕ್ಕನ್ನು ಪಡೆಯಬಯಸುವವರು ಮತ್ತು ಪರಿಹಾರ ಪಡೆಯಬೇಕಾದವರು ನ್ಯಾಯಮಂಡಳಿಯ (ಟ್ರಿಬ್ಯೂನಲ್) ಮೂಲಕ ಅರ್ಜಿ ಹಾಕಬೇಕಿತ್ತು.
4. ನ್ಯಾಯಮಂಡಳಿಯ ನಿರ್ಧಾರ ಅಂತಿಮವಾಗಿತ್ತು. ಅದರ ನಿರ್ಧಾರವನ್ನು ಉಚ್ಚ ನ್ಯಾಯಾಲಯದಲ್ಲಿ ಮಾತ್ರ ಪ್ರಶ್ನಿಸಬಹುದಾಗಿತ್ತು.

3. ಗರಿಷ್ಠ ಹಿಡುವಳಿಯ ಮಿತಿ

1957ರ ನಂತರದಲ್ಲಿ ಆದ ಪ್ರಮುಖ ಪ್ರಯತ್ನಗಳು 1970ರ ದಶಕದಲ್ಲಿ ನಡೆದವು. ಒಂದು ಕುಟುಂಬ ಹೊಂದಬಹುದಾದ ಭೂಮಿಯ ಗರಿಷ್ಠ ಮಿತಿಯನ್ನು ಅಂದಿನ ರಾಜ್ಯ ಸರ್ಕಾರ ನಿಗದಿಪಡಿಸಿತು.

1974ರಲ್ಲಿ ಭೂಮಿಯ ಗರಿಷ್ಠ ಮಿತಿಯನ್ನು ಈ ಕೆಳಕಂಡಂತೆ ನಿಗದಿಪಡಿಸಲಾಯಿತು. ನೀರಿನ ಸೌಕರ್ಯವಿಲ್ಲದ ಖುಷ್ಕಿ ಭೂಮಿಯಾಗಿದ್ದರೆ ಅದರ ಮಿತಿ ಒಂದು ಕುಟುಂಬಕ್ಕೆ 54 ಎಕರೆಗಳಾಗಿರಬೇಕು. ನೀರಾವರಿ ಸೌಕರ್ಯವಿದ್ದು ಎರಡು ಅಥವಾ ಅದಕ್ಕಿಂತ ಹೆಚ್ಚು ಬೆಳೆಗಳನ್ನು ಬೆಳೆಯುತ್ತಿದ್ದರೆ ಪ್ರತಿ ಕುಟುಂಬಕ್ಕೆ 10ರಿಂದ 18ಎಕರೆಗಳು. ಒಂದು ಬೆಳೆ ತೆಗೆಯುವ ನೀರಾವರಿ ಭೂಮಿಯಾದರೆ ಒಂದು ಕುಟುಂಬಕ್ಕೆ ಗರಿಷ್ಠ 27 ಎಕರೆ ನಿಗದಿಪಡಿಸಲಾಗಿತ್ತು. ಜೊತೆಗೆ 1977ರಲ್ಲಿ ಇನಾಂ ರದ್ಧತಿ ಕಾಯ್ದೆ ಜಾರಿಗೆ ಬಂದಿತು.

ಇನಾಂ ರದ್ಧತಿ ಕಾಯ್ದೆಯ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿರಿ.

4. ಆರ್ಥಿಕ ಹಿಡುವಳಿಗಳ ರಚನೆ

ಯಾವ ಹಿಡುವಳಿಯಿಂದ ಬೇಸಾಯಗಾರನು ಬೇಸಾಯ ವೆಚ್ಚಗಳನ್ನು ಕಳೆದು ತನಗೂ ತನ್ನ ಕುಟುಂಬಕ್ಕೂ ನೆಮ್ಮದಿಯಾಗಿರಲು ಬೇಕಾದ ಆದಾಯ ಗಳಿಸಬಲ್ಲನೋ ಅಂತಹ ಜೀವನಾಧಾರ ಹಿಡುವಳಿಯನ್ನು 'ಆರ್ಥಿಕ ಹಿಡುವಳಿ' ಎನ್ನುತ್ತಾರೆ. ಹಿಡುವಳಿಗಳ ಕ್ರೋಢೀಕರಣ ಮತ್ತು ಗರಿಷ್ಠ ಪ್ರಮಾಣದ ಮಿತಿಯಿಂದ ಅನೇಕ ಕೃಷಿಕರ ಜೀವನಮಟ್ಟ ಸುಧಾರಿಸಿತು.

5. ಸಹಕಾರಿ ಬೇಸಾಯ ಅಭಿವೃದ್ಧಿ

ರೈತರು ಸ್ವಯಂಪ್ರೇರಣೆಯಿಂದ ಸಹಕಾರಿ ಸಂಘಗಳನ್ನು ಸ್ಥಾಪಿಸಿಕೊಂಡು ತಮ್ಮ ಎಲ್ಲಾ ಹಿಡುವಳಿಯನ್ನು ಸಹರೈತರ ಉಸ್ತುವಾರಿಗೆ ಒಪ್ಪಿಸಿ ಒಟ್ಟಾಗಿ ಸೇರಿ ಸಾಗುವಳಿ ಮಾಡುತ್ತಾರೆ. ಉತ್ಪಾದನೆಯು ಕೈಗೆ ಬಂದಾಗ ಜಮೀನಿನ ಶಾಶ್ವತ ಅಭಿವೃದ್ಧಿಗೆ ಅಗತ್ಯ ಬಂಡವಾಳವನ್ನು ತೆಗೆದಿಟ್ಟು ಉಳಿದ ಭಾಗವನ್ನು ಹಂಚಿಕೊಳ್ಳುತ್ತಾರೆ. ಇದನ್ನು 'ಸಹಕಾರಿ ಬೇಸಾಯ ಪದ್ಧತಿ' ಎನ್ನುತ್ತೇವೆ.

ಭೂಸುಧಾರಣೆಯಿಂದ ಭೂಹೀನರಿಗೆ ಭೂಮಿಯ ಒಡೆತನದ ಹಕ್ಕು ಸಣ್ಣ ಪ್ರಮಾಣದಲ್ಲಿ ದೊರಕಿತು. ಸಾಗುವಳಿದಾರರ ಹಕ್ಕುಗಳನ್ನು ಕಾಪಾಡಲಾಯಿತು. ಸಹಕಾರಿ ಬೇಸಾಯ ಪದ್ಧತಿಯಿಂದ ರೈತರು ಸ್ವಲ್ಪಮಟ್ಟಿಗಿನ ಲಾಭವನ್ನು ಹೊಂದಲು ಸಾಧ್ಯವಾಯಿತು. ಆದರೆ ಸಹಕಾರಿ ಬೇಸಾಯ ಪದ್ಧತಿಯು ನಿರೀಕ್ಷಿತ ಪ್ರಮಾಣದಲ್ಲಿ ಜನರಿಗೆ ಒಪ್ಪಿತ ಬೇಸಾಯ ಪದ್ಧತಿಯಾಗಲಿಲ್ಲ.

2. ಹಿಂದುಳಿದ ವರ್ಗಗಳ ಆಯೋಗಗಳು

ಭಾರತದ ಸಾಮಾಜಿಕ ವ್ಯವಸ್ಥೆ ಅಸಮಾನತೆಯಿಂದ ಕೂಡಿದೆ. ಶ್ರೇಣೀಕೃತ ಜಾತಿ ವ್ಯವಸ್ಥೆಯಿಂದ ಅನೇಕ ಜಾತಿಗಳು ಹಿಂದುಳಿದವುಗಳಾಗಿಯೆ ಉಳಿದವು. ಬ್ರಿಟಿಷರು ಭಾರತಕ್ಕೆ ಬಂದ ನಂತರ ಹೊಸ ಸಾಮಾಜಿಕ ಚಲನಶೀಲತೆ ಪ್ರಾರಂಭವಾಯಿತು.

ಬ್ರಿಟಿಷರ ಆಡಳಿತದಡಿಯಲ್ಲಿ ಯಾವುದೇ ಜಾತಿ ವರ್ಗಗಳ ತಾರತಮ್ಯವಿಲ್ಲದೆ ಎಲ್ಲರೂ ಇಂಗ್ಲಿಷ್ ಭಾಷೆಯನ್ನು ಕಲಿಯಲು ಅರ್ಹರಾದರು. ಇಂಗ್ಲಿಷ್ ಭಾಷೆ ಕಲಿತವರಿಗೆ ಬ್ರಿಟಿಷ್ ಸರಕಾರದಲ್ಲಿ ಹೊಸ ಅವಕಾಶಗಳು ದೊರೆಯತೊಡಗಿದವು. ಬ್ರಾಹ್ಮಣೇತರರು ವಿದ್ಯಾಭ್ಯಾಸ ಕ್ಷೇತ್ರಕ್ಕೆ ತೆರೆದುಕೊಂಡ ನಂತರ ಅವರಲ್ಲಿ ಹೊಸ ಎಚ್ಚರ ಪ್ರಾರಂಭವಾಯಿತು. ಬಹುಸಂಖ್ಯಾತರಾಗಿದ್ದರೂ ತಮ್ಮ ವರ್ಗಗಳಿಗೆ ಸರಕಾರಿ ಉದ್ಯೋಗಗಳಲ್ಲಿ ಸೂಕ್ತ ಪ್ರಾತಿನಿಧ್ಯವಿರಲಿಲ್ಲ. ಇದರ ಪರಿಣಾಮವಾಗಿ ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣೇತರರು ಸಾಹುಕಾರ ಚೆನ್ನಯ್ಯ, ಎಂ. ಬಸವಯ್ಯ ಮುಂತಾದವರ ನೇತೃತ್ವದಲ್ಲಿ ಬ್ರಾಹ್ಮಣೇತರ ಚಳವಳಿಯನ್ನು ಹುಟ್ಟುಹಾಕಿದರು.

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಭಾರತದಲ್ಲೇ ಪ್ರಥಮವಾಗಿ ಹಿಂದುಳಿದ ವರ್ಗಗಳ ಆಯೋಗವು ನ್ಯಾಯಮೂರ್ತಿ ಲೆಸ್ಲೆ ಸಿ. ಮಿಲ್ಲರ್ ಅವರ ಅಧ್ಯಕ್ಷತೆಯಲ್ಲಿ 1918ರಲ್ಲಿ ನೇಮಕವಾಯಿತು. ಒಂದು ಜಾತಿಯಲ್ಲಿ ಶೇಕಡ ಐದು ಅಥವಾ ಅದಕ್ಕಿಂತ ಹೆಚ್ಚಿನವರು ಇಂಗ್ಲಿಷ್ ಬಲ್ಲವರಿದ್ದರೆ ಅಂತಹ ಜಾತಿಯನ್ನು ಮುಂದುವರೆದವರು ಎಂದು ಈ ಸಮಿತಿ ಅಭಿಪ್ರಾಯ ಪಟ್ಟಿತು. 1921ರಲ್ಲಿ ಮೈಸೂರು ರಾಜ್ಯದಲ್ಲಿ ಪ್ರಥಮ ಮೀಸಲಾತಿ ಆಜ್ಞೆ ಜಾರಿಗೆ ಬಂದಿತು.



ಎಲ್.ಜಿ. ಹಾವನೂರು

ಮುಖ್ಯಮಂತ್ರಿ ಡಿ. ದೇವರಾಜ್ ಅರಸ್‌ರವರು 1975 ರಲ್ಲಿ ಎಲ್.ಜಿ. ಹಾವನೂರು ಅವರ ನೇತೃತ್ವದಲ್ಲಿ ಪ್ರಥಮ ಹಿಂದುಳಿದ ವರ್ಗಗಳ ಆಯೋಗವನ್ನು ನೇಮಿಸಿದರು. 1975ನೇ ಇಸವಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿವಿಧ ಜಾತಿಯ ವಿದ್ಯಾರ್ಥಿಗಳ ಶೇಕಡಾವಾರನ್ನು ಜಾತಿಗಳ ಹಿಂದುಳಿದಿರುವಿಕೆಯನ್ನು ಗುರುತಿಸಲು ಮಾನದಂಡವನ್ನಾಗಿ ತೆಗೆದುಕೊಳ್ಳಲಾಯಿತು. ಹಾವನೂರು ವರದಿಯ ಆಧಾರದ ಮೇಲೆ 1977ರಲ್ಲಿ ಸರಕಾರಿ ಆಜ್ಞೆಯನ್ನು ಜಾರಿಗೆ ತರಲಾಯಿತು. ಇದು ಒಂದು ಕ್ರಾಂತಿಕಾರಕ ಆಜ್ಞೆಯಾಯಿತು. ಹಿಂದುಳಿದ ವರ್ಗಗಳು ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಸಬಲರಾಗಲು ಈ ಆಜ್ಞೆ ಬಹುಮಟ್ಟಿಗೆ ಕಾರಣವಾಯಿತು. ಇದನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. ಈ ವರದಿಯಲ್ಲಿರುವ ನ್ಯೂನತೆಗಳನ್ನು ಸರಿಪಡಿಸಲಾಗುವುದು ಎನ್ನುವ ಭರವಸೆಯನ್ನು ಕರ್ನಾಟಕ ಸರ್ಕಾರವು ನ್ಯಾಯಾಲಯಕ್ಕೆ ನೀಡಿತು. ಇದರ ಪರಿಣಾಮವಾಗಿ 1983ರಲ್ಲಿ ಟಿ. ವೆಂಕಟಸ್ವಾಮಿ ಆಯೋಗದ ನೇಮಕವಾಯಿತು. ರಾಜಕೀಯ ಒತ್ತಡದ ಕಾರಣಗಳಿಗಾಗಿ

ವೆಂಕಟಸ್ವಾಮಿ ವರದಿಯನ್ನು ಸರ್ಕಾರ ಒಪ್ಪಲಿಲ್ಲ. ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ಆಡಳಿತಾವಧಿಯಲ್ಲಿ ನ್ಯಾಯಮೂರ್ತಿ ಓ. ಚಿನ್ನಪ್ಪ ರೆಡ್ಡಿಯವರ ನೇತೃತ್ವದಲ್ಲಿ ಒಂದು ಸಮಿತಿಯ ರಚನೆಯಾಯಿತು. ಈ ವರದಿಯ ಶಿಫಾರಸುಗಳು ಕೂಡ ರಾಜಕೀಯ ಒತ್ತಡಗಳಿಂದಾಗಿ ಜಾರಿಗೆ ಬರಲಿಲ್ಲ.

ಇಲ್ಲಿಯವರೆಗೂ ಜಾರಿಗೊಂಡ ಎಲ್ಲಾ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದ ಮೀಸಲಾತಿ ಆಜ್ಞೆಗಳು ರಾಜೀಸೂತ್ರದ ಆಜ್ಞೆಗಳಾಗಿವೆಯೇ ಹೊರತು ಯಾವುದೇ ವೈಜ್ಞಾನಿಕ ವರದಿಯ ಶಿಫಾರಸುಗಳ ಮೇಲೆ ರೂಪಿತವಾದ ಆಜ್ಞೆಗಳಾಗಿಲ್ಲ.

ಹೊಸಪದ

ಗೇಣಿ : ಭೂಮಾಲೀಕ ಮತ್ತು ಗೇಣಿದಾರನ ನಡುವೆ ನಡೆಯುವ ಒಪ್ಪಂದದ ಫಲವಾಗಿ ಗೇಣಿದಾರನು ಒಟ್ಟು ಉತ್ಪಾದನೆಯಲ್ಲಿ ಪಡೆಯುವ ಪಾಲು.

ಅಭ್ಯಾಸಗಳು

I ಬಿಟ್ಟ ಜಾಗದಲ್ಲಿ ಸೂಕ್ತವಾದ ಪದವನ್ನು ತುಂಬಿರಿ.

1. ಬಿ.ಡಿ.ಜತ್ತಿಯವರು ಭಾರತದ _____ ಆಗಿದ್ದರು.
2. 1974ರಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದವರು _____ .
3. 1975ರಲ್ಲಿ ನೇಮಕವಾದ ಪ್ರಥಮ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು _____ .

II ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

1. ಭೂಸುಧಾರಣೆ ಎಂದರೇನು?
2. ಮುಖ್ಯವಾದ ಭೂಸುಧಾರಣೆಗಳು ಯಾವುವು?
3. ಆರ್ಥಿಕ ಹಿಡುವಳಿ ಎಂದರೇನು?
4. ಒಂದು ಕುಟುಂಬ ಹೊಂದಬಹುದಾದ ಭೂಮಿಯ ಗರಿಷ್ಠ ಮಿತಿಯನ್ನು ಕರ್ನಾಟಕ ಸರ್ಕಾರವು ಏಕೆ ನಿಗದಿ ಪಡಿಸಿದೆ?
5. ಸಹಕಾರಿ ಬೇಸಾಯ ಪದ್ಧತಿ ಎಂದರೇನು?
6. ಎಲ್.ಜಿ. ಹಾವನೂರು ಆಯೋಗವು ಹಿಂದುಳಿಯುವಿಕೆಯನ್ನು ಹೇಗೆ ಗುರುತಿಸಿತು?

☆ ☆ ☆

ಪಾಠ 08	ಮಹಿಳಾ ಸ್ವಾತಂತ್ರ್ಯ ಹೋರಾಟಗಾರರು

ಪಾಠದ ಪರಿಚಯ

ಚಾರಿತ್ರಿಕವಾಗಿ ಮಹಿಳೆಯರನ್ನು ಕುಟುಂಬದ ಚೌಕಟ್ಟಿಗೆ ನಮ್ಮ ಪುರುಷ ಪ್ರಧಾನ ಸಮಾಜ ಸೀಮಿತಗೊಳಿಸಿತ್ತು. ಆಗಾಗ ಸಾರ್ವಜನಿಕ ಕ್ಷೇತ್ರಕ್ಕೆ ಪ್ರವೇಶಿಸಿ, ನಿರ್ಣಾಯಕ ಪಾತ್ರವನ್ನು ವಹಿಸಿದ ಮಹಿಳೆಯರು ವಿರಳವಾಗಿ ಕಾಣುತ್ತಾರೆ. ಉದಾಹರಣೆಗೆ ರಾಣಿ ಅಬ್ಬಕ್ಕದೇವಿ ಒಂದು ನಿದರ್ಶನವಾಗಿದ್ದಾರೆ. ಆಧುನಿಕ ಕಾಲ ಘಟ್ಟದಲ್ಲಿ ಪಶ್ಚಿಮದ ದೇಶಗಳಿಂದ ಬಂದ ಪರಿಕಲ್ಪನೆಗಳಾದ ಸಮಾನತೆ, ಸ್ವಾತಂತ್ರ್ಯ ಮತ್ತು ವಿಶ್ವಭ್ರಾತೃತ್ವಗಳು ಭಾರತೀಯ ಸಮಾಜಕ್ಕೆ ಭಾರತೀಯ ಇಂಗ್ಲೀಷ್ ವಿದ್ಯಾವಂತ ವರ್ಗದ ಮೂಲಕ ಪ್ರವೇಶ ಪಡೆದಿದ್ದಲ್ಲದೆ, ಹೊಸ ಸಾಮಾಜಿಕ ಪಲ್ಲಟಗಳಿಗೂ ಕಾರಣವಾದವು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ಇಲ್ಲಿಯವರೆಗೂ ನೇಪಥ್ಯದಲ್ಲಿದ್ದ ಅನೇಕ ಸಾಮಾಜಿಕ ವರ್ಗಗಳು, ಸ್ವಾತಂತ್ರ್ಯ ಹೋರಾಟಕ್ಕೆ ವಿಶೇಷ ಶಕ್ತಿಯನ್ನು ತುಂಬಿದವು. ರೈತರು, ಕಾರ್ಮಿಕರು, ವಿದ್ಯಾರ್ಥಿಗಳು ಮತ್ತು ಮಹಿಳೆಯರು ಅತ್ಯಂತ ಕ್ರಿಯಾಶೀಲರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡಿದ್ದಲ್ಲದೆ, ಸ್ವಾತಂತ್ರ್ಯದಲ್ಲಿ ತಮಗೂ ಪಾಲಿದೆ ಎಂಬುದನ್ನು ತೋರಿಸಿಕೊಟ್ಟರು. ಈ ಹಿನ್ನಲೆಯಲ್ಲಿ ಕರ್ನಾಟಕದ ಮಹಿಳೆಯರ ಪಾತ್ರವೂ ಅನನ್ಯವಾದದ್ದು. ತಮ್ಮ ಇಡೀ ಬದುಕನ್ನು ನಾಡಿನ ಸ್ವಾತಂತ್ರ್ಯ ಮತ್ತು ಏಳ್ಗೆಗಾಗಿ ಸವೆಸಿದರು. ಇದರಲ್ಲಿ ಕೆಲವರನ್ನು ಪ್ರಾತಿನಿಧಿಕವಾಗಿ ಅಭ್ಯಸಿಸುವುದರ ಮೂಲಕ ಮಹಿಳೆಯರು ಸ್ವಾತಂತ್ರ್ಯ ಹೋರಾಟದ ಚಾರಿತ್ರಿಕ ಕಾಲಘಟ್ಟದಲ್ಲಿ ನಿರ್ವಹಿಸಿದ ಪಾತ್ರವನ್ನು ಅರಿಯಬೇಕಾದದ್ದು ನಮ್ಮ ಕರ್ತವ್ಯ. ಇವರಲ್ಲಿ ಮಂಗಳೂರು ಬಳಿಯ ಉಳ್ಳಾಲದ ರಾಣಿ ಅಬ್ಬಕ್ಕದೇವಿ, ಕಮಲಾದೇವಿ ಚಟ್ಟೋಪಾಧ್ಯಾಯ, ಬಳ್ಳಾರಿ ಸಿದ್ಧಮ್ಮ, ಉಮಾಬಾಯಿ ಕುಂದಾಪುರ, ಕೃಷ್ಣಬಾಯಿ ಪಣಬೇಕರ್, ಜಿ.ಆರ್. ಭಾಗೀರಥಮ್ಮ, ಸಿದ್ಧಮ್ಮ ಜೋಯಿಸ್ ಮತ್ತು ಯಶೋಧರಮ್ಮ ದಾಸಪ್ಪ ಮುಂತಾದವರು ಮುಖ್ಯರು. ಇವರಲ್ಲದೆ ಇನ್ನೂ ಅನೇಕ ಮಹಿಳೆಯರು ಭಾಗವಹಿಸಿ ಅನಾಮಧೇಯರಾಗಿಯೆ ಉಳಿದುಕೊಂಡಿದ್ದಾರೆ.

ಸಾಮರ್ಥ್ಯಗಳು

1] ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ನಿರ್ವಹಿಸಿದ ಪಾತ್ರವನ್ನು ಅರಿಯುವುದು.

2] ಗಾಂಧಿಪೂರ್ವ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಮಹಿಳೆಯರ ಬಗ್ಗೆ ತಿಳಿಯುವುದು.

3] ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ ಮಹಿಳೆಯರನ್ನು ಸ್ಮರಿಸುವುದು.

4] ಸ್ವಾತಂತ್ರ್ಯಾನಂತರ ಕರ್ನಾಟಕದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರವನ್ನು ಅರಿಯುವುದು.

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- ರಾಣಿ ಅಬ್ಬಕ್ಕ ದೇವಿ,
- ಬಳ್ಳಾರಿ ಸಿದ್ಧಮ್ಮ,
- ಕಮಲಾದೇವಿ ಚಟ್ಟೋಪಾಧ್ಯಾಯ,
- ಯಶೋಧರಮ್ಮ ದಾಸಪ್ಪ,
- ಉಮಾಬಾಯಿ ಕುಂದಾಪುರ.

ರಾಣಿ ಅಬ್ಬಕ್ಕದೇವಿ

ರಾಣಿ ಅಬ್ಬಕ್ಕದೇವಿ

ಗಾಂಧಿ ಪೂರ್ವ ಸ್ವಾತಂತ್ರ್ಯ ಹೋರಾಟದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ, ಕೆಳದಿ ಚೆನ್ನಮ್ಮರ ಸಾಲಿನಲ್ಲಿ ನಿಲ್ಲುವ ಮತ್ತೊಬ್ಬ ಮಹಿಳೆ "ರಾಣಿ ಅಬ್ಬಕ್ಕದೇವಿ". ಇವರು ಚೌಟ ಮನೆತನಕ್ಕೆ ಸೇರಿದ್ದರು. ಇವರ ಚಿಕ್ಕಪ್ಪನಾದ 'ತಿರುಮಲರಾಯರು' ಅಬ್ಬಕ್ಕದೇವಿಗೆ ಯುದ್ಧ ತಂತ್ರಕಲೆಗಳಲ್ಲಿ ತರಬೇತಿಗೊಳಿಸಿದ ನಂತರ ಉಳ್ಳಾಲದ ರಾಣಿಯನ್ನಾಗಿ ಅಧಿಕಾರಕ್ಕೆ ತಂದರು. ಅಬ್ಬಕ್ಕನು ಮಂಗಳೂರಿನ "ಭಂಗ" ಪ್ರಾಂತ್ಯದ ಲಕ್ಷ್ಮಪ್ಪಅರಸರನ್ನು ವಿವಾಹವಾದರು. ಆದರೆ ಇವರ ವೈವಾಹಿಕ ಜೀವನ ಬಹಳ ಕಾಲ ಉಳಿಯಲಿಲ್ಲ. ಹೀಗಾಗಿ ಉಳ್ಳಾಲಕ್ಕೆ ಹಿಂತಿರುಗಿದರು. ಪೋರ್ಚುಗೀಸರು ಅಬ್ಬಕ್ಕಳಿಗೆ ಕಪ್ಪ ನೀಡಲು ಒತ್ತಾಯಿಸಿದಾಗ ಇವರು ತಿರಸ್ಕರಿಸಿದರು. ಪರಿಣಾಮವಾಗಿ 1555ರಲ್ಲಿ ಪೋರ್ಚುಗೀಸರು "ರಾಣಿ" ಮೇಲೆ ಯುದ್ಧ ಸಾರಿದರು. ಈ ಯುದ್ಧದಲ್ಲಿ ಅಬ್ಬಕ್ಕ ಜಯವನ್ನು ಸಾಧಿಸಿದಳು. ನಂತರ 1568ರಲ್ಲಿ ಪೋರ್ಚುಗೀಸರು ವೈಸರಾಯ್ ಆದ "ಆಂಟೋನಿಯೋಮೋರಹ" ರವರ ನೇತೃತ್ವದಲ್ಲಿ ಉಳ್ಳಾಲವನ್ನು ಪ್ರವೇಶಿಸಿದರು. ರಾಣಿ ಅಲ್ಲಿಂದ ತಪ್ಪಿಸಿಕೊಂಡು 200 ಮಂದಿ ಸೈನಿಕರೊಂದಿಗೆ ಪೋರ್ಚುಗೀಸ್ ಸೈನ್ಯದ ಮೇಲೆ ಎರಗಿದಳು. ಜನರಲ್ 'ಪೆಕ್ಸೆಟೋ' ಈ ಯುದ್ಧದಲ್ಲಿ ಅಸುನೀಗಿದನು. ಪೋರ್ಚುಗೀಸ್ ಸೈನಿಕರನ್ನು ಸೆರೆ ಹಿಡಿಯಲಾಯಿತು. ಮುಂದುವರೆದ ಮತ್ತೊಂದು ಯುದ್ಧದಲ್ಲಿ ಪೋರ್ಚುಗೀಸರ ಅಡ್ಮಿರಲ್ 'ಮಾಸ್‌ಕಾರೆನ್ಸ್' ನು ಉಳ್ಳಾಲದ ಸೈನಿಕರಿಂದ ಹತನಾದನು. ರಾಣಿ ಅಬ್ಬಕ್ಕ ಪೋರ್ಚುಗೀಸರಿಗೆ ಮಂಗಳೂರು ಕೋಟೆಯನ್ನು ಬಿಟ್ಟು ಹೊರಡಬೇಕೆಂದು ಒತ್ತಾಯಿಸಿದಳು. ಆದರೆ ಪೋರ್ಚುಗೀಸರು ಪದೇ-ಪದೇ ಉಳ್ಳಾಲದ ಸಂಪತ್ತಿನಿಂದ ಆಕರ್ಷಿತರಾಗಿ ಯುದ್ಧ ಸಾರುತ್ತಲೇ ಇದ್ದರು. 1570 ರಲ್ಲಿ ಬಿಜಾಪುರದ ಸುಲ್ತಾನ ಮತ್ತು ಕಲ್ಲಿಕೋಟೆಯ ಜಾಮೋರಿನ್‌ರವರೊಂದಿಗೆ ಮೈತ್ರಿ ಒಪ್ಪಂದವನ್ನು ಅಬ್ಬಕ್ಕ ಮಾಡಿಕೊಂಡಳು. ಜಾಮೋರಿನ್ ದೊರೆಯ ದಂಡನಾಯಕನಾದ "ಕುಲ್ಟಿಪೂಕರ್ ಮಾರ್ಕಕರ್", ಅಬ್ಬಕ್ಕದೇವಿಯ ಪರವಾಗಿ ಯುದ್ಧ ಮಾಡಿ ಮಂಗಳೂರು ಕೋಟೆಯನ್ನು ವಶಪಡಿಸಿಕೊಂಡು ಹಿಂತಿರುಗಿ ಬರುವಾಗ ಪೋರ್ಚುಗೀಸರಿಂದ ಹತನಾದನು. ಅಬ್ಬಕ್ಕದೇವಿಯ ಪತಿಯಾದ ಲಕ್ಷ್ಮರಸನ ಸರಕಾರದಿಂದ ಪೋರ್ಚುಗೀಸರು ಅಬ್ಬಕ್ಕದೇವಿಯನ್ನು ಯುದ್ಧದಲ್ಲಿ ಸೋಲಿಸಿ ಸೆರೆಮನೆಗೆ ತಳ್ಳಿದರು. ಅಬ್ಬಕ್ಕ ಸೆರೆಮನೆಯಲ್ಲಿಯೆ ತೀರಿಕೊಂಡಳು.

ರಾಣಿ ಅಬ್ಬಕ್ಕ ಸ್ಮರಣಾರ್ಥವಾಗಿ ಮಂಗಳೂರು ಬಳಿಯ ಉಳ್ಳಾಲದಲ್ಲಿ 'ವೀರರಾಣಿ ಅಬ್ಬಕ್ಕನ ಉತ್ಸವ' ಆಚರಿಸುತ್ತಾರೆ. ಸಾಹಸಿಗಳಾಗಿ ಸಾಧನೆ ಮಾಡಿದ ಮಹಿಳೆಯರಿಗೆ ವೀರರಾಣಿ ಅಬ್ಬಕ್ಕ ಪ್ರಶಸ್ತಿ ನೀಡುತ್ತಾರೆ. ಹಾಗೆಯೇ ದಿನಾಂಕ 15–1–2003 ರಲ್ಲಿ ರಾಣಿ ಅಬ್ಬಕ್ಕ ಅವರ ಭಾವಚಿತ್ರವಿರುವ ಅಂಚೆ ಕವರ್‌ನ್ನು ಭಾರತ ಅಂಚೆ ಇಲಾಖೆ ಹೊರತಂದಿದೆ.

ಬಳ್ಳಾರಿ ಸಿದ್ಧಮ್ಮ (1903–1981)

ಇವರು ಇಂದಿನ ಹಾವೇರಿ ಜಿಲ್ಲೆಯ ದುಂಡಸೀ ಗ್ರಾಮದ ಸಂಪ್ರದಾಯಸ್ಥ ಕುಟುಂಬದಲ್ಲಿ 1903ರಲ್ಲಿ ಜನಿಸಿದರು. ತಂದೆ 'ಕೊಟ್ಟೆಗೆ ಬಸಟಪ್ಪ'. ಇವರು ವೃತ್ತಿಯಲ್ಲಿ ವ್ಯಾಪಾರಸ್ಥರಾದರೂ ಸ್ವಾತಂತ್ರ್ಯ ಚಳವಳಿಯ ಬಗೆಗೆ ಉತ್ಸಾಹವನ್ನು ಹೊಂದಿದ್ದರು. ತಂದೆ ಸಿದ್ಧಮ್ಮನವರಿಗೆ ಅಂದಿನ ದಿನಪತ್ರಿಕೆಗಳನ್ನು ಮತ್ತು ನಿಯತಕಾಲಿಕೆಗಳನ್ನು ತರಿಸಿಕೊಡುತ್ತಿದ್ದರಿಂದ ರಾಷ್ಟ್ರೀಯವಾದಿ ವಿಚಾರಧಾರೆಗಳನ್ನು ಓದಿ ತಿಳಿಯುತ್ತಿದ್ದರು. ಸ್ವಾತಂತ್ರ್ಯ ಹೋರಾಟಗಾರರಾದ ಬಳ್ಳಾರಿ ಮುರುಗಪ್ಪರವರನ್ನು ವಿವಾಹವಾಗಿದ್ದೂ ಕೂಡ ಇವರು ಸ್ವಾತಂತ್ರ್ಯ ಹೋರಾಟದಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಲು ಕಾರಣವಾಯಿತು. 1930 ರ ದಶಕದಲ್ಲಿ ಹಳೆ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟವು ತೀವ್ರಗತಿಯಲ್ಲಿ ನಡೆಯುತ್ತಿತ್ತು. ಆಗ ಎಸ್. ನಿಜಲಿಂಗಪ್ಪ, ಟಿ. ಸಿದ್ದಲಿಂಗಯ್ಯ, ಸರ್ದಾರ್ ವೀರಣ್ಣ ಗೌಡ ಮುಂತಾದ ಸ್ವಾತಂತ್ರ್ಯ ಹೋರಾಟಗಾರರು ಅಗ್ರಪಂಕ್ತಿಯಲ್ಲಿದ್ದರು. ಬಳ್ಳಾರಿ ಸಿದ್ಧಮ್ಮನವರು 1938 ರಲ್ಲಿ ನಡೆದ ಶಿವಪುರ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದರು. ದಿನಾಂಕ 13–04–1938 ರಂದು ಧ್ವಜಾರೋಹಣ ಮಾಡಿ ದಸ್ತಗಿರಿಯಾದರು. ಒಂದು ತಿಂಗಳ ಕಾಲ ಕಾರಾಗೃಹ ಶಿಕ್ಷೆಯನ್ನು ಅನುಭವಿಸಿದರು. ಸಂಸ್ಥಾನದಲ್ಲಿ ಧ್ವಜಾರೋಹಣ ಕಾರ್ಯಕ್ರಮ ನೆರವೇರಿಸಿದ ಪ್ರಥಮ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಸಂಸ್ಥಾನದ ಪತ್ರಿಕೆಗಳು ಸಿದ್ಧಮ್ಮನವರ ಸ್ವಾತಂತ್ರ್ಯ ಹೋರಾಟದ ಬಗೆಗಿನ ಬದ್ಧತೆಯನ್ನು ಮೆಚ್ಚಿ ಪ್ರಶಂಸಿದವು. ಕಾರಾಗೃಹದಿಂದ ಬಿಡುಗಡೆಯಾದ ನಂತರ ಸಿದ್ಧಮ್ಮನವರು ಪೂರ್ಣಪ್ರಮಾಣದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಮುಂದುವರೆದರು. ನಂತರ 1939 ರಲ್ಲಿ ಚಿತ್ರದುರ್ಗ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ದಾವಣಗೆರೆ ತಾಲ್ಲೂಕಿನ ಅನಗೋಡು ಮತ್ತು ಮಾಯಕೊಂಡ ಅರಣ್ಯ ಪ್ರದೇಶಗಳಲ್ಲಿ ಈಚಲು ಮರಗಳನ್ನು ಕಡಿಯುವ ಚಳುವಳಿಯಲ್ಲಿ ಭಾಗವಹಿಸಿ ದಿನಾಂಕ 29–9–1939 ರಿಂದ 8–9–1940 ರವರೆಗೆ ಜೈಲು ಶಿಕ್ಷೆಯನ್ನು ಅನುಭವಿಸಿದರು. ನಂತರ 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದರು. ಭಾರತಕ್ಕೆ ಸ್ವಾತಂತ್ರ್ಯ ಬಂದರೂ ಮೈಸೂರು ಸಂಸ್ಥಾನ ಭಾರತ ಒಕ್ಕೂಟಕ್ಕೆ ಸೇರಿಸುವ ತೀರ್ಮಾನ ಪ್ರಕಟಿಸದೆ ಇದ್ದುದ್ದರಿಂದ 1947ರಲ್ಲಿ ಅರಮನೆ ಸತ್ಯಾಗ್ರಹ ಅಥವಾ ಮೈಸೂರು ಚಲೋ ಸತ್ಯಾಗ್ರಹ ಪ್ರಾರಂಭವಾಯಿತು. ಈ ಚಳುವಳಿಯಲ್ಲಿ ಬಳ್ಳಾರಿ ಸಿದ್ಧಮ್ಮ ಭಾಗವಹಿಸಿದ್ದರು. ಈ ಹೋರಾಟದ ನಂತರ ಮೈಸೂರು ರಾಜ್ಯವು ಭಾರತದ ಒಕ್ಕೂಟದಲ್ಲಿ ಸೇರ್ಪಡೆಯಾಯಿತು. ಇದರೊಂದಿಗೆ ಅಕ್ಟೋಬರ್ 1947 ರಲ್ಲಿ ಹೊಸಸರ್ಕಾರವು ಕೆ.ಸಿ.ರೆಡ್ಡಿ ಯವರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದಿತು. ಸ್ವಾತಂತ್ರ್ಯ ನಂತರ ದಾವಣಗೆರೆ ತಾಲ್ಲೂಕಿನ ಶಾಸಕರಾಗಿ ಸೇವೆ ಸಲ್ಲಿಸಿದರು. ಗ್ರಾಮೀಣ ಬಡಮಹಿಳೆಯರ ಆರೋಗ್ಯವನ್ನು ಕಾಪಾಡಲು ಮಾತೃ ಮಂದಿರವನ್ನು ಸ್ಥಾಪಿಸಿ ಅವರಿಗೆ ಹೊಸ ಬೆಳಕಾದರು. ಇವರ ಈ ಸೇವಾ ಕಾರ್ಯಕ್ಕೆ ರಾಜ್ಯ ಸರ್ಕಾರ ತಾಮ್ರಪತ್ರವನ್ನು

ನೀಡಿ ಗೌರವಿಸಿದೆ. ಹೀಗೆ ಬಳ್ಳಾರಿ ಸಿದ್ದಮ್ಮನವರು ಮೈಸೂರಿನ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ಮಹಿಳೆಯರ ಗೌರವವನ್ನು ಹೆಚ್ಚಿಸಿದ್ದಾರೆ.

ಕಮಲಾದೇವಿ ಚಟ್ಟೋಪಾಧ್ಯಾಯ (1903 – 1988)

ಕಮಲಾದೇವಿ ಚಟ್ಟೋಪಾಧ್ಯಾಯ

ಕಮಲಾದೇವಿ ಚಟ್ಟೋಪಾಧ್ಯಾಯ ಅವರು 1903 ಏಪ್ರಿಲ್ 3 ರಂದು ಮಂಗಳೂರಿನ ಶ್ರೀಮಂತ ಕುಟುಂಬ ಒಂದರಲ್ಲಿ ಜನಿಸಿದರು. ತಂದೆ ಧಾರೇಶ್ವರ ಅನಂತರಾಯರು, ತಾಯಿ ಗಿರಿಜಾಬಾಯಿ. ಬ್ರಿಟಿಷ್ ವಸಾಹತುಶಾಹಿ ವ್ಯವಸ್ಥೆಯಲ್ಲಿ ಉನ್ನತ ಅಧಿಕಾರಿಯಾಗಿದ್ದರು. ಕಮಲಾದೇವಿಯವರು ಕ್ಯಾಥೋಲಿಕ್ ಕಾನ್ವೆಂಟ್ ಮತ್ತು ಸೇಂಟ್ ಮೇರಿಸ್ ಶಾಲೆಯಲ್ಲಿ ಶಿಕ್ಷಣವನ್ನು ಪಡೆದರು. ಇವರಿಗೆ 14ನೇ ವಯಸ್ಸಿನಲ್ಲಿ ವಿವಾಹವಾಯಿತು ಮತ್ತು ಸ್ವಲ್ಪ ಕಾಲದಲ್ಲೇ ವಿಧವೆಯಾದರು. ನೌಕರಿಯಲ್ಲಿದ್ದ ತಂದೆಯವರಿಗೆ ಮದ್ರಾಸಿಗೆ ವರ್ಗವಾದಾಗ ಮದ್ರಾಸಿನಲ್ಲಿ ಶಿಕ್ಷಣವನ್ನು ಮುಂದುವರೆಸಿದರು. ಮುಂದೆ ಇಂಗ್ಲಿಷರ ಪ್ರಸಿದ್ಧ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ನಲ್ಲಿ ಪದವಿಯನ್ನು ಪಡೆದು ಭಾರತಕ್ಕೆ ಹಿಂದಿರುಗಿ ಸಮಾಜ ಸುಧಾರಣೆಯಲ್ಲಿ ತೊಡಗಿದರು. ಈ ಸಂದರ್ಭದಲ್ಲೆ ಕವಿ, ಸಾಹಿತಿ, ರಂಗಕರ್ಮಿಯಾದ ಹರೀಂದ್ರನಾಥ ಚಟ್ಟೋಪಾಧ್ಯಾಯರ ಪರಿಚಯವಾಯಿತು. ನಂತರ ಅವರೊಂದಿಗೆ ಮರುವಿವಾಹವಾಗಿ ಕಮಲಾದೇವಿ ಚಟ್ಟೋಪಾಧ್ಯಾಯರಾದರು.

ಕಮಲಾದೇವಿಯವರು ರಾಷ್ಟ್ರರಾಜಕಾರಣದಲ್ಲಿ ಗುರುತಿಸಿಕೊಂಡ ಕರ್ನಾಟಕದ ಬಹುಮುಖ ಪ್ರತಿಭೆಯ ಮಹಿಳೆ. ಇವರು ಗಾಂಧೀಜಿ ಮತ್ತು ಸರೋಜಿನಿ ನಾಯ್ಡುರವರಿಂದ ಪ್ರಭಾವಿತರಾಗಿ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದರು. ಕರ್ನಾಟಕದಾದ್ಯಂತ ಸಂಚರಿಸಿ ಯುವಜನತೆಯನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲು ಪ್ರೇರೇಪಿಸಿದರು. 1929 ರಲ್ಲಿ ಅಲಹಾಬಾದ್ ನಗರದಲ್ಲಿ ರಾಷ್ಟ್ರ ಧ್ವಜವನ್ನು ಹಿಡಿದು ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ಹೊರಟು ಬ್ರಿಟಿಷ್ ದಬ್ಬಾಳಿಕೆಯನ್ನು ಖಂಡಿಸಿದರು. ಲಾಹೋರ್ ಕಾಂಗ್ರೆಸ್ ಅಧಿವೇಶನದ ನಿರ್ಣಯದಂತೆ ಗಾಂಧೀಜಿಯವರು 12 ಮಾರ್ಚ್ 1930 ರಂದು ತಮ್ಮ 78 ಅನುಯಾಯಿಗಳೊಂದಿಗೆ ಸಬರಮತಿ ಆಶ್ರಮದಿಂದ ಉಪ್ಪಿನ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಮೇ 5 ರಂದು ದಂಡಿಯನ್ನು ತಲುಪಿ ಮೇ 6 ರಂದು ಉಪ್ಪನ್ನು ತಯಾರಿಸುವುದರ ಮೂಲಕ ಬ್ರಿಟಿಷರ ಉಪ್ಪಿನ ಕಾನೂನುಗಳನ್ನು ವಿರೋಧಿಸಿದರು. ಈ ಸಂದರ್ಭದಲ್ಲಿ ದೇಶದ ಜನತೆ ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಕರೆ ನೀಡಿದರು. ಕಮಲಾದೇವಿಯವರು ಗಾಂಧೀಜಿಯವರನ್ನು ಭೇಟಿಮಾಡಿ ಮಹಿಳೆಯರು ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಲು ಅನುಮತಿಯನ್ನು ಪಡೆದರು. ಕಮಲಾದೇವಿ ಮತ್ತು ಅವಂತೀಬಾಯಿ ಗೋಖಲೆಯವರು ಮೊದಲ ತಂಡದ ಮಹಿಳೆಯರಾಗಿ ಉಪ್ಪಿನ ಕಾನೂನು ಭಂಗ ಚಳವಳಿಯಲ್ಲಿ ಭಾಗವಹಿಸಿದರು.

"ಗಾಂಧೀ ಉಪ್ಪನ್ನು ಕೊಳ್ಳಿ ಇದರ ಬೆಲೆ ಆರು ತಿಂಗಳ ಶಿಕ್ಷೆ" ಎಂದು ಹೇಳುತ್ತಾ ಉಪ್ಪನ್ನು ಮಾರಾಟಮಾಡಿ ದಸ್ತಗಿರಿಯಾಗಿ ಯರವಾಡ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸಿದರು. ಶಿಕ್ಷೆಯನ್ನು ಅನುಭವಿಸಿ ಜೈಲಿನಿಂದ ಬಿಡುಗಡೆ ಹೊಂದಿದ ನಂತರವು ಸಹ ಬಾಂಬೆಯ ಗಬಾಕಾಪುರದಲ್ಲಿ ಸ್ವದೇಶಿ ವಸ್ತುಗಳನ್ನು ಮಾರಾಟ ಮಾಡಿದರು. ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸಿನ ಸೇವಾದಳದ ಮಹಿಳೆಯರ ತಂಡದ ಜವಾಬ್ದಾರಿಯನ್ನು ವಹಿಸಿಕೊಂಡು ದೇಶಾದ್ಯಂತ ಸಂಚರಿಸಿ ಮಹಿಳಾ ಸ್ವಯಂಸೇವಕರನ್ನು ಸಂಘಟಿಸಿದರು. ಬಾಂಬೆ ಮತ್ತು ಬೋರೀವಿಗಳಲ್ಲಿ ಮಹಿಳಾ ಸ್ವಯಂಸೇವಕ ತರಬೇತಿಯ ಶಿಬಿರಗಳನ್ನು ತೆರೆಯಲಾಯಿತು. ಸೇವಾದಳದ ಈ ಸಂಘಟಿತ ಚಟುವಟಿಕೆಗಳಿಂದಾಗಿ ಬ್ರಿಟಿಷ್ ಸರ್ಕಾರ ಸೇವಾದಳವನ್ನು ರದ್ದುಮಾಡಿ ಕಮಲಾದೇವಿಯವರನ್ನು ದಸ್ತಗಿರಿಮಾಡಿ ಆರ್ಥರ್ ರಸ್ತೆ ಜೈಲಿನಲ್ಲಿರಿಸಿತು. ಇಲ್ಲಿ ಮೀರಾಬೆಹನ್ ರವರ ಪರಿಚಯವಾಯಿತು. ನಂತರ ವೇಲೂರು ಜೈಲಿಗೆ ವರ್ಗಾಯಿಸಲಾಯಿತು.

ಕಾಂಗ್ರೆಸ್ ಪಕ್ಷದಲ್ಲಿ ಅನೇಕ ಒಳಬಣಗಳಿದ್ದವು. ಸೈದ್ಧಾಂತಿಕವಾಗಿ ಸಮಾಜವಾದದಿಂದ ಪ್ರಭಾವಗೊಂಡ ನೆಹರು, ರಾಮ ಮನೋಹರ್ ಲೋಹಿಯ, ಆಚಾರ್ಯ ನರೇಂದ್ರದೇವ ಮುಂತಾದವರು ಕಾಂಗ್ರೆಸ್ ಪಕ್ಷದಲ್ಲೆ 'ಕಾಂಗ್ರೆಸ್ ಸೊಶಿಯಲಿಸ್ಟ್ ಪಕ್ಷ' ಎಂಬ ಒಳಬಣವೊಂದನ್ನು ಸ್ಥಾಪಿಸಿದರು. ಕಮಲಾದೇವಿ ಚಟ್ಟೋಪಾಧ್ಯಾಯರು 1934 ರಲ್ಲಿ ಈ ಪಕ್ಷದ ಸದಸ್ಯತ್ವವನ್ನು ಪಡೆದರು. ಸಮಾಜವಾದ ತತ್ವಗಳ ಪ್ರಚಾರಕ್ಕಾಗಿ ಕರ್ನಾಟಕಕ್ಕೆ ಬಂದು ಸಾರ್ವಜನಿಕ ಉಪನ್ಯಾಸಗಳನ್ನು ನೀಡಿ ಜನರಲ್ಲಿ ಜಾಗೃತಿಯನ್ನು ಮೂಡಿಸಿದರು. ಇದರಿಂದ ಅನೇಕ ತೊಂದರೆಗಳಿಗೂ ಒಳಗಾದರು. ಕಮಲಾದೇವಿಯವರು ಸ್ವಾತಂತ್ರ್ಯ ಹೋರಾಟಗಾರರಷ್ಟೇ ಅಲ್ಲದೇ ಸಮಾಜ ಸುಧಾರಕರು, ಸ್ತ್ರೀವಾದಿ ಚಿಂತಕರು, ಸಾಹಿತಿ ಮತ್ತು ಚಲನಚಿತ್ರ ನಟರೂ ಆಗಿದ್ದರು. ಇವರು ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆಗಾಗಿ 1955ರಲ್ಲಿ ಪದ್ಮಭೂಷಣ, 1962 ರಲ್ಲಿ ವತ್‌ಮುಲ್ ಫೌಂಡೇಶನ್ ಪ್ರಶಸ್ತಿ, 1966 ರಲ್ಲಿ ರಾಮನ್ ಮ್ಯಾಗಸೇ ಇಂಟರ್ ನ್ಯಾಷನಲ್ ಪ್ರಶಸ್ತಿ, ಶಾಂತಿಭಾರತ ದೆಸೆಟೀಕೊತ್ತಂ ಪ್ರಶಸ್ತಿ, ಸೆಂಟ್ರಲ್ ಅಕಾಡೆಮಿ ಪ್ರಶಸ್ತಿ ಮತ್ತು 1987 ರಲ್ಲಿ ಪದ್ಮವಿಭೂಷಣ ಪ್ರಶಸ್ತಿ ಗೌರವ ಲಭಿಸಿವೆ. ಇಂತಹ ಬಹುಮುಖ ಪ್ರತಿಭೆಯವರಾಗಿದ್ದ ಕಮಲಾದೇವಿ ಚಟ್ಟೋಪಾಧ್ಯಾಯರವರು ಕರ್ನಾಟಕದ ಹೆಮ್ಮೆ. ಇವರು 1988 ರಲ್ಲಿ ತೀರಿಕೊಂಡರು.

ಯಶೋಧರಮ್ಮ ದಾಸಪ್ಪ (1905 – 1980)

ಯಶೋಧರಮ್ಮನವರು ದಿನಾಂಕ 28–5–1905ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ತಂದೆ ರಾಮಯ್ಯ, ತಾಯಿ ರೇವಮ್ಮ. ತಂದೆಯವರು ಸುಧಾರಣಾ ಮನೋಭಾವ ವ್ಯಕ್ತಿತ್ವದವರಾಗಿದ್ದರು. ಬೆಂಗಳೂರಿನಲ್ಲಿ ಆರಂಭಿಕ ಶಿಕ್ಷಣವನ್ನು ಮುಗಿಸಿ ನಂತರ ಮದ್ರಾಸ್‌ನ ಕ್ವೀನ್ ಮೇರಿ ಕಾಲೇಜಿಗೆ ಪ್ರವೇಶ ಪಡೆದು ಇಂಟರ್ ಮೀಡಿಯೇಟ್ ಶಿಕ್ಷಣ ಮುಗಿಸಿದರು. ಬೆಂಗಳೂರಿಗೆ ವಾಪಸ್ಸಾದ ನಂತರ ರಾವ್ ಸಾಹೇಬ್ ಚೆನ್ನಯ್ಯನವರ ಮೂರನೇ ಪುತ್ರ ದಾಸಪ್ಪನವರೊಂದಿಗೆ 1926ರಲ್ಲಿ ವಿವಾಹವಾಗಿ ವೈವಾಹಿಕ ಜೀವನಕ್ಕೆ ಕಾಲಿಟ್ಟರು. ದಾಸಪ್ಪ ಮತ್ತು ಯಶೋಧರಮ್ಮ ದಾಸಪ್ಪ

ಅವರು ಸಮಾಜ ಸೇವಕರು. ಗಾಂಧೀಜಿಯವರ ಪ್ರಭಾವಕ್ಕೊಳಗಾಗಿ ರಾಷ್ಟ್ರೀಯ ಕಾಂಗ್ರೆಸ್‌ನ ಸಕ್ರಿಯ ಕಾರ್ಯಕರ್ತರಾದರು. ವಾರ್ದಸೇವಾಗ್ರಾಮದಲ್ಲಿ ಕೆಲಕಾಲ ಸೇವೆಸಲ್ಲಿಸಿ ದಂಪತಿಗಳಿಬ್ಬರು ವಾಪಸ್ಸಾದರು. ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿಯಲ್ಲಿ ನಿರಂತರವಾಗಿ ತೊಡಗಿಸಿಕೊಂಡು ಸ್ವಾತಂತ್ರ್ಯ ನಂತರ ಮೈಸೂರು ಭಾರತ ಒಕ್ಕೂಟಕ್ಕೆ ಸೇರಿದ್ದಕ್ಕೆ ಸಾಕ್ಷಿಪ್ರಜ್ಞೆಯಾದರು.

ಮೈಸೂರು ನ್ಯಾಯವಿಧೇಯಕ ಸಭೆಗೆ ನಡೆದ ಚುನಾವಣೆಯಲ್ಲಿ ತಮ್ಮ ಪತಿ ಎಚ್. ಸಿ. ದಾಸಪ್ಪನವರು ಪ್ರಜಾ ಸಂಯುಕ್ತ ಪಕ್ಷದ ಅಭ್ಯರ್ಥಿಯಾದರೂ ಯಶೋಧರಮ್ಮರವರು ಕಾಂಗ್ರೆಸ್‌ನ ಸದಸ್ಯರಾಗಿ ಉಳಿದರು. ಸಮಾಜ ಸೇವಕಿಯಾಗಿ ತೊಡಗಿಸಿಕೊಂಡ ಯಶೋಧರಮ್ಮರವರು ಸ್ವಾತಂತ್ರ್ಯ ಹೋರಾಟದ ಭಾಗವಾಗಿದ್ದ 1938 ರ ಶಿವಪುರ ಧ್ವಜಸತ್ಯಾಗ್ರಹದಲ್ಲಿ ಭಾಗವಹಿಸಿದರು. 1942 ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಯಶೋಧರಮ್ಮ ದಾಸಪ್ಪರವರ ಮನೆ ಸ್ವಾತಂತ್ರ್ಯ ಹೋರಾಟಕ್ಕೆ ಪೂರಕವಾದ ಭೂಗತ ಚಟುವಟಿಕೆಗಳ ಕೇಂದ್ರವಾಗಿತ್ತು. ಚಳುವಳಿ ಕುರಿತ ಲೇಖನಗಳನ್ನು ಗುಟ್ಟಾಗಿ ಮುದ್ರಿಸಿ 'ಜ್ವಾಲೆ' ಪತ್ರಿಕೆಯಲ್ಲಿ ಪ್ರಕಟಿಸಿದರು.

ಮೈಸೂರು ಸಂಸ್ಥಾನದಲ್ಲಿ ಪ್ರಜಾ ಸರ್ಕಾರ ಸ್ಥಾಪನೆಗಾಗಿ 1947ರಲ್ಲಿ ನಡೆದ ಮೈಸೂರು ಚಲೋ ಚಳುವಳಿಯಲ್ಲಿ ಯಶೋಧರಮ್ಮ ದಾಸಪ್ಪನವರು ಜನರನ್ನು ಸಂಘಟಿಸುವಲ್ಲಿ ನೆರವಾದರು. ಮೈಸೂರು ಅರಮನೆಯ ಮುಂದೆ ಹರತಾಳ, ಮುಷ್ಕರಗಳು ನಡೆದವು. ಈ ಚಳುವಳಿಯ ತೀವ್ರತೆಯನ್ನು ಮನಗಂಡ ಮಹಾರಾಜರು ಅಧಿಕಾರವನ್ನು ಜನತೆಗೆ ಹಸ್ತಾಂತರಿಸಿದರು. ಸ್ವಾತಂತ್ರ್ಯ ಸಂಸ್ಥಾನದಲ್ಲಿ ಶಾಸಕರಾಗಿ, ಲೋಕಸಭಾ ಸದಸ್ಯರಾಗಿ, ಎಸ್. ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಸಮಾಜಕಲ್ಯಾಣ ಸಚಿವರಾಗಿ ಅನುಪಮ ಸೇವೆ ಸಲ್ಲಿಸಿದ ಈ ಬಹುಮುಖ ಪ್ರತಿಭೆ ವ್ಯಕ್ತಿತ್ವದ ಯಶೋಧರಮ್ಮ ದಾಸಪ್ಪನವರು ಕ್ಯಾನ್ಸರ್ ಕಾಯಿಲೆಯಿಂದ 1980 ರಲ್ಲಿ ತೀರಿಕೊಂಡರು.

ಉಮಾಬಾಯಿ ಕುಂದಾಪುರ (1892 – 1992)

ಉಮಾಬಾಯಿ ಕುಂದಾಪುರ

ಉಮಾಬಾಯಿ ಕುಂದಾಪುರರವರು ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ 1892 ರಲ್ಲಿ ಜನಿಸಿದರು. ತಂದೆ ಗೊಲಿಕೆರೆ ಕೃಷ್ಣರಾಯ, ತಾಯಿ ತುಂಗಾಬಾಯಿ. ತಮ್ಮ 13ನೇ ವಯಸ್ಸಿನಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಗುರುತಿಸಿಕೊಂಡಿದ್ದ ಸಂಜೀವ್ ರಾವ್ ರವರನ್ನು ವಿವಾಹವಾದರು. ಪತಿಯ ಪ್ರೋತ್ಸಾಹದಿಂದ 1921 ರ ನಂತರ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರು. ಖಾದಿ ದಾರಿಗಳಾಗಿ ಕಾಂಗ್ರೆಸ್ ಚಟುವಟಿಕೆಗಳ ಪ್ರಭಾರ ಕಾರ್ಯವನ್ನು ಕೈಗೊಂಡರು. ದುರದೃಷ್ಟವಶಾತ್ 1923 ರಲ್ಲಿ ಪತಿಯನ್ನು ಕಳೆದುಕೊಂಡ ನಂತರ ಹುಬ್ಬಳ್ಳಿಯಲ್ಲಿ ನೆಲೆಸಿದರು.

ಇವರು ತಿಲಕ್ ಗಾಂಧೀ ಮತ್ತು ಹರ್ಡೇಕರ್ ರವರ ರಾಷ್ಟ್ರೀಯತೆಯ ಆಲೋಚನೆಗಳಿಂದ ಪ್ರಭಾವಿತರಾಗಿ ಮರಾಠಿ ಭಾಷೆಯಲ್ಲಿ 'ಸ್ವದೇಶಿ ವ್ರತ' ಎಂಬ ನಾಟಕವನ್ನು ರಚಿಸಿ ಸ್ವದೇಶಿ ತತ್ವದ ಮಹತ್ವವನ್ನು ಸಾರಿದರು. ಮುಂಬೈಯಲ್ಲಿ ಸಾರಸ್ವತ ಸಾಹಿತ್ಯಿಕ ಸಮಾಜ ಮತ್ತು ಭಗಿನೀ ಮಂಡಳಿ ಹಾಗೂ ತಿಲಕ್ ಶಾಲೆಯ ಜವಾಬ್ದಾರಿಯನ್ನು ವಹಿಸಿಕೊಂಡರು. ಇವು ಸ್ತ್ರೀಯರಲ್ಲಿ ಸ್ವದೇಶಿ, ಖಾದಿ ಪ್ರಚಾರ, ರಾಷ್ಟ್ರೀಯ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸಿದವು. ತಿಲಕರ ಕಾಲದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರು ಗಾಂಧೀಜಿಯವರ ನೇತೃತ್ವದ ಹೋರಾಟದಲ್ಲೂ ಭಾಗವಹಿಸಿದ್ದರು. 1923ರಲ್ಲಿ ಎನ್. ಎಸ್. ಹರ್ಡೇಕರ್ ರವರು ಸ್ಥಾಪಿಸಿದ ಸೇವಾದಳದ ಮಹಿಳಾ ಗುಂಪಿನ ನಾಯಕತ್ವವನ್ನು ವಹಿಸಿಕೊಂಡು 1924 ರ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಮುಖ ಪಾತ್ರವಹಿಸಿದರು. ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಇದರಿಂದ ನಾಲ್ಕು ತಿಂಗಳ ಕಾಲ ಹಿಂಡಲಗ ಮತ್ತು ಯರವಾಡ ಜೈಲುಗಳಲ್ಲಿ ಬಂಧನದಲ್ಲಿದ್ದರು. ಜೈಲಿನಿಂದ ಬಿಡುಗಡೆ ಹೊಂದಿದ ನಂತರ ಅಂಕೋಲ, ಶಿರಸಿ, ಸಿದ್ದಾಪುರ ಮುಂತಾದ ಕಡೆ ನಡೆದ ಸತ್ಯಾಗ್ರಹಗಳಲ್ಲಿ ಭಾಗವಹಿಸಿ ಶಿಕ್ಷೆ ಅನುಭವಿಸಿದರು. ಉಮಾಬಾಯಿ ಕುಂದಾಪುರರವರು ಅನೇಕ ನಿರಾಶ್ರಿತ ಮಹಿಳೆಯವರಿಗೆ ಆಶ್ರಯದಾತರಾದರು. ಅನಾರೋಗ್ಯದ ಕಾರಣದಿಂದ 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸದಿದ್ದರೂ ಈ ಚಳುವಳಿಯಲ್ಲಿ ಭಾಗವಹಿಸಿದ ಭೂಗತ ಕಾರ್ಯಕರ್ತರಿಗೆ ಆಶ್ರಯ ನೀಡುವ ಮೂಲಕ ಚಳುವಳಿಯನ್ನು ಬೆಂಬಲಿಸಿದರು. ಗಾಂಧೀಜಿಯವರ ಸಲಹೆಯಂತೆ ಕಸ್ತೂರ ಬಾ ನಿಧಿಯ ಜವಾಬ್ದಾರಿಯನ್ನು ವಹಿಸಿಕೊಂಡು ಸಮಾಜ ಸುಧಾರಣೆ ಕೆಲಸವನ್ನು ಮುಂದುವರಿಸಿದರು. ಇಂತಹ ನಿಸ್ವಾರ್ಥ ವ್ಯಕ್ತಿತ್ವವುಳ್ಳ ಭಾರತ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮನ್ನು ಇಡಿಯಾಗಿ ಸಮರ್ಪಿಸಿಕೊಂಡ ಉಮಾಬಾಯಿ ಕುಂದಾಪುರರವರು 1992 ರಲ್ಲಿ ಮರಣ ಹೊಂದಿದರು.

ಅಭ್ಯಾಸಗಳು

I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಭರ್ತಿಮಾಡಿ.

1. ರಾಣಿ ಅಬ್ಬಕ್ಕನ ಸ್ಮರಣಾರ್ಥವಾಗಿ ಉಳ್ಳಾಲದಲ್ಲಿ _____ ಆಚರಿಸುತ್ತಾರೆ.
2. ಬಳ್ಳಾರಿ ಸಿದ್ಧಮ್ಮ _____ ರಲ್ಲಿ ಜನಿಸಿದರು.
3. 1938ರಲ್ಲಿ ಯಶೋಧರಮ್ಮನವರು _____ ದಲ್ಲಿ ಭಾಗವಹಿಸಿದರು.
4. ಯಶೋಧರಮ್ಮನವರು _____ ಸಚಿವರಾಗಿದ್ದರು.
5. ಸ್ವದೇಶಿ ವ್ರತ ನಾಟಕ ರಚಿಸಿದವರು _____ .

II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ. ಉತ್ತರಿಸಿ.

1. ಉಳ್ಳಾಲದ ರಕ್ಷಣೆಯಲ್ಲಿ ಪೋರ್ಚುಗೀಸರ ವಿರುದ್ಧ ರಾಣಿ ಅಬ್ಬಕ್ಕ ದೇವಿಯ ಹೋರಾಟವನ್ನು ವಿವರಿಸಿ.
2. 'ಬಹುಮುಖ ಪ್ರತಿಭೆಯವರಾಗಿದ್ದ ಕಮಲಾದೇವಿ ಚಟೋಪಾಧ್ಯಾಯರವರು ಕರ್ನಾಟಕದ ಹೆಮ್ಮೆ' ಸಮರ್ಥಿಸಿ.
3. ಸ್ವಾತಂತ್ರ್ಯ ಹೋರಾಟಕ್ಕೆ ಉಮಾದೇವಿ ಕುಂದಾಪುರರವರು ನೀಡಿದ ಕೊಡುಗೆಗಳನ್ನು ಪಟ್ಟಿ ಮಾಡಿ.

III. ಚಟುವಟಿಕೆಗಳು

1. ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ ಮಹಿಳೆಯರ ಜೀವನ ಚರಿತ್ರೆಗಳನ್ನು ಓದಿ.
2. ಸ್ವಾತಂತ್ರ್ಯಾನಂತರ ಕರ್ನಾಟಕದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಕುರಿತು ಭಾಷಣ ಸ್ಪರ್ಧೆ ಏರ್ಪಡಿಸಿ.

☆ ☆ ☆

ಪಾಠ 09	ಕರ್ನಾಟಕದ ಏಕೀಕರಣ ಮತ್ತು ಗಡಿ ವಿವಾದಗಳು

ಪಾಠದ ಪರಿಚಯ

ಕನ್ನಡ ನಾಡಿಗೆ ಸುಮಾರು ಎರಡು ಸಾವಿರ ವರ್ಷಗಳಿಗೂ ಹೆಚ್ಚಿನ ಚರಿತ್ರೆಯಿದೆ. ಕನ್ನಡಿಗರು ಚಾರಿತ್ರಿಕವಾಗಿ ಬೇರೆ ಬೇರೆ ರಾಜಕೀಯ ವ್ಯವಸ್ಥೆಗಳಲ್ಲಿ ಬದುಕಿದವರು. ವಿಜಯನಗರ ಸಾಮ್ರಾಜ್ಯದ ಪತನದ ನಂತರ ಕನ್ನಡ ಭಾಷಿಕ ಪ್ರದೇಶಗಳು ಮರಾಠ ಪೇಶ್ವೆಗಳು, ಪಾಳೆಯಗಾರರು, ಇಂಗ್ಲಿಷರು, ಸುಲ್ತಾನರು, ನವಾಬರು ಮುಂತಾದವರ ಆಳ್ವಿಕೆಯಲ್ಲಿ ಇಪ್ಪತ್ತು ಆಡಳಿತ ಘಟಕಗಳಲ್ಲಿ ಹಂಚಿಹೋಗಿದ್ದವು. ಇದರಿಂದ ಕನ್ನಡಿಗರು ಕನ್ನಡ ನೆಲದಲ್ಲಿಯೇ ಪರಕೀಯತೆಯ ಭಾವನೆಯನ್ನು ಅನುಭವಿಸುತ್ತಿದ್ದರು. ಕರ್ನಾಟಕ ಏಕೀಕರಣ ಚಳವಳಿಯ ವಿವಿಧ ಹಂತಗಳನ್ನು ಪರಿಚಯಿಸಲಾಗಿದೆ. ಪ್ರಸ್ತುತ ಚಾಲ್ತಿಯಲ್ಲಿರುವ ಗಡಿ ವಿವಾದಗಳನ್ನು ಕೂಡ ತಿಳಿಸಲಾಗಿದೆ.

ಸಾಮರ್ಥ್ಯಗಳು

1] ಕರ್ನಾಟಕ ಏಕೀಕರಣದ ಹಿನ್ನೆಲೆ ಹಾಗೂ ಚಳವಳಿಯ ಪ್ರಮುಖ ಹಂತಗಳನ್ನು ಅರಿಯುವುದು.

2] ಏಕೀಕರಣ ಚಳುವಳಿಯನ್ನು ರೂಪಿಸಿದ ಮಹನೀಯರ ಬಗ್ಗೆ ತಿಳಿಯುವುದು.

3] 1956ರ ನಂತರ ಹುಟ್ಟಿಕೊಂಡ ಗಡಿ ವಿವಾದಗಳನ್ನು ಅರ್ಥೈಸಿಕೊಂಡು ಪರಿಹಾರವನ್ನು ಸೂಚಿಸುವುದು.

1. ಕರ್ನಾಟಕ ಏಕೀಕರಣದ ಚಾರಿತ್ರಿಕ ಹಿನ್ನೆಲೆ

'ಕವಿರಾಜಮಾರ್ಗ' ಕೃತಿಯಲ್ಲಿ ಕನ್ನಡ ನಾಡು ಕಾವೇರಿಯಿಂದ ಗೋದಾವರಿಯವರೆಗೆ ಇತ್ತು ಎಂದು ವರ್ಣಿಸಲಾಗಿದೆ. ಅನೇಕ ಕನ್ನಡ ಅರಸುಮನೆತನಗಳು ಈ ಭಾಗವನ್ನು ಆಳಿದವು. ಆದರೆ ವಿಜಯನಗರ ಸಾಮ್ರಾಜ್ಯದ ಪತನಾನಂತರ ಕನ್ನಡ ಪ್ರದೇಶಗಳು ರಾಜಕೀಯ ಸ್ಥಿತ್ಯಂತರಗಳಿಗೆ ಒಳಗಾದವು. ರಾಜಕೀಯವಾಗಿ ಮೇಲುಗೈ ಸಾಧಿಸಿದ ಶಕ್ತಿಗಳು ಕನ್ನಡ ಮತ್ತು ಕನ್ನಡಿಗರನ್ನು ಗೌಣವಾಗಿಸಿದವು. ಟಿಪ್ಪುವಿನ ಮರಣದ ನಂತರ ಬ್ರಿಟಿಷರು ಕನ್ನಡ ಭಾಷೆಯನ್ನಾಡುವ ಪ್ರದೇಶಗಳನ್ನು ಬೇರೆ ಬೇರೆ ಭಾಷಿಕ ಹಿನ್ನೆಲೆಯ 20 ಆಡಳಿತಾತ್ಮಕ ಘಟಕಗಳಲ್ಲಿ ಹಂಚಿದರು. ಕನ್ನಡಿಗರು ಮರಾಠ, ನಿಜಾಮ ಮುಂತಾದವರ ಅಧೀನದಲ್ಲಿ ಪರಕೀಯ ಭಾವನೆಯಿಂದ ಬದುಕುವ ಅನಿವಾರ್ಯತೆ ಎದುರಾಯಿತು. ಇಂತಹ ಪ್ರತಿಕೂಲ ಸನ್ನಿವೇಶಗಳಿಂದ ಹೊರಬಂದ ಕನ್ನಡಿಗರು ಒಂದು ರಾಜ್ಯವನ್ನು ಕಟ್ಟಿಕೊಂಡು, ಒಂದೇ ಆಡಳಿತದಲ್ಲಿರಲು ಹೋರಾಟಗಳನ್ನು ನಡೆಸಿದರು. ಇದನ್ನೇ ಏಕೀಕರಣ ಚಳವಳಿಯೆಂದು ಕರೆಯಲಾಗಿದೆ.

ಏಕೀಕರಣದ ಆರಂಭಿಕ ಹೆಜ್ಜೆಯನ್ನು ಇಟ್ಟವರು ಮುಂಬೈ ಕರ್ನಾಟಕ ಭಾಗದ ಜನರು. ರಾ.ಹ. ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ 1890ರಲ್ಲಿ ಆರಂಭವಾದ 'ಕರ್ನಾಟಕ ವಿದ್ಯಾವರ್ಧಕ ಸಂಘ' ಏಕೀಕರಣ ಕಲ್ಪನೆಗೆ ಸಾಂಸ್ಥಿಕ ರೂಪವನ್ನು ನೀಡಿತು.

ಚಟುವಟಿಕೆ : ಮುಂಬೈ ಕರ್ನಾಟಕ ಪ್ರದೇಶದಲ್ಲಿ ಕನ್ನಡ ಶಾಲೆಗಳನ್ನು ಆರಂಭಿಸಲು ಶ್ರಮಿಸಿದ 'ಕನ್ನಡದ ಹುಲಿ' ಡೆಪ್ಯುಟಿ ಚೆನ್ನಬಸಪ್ಪನವರ ಬಗೆಗೆ ಮಾಹಿತಿಯನ್ನು ಸಂಗ್ರಹಿಸಿರಿ.

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರಿನಲ್ಲಿ 1915ರಲ್ಲಿ ಸ್ಥಾಪಿತವಾಯಿತು. ಇದು ಕರ್ನಾಟಕದ ಏಕೀಕರಣಕ್ಕೆ ಪ್ರೋತ್ಸಾಹ, ಕನ್ನಡ ಭಾಷೆ ಮತ್ತು ಸಾಹಿತ್ಯದ ಸರ್ವತೋಮುಖ ಬೆಳವಣಿಗೆ ಮುಂತಾದ ಗುರಿಗಳನ್ನು ಹೊಂದಿತ್ತು. ಕರ್ನಾಟಕ ಏಕೀಕರಣ ಸಭಾವನ್ನು ಧಾರವಾಡದಲ್ಲಿ 1916ರಲ್ಲಿ ಪ್ರಾರಂಭಿಸಲಾಯಿತು. ಈ ಸಂಘಟನೆಗಳು ಕರ್ನಾಟಕ ಏಕೀಕರಣ ಚಳವಳಿಯನ್ನು ಮುಂದುವರೆಸಿದವು.

1924 ರಲ್ಲಿ ನಡೆದ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಹುಯಿಲಗೋಳ ನಾರಾಯಣರಾವ್ ಅವರು 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಎಂಬ ಸ್ವಾಗತಗೀತೆಯನ್ನು ಹಾಡುವ ಮೂಲಕ ಏಕೀಕರಣ ಚಳುವಳಿಗೆ ವಿದ್ಯುತ್ ಸಂಚಲನವನ್ನು ತಂದುಕೊಟ್ಟರು. ಈ ಸಮ್ಮೇಳನದ ಅಧ್ಯಕ್ಷರಾಗಿದ್ದ ಮಹಾತ್ಮ ಗಾಂಧೀಜಿಯವರು ಏಕೀಕರಣಕ್ಕೆ ತಮ್ಮ ಬೆಂಬಲವನ್ನು ನೀಡಿದರು. ಏಕೀಕರಣ ಚಳವಳಿಯು ಸ್ವಾತಂತ್ರ್ಯ ಚಳವಳಿಗೆ ಪೂರಕವಾಗಿಯೆ ಕೆಲಸ ಮಾಡಿತು.

ಚಟುವಟಿಕೆ : ಏಕೀಕರಣಕ್ಕೆ ದುಡಿದ ಸಾಹಿತಿಗಳ ಹೆಸರನ್ನು ಪಟ್ಟಿಮಾಡಿ. ಬಿ.ಎಂ.ಶ್ರೀ ಅವರ ಬಗೆಗೆ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿ.

2. ಏಕೀಕರಣ ಚಳವಳಿಯಲ್ಲಿ ಪತ್ರಿಕೋದ್ಯಮ ಮತ್ತು ಸಾಹಿತ್ಯದ ಪಾತ್ರ

ವಿಶ್ವಕರ್ನಾಟಕ, ನವಕರ್ನಾಟಕ, ವಾಗ್ಭೂಷಣ, ಜಯಕರ್ನಾಟಕ, ಸಂಯುಕ್ತ ಕರ್ನಾಟಕ ಮೊದಲಾದ ದಿನಪತ್ರಿಕೆಗಳು, ವಾರಪತ್ರಿಕೆಗಳು ಏಕೀಕರಣ ಚಳವಳಿಗೆ ಪ್ರೇರಣೆ ನೀಡಿದವು. ಈ ಪತ್ರಿಕೆಗಳು ವಿವಿಧ ಭಾಗಗಳಿಂದ ಪ್ರಕಟಗೊಳ್ಳುತ್ತಿದ್ದವು. ಇದರ ಜೊತೆಗೆ ಸಾಹಿತ್ಯ ಕೃತಿಗಳು ಏಕೀಕರಣಕ್ಕೆ ಸ್ಫೂರ್ತಿ ತುಂಬಿದವು.

ಕರ್ನಾಟಕದ ನಾಡುನುಡಿ ಸಂಸ್ಕೃತಿಗಳ ಸಂವರ್ಧನೆಗಾಗಿ ಶ್ರಮಿಸಿದ ಹಿರಿಯರೆಂದರೆ ಆಲೂರು ವೆಂಕಟರಾಯರು. ಕರ್ನಾಟಕದ ಅಂದಿನ ದುಃಸ್ಥಿತಿಯನ್ನು ಕಂಡು ಅವರು ಹೀಗೆಂದು ಉದ್ಗರಿಸಿದ್ದರು: "ಛೇ, ಕರ್ನಾಟಕವೆಲ್ಲಿದೆ?... ನಾಲ್ಕಾರು ಕಡೆ ಹರಿದು ಹಂಚಿಹೋದ ಕರ್ನಾಟಕವನ್ನು ಹೊಲಿದು ಅಖಂಡವಾಗಿ ಮಾಡುವವರಾರು ? ಅಷ್ಟೊಂದು ಅಭಿಮಾನ ಉಂಟೇನು?"

ಕನ್ನಡನಾಡು ನುಡಿಗಳ ವೈಭವವನ್ನು ಕನ್ನಡಿಗರಿಗೆ ತಿಳಿಸುವುದೇ ಆಲೂರು ವೆಂಕಟರಾಯರ ಉದ್ದೇಶವಾಗಿತ್ತು. ಅದಕ್ಕಾಗಿ 'ಕರ್ನಾಟಕದ ಗತವೈಭವ' ಎಂಬ ಗ್ರಂಥ ಬರೆದು ತಮ್ಮ ಖರ್ಚಿನಿಂದ ಪ್ರಕಟಿಸಿದರು. ಇದು ಅತ್ಯಂತ ಸ್ಫೂರ್ತಿದಾಯಕ ಪುಸ್ತಕವಾಗಿತ್ತು. ಹೈದರಾಬಾದಿನ ಕನ್ನಡಿಗರು ಅವರಿಗೆ ಸನ್ಮಾನ ಮಾಡಿ (1941) 'ಕರ್ನಾಟಕ ಕುಲಪುರೋಹಿತ' ಎಂಬ ಬಿರುದನ್ನು ಅರ್ಪಿಸಿದರು. ಮುಂಬೈಕರ್ನಾಟಕದಲ್ಲಿ ಜಾಗೃತಿ ಮೂಡಿಬರಲು ಶಾಂತಕವಿಗಳ ಪಾತ್ರವೂ ಮಹತ್ವದ್ದಾಗಿದೆ. ಸಾಹಿತ್ಯ ಸಮ್ಮೇಳನದ ಖರ್ಚಿಗಾಗಿ "ಬೇಡಲು ಕನ್ನಡದಾಸಯ್ಯ ಬಂದಿಹ, ನೀಡಿರಮ್ಮಾ ತಡಮಾಡದೇ' ಎಂದು

ದಾಸಯ್ಯನಾಗಿ ಹಾಡಿ ಹಣ ಸಂಗ್ರಹಿಸಿದರು. ಕುವೆಂಪು ಅವರ "ಜಯಹೇ ಕರ್ನಾಟಕ ಮಾತೆ', 'ನೀ ಮೆಟ್ಟುವ ನೆಲ ಅದೇ ಕರ್ನಾಟಕ' ಮುಂತಾದವು ಲಕ್ಷೋಪಲಕ್ಷ ಕನ್ನಡಿಗರ ಹೃದಯಗಳನ್ನು ತಟ್ಟಿದವು. ಹುಯಿಲಗೋಳ ನಾರಾಯಣರಾವ್ ಅವರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ನಾಡಗೀತೆಯು ಅತ್ಯಂತ ಜನಪ್ರಿಯವಾಯಿತು. ಕಯ್ಯಾರಕಿಞ್ಞಣ್ಣ ರೈ ಅವರು ಕರ್ನಾಟಕದಲ್ಲಿ ಕಾಸರಗೋಡು ವಿಲೀನಗೊಳ್ಳಬೇಕೆಂದು ಕೊನೆಯವರೆಗೂ ಹೋರಾಡಿದರು. ಇನ್ನೂ ಅನೇಕ ಕವಿಗಳು, ಲೇಖಕರು, ಪತ್ರಕರ್ತರು ಕನ್ನಡಿಗರಲ್ಲಿ ಏಕೀಕರಣದ ಬಗ್ಗೆ ತೀವ್ರ ಅಭಿಮಾನವನ್ನು ಮೂಡಿಸಿದರು.



ಆಲೂರು ವೆಂಕಟರಾಯರು

ಹುಯಿಲಗೋಳ ನಾರಾಯಣರಾವ್



ಕುವೆಂಪು

3. ಸ್ವಾತಂತ್ರ್ಯೋತ್ತರ ಏಕೀಕರಣ ಚಳವಳಿ

ಅರ್ಧ ಶತಮಾನಕ್ಕಿಂತಲೂ ಹೆಚ್ಚು ಕಾಲಾವಧಿಯ ಏಕೀಕರಣದ ಕನಸು ನನಸಾದುದು ದೇಶ ಸ್ವಾತಂತ್ರ್ಯಗಳಿಸಿದ ಅನಂತರವೇ; ಅದೂ ಮೂರು ಹಂತಗಳಲ್ಲಿ.

1. ಮೊದಲನೆಯ ಹಂತ (ಸಾ.ಶ. 1947–48)

1947 ರ ಮೊದಲು ನಮ್ಮ ದೇಶದಲ್ಲಿ ಎರಡು ಬಗೆಯ ರಾಜ್ಯಗಳಿದ್ದವು: ಬ್ರಿಟಿಷ್ ಭಾರತದ ಪ್ರಾಂತ್ಯಗಳು ಮತ್ತು ಅರಸೊತ್ತಿಗೆಯ (ಸಂಸ್ಥಾನಿಕ) 562 ರಾಜ್ಯಗಳು. ಸಂವಿಧಾನ ಸಭೆಯು ಭಾರತವನ್ನು ಭಾಷಾವಾರು ಪ್ರಾಂತ್ಯಗಳಾಗಿ ರೂಪಿಸದೆ, ಭಾರತವನ್ನು ನಾಲ್ಕು ಬಗೆಯ ಆಡಳಿತ ಘಟಕಗಳನ್ನಾಗಿ ವಿಂಗಡಿಸಿತು. ಅವೇ ಎ,ಬಿ,ಸಿ ಮತ್ತು ಡಿ ಘಟಕಗಳು. ಅದರಂತೆ ಕರ್ನಾಟಕದ ಇಪ್ಪತ್ತು ಆಡಳಿತ ಘಟಕಗಳನ್ನು ಐದು ಘಟಕಗಳನ್ನಾಗಿ ಪುನರ್ ವಿಂಗಡಿಸಲಾಯಿತು. ಈ ಐದು ಘಟಕಗಳೆಂದರೆ ಮುಂಬೈ, ಮದ್ರಾಸ್, ಮೈಸೂರು, ಹೈದರಾಬಾದ್ ಮತ್ತು ಕೊಡಗು. ಇದು ಕರ್ನಾಟಕ ಏಕೀಕರಣದ ನಿಟ್ಟಿನಲ್ಲಿ ಮೊದಲನೆಯ ಹಂತವಾಯಿತು.

2. ಎರಡನೆಯ ಹಂತ (ಸಾ.ಶ. 1953)

1951–52 ರಲ್ಲಿ ಲೋಕಸಭೆಗೆ ಪ್ರಥಮ ಸಾರ್ವತ್ರಿಕ ಚುನಾವಣೆ ನಡೆಯಿತು. ಚುನಾವಣೆಯ ನಂತರ ಉಗ್ರ ಚಳುವಳಿಯ ಮನೋಭಾವದ 'ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್' ಎಂಬ ಪಕ್ಷ ಉದಯಿಸಿತು (1952). ಈ ಪಕ್ಷ ಏಕೀಕರಣಕ್ಕಾಗಿ ಸತ್ಯಾಗ್ರಹ ನಡೆಸಿ ಸುಮಾರು ಐದು ಸಾವಿರ ಮಂದಿ ಬಂಧಿತರಾಗಿ ಸೆರೆಮನೆ ಸೇರಿದರು. ಕೆಂಗಲ್ ಹನುಮಂತಯ್ಯ, ಎಸ್.ನಿಜಲಿಂಗಪ್ಪ ಇವರುಗಳು ಏಕೀಕರಣಕ್ಕೆ ಬೆಂಬಲವನ್ನು ನೀಡಿದರು ಮತ್ತು ಏಕೀಕರಣದ ಪರವಾಗಿ ರಾಜ್ಯದಾದ್ಯಂತ ಪ್ರವಾಸ ಕೈಗೊಂಡರು. ಪ್ರಚಾರ ಭಾಷಣಗಳನ್ನು ಮಾಡಿದರು.

1952 ರಲ್ಲಿ ಪೊಟ್ಟಿ ಶ್ರೀರಾಮುಲು ಎಂಬ ಆಂಧ್ರದ ಮುಖಂಡರು ಆಂಧ್ರ ಪ್ರಾಂತ್ಯವನ್ನು ರಚಿಸಲು ಒತ್ತಾಯಿಸಿ ಉಪವಾಸ ಕೈಗೊಂಡು 58 ದಿನಗಳ ನಂತರ ನಿಧನ ಹೊಂದಿದರು. ಆಂಧ್ರದಲ್ಲಿ ತೀವ್ರವಾದ ಗಲಭೆಗಳುಂಟಾದವು. ಈ ಘಟನೆಯ ಬಳಿಕ ಪ್ರಧಾನಿ ಜವಾಹರಲಾಲ್ ನೆಹರು ಆಂಧ್ರ ರಾಜ್ಯವನ್ನು ರಚಿಸಲು ಸರ್ಕಾರ ನಿರ್ಧರಿಸಿದೆಯೆಂದು ಘೋಷಿಸಿದರು. ಅದರಂತೆ ಆಂಧ್ರ ಪ್ರದೇಶ ರಚನೆಯಾಯಿತು.

ಆಂಧ್ರ ಪ್ರದೇಶ ರಚನೆಯಾದಾಗ ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳನ್ನು ಮೈಸೂರು ಪ್ರಾಂತಕ್ಕೆ ಸೇರಿಸಲಾಯಿತು. ಇದು ಏಕೀಕರಣದ ಎರಡನೆಯ ಹಂತ.

3. ಕೊನೆಯ ಹಂತ

ಆಂಧ್ರ ಪ್ರದೇಶ ರಚನೆಯಾದ ನಂತರ ಭಾಷೆಯ ಆಧಾರದಲ್ಲಿ ಪ್ರಾಂತ್ಯ ಪುನರ್‌ವಿಂಗಡನೆಯ ಬೇಡಿಕೆ ತೀವ್ರಗೊಂಡಿತು. ಕೇಂದ್ರ ಸರ್ಕಾರವು ರಾಜ್ಯಗಳ ಪುನರ್ ವಿಂಗಡಣೆಯನ್ನು ಕುರಿತು ವರದಿ ನೀಡಲು 'ರಾಜ್ಯ ಪುನರ್‌ವಿಂಗಡಣಾ ಆಯೋಗ'ವನ್ನು (ಎಸ್.ಆರ್.ಸಿ) ನೇಮಿಸಿತು. ಅದರ ಅಧ್ಯಕ್ಷರು ಎಸ್. ಫಜಲ್‌ಅಲಿ (ಆದ್ದರಿಂದ 'ಫಜಲ್‌ಅಲಿ ಆಯೋಗ' ಎನ್ನುವರು). ಅದರ ಇತರ ಸದಸ್ಯರು ಎಚ್.ಎನ್. ಕುಂಜ್ರು ಮತ್ತು ಕೆ.ಎಂ. ಪಣಿಕ್ಕರ್. ಆಯೋಗವು 1955 ರಲ್ಲಿ ವರದಿಯನ್ನು ಸಲ್ಲಿಸಿತು. ಅದರಂತೆ ಭಾರತದ ರಾಜ್ಯಗಳ ಪುನರ್‌ವಿಂಗಡಣೆಯು ಭಾಷೆ ಮತ್ತು ಆಡಳಿತದ ಅನುಕೂಲದ ನೆಲೆಗಳಲ್ಲಿ ನಡೆಯಿತು. ನಾಡಿನ ಎಲ್ಲ ಪಕ್ಷಗಳು ಆಯೋಗದ ವರದಿಯನ್ನು ಮಾನ್ಯ ಮಾಡಿದವು. ಆದರೆ ಕಾಸರಗೋಡನ್ನು ಕೇರಳ ರಾಜ್ಯಕ್ಕೆ ಸೇರಿಸಿದ್ದನ್ನೂ ಬಳ್ಳಾರಿ ಜಿಲ್ಲೆಯ ಕೆಲವು ತಾಲ್ಲೂಕುಗಳನ್ನು ಆಂಧ್ರಪ್ರದೇಶಕ್ಕೆ ಸೇರಿಸುವ ಕುರಿತು ಮಾಡಿದ ಸಲಹೆಗಳನ್ನೂ ಕನ್ನಡಿಗರು ಏಕಕಂಠದಿಂದ ಪ್ರತಿಭಟಿಸಿದರು.

ಕೇಂದ್ರ ಸರ್ಕಾರವು ರಾಜ್ಯ ಪುನರ್ ವಿಂಗಡಣಾ ಆಯೋಗದ ವರದಿಯನ್ನು ಒಪ್ಪಿದ್ದರಿಂದ 1956 ನವೆಂಬರ್ 1 ರಂದು 'ವಿಶಾಲ ಮೈಸೂರು ರಾಜ್ಯ' ಅಸ್ತಿತ್ವಕ್ಕೆ ಬಂತು. ಏಕೀಕೃತಗೊಂಡ ಮೈಸೂರು ರಾಜ್ಯದಲ್ಲಿ ಈ ಕೆಳಕಂಡ ಜಿಲ್ಲೆಗಳನ್ನು ಒಳಗೊಂಡಿತ್ತು.

1. ಹಳೆ ಪ್ರಾಂತದ ಮೈಸೂರು ಒಂಬತ್ತು ಜಿಲ್ಲೆಗಳು	ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ, ಹಾಸನ, ತುಮಕೂರು, ಚಿಕ್ಕಮಗಳೂರು, ಶಿವಮೊಗ್ಗ, ಮತ್ತು ಚಿತ್ರದುರ್ಗ
2. ಬೊಂಬಾಯಿ ಪ್ರಾಂತ್ಯದಿಂದ	ಬೆಳಗಾವಿ, ಧಾರವಾಡ, ವಿಜಾಪುರ (ವಿಜಯಪುರ) ಮತ್ತು ಉತ್ತರ ಕನ್ನಡ.
3. ಹೈದ್ರಾಬಾದ್ ಪ್ರಾಂತ್ಯದಿಂದ	ಗುಲ್ಬರ್ಗಾ (ಕಲಬುರಗಿ), ರಾಯಚೂರು ಮತ್ತು ಬೀದರ್
4. ಮದ್ರಾಸ್ ಪ್ರಾಂತ್ಯದಿಂದ	ದಕ್ಷಿಣ ಕನ್ನಡ ಜಿಲ್ಲೆ, ಕೊಳ್ಳೆಗಾಲ (ತಾಲ್ಲೂಕು), ಬಳ್ಳಾರಿ (ಬಳ್ಳಾರಿ 1953 ರಲ್ಲಿ ಆಂಧ್ರ ಪ್ರದೇಶ ರಚನೆಯಾದಾಗ ಸೇರ್ಪಡೆ)
5. ಸಿ ರಾಜ್ಯ	ಕೊಡಗು

.

(1956ರಲ್ಲಿ 19 ಜಿಲ್ಲೆಗಳಿದ್ದವು. ಇಂದು ಒಟ್ಟು 30 ಜಿಲ್ಲೆಗಳಿವೆ)



1956 ರಲ್ಲಿ ಏಕೀಕೃತ ವಿಶಾಲ ಮೈಸೂರು ರಾಜ್ಯಕ್ಕೆ ಎಸ್. ನಿಜಲಿಂಗಪ್ಪನವರು ಪ್ರಥಮ ಮುಖ್ಯಮಂತ್ರಿಗಳಾದರು. ಮುಂದೆ ಮುಖ್ಯಮಂತ್ರಿಗಳಾದ ಡಿ. ದೇವರಾಜ ಅರಸರು 1973 ರ ನವೆಂಬರ್ 1 ರಂದು ವಿಶಾಲ ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ಮರುನಾಮಕರಣ ಮಾಡಿದರು.

ಕೆಂಗಲ್ ಹನುಮಂತಯ್ಯ

ಎಸ್. ನಿಜಲಿಂಗಪ್ಪ

ಡಿ. ದೇವರಾಜ ಅರಸು

4. ಗಡಿ ವಿವಾದಗಳು

ರಾಷ್ಟ್ರೀಯ ದೃಷ್ಟಿಕೋನದಲ್ಲೇ ಭಾಷಾವಾರು ಪ್ರಾಂತಗಳ ರಚನೆಯನ್ನು ಪರಿಗಣಿಸಿದ್ದರಿಂದ ಗಡಿಭಾಗದ ಕೆಲವು ಪ್ರದೇಶಗಳ ಕನ್ನಡಿಗರು ಅನ್ಯಾಯಕ್ಕೆ ಒಳಗಾದರು. ಭಾಷಿಕವಾಗಿ ಬಹು ಸಂಖ್ಯಾತರಾಗಿದ್ದರೂ ಬೇರೆ ಭಾಷಿಕ ಪ್ರಾಂತ್ಯಕ್ಕೆ ಸೇರ್ಪಡೆಯಾದ್ದರಿಂದ ಅಲ್ಲಿನ ಪರಿಸ್ಥಿತಿಯಲ್ಲಿ ಅವರು ಅಲ್ಪಸಂಖ್ಯಾತರಾದರು. ಕೇರಳದ ಕಾಸರಗೋಡು, ಆಂಧ್ರಪ್ರದೇಶದ ಆಲೂರು, ಆದವಾನಿ, ರಾಯದುರ್ಗ ಮತ್ತು ಮಡಕಶಿರಾ ತಾಲ್ಲೂಕುಗಳು, ತಮಿಳುನಾಡಿನಲ್ಲಿ ಹೊಸೂರು ಮತ್ತು ತಾಳವಾಡಿ ತಾಲ್ಲೂಕುಗಳು, ಮಹಾರಾಷ್ಟ್ರದಲ್ಲಿ ಚಂದಗಡ, ಸೊಲ್ಲಾಪುರ, ಜತ್ತ, ಅಕ್ಕಲಕೋಟೆ ಈ ಪ್ರದೇಶಗಳಲ್ಲಿ ಅಧಿಕ ಕನ್ನಡ ಮಾತನಾಡುವ ಜನರಿದ್ದು ಕರ್ನಾಟಕಕ್ಕೆ ಸೇರಬೇಕಾಗಿದ್ದರೂ ಕೂಡ ಹೊರ ರಾಜ್ಯಗಳಲ್ಲಿ ಉಳಿದವು. ಹೀಗಾಗಿ ಇಂದಿಗೂ ಕರ್ನಾಟಕ ಸರ್ಕಾರ ಹಾಗೂ ಕನ್ನಡ ಹೋರಾಟಗಾರರು ಈ ಪ್ರದೇಶಗಳನ್ನು ಕರ್ನಾಟಕಕ್ಕೆ ಮರಳಿ ಪಡೆಯುವ ಆಶಾಭಾವನೆಯಿಂದ ಹೋರಾಟಗಳನ್ನು ನಡೆಸುತ್ತಿದ್ದಾರೆ. ಪ್ರಮುಖವಾಗಿ ಮಹಾರಾಷ್ಟ್ರ, ಕೇರಳ, ಆಂಧ್ರ ಪ್ರದೇಶ ಮತ್ತು ತಮಿಳುನಾಡುಗಳ ಜೊತೆ ನಿರಂತರ ಗಡಿ ಸಂಘರ್ಷ ನಡೆಯುತ್ತಿದೆ. ಈ ಸಂಘರ್ಷವನ್ನು ಇತ್ಯರ್ಥಪಡಿಸುವ ಪ್ರಯತ್ನ ನಡೆಯಬೇಕು.

ಚಟುವಟಿಕೆ : ಕನ್ನಡಾಭಿಮಾನವನ್ನು ಮೂಡಿಸುವ ಹಾಡುಗಳನ್ನು ಸಂಗ್ರಹಿಸಿರಿ.

1. ಕರ್ನಾಟಕ, ಮಹಾರಾಷ್ಟ್ರ, ಕೇರಳಗಳ ನಡುವಣ ಗಡಿ ವಿವಾದ

ಕರ್ನಾಟಕ, ಮಹಾರಾಷ್ಟ್ರ ಮತ್ತು ಕೇರಳದ ಗಡಿ ಸಮಸ್ಯೆಯನ್ನು ಬಗೆಹರಿಸಲು 1965 ರಲ್ಲಿ ಕೇಂದ್ರ ಸರ್ಕಾರ ಸುಪ್ರೀಂಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಮಹಾಜನ್‌ರವರ ಏಕಸದಸ್ಯ

ಆಯೋಗವನ್ನು ರಚಿಸಿತು. ಈ ಆಯೋಗವು ವಿವಾದಕ್ಕೊಳಗಾದ ಮೂರು ರಾಜ್ಯಗಳಲ್ಲಿ ವ್ಯಾಪಕವಾದ ಸಮೀಕ್ಷೆ ನಡೆಸಿ ಮಹಾರಾಷ್ಟ್ರದ ಅಕ್ಕಲಕೋಟೆ, ಜತ್ತ, ಕೇರಳದ ಕಾಸರಗೋಡುಗಳನ್ನು ಮೈಸೂರು ರಾಜ್ಯಕ್ಕೆ, ನಿಪ್ಪಾಣಿ, ಖಾನಾಪುರ, ಹಲ್ಯಾಳ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿತು. ಹೆಚ್ಚು ಪ್ರದೇಶ ನಿರೀಕ್ಷಿಸುತ್ತಿದ್ದ ಮಹಾರಾಷ್ಟ್ರವು ಕಡಿಮೆ ಪ್ರದೇಶ ಪಡೆಯಬೇಕಾದ್ದರಿಂದ ಈ ವರದಿಯ ಬಗ್ಗೆ ಕಿಡಿಕಾರುತ್ತಾ ಬರುತ್ತಿದೆ. ಈ ಗಡಿ ಸಮಸ್ಯೆ ಬಗೆಹರಿಯದೆ ಕೇಂದ್ರ ಸರ್ಕಾರದ ಮುಂದೆ ಹಾಗೆಯೇ ಉಳಿದಿದೆ.

I ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಕರ್ನಾಟಕ ವಿದ್ಯಾವರ್ಧಕ ಸಂಘ ಯಾವ ವರ್ಷ ಸ್ಥಾಪಿತವಾಯಿತು?
2. 'ಕರ್ನಾಟಕ ಕುಲಪುರೋಹಿತ' ಎಂದು ಯಾರನ್ನು ಕರೆಯುತ್ತಾರೆ?
3. ಕರ್ನಾಟಕ ಏಕೀಕರಣಕ್ಕೆ ಕೊಡುಗೆ ನೀಡಿದ ಎರಡು ಸಂಘಟನೆಗಳನ್ನು ಹೆಸರಿಸಿರಿ?
4. 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಗೀತೆಯನ್ನು ಬರೆದವರು ಯಾರು?
5. ವಿಶಾಲ ಮೈಸೂರು ರಾಜ್ಯ ಯಾವಾಗ ಅಸ್ತಿತ್ವಕ್ಕೆ ಬಂದಿತು?
6. ವಿಶಾಲ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಯಾರು ಮತ್ತು ಯಾವಾಗ ನಾಮಕರಣ ಮಾಡಿದರು?

II ಈ ಕೆಳಗಿನ ಪ್ರಶ್ನೆಗಳನ್ನು ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.

1. ಕರ್ನಾಟಕ ಏಕೀಕರಣಕ್ಕೆ ಪ್ರೇರಣೆನೀಡಿದ ಕವಿಗಳು ಯಾರು ಮತ್ತು ಅವರ ಕವಿತೆಗಳು ಯಾವುವು?
2. ರಾಜ್ಯ ಪುನರ್ ವಿಂಗಡಣಾ ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರು ಯಾರು?

ಚಟುವಟಿಕೆ :

1. ಕರ್ನಾಟಕದ ಅಂದವಾದ ನಕ್ಷೆ ಬಿಡಿಸಿ ಜಿಲ್ಲಾ ಕೇಂದ್ರಗಳನ್ನು ಗುರುತಿಸಿ.
2. ಏಕೀಕೃತ ಕರ್ನಾಟಕದ (1956) ಗಡಿಗಳನ್ನು ಭಾರತದ ಭೂಪಟದಲ್ಲಿ ಗುರುತಿಸಿ.
3. 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಮತ್ತು ಗೋವಿಂದ ಪೈಯವರ 'ಕನ್ನಡಿಗರ ತಾಯಿ' ಈ ಹಾಡುಗಳನ್ನು ಗುಂಪಾಗಿ ಹಾಡಿರಿ.

☆ ☆ ☆

ಪಾಠ 10 ನಮ್ಮ ರಕ್ಷಣಾ ಪಡೆಗಳು

ಪಾಠದ ಪರಿಚಯ

ಈ ಪಾಠದಲ್ಲಿ ನಮ್ಮ ರಕ್ಷಣಾಪಡೆಗಳ ವಿಭಾಗಗಳು, ಕಾರ್ಯಗಳು, ತರಬೇತಿ ಕೇಂದ್ರಗಳು, ಅತ್ಯಾಧುನಿಕ ಶಸ್ತ್ರಾಸ್ತ್ರಗಳು, ಕೇಂದ್ರ ಕಚೇರಿ ಮುಂತಾದವುಗಳ ಪರಿಚಯವನ್ನು ನೀಡಲಾಗಿದೆ. ಜೊತೆಗೆ ಪೂರಕ ರಕ್ಷಣಾಪಡೆಗಳು, ಸಹಾಯಕ ರಕ್ಷಣಾಪಡೆಗಳು ಮತ್ತು ನಾಗರಿಕ ರಕ್ಷಣಾಪಡೆಗಳ ಬಗೆಗೆ ಈ ಪಾಠದಲ್ಲಿ ನಿರೂಪಣೆಯಿದೆ.

ಸಾಮರ್ಥ್ಯಗಳು

1] ನಮ್ಮ ರಕ್ಷಣಾಪಡೆಗಳ ಬಗೆಗೆ ತಿಳಿದುಕೊಳ್ಳುವುದು.

2] ಭೂಸೇನೆ, ನೌಕಾದಳ ಮತ್ತು ವಾಯುಪಡೆಗಳ ಬಗೆಗೆ ಅರ್ಥೈಸಿಕೊಳ್ಳುವುದು.

3] ರಕ್ಷಣಾಪಡೆಗಳ ಸಾಮರ್ಥ್ಯಗಳನ್ನು ಅರಿತುಕೊಳ್ಳುವುದು.

4] ಪೂರಕ ರಕ್ಷಣಾಪಡೆಗಳ ಸೇವೆಯನ್ನು ಅರಿತು ಹೆಮ್ಮೆಪಡುವುದು.

5] ಸಹಾಯಕ ಸೇನಾಪಡೆಗಳ ಸ್ವಯಂಸೇವೆಯನ್ನು ಕುರಿತಾಗಿ ಅಭಿಮಾನಪಡುವುದು.

ರಕ್ಷಣಾಪಡೆಗಳು

ದೇಶವನ್ನು ಪರಕೀಯರ ಆಕ್ರಮಣಗಳಿಂದ ರಕ್ಷಿಸುವುದು ರಾಷ್ಟ್ರದ ಪ್ರಥಮ ಕರ್ತವ್ಯ. ಈ ಕಾರ್ಯವನ್ನು ರಕ್ಷಣಾಪಡೆಗಳಿಗೆ ನೀಡಲಾಗಿದೆ. ಆದುದರಿಂದ ರಕ್ಷಣಾಪಡೆಗಳ ಪಾತ್ರ ಮಹತ್ವದ್ದಾಗಿದೆ. ಭಾರತವು ಶಿಸ್ತು, ಸಾಮರ್ಥ್ಯ ಹೊಂದಿದ ಹಾಗೂ ಪರಾಕ್ರಮಶಾಲಿಯಾದ ರಕ್ಷಣಾಪಡೆಯನ್ನು ಹೊಂದಿರುವುದು ಹೆಮ್ಮೆಯ ವಿಷಯ. ಸ್ವಾತಂತ್ರ್ಯ ಬಂದ ಮೇಲೆ ನಮ್ಮ ದೇಶದ ಸಮಗ್ರತೆಗೆ ಸವಾಲುಗಳು ಎದುರಾದಾಗ ನಾವು ಅವನ್ನು ಸಮರ್ಥವಾಗಿ ಎದುರಿಸಿದ್ದೇವೆ. ಉದಾಹರಣೆಗೆ– ಚೀನ ಮತ್ತು ಪಾಕಿಸ್ತಾನದ ದಾಳಿಗಳು. ನಮ್ಮ ಸೇನಾಪಡೆಗಳು ತಾಯಿನಾಡಿಗಾಗಿ ಎಲ್ಲಾ ತ್ಯಾಗಕ್ಕೂ ಸಿದ್ಧ ಎಂಬುದನ್ನು ಕಾರ್ಗಿಲ್ ಯುದ್ಧದಲ್ಲಿ ಪ್ರದರ್ಶಿಸಿದ್ದೇವೆ.

- ಭಾರತವು 15,200 ಕಿ.ಮೀ. ಭೂಗಡಿ ಪ್ರದೇಶವನ್ನು ಮತ್ತು 7516.5 ಕಿ.ಮೀ. ಜಲಗಡಿ ಪ್ರದೇಶವನ್ನು ಹೊಂದಿದೆ.
- ದೇಶದ ರಕ್ಷಣಾ ವ್ಯವಸ್ಥೆಗೆ ಆಯವ್ಯಯದ ಶೇ.40 ಕ್ಕಿಂತ ಹೆಚ್ಚಿನ ಹಣಕಾಸನ್ನು ಮೀಸಲು ಇಡಲಾಗುತ್ತದೆ.

ರಕ್ಷಣಾಪಡೆಗಳ ಜವಾಬ್ದಾರಿಗಳು

- ದೇಶದ ಗಡಿಪ್ರದೇಶಗಳ ರಕ್ಷಣೆ.

- ದೇಶದ ಸಮಗ್ರತೆಯನ್ನು ಕಾಪಾಡುವುದು.
- ಕಳ್ಳಸಾಗಾಣಿಕೆ ಮತ್ತು ಕಾನೂನುಬಾಹಿರ ಚಟುವಟಿಕೆಗಳನ್ನು ತಡೆಗಟ್ಟುವುದು.

ಭಾರತದ ರಾಷ್ಟ್ರಪತಿಯವರಿಗೆ ನಮ್ಮ ರಕ್ಷಣಾಪಡೆಗಳ ಸರ್ವೋಚ್ಚ ಅಧಿಕಾರ ನೀಡಲಾಗಿದೆ. ರಕ್ಷಣಾ ವ್ಯವಸ್ಥೆಯು ಮೂರು ವಿಭಾಗಗಳನ್ನು ಹೊಂದಿದೆ: ಭೂಸೇನೆ, ನೌಕಾದಳ ಮತ್ತು ವಾಯುಪಡೆ. ರಕ್ಷಣಾಪಡೆಗಳು ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವ ಪರೇಡ್‌ನಲ್ಲಿ ಪಾಲ್ಗೊಂಡು ತಮ್ಮ ಸೇನಾಸಾಮರ್ಥ್ಯವನ್ನು ಪ್ರದರ್ಶಿಸುತ್ತವೆ.

ರಕ್ಷಣಾಪಡೆಗಳಲ್ಲಿ ತಮ್ಮ ಸಾಮರ್ಥ್ಯಗಳನ್ನು ಮೆರೆಯಲು ತರಬೇತಿ ಕೇಂದ್ರಗಳಿವೆ. ಅವುಗಳಲ್ಲಿ ಮುಖ್ಯವಾದವುಗಳು: ರಾಷ್ಟ್ರೀಯ ರಕ್ಷಣಾ ಕಾಲೇಜು, ನವದೆಹಲಿ, ರಕ್ಷಣಾ ಸೇವಾ ಸಿಬ್ಬಂದಿ ತರಬೇತಿ ಕೇಂದ್ರ, ಉದಕಮಂಡಲ, ಭಾರತೀಯ ಮಿಲಿಟರಿ ಅಕಾಡೆಮಿ, ಡೆಹರಾಡೂನ್ ಮತ್ತು ರಾಷ್ಟ್ರೀಯ ರಕ್ಷಣಾ ಅಕಾಡೆಮಿ, ಖಡಕ್‌ವಾಸ್ಲಾ, ಪುಣೆ.

ಭಾರತೀಯ ಭೂಪಡೆ



ಭೂಸೇನೆಯ ಚಿಹ್ನೆ

ಭಾರತದ ಭೂಸೇನೆಯು ವಿಶ್ವದಲ್ಲಿಯೇ ಎರಡನೆಯ ಅತಿದೊಡ್ಡ ಭೂಸೇನಾಪಡೆಯಾಗಿದೆ. ಭೂಸೇನೆಯು ಪದಾತಿದಳ (ಸೈನಿಕ), ಅಶ್ವದಳ, ಪಿರಂಗಿದಳ, ಒಂಟೆದಳ ಮತ್ತು ಯುದ್ಧ ಟ್ಯಾಂಕರ್‌ಗಳನ್ನು ಹೊಂದಿದೆ.

ಭೂಸೇನೆಯಲ್ಲಿ ಒಟ್ಟು 11,00,000 ಯೋಧರಿದ್ದಾರೆ. 9,60,000ದಷ್ಟು ಕಾಯ್ದಿಟ್ಟ ಯೋಧರಿದ್ದಾರೆ.

ಭೂಸೇನೆಯ ಮುಖ್ಯಸ್ಥರನ್ನು **ದಂಡನಾಯಕ (ಜನರಲ್)** ಎಂದು ಕರೆಯುವರು.ಇವರು ಸೇನೆಯ ನಿಯಂತ್ರಣ, ತರಬೇತಿ, ಕಾರ್ಯಾಚರಣೆ ಮತ್ತು ಆಡಳಿತ ವ್ಯವಸ್ಥೆಯನ್ನು ಹೊಸದಿಲ್ಲಿಯಲ್ಲಿರುವ ಭೂಸೇನೆಯ ಪ್ರಧಾನ ಕಚೇರಿಯಿಂದ ನಿರ್ವಹಿಸುತ್ತಾರೆ.

ದೇಶದ ಗಡಿಗಳ ರಕ್ಷಣೆಯ ಜೊತೆಗೆ ನೈಸರ್ಗಿಕ ವಿಕೋಪಗಳಾದ ಭೂಕಂಪ, ಪ್ರವಾಹ, ಬರಗಾಲ, ಭೂಕುಸಿತ, ಬಿರುಗಾಳಿ ಮುಂತಾದ ಸಂದರ್ಭಗಳಲ್ಲಿ ಮಾನವೀಯ ಕಾರ್ಯಗಳನ್ನು ಭೂಸೇನೆ ನಿರ್ವಹಿಸುತ್ತದೆ. ಭೂಸೇನೆಯು ತಾಂತ್ರಿಕವಾಗಿ ಅತ್ಯಂತ ಮುಂದುವರಿದಿದೆಯಲ್ಲದೆ ಬೇಹುಗಾರಿಕೆ ವ್ಯವಸ್ಥೆಯನ್ನು ಹೊಂದಿದೆ.

ಭಾರತೀಯ ನೌಕಾದಳ

ನೌಕಾದಳದ ಚಿಹ್ನೆ

ಕರಾವಳಿ ತೀರವನ್ನು ಹಾಗೂ ದ್ವೀಪಗಳನ್ನು ರಕ್ಷಿಸಲು ನೌಕಾದಳದ ಅಗತ್ಯವಿದೆ.ಭಾರತದ ನೌಕಾದಳವು ಜಗತ್ತಿನಲ್ಲಿ ಆರನೆಯ ಅತಿ ದೊಡ್ಡ ನೌಕಾದಳವಾಗಿದೆ. ಅದರ ಮುಖ್ಯಸ್ಥರನ್ನು **ಆಡ್ಮಿರಲ್** ಎಂದು ಕರೆಯುತ್ತಾರೆ. ನೌಕಾದಳದ ಮುಖ್ಯ ಕಚೇರಿ ಹೊಸದಿಲ್ಲಿಯಲ್ಲಿದೆ.

ನೌಕಾದಳವು ಆಧುನಿಕ ಮಾದರಿಯ ಕ್ಷಿಪಣಿ ಹಡಗುಗಳು ಮತ್ತು ಜಲಾಂತರ್ಗಾಮಿಗಳನ್ನು ಹೊಂದಿದೆ. ಅವುಗಳಲ್ಲಿ **ಐ.ಎನ್.ಎಸ್.ವಿಭೂತಿ** ಮತ್ತು **ಐ.ಎನ್.ಎಸ್.ಗೋದಾವರಿ,** ಪ್ರಮುಖವಾದವುಗಳು. ಅಲ್ಲದೆ **ಐ.ಎನ್.ಎಸ್.ವಿರಾಟ್** ಮತ್ತು **ಐ.ಎನ್.ಎಸ್. ವಿಕ್ರಮಾದಿತ್ಯ**ದಂತಹ ವಿಮಾನವಾಹಕಗಳನ್ನು ಹೊಂದಿರುವ ನೌಕಾದಳವು ಸುಸಜ್ಜಿತವಾಗಿದೆ. ಕರ್ನಾಟಕದ ಕಾರವಾರದಲ್ಲಿ **'ಸೀಬರ್ಡ್'** ನೌಕಾ ನೆಲೆಯನ್ನು ಸ್ಥಾಪಿಸಲಾಗಿದೆ.

ಭಾರತೀಯ ವಾಯುಪಡೆ

ವಾಯುಪಡೆಯ ಚಿಹ್ನೆ

ಯುದ್ಧ ವಿಮಾನ

ಭಾರತವು ಪ್ರಪಂಚದಲ್ಲಿಯೇ ಐದನೆಯ ಅತಿ ದೊಡ್ಡ ವಾಯುಪಡೆಯನ್ನು ಹೊಂದಿದೆ. ಇದರ ಮುಖ್ಯಸ್ಥರನ್ನು **ಏರ್‌ಚೀಫ್ ಮಾರ್ಷಲ್** ಎನ್ನುವರು. ಇದರ ಕೇಂದ್ರ ಕಚೇರಿ ಹೊಸದಿಲ್ಲಿಯಲ್ಲಿದೆ. ಆಡಳಿತದ ಅನುಕೂಲಕ್ಕಾಗಿ ವಾಯುಪಡೆಯನ್ನು ಐದು ಕಮಾಂಡಗಳಾಗಿ ವಿಂಗಡಿಸಲಾಗಿದೆ.

ಬೆಂಗಳೂರು, ಹೈದರಾಬಾದ್ ಮತ್ತು ದಿಂಡಿಗಲ್‌ನಲ್ಲಿ (ತಮಿಳುನಾಡು) ವಾಯುಪಡೆಗೆ ತರಬೇತಿ ನೀಡುವ ಪ್ರಮುಖ ಕೇಂದ್ರಗಳಿವೆ. ವಾಯುಪಡೆಯು ತಂತ್ರಜ್ಞಾನದ ಅಳವಡಿಕೆಯಿಂದ ಅನೇಕ ಹೊಸ ಯುದ್ಧ ವಿಮಾನಗಳನ್ನು ಹೊಂದಿ ಶಸ್ತ್ರಸನ್ನದ್ಧವಾಗಿದೆ.

ನಮ್ಮ ವಾಯುಪಡೆಯು ಜಾಗ್ವಾರನಂತಹ ಆಧುನಿಕ ಯುದ್ಧ ವಿಮಾನಗಳನ್ನು ಹೊಂದಿದೆ. ಅದು ಒಟ್ಟು 1,00,000ರಷ್ಟು ಯೋಧರು ಮತ್ತು 1330ರಷ್ಟು ಯುದ್ಧ ವಿಮಾನಗಳನ್ನು ಹೊಂದಿದೆ. ವಾಯುಪಡೆಯು ಬಲಾಢ್ಯವಾಗಿರುವುದು ನಮ್ಮೆಲ್ಲರಿಗೆ ಹೆಮ್ಮೆಯ ಸಂಗತಿಯಾಗಿದೆ.

ಪೂರಕ ರಕ್ಷಣಾಪಡೆಗಳು

ರಕ್ಷಣಾಪಡೆಗಳಲ್ಲದೆ ಅವುಗಳಿಗೆ ವಿಷಮ ಸಂದರ್ಭಗಳಲ್ಲಿ ನೆರವಾಗಲು ಪೂರಕ ರಕ್ಷಣಾ ಪಡೆಗಳು ಕಾರ್ಯನಿರ್ವಹಿಸುತ್ತಿವೆ.

- **ಗಡಿಭದ್ರತಾ ದಳ (Border Security Force):** ಭಾರತದ ಗಡಿಪ್ರದೇಶಗಳನ್ನು ರಕ್ಷಿಸುವುದು ಗಡಿಭದ್ರತಾ ದಳದ ಪ್ರಮುಖ ಕಾರ್ಯವಾಗಿದೆ. ಕಾರ್ಗಿಲ್ ಯುದ್ಧದಲ್ಲಿ ಗಡಿಭದ್ರತಾ ದಳವು ಪರ್ವತದ ಎತ್ತರದವರೆಗೆ ಹೋಗಿ ಸೇನೆಯ ಜೊತೆಗೂಡಿ ಹೋರಾಟ ಮಾಡಿತು. ಸಾಯುವವರೆಗೆ ಕರ್ತವ್ಯ (Duty UntilDeath) ಎಂಬುದು ಇದರ ಧ್ಯೇಯ ವಾಕ್ಯವಾಗಿದೆ.

ಗಡಿಭದ್ರತಾ ದಳ

- **ಗಡಿರಸ್ತೆಗಳ ಸಂಘಟನೆ (Border Roads Organisation):** ಗಡಿರಸ್ತೆಗಳ ಸಂಘಟನೆಯು ಮುಚ್ಚಿರುವ ರಸ್ತೆಗಳನ್ನು ತೆರವು ಮಾಡಿ ಸೈನಿಕ ಕಾರ್ಯಾಚರಣೆಗಳಿಗೆ ತಕ್ಷಣದ ಸಹಾಯವನ್ನು ಮಾಡುತ್ತದೆ. ರಸ್ತೆ ನಿರ್ಮಾಣ, ಸೇತುವೆ ನಿರ್ಮಾಣ ಮತ್ತು ಒಳಚರಂಡಿ ನಿರ್ಮಾಣದಂತಹ ಕಾರ್ಯಗಳನ್ನು ಈ ಸಂಘಟನೆ ಮಾಡುತ್ತದೆ.

- **ಕರಾವಳಿ ಪಹರೆಯವರು (Coast Guards):** ಇದೊಂದು ಅರೆಮಿಲಿಟರಿ ಪಡೆಯಾಗಿದೆ. ಇದರ ಪ್ರಧಾನ ಕಚೇರಿ ಹೊಸದಿಲ್ಲಿಯಲ್ಲಿದೆ. ಕರಾವಳಿ ತೀರವನ್ನು ರಕ್ಷಿಸುವುದು ಇದರ ಜವಾಬ್ದಾರಿಯಾಗಿದೆ.ಬಿರುಗಾಳಿ, ಚಂಡಮಾರುತ, ಸುನಾಮಿಯಂತಹ ಪ್ರಕೃತಿ ವಿಕೋಪ ಸಂದರ್ಭಗಳಲ್ಲಿ ರಕ್ಷಣಾ ಕಾರ್ಯವನ್ನು ಕೈಗೊಳ್ಳುತ್ತದೆ. ಅಕ್ರಮ ಒಳನುಸುಳುವಿಕೆ, ಕಳ್ಳಸಾಗಣೆ ಮುಂತಾದವುಗಳನ್ನು ತಡೆಗಟ್ಟುವುದು ಇದರ ಪ್ರಮುಖ ಕಾರ್ಯವಾಗಿದೆ.

ಕರಾವಳಿ ಪಹರೆಯವರು

ಕರಾವಳಿ ಪಹರೆಯು 84 ಅತ್ಯಾಧುನಿಕ ಹಡಗುಗಳು ಮತ್ತು 45 ವಿಮಾನ ಹಾಗೂ ಹೆಲಿಕಾಪ್ಟರ್‌ಗಳನ್ನು ಹೊಂದಿದೆ. 5440 ಯೋಧರು ಕರಾವಳಿ ಪಹರೆಯಲ್ಲಿದ್ದಾರೆ.

- **ಕೇಂದ್ರ ಕೈಗಾರಿಕಾ ಭದ್ರತಾಪಡೆ:** ಇದು ವಿಶ್ವದ ಅತಿದೊಡ್ಡ ಕೈಗಾರಿಕಾ ಭದ್ರತಾಪಡೆ. 1,28,000 ಯೋಧರು ಇದರಲ್ಲಿದ್ದಾರೆ. ಇದು ದೇಶದಲ್ಲಿರುವ ಸುಮಾರು 300ಕ್ಕೂ ಹೆಚ್ಚು ಸರಕಾರಿ, ಖಾಸಗಿ ಕೈಗಾರಿಕಾ ಘಟಕಗಳು ಮತ್ತು ಪ್ರಯೋಗಾಲಯಗಳಿಗೆ ಭದ್ರತೆಯನ್ನು ಒದಗಿಸುತ್ತದೆ. ಇದಲ್ಲದೆ ವಿಮಾನ ನಿಲ್ದಾಣ, ಬಂದರುಗಳು, ರೈಲ್ವೆ ನಿಲ್ದಾಣಗಳು, ಐತಿಹಾಸಿಕ ಸಂರಕ್ಷಿತ ಸ್ಮಾರಕಗಳಿಗೂ ಮತ್ತು ಅಣುಶಕ್ತಿ ಕೇಂದ್ರಗಳಿಗೂ ಭದ್ರತೆಯನ್ನು ಒದಗಿಸುತ್ತದೆ.

ಸಹಾಯಕ ರಕ್ಷಣಾಪಡೆಗಳು

ದೇಶದಾದ್ಯಂತ ಯುವಕರಲ್ಲಿ ಸೇವೆ ಮತ್ತು ದೇಶಪ್ರೇಮವನ್ನು ಬೆಳೆಸಲು ಶಾಲಾ ಮತ್ತು ಕಾಲೇಜುಗಳಲ್ಲಿ ಅನೇಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.ಇವುಗಳಲ್ಲಿ ಎನ್.ಸಿ.ಸಿ.ಒಂದು ಪ್ರಮುಖ ಚಟುವಟಿಕೆ.

- **ಎನ್‌ಸಿಸಿ ನ್ಯಾಷನಲ್ ಕ್ಯಾಡೆಟ್ ಕಾರ್‌ಪ್ಸ್ (National Cadet Corps):** ಸಾಮೂಹಿಕ ಜೀವನದ ಪ್ರಾಧಾನ್ಯತೆ, ನಾಯಕತ್ವ ಮುಂತಾದ ಗುಣಗಳನ್ನು ಎನ್‌ಸಿಸಿ ಕಲಿಸುತ್ತದೆ. ಈ ತರಬೇತಿ ಪಡೆದವರಿಗೆ ಸೇನೆಯನ್ನು ಸೇರಲು ವಿಶೇಷ ಆದ್ಯತೆಯನ್ನು ನೀಡಲಾಗುತ್ತದೆ.ಉನ್ನತ ವ್ಯಾಸಂಗಕ್ಕೂ ವಿದ್ಯಾರ್ಥಿಗಳಿಗೆ ಇದರಿಂದ ಮೀಸಲಾತಿ ದೊರೆಯುತ್ತದೆ.ಶಾಲೆ ಮತ್ತು ಕಾಲೇಜುಗಳಲ್ಲಿ ಯುವಕರು ಮತ್ತು ಯುವತಿಯರು ಎನ್‌ಸಿಸಿಯನ್ನು ಸೇರಬಹುದು.ಒಟ್ಟಿನಲ್ಲಿ ರಾಷ್ಟ್ರ ರಕ್ಷಣೆಯ ಹೊಣೆಗಾರಿಕೆಯನ್ನು ಮೂಡಿಸುವುದು ಇದರ ಪ್ರಮುಖ ಗುರಿಯಾಗಿದೆ. 'ಶಿಸ್ತು ಮತ್ತು ಒಗ್ಗಟ್ಟು' ಇದರ ಧ್ಯೇಯ ವಾಕ್ಯವಾಗಿದೆ.

ಎನ್‌ಸಿಸಿ ಕ್ಯಾಡೆಟ್‌ಗಳು

2012ರಲ್ಲಿ ಭಾರತದ 610 ಜಿಲ್ಲೆಗಳಲ್ಲಿರುವ 8770 ಶಾಲೆಗಳು ಮತ್ತು 5521 ಕಾಲೇಜುಗಳಲ್ಲಿ ಎನ್‌ಸಿಸಿ ಘಟಕಗಳಿವೆ. ಒಟ್ಟು 13,00,000 ಎನ್‌ಸಿಸಿ ಕ್ಯಾಡೆಟ್‌ಗಳಿದ್ದಾರೆ.

- **ಗೃಹರಕ್ಷಕ ದಳ (Home Guards):** ಇದು ಪೊಲೀಸ್ ಪಡೆಗೆ ಪೂರಕವಾಗಿ ಕೆಲಸ ಮಾಡುತ್ತದೆ. ಇದರ ಕಾರ್ಯಗಳು: ಆಂತರಿಕ ಭದ್ರತೆ ಒದಗಿಸುವಲ್ಲಿ ನೆರವಾಗುವುದು ಮತ್ತು ತುರ್ತುಪರಿಸ್ಥಿತಿ, ಪ್ರಕೃತಿ ವಿಕೋಪ ಮುಂತಾದ ಸಮಯದಲ್ಲಿ ಸಹಾಯ ಮಾಡುವುದು.

- **ನಾಗರಿಕ ಪೊಲೀಸ್ ಪಡೆಗಳು:** ಪೊಲೀಸ್ ಪಡೆಗಳು ರಾಜ್ಯ ಹಾಗೂ ಕೇಂದ್ರ ಮಟ್ಟದಲ್ಲಿವೆ. ರಾಜ್ಯ ಪೊಲೀಸ್ ಪಡೆಯ ವ್ಯಾಪ್ತಿ ರಾಜ್ಯಕ್ಕೆ ಸೀಮಿತವಾಗಿದೆ. ಕೇಂದ್ರ ಸರಕಾರವು ತನ್ನದೇ ಪೊಲೀಸ್ ಪಡೆಗಳನ್ನು ಸ್ಥಾಪಿಸಿದೆ.

ರಾಷ್ಟ್ರೀಯ ರಕ್ಷಣಾ ದಳ: ರಾಷ್ಟ್ರೀಯ ರಕ್ಷಣಾ ದಳವು ಗಣ್ಯರಿಗೆ ರಕ್ಷಣೆಯನ್ನು ನೀಡುತ್ತದೆ. ಇದು ದೇಶದಲ್ಲಿಯ ಆಂತರಿಕ ಭದ್ರತೆಗೆ ಮತ್ತು ಭಯೋತ್ಪಾದನೆ ನಿಗ್ರಹಕ್ಕೆ ಹೆಚ್ಚು ಒತ್ತು ನೀಡುತ್ತದೆ. ಬಾಂಬ್ ನಿಷ್ಕ್ರಿಯ ದಳ ಇದಕ್ಕೆ ಪೂರಕವಾಗಿದೆ.

- **ಭಾರತೀಯ ರೆಡ್‌ಕ್ರಾಸ್ ಸಂಸ್ಥೆ (Indian Red Cross Society):** ರೆಡ್‌ಕ್ರಾಸ್ ಸಂಸ್ಥೆಯು ಭಾರತದಾದ್ಯಂತ 700 ಜಿಲ್ಲೆಗಳಲ್ಲಿ ತನ್ನ ಶಾಖೆಗಳನ್ನು ಹೊಂದಿ ಕಾರ್ಯನಿರ್ವಹಿಸುತ್ತಿದೆ. ರಾಷ್ಟ್ರಪತಿಗಳು ಇದರ ಅಧ್ಯಕ್ಷರಾಗಿದ್ದಾರೆ. ರೆಡ್‌ಕ್ರಾಸ್ ಸಂಸ್ಥೆಯ ಮುಖ್ಯ ಧ್ಯೇಯವೆಂದರೆ 'ಮಾನವೀಯತೆ ಮತ್ತು ಸ್ವಯಂಸೇವೆ'.

ರೆಡ್‌ಕ್ರಾಸ್ ಚಿಹ್ನೆ

ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1. ರಕ್ಷಣಾಪಡೆಗಳ ಸರ್ವೋಚ್ಚ ಅಧಿಕಾರ ಯಾರಿಗೆ ನೀಡಲಾಗಿದೆ?
2. ರಕ್ಷಣಾಪಡೆಯ ವಿಭಾಗಗಳಾವುವು?
3. ಭೂಸೇನೆಯ ಮುಖ್ಯಸ್ಥರನ್ನು ಏನೆಂದು ಕರೆಯುವರು?
4. ಭೂಸೇನೆಯ ಆಡಳಿತ ಕಚೇರಿ ಎಲ್ಲಿದೆ?
5. ನೌಕಾದಳದ ಮುಖ್ಯಸ್ಥರನ್ನು ಏನೆಂದು ಕರೆಯುತ್ತಾರೆ?
6. ಎನ್‌ಸಿಸಿಯ ಧ್ಯೇಯ ವಾಕ್ಯ ಯಾವುದು?

7. ಭೂಸೇನೆಯ ಪ್ರಮುಖ ಕಾರ್ಯಗಳಾವುವು?

8. ಗಡಿರಸ್ತೆಗಳ ಸಂಘಟನೆಯ ಕಾರ್ಯಗಳಾವುವು?

9. ರೆಡ್‌ಕ್ರಾಸ್ ಸಂಸ್ಥೆಯ ಧ್ಯೇಯ ಯಾವುದು?

10. ರಕ್ಷಣಾಪಡೆಯಲ್ಲಿ ಸೇವೆ ಸಲ್ಲಿಸಲು ನಿನಗೆ ಇಚ್ಛೆಯಿದೆಯೆ? ಕಾರಣ ಕೊಡಿ.

ಚರ್ಚಿಸಿ

ನಾವೇಕೆ ರಕ್ಷಣಾಪಡೆಯಲ್ಲಿ ಸೇವೆ ಸಲ್ಲಿಸಬೇಕು?

ಚಟುವಟಿಕೆಗಳು

1. ನಿಮ್ಮ ಗ್ರಾಮದ ಸೈನಿಕರನ್ನು ಭೇಟಿ ಮಾಡಿ ಶಾಲೆಗೆ ಆಹ್ವಾನಿಸಿ.

2. ರಕ್ಷಣಾಪಡೆಗಳ ವಿವಿಧ ಘಟಕಗಳ ಚಿಹ್ನೆಗಳನ್ನು ಸಂಗ್ರಹಿಸಿ.

3. ಸಮೀಪದ ಶಾಲೆ ಕಾಲೇಜುಗಳಲ್ಲಿರುವ ಎನ್‌ಸಿಸಿ ಘಟಕಕ್ಕೆ ಭೇಟಿ ನೀಡಿ.

ನಿಮಗೆ ತಿಳಿದಿರಲಿ:

ಭೂಸೇನೆಯ ಉನ್ನತ ಅಧಿಕಾರಿಗಳು: ಜನರಲ್, ಲೆಫ್ಟೆನಂಟ್ ಜನರಲ್, ಮೇಜರ್ ಜನರಲ್, ಬ್ರಿಗೇಡಿಯರ್, ಕರ್ನಲ್, ಲೆಫ್ಟೆನಂಟ್ ಕರ್ನಲ್, ಮೇಜರ್, ಕ್ಯಾಪ್ಟನ್ ಮತ್ತು ಲೆಫ್ಟೆನಂಟ್. ನೌಕಾದಳ ಮತ್ತು ವಾಯುಪಡೆಯಲ್ಲಿ ಕೂಡ ಅದರದೇ ಆದ ಉನ್ನತ ಅಧಿಕಾರಿಗಳ ರ‍್ಯಾಂಕ್‌ಗಳಿವೆ.

★ ★ ★

ಪಾಠ 11	ಸಂವಿಧಾನ ತಿದ್ದುಪಡಿ

ಪಾಠದ ಪರಿಚಯ

ಭಾರತ ಸಂವಿಧಾನವನ್ನು ತಿದ್ದುಪಡಿ ಮಾಡುವ ವಿಧಾನಗಳ ಕುರಿತು ವಿವರಣೆ ನೀಡಲಾಗಿದೆ

ಸಾಮರ್ಥ್ಯಗಳು

1] ಭಾರತ ಸಂವಿಧಾನದ ಸ್ವರೂಪವನ್ನು ಅರಿಯುವುದು

2] ಭಾರತದ ಸಂವಿಧಾನ ತಿದ್ದುಪಡಿ ಮಾಡುವ ವಿಧಾನಗಳನ್ನು ತಿಳಿಯುವುದು

3] ಸರಳ ಬಹುಮತದಿಂದ ತಿದ್ದುಪಡಿ ಮಾಡುವ ವಿಧಾನವನ್ನು ಅರ್ಥ ಮಾಡಿಕೊಳ್ಳುವುದು

4] ವಿಶೇಷ ಬಹುಮತದಿಂದ ತಿದ್ದುಪಡಿ ಮಾಡುವ ವಿಧಾನವನ್ನು ಅರ್ಥೈಸಿಕೊಳ್ಳುವುದು

5] ವಿಶೇಷ ಬಹುಮತದೊಂದಿಗೆ ಅರ್ಧದಷ್ಟು ರಾಜ್ಯಗಳ ಒಪ್ಪಿಗೆಯಿಂದ ತಿದ್ದುಪಡಿ ಮಾಡುವ ವಿಧಾನದ ಬಗ್ಗೆ ತಿಳಿಯುವುದು

ಸಂವಿಧಾನಿಕ ಕಾನೂನಿಗೆ ಸ್ಥಿರತೆ ಒಂದು ಅವಶ್ಯಕ ಲಕ್ಷಣವಾದರೂ ನಿರಂತರವಾಗಿ ನಡೆಯುವ ಸಾಮಾಜಿಕ ಬದಲಾವಣೆ ಹಾಗೂ ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳಲು ಸಂವಿಧಾನಕ್ಕೆ ತಿದ್ದುಪಡಿಯ ಅವಶ್ಯಕತೆ ಇದೆ.

ಸಂವಿಧಾನದ ಸ್ವರೂಪ

ತಿದ್ದುಪಡಿಗಳ ಆಧಾರದ ಮೇಲೆ ಸಂವಿಧಾನಗಳ ಸ್ವರೂಪವನ್ನು ನಿರ್ಧರಿಸಬಹುದು. ತಿದ್ದುಪಡಿ ವಿಧಾನವು ಸುಲಭವಾಗಿದ್ದರೆ ಅಂತಹ ಸಂವಿಧಾನವನ್ನು ಸರಳ ಸಂವಿಧಾನವೆಂದು, ತಿದ್ದುಪಡಿ ವಿಧಾನವು ಕ್ಲಿಷ್ಟಕರವಾಗಿದ್ದರೆ ಅಂತಹ ಸಂವಿಧಾನವನ್ನು ಕಠಿಣ ಸಂವಿಧಾನವೆಂದು ವಿಂಗಡಿಸಬಹುದು. ಭಾರತದ ಸಂವಿಧಾನವು ಸರಳ ಹಾಗೂ ಕಠಿಣ ಎರಡೂ ಅಂಶಗಳನ್ನು ಒಳಗೊಂಡಿದೆ.

ಸಂವಿಧಾನ ತಿದ್ದುಪಡಿ ವಿಧಾನಗಳು

ನಮ್ಮ ಸಂವಿಧಾನವನ್ನು ಮೂರು ವಿಧಾನಗಳ ಮೂಲಕ ತಿದ್ದುಪಡಿ ಮಾಡಬಹುದು. ಅವುಗಳೆಂದರೆ:

1. ಸರಳ ಬಹುಮತ ತಿದ್ದುಪಡಿ ವಿಧಾನ

2. ವಿಶೇಷ ಬಹುಮತ ತಿದ್ದುಪಡಿ ವಿಧಾನ

3. ವಿಶೇಷ ಬಹುಮತದೊಂದಿಗೆ ಕನಿಷ್ಠ ಅರ್ಧದಷ್ಟು ರಾಜ್ಯಗಳ ಒಪ್ಪಿಗೆ ಪಡೆದು ತಿದ್ದುಪಡಿ ಮಾಡುವ ವಿಧಾನ ಮೇಲೆ ತಿಳಿಸಿರುವ ತಿದ್ದುಪಡಿ ವಿಧಾನಗಳ ವಿವರಣೆ ಕೆಳಕಂಡಂತಿವೆ;



ಸಂವಿಧಾನದ ತಿದ್ದುಪಡಿ

ಸರಳ ಬಹುಮತ ತಿದ್ದುಪಡಿ ವಿಧಾನ

ಸಂವಿಧಾನದ ಕೆಲವು ಭಾಗಗಳನ್ನು ಸಂಸತ್ತಿನ (ಲೋಕ ಸಭೆ ಹಾಗೂ ರಾಜ್ಯ ಸಭೆ ಎರಡೂ ಸದನಗಳು) ಸಾಮಾನ್ಯ ಶಾಸನೀಯ ಪ್ರಕ್ರಿಯೆಯ ಸರಳ ಬಹುಮತದ(ಸಂಸತ್ತಿನ ಸದಸ್ಯರಲ್ಲಿ ಅರ್ಧಕ್ಕಿಂತ ಹೆಚ್ಚು ಸದಸ್ಯರ ಒಪ್ಪಿಗೆ) ಮೂಲಕ ತಿದ್ದುಪಡಿ ಮಾಡಬಹುದು. ಉದಾ: ಭಾರತೀಯ ನಾಗರೀಕತ್ವದ ಅರ್ಹತೆಗಳು.

ವಿಶೇಷ ಬಹುಮತ ತಿದ್ದುಪಡಿ ವಿಧಾನ

ಸಂವಿಧಾನದ ಕೆಲವು ಭಾಗಗಳನ್ನು ಸಂಸತ್ತಿನ ವಿಶೇಷ ಬಹುಮತದ ಮೂಲಕ ತಿದ್ದುಪಡಿ ಮಾಡಬಹುದು. ವಿಶೇಷ ಬಹುಮತ ಎಂದರೆ ಸಂಸತ್ತಿನ ಸದಸ್ಯರಲ್ಲಿ ಮೂರನೇ ಎರಡು ಭಾಗದಷ್ಟು ಸದಸ್ಯರು ಒಪ್ಪಿಗೆ ಸೂಚಿಸಿ ಸಂವಿಧಾನಕ್ಕೆ ತಿದ್ದುಪಡಿ ಮಾಡಬಹುದು. ಉದಾ: ಮೂಲಭೂತ ಹಕ್ಕುಗಳು, ರಾಜ್ಯ ನಿರ್ದೇಶಕ ತತ್ವಗಳು ಹಾಗೂ ಇತರ ಅಂಶಗಳು.

ವಿಶೇಷ ಬಹುಮತದೊಂದಿಗೆ ಕನಿಷ್ಠ ಅರ್ಧದಷ್ಟು ರಾಜ್ಯಗಳ ಒಪ್ಪಿಗೆ ಪಡೆದು **ತಿದ್ದುಪಡಿ ಮಾಡುವ ವಿಧಾನ**

ಸಂಸತ್ತಿನ ವಿಶೇಷ ಬಹುಮತದೊಂದಿಗೆ ಅರ್ಧದಷ್ಟು ರಾಜ್ಯಗಳ ಒಪ್ಪಿಗೆ ಪಡೆದು ಸಂವಿಧಾನದ ಕೆಲವು ಭಾಗಗಳನ್ನು ತಿದ್ದುಪಡಿ ಮಾಡಬಹುದು. ಇದು ಮೇಲೆ ತಿಳಿಸಿರುವ ಎರಡೂ ವಿಧಾನಗಳಿಗಿಂತಲೂ ಕಠಿಣವಾದ ವಿಧಾನವಾಗಿದೆ. ಈ ವಿಧಾನದಿಂದ ರಾಷ್ಟ್ರಪತಿಗಳ ಚುನಾವಣೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಅಧಿಕಾರ ಹಂಚಿಕೆ ಹಾಗೂ ಇತರ ಅಂಶಗಳನ್ನು ತಿದ್ದುಪಡಿ ಮಾಡಬಹುದು.

ಹೀಗೆ ಮೂರು ತಿದ್ದುಪಡಿ ವಿಧಾನಗಳ ಮೂಲಕ ಭಾರತದ ಸಂವಿಧಾನಕ್ಕೆ ಅಗತ್ಯ ಬದಲಾವಣೆಗಳನ್ನು ಮಾಡಬಹುದಾಗಿದೆ. ಬದಲಾದ ಸಮಾಜ ಹಾಗೂ ಸನ್ನಿವೇಶಕ್ಕೆ ತಕ್ಕಂತೆ ಸೂಕ್ತ ಬದಲಾವಣೆಗಳನ್ನು ತರಲು ಸಂವಿಧಾನದಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ.

ಸೆಪ್ಟಂಬರ್ 8, 2016 ರವರೆಗೆ ನಮ್ಮ ಸಂವಿಧಾನವನ್ನು 101 ಬಾರಿ ತಿದ್ದುಪಡಿ ಮಾಡಲಾಗಿದೆ.

ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

1. ಸಂವಿಧಾನ ತಿದ್ದುಪಡಿ ಎಂದರೇನು?
2. ಭಾರತದ ಸಂವಿಧಾನ ತಿದ್ದುಪಡಿ ವಿಧಾನಗಳಾವುವು?
3. ಸರಳ ಬಹುಮತ ತಿದ್ದುಪಡಿ ವಿಧಾನವೆಂದರೇನು?
4. ವಿಶೇಷ ಬಹುಮತ ತಿದ್ದುಪಡಿ ವಿಧಾನವನ್ನು ತಿಳಿಸಿ.
5. ಭಾರತ ಸಂವಿಧಾನವನ್ನು ತಿದ್ದುಪಡಿ ಮಾಡುವ ಮೂರನೇ ವಿಧಾನವನ್ನು ವಿವರಿಸಿ.

ಚರ್ಚಿಸಿ

1. ಸಂವಿಧಾನಕ್ಕೆ ತಿದ್ದುಪಡಿ ಏಕೆ ಅವಶ್ಯಕ ಎಂಬ ವಿಷಯವಾಗಿ ಚರ್ಚಿಸಿ.

☆ ☆ ☆

ಪಾಠ 12 ಆಸ್ಟ್ರೇಲಿಯ ಅತ್ಯಂತ ಸಮತಟ್ಟಾದ ಭೂಖಂಡ

ಪಾಠದ ಪರಿಚಯ

ಈ ಪಾಠದಲ್ಲಿ ಆಸ್ಟ್ರೇಲಿಯ ಖಂಡದ ಸ್ಥಾನ ಮತ್ತು ಸನ್ನಿವೇಶ, ಅದರ ಪ್ರಾಕೃತಿಕ ವಿಭಾಗಗಳು ಮತ್ತು ನದಿವ್ಯವಸ್ಥೆ, ವಾಯುಗುಣ, ಸ್ವಾಭಾವಿಕ ಸಸ್ಯವರ್ಗ, ವ್ಯವಸಾಯ, ಪಶುಸಂಗೋಪನೆ, ಖನಿಜ ಮತ್ತು ಕೈಗಾರಿಕೆಗಳು, ಜನಸಂಖ್ಯೆಯ ಬೆಳವಣಿಗೆ, ಹಂಚಿಕೆ ಮತ್ತು ಸಾಂದ್ರತೆಗಳನ್ನು ಕುರಿತು ಪರಿಚಯಿಸಲಾಗಿದೆ.

ಸಾಮರ್ಥ್ಯಗಳು

1] ಪ್ರಪಂಚದಲ್ಲಿ ಆಸ್ಟ್ರೇಲಿಯ ಖಂಡದ ಸ್ಥಾನ, ಸನ್ನಿವೇಶಗಳ ಬಗ್ಗೆ ತಿಳಿದುಕೊಳ್ಳುವರು.

2] ಆಸ್ಟ್ರೇಲಿಯದ ಮೇಲ್ಮೈಲಕ್ಷಣ, ನದಿವ್ಯವಸ್ಥೆ, ವಾಯುಗುಣ ಮತ್ತು ಸಸ್ಯವರ್ಗಗಳ ಬಗ್ಗೆ ಅರಿಯುವರು.

3] ಈ ಖಂಡದ ವ್ಯವಸಾಯ ಮತ್ತು ಪಶುಸಂಗೋಪನೆ ಬಗ್ಗೆ ತಿಳಿಯುವರು.

4] ವಿವಿಧ ಖನಿಜಗಳು ಮತ್ತು ಕೈಗಾರಿಕೆಗಳ ಬಗ್ಗೆ ಪರಿಚಯ ಮಾಡಿಕೊಳ್ಳುವರು.

5] ಜನಸಂಖ್ಯಾ ಗಾತ್ರ, ಬೆಳವಣಿಗೆ, ಹಂಚಿಕೆ ಮತ್ತು ಸಾಂದ್ರತೆಗಳ ಬಗ್ಗೆ ತಿಳಿದುಕೊಳ್ಳುವರು.

1. ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶ

ಸ್ಥಾನ: ಆಸ್ಟ್ರೇಲಿಯ ಖಂಡವು ಪೂರ್ಣವಾಗಿ ದಕ್ಷಿಣ ಮತ್ತು ಪೂರ್ವ ಗೋಳಾರ್ಧದಲ್ಲಿದೆ. ಇದು 10^0 45^1 ದಕ್ಷಿಣದಿಂದ 43^0 39^1 ದಕ್ಷಿಣ ಅಕ್ಷಾಂಶ ಹಾಗೂ 113^0 9^1 ಪೂರ್ವದಿಂದ 153^0 39^1 ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ. ಮಕರ ಸಂಕ್ರಾಂತಿ ವೃತ್ತವು ಹೆಚ್ಚು ಕಡಿಮೆ ಈ ಖಂಡದ ಮಧ್ಯಭಾಗದಲ್ಲಿ ಹಾಯ್ದು ಹೋಗಿದೆ.

ವಿಸ್ತೀರ್ಣ: ವಿಸ್ತೀರ್ಣ ಮತ್ತು ಜನಸಂಖ್ಯೆಗಳೆರಡರಲ್ಲೂ ಆಸ್ಟ್ರೇಲಿಯವು ಪ್ರಪಂಚದಲ್ಲಿ ಚಿಕ್ಕ ಭೂಖಂಡ. ತಾಸ್ಮೇನಿಯ ದ್ವೀಪವೂ ಸೇರಿದಂತೆ ಇದರ ಒಟ್ಟು ವಿಸ್ತೀರ್ಣ 76.82 ಲಕ್ಷ ಚ.ಕಿ.ಮೀ. ಗಳು. ಅಮೆರಿಕ ಸಂಯುಕ್ತ ಸಂಸ್ಥಾನಕ್ಕಿಂತ ಸ್ವಲ್ಪ ಚಿಕ್ಕದು ಮತ್ತು ಭಾರತಕ್ಕಿಂತ ಎರಡು ಪಟ್ಟು ದೊಡ್ಡದು. ಪ್ರಪಂಚದ ಏಳನೆಯ ಭೂಖಂಡವಾಗಿರುವ ಇದು ದಕ್ಷಿಣೋತ್ತರವಾಗಿ 3,940 ಕಿ.ಮೀ. ಉದ್ದ ಮತ್ತು ಪೂರ್ವಪಶ್ಚಿಮವಾಗಿ 4,350 ಕಿ.ಮೀ. ಅಗಲವಾಗಿದೆ. ಇದರ ಸಮುದ್ರ ತೀರದ ಉದ್ದ 19,310 ಕಿ.ಮೀ.ಗಳು.



ಆಸ್ಟ್ರೇಲಿಯ (ರಾಜಕೀಯ)

ಆಸ್ಟ್ರೇಲಿಯ ಎಂಬ ಪದ ದಕ್ಷಿಣ ಎಂದು ಅರ್ಥ ಕೊಡುವ 'ಆಸ್ಟ್ರಲ್' (ಲ್ಯಾಟಿನ್) ಎಂಬುದರಿಂದ ಬಳಕೆಗೆ ಬಂದಿದೆ.

ಮಧ್ಯ ಮತ್ತು ದಕ್ಷಿಣ ಪೆಸಿಫಿಕ್ ಸಾಗರದಲ್ಲಿರುವ ಸುಮಾರು 10,000 ದ್ವೀಪ ಸಮೂಹಗಳಿಗೆ 'ಓಸೀನಿಯ' ಎನ್ನುವರು. ಇದರಲ್ಲಿ ಆಸ್ಟ್ರೇಲಿಯ ಖಂಡ ಪ್ರಮುಖವಾದುದು.

ಭೌಗೋಳಿಕ ಸನ್ನಿವೇಶ: ಆಸ್ಟ್ರೇಲಿಯವು ಹಿಂದೂ ಮಹಾಸಾಗರ ಮತ್ತು ಪೆಸಿಫಿಕ್ ಸಾಗರಗಳ ನಡುವೆ ನೆಲೆಸಿರುವ ದ್ವೀಪಖಂಡ. ಈ ಖಂಡದ ವಾಯವ್ಯಕ್ಕೆ ತೈಮರ್ ಮತ್ತು ಆರಾಫುರ ಸಮುದ್ರಗಳು, ಈಶಾನ್ಯಕ್ಕೆ ಟೊರ್ರೆಸ್ ಜಲಸಂಧಿ ಮತ್ತು ಕಾರಲ್ ಸಮುದ್ರ ಹಾಗೂ ಆಗ್ನೇಯದಲ್ಲಿ ತಾಸ್ಮನ್ ಸಮುದ್ರ ಮತ್ತು ದಕ್ಷಿಣದಲ್ಲಿ ಗ್ರೇಟ್ ಆಸ್ಟ್ರೇಲಿಯನ್ ಬೈಟ್ ಸಮುದ್ರಗಳಿವೆ.

2. ಪ್ರಾಕೃತಿಕ ವಿಭಾಗಗಳು ಮತ್ತು ನದಿಗಳ ವ್ಯವಸ್ಥೆ

ಪ್ರಾಕೃತಿಕ ವಿಭಾಗಗಳು: ಆಸ್ಟ್ರೇಲಿಯದ ಒಟ್ಟು ವಿಸ್ತೀರ್ಣದಲ್ಲಿ ಸುಮಾರು ಶೇ.94 ಭಾಗವು ಸಮುದ್ರಮಟ್ಟಕ್ಕೆ 600 ಮೀ.ಗಳಿಗಿಂತ ತಗ್ಗಿನಲ್ಲಿದ್ದು ಸಮತಟ್ಟಾಗಿದೆ. ಆದ್ದರಿಂದ ಅದನ್ನು 'ಅತ್ಯಂತ ಸಮತಟ್ಟಾದ ಭೂಖಂಡ' ಎಂದು ಕರೆಯಲಾಗಿದೆ. ಬಹಳಷ್ಟು ಪ್ರದೇಶವು ಮರುಭೂಮಿಯಿಂದ ಆವರಿಸಿರುವುದರಿಂದ ಇದನ್ನು 'ಮರುಭೂಮಿಯ ಭೂಖಂಡ'ವೆಂತಲೂ ಕರೆಯುವರು.



ಆಸ್ಟ್ರೇಲಿಯ (ಪ್ರಾಕೃತಿಕ)

ಆಸ್ಟ್ರೇಲಿಯವು ಮೂಲತಃ ಗೊಂಡ್ವಾನ ಭೂರಾಶಿಯ ಒಂದು ಭಾಗವಾಗಿದ್ದು ಅತ್ಯಂತ ಪುರಾತನವಾದುದು. ಇದನ್ನು ಭೂಸ್ವರೂಪದ ಆಧಾರದ ಮೇಲೆ ಮೂರು ಪ್ರಾಕೃತಿಕ ವಿಭಾಗಗಳಾಗಿ ವಿಂಗಡಿಸಲಾಗಿದೆ.

1. ಪೂರ್ವದ ಉನ್ನತ ಪ್ರದೇಶ, 2. ಮಧ್ಯದ ತಗ್ಗು ಮೈದಾನ, ಮತ್ತು 3. ಪಶ್ಚಿಮದ ಪ್ರಸ್ಥಭೂಮಿ.

ಹದಿನೇಳನೆಯ ಶತಮಾನದಲ್ಲಿ ಯೂರೋಪಿನ ಜೇಮ್ಸ್ ಕುಕ್‌ನಿಂದ ಕಂಡುಹಿಡಿಯಲ್ಪಟ್ಟ ಆಸ್ಟ್ರೇಲಿಯವನ್ನು ಹೊಸ ಭೂಖಂಡವೆನ್ನುವರು.

1. ಪೂರ್ವದ ಉನ್ನತ ಪ್ರದೇಶ: ಇದು ಖಂಡದ ಪೂರ್ವಭಾಗದಲ್ಲಿದ್ದು ಉತ್ತರದಲ್ಲಿ ಯಾರ್ಕ್ ಭೂಶಿರದಿಂದ ದಕ್ಷಿಣದಲ್ಲಿ ತಾಸ್ಮೇನಿಯದ ಬಾಸ್ ಜಲಸಂಧಿಯವರೆಗೆ ವಿಸ್ತರಿಸಿದೆ. ಹೆಚ್ಚು ಕಡಿಮೆ ಪೂರ್ವ ಕರಾವಳಿಗೆ ಹೊಂದಿಕೊಂಡಂತಿರುವ ಈ ಪರ್ವತ ಸರಣಿಗಳ ಪೂರ್ವ ಭಾಗ ಕಡಿದಾಗಿಯೂ ಮತ್ತು ಪಶ್ಚಿಮ ಭಾಗವು ಇಳಿಜಾರಿನಿಂದ ಕೂಡಿದೆ. ಹಿಂದೆ ಪೂರ್ವ ಕರಾವಳಿಯಿಂದ ಪ್ರವೇಶಿಸುವವರಿಗೆ ದುರ್ಗಮವಾಗಿದ್ದರಿಂದ ಇದನ್ನು 'ಗ್ರೇಟ್ ಡಿವೈಡಿಂಗ್ ಸರಣಿ' ಎಂದು ಕರೆಯಲಾಯಿತು. ಈ ಸರಣಿಯು ನ್ಯೂಸೌತ್‌ವೇಲ್ಸ್‌ನಲ್ಲಿ ಸಾಕಷ್ಟು ಎತ್ತರವಾಗಿದ್ದು ಕಡಿದಾದ ಇಳಿಜಾರಿನಿಂದ ಕೂಡಿದೆ. ಇವುಗಳನ್ನು "ಆಸ್ಟ್ರೇಲಿಯದ ಆಲ್ಪ್ಸ್" ಹಾಗೂ "ನ್ಯೂಇಂಗ್ಲೆಂಡ್ ಸರಣಿ" ಎಂದು ಕರೆಯುವರು. ಎತ್ತರವಾದ ಶಿಖರಗಳು ಚಳಿಗಾಲದಲ್ಲಿ ಹಿಮಾವೃತವಾಗಿರುತ್ತವೆ. ಈ ಭಾಗದ ಕೊಸಿಯುಸ್ಕೊ (2230 ಮೀ.) ಖಂಡದ ಅತಿ ಎತ್ತರವಾದ ಶಿಖರ.

ಆಸ್ಟ್ರೇಲಿಯದ ಪೂರ್ವ ತೀರದಿಂದಾಚೆ ದಕ್ಷಿಣೋತ್ತರವಾಗಿ "ಗ್ರೇಟ್ ಬ್ಯಾರಿಯರ್ ರೀಫ್" ಎಂಬ ಹವಳ ದಿಣ್ಣೆಗಳು (2000 ಕಿ.ಮೀ.) ಹಬ್ಬಿವೆ.

2. ಮಧ್ಯದ ತಗ್ಗುಮೈದಾನ: ಉತ್ತರದಲ್ಲಿ ಕಾರ್ಪೆಂಟೇರಿಯ ಕೊಲ್ಲಿಯಿಂದ ದಕ್ಷಿಣದ ಮರ್ರೆ ಬಯಲಿನವರೆಗೆ ಈ ತಗ್ಗು ಮೈದಾನ ಹರಡಿದೆ. ಇದು ಪೂರ್ವ ಉನ್ನತ ಭಾಗದಿಂದ ಪಶ್ಚಿಮಕ್ಕಿದ್ದು, ಆಂತರಿಕ ಜಲವ್ಯವಸ್ಥೆಯಿಂದ ಕೂಡಿದೆ. ಇದರ ಮಧ್ಯಭಾಗದಲ್ಲಿರುವ ಐರ್ ಸರೋವರದ ಕಡೆಗೆ ನದಿಗಳು ಹರಿಯುತ್ತವೆ. ಪ್ರಪಂಚದ ಪ್ರಸಿದ್ಧ ಆರ್ಟೀಸಿಯನ್ ನೀರಿನ ಬಾವಿಗಳನ್ನು ಕಾಣಬಹುದು.

ಆರ್ಟೀಸಿಯನ್ ಬಾವಿಗಳು

ಈ ತಗ್ಗು ಮೈದಾನವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ:

1. ಮರ್ರೆ ಡಾರ್ಲಿಂಗ್ ಮೈದಾನ

2. ಐರ್ ಸರೋವರ ಮೈದಾನ

3. ಕಾರ್ಪೆಂಟೇರಿಯ ಮೈದಾನ

ಮರ್ರೆ ನದಿ

ಡಾರ್ಲಿಂಗ್ ನದಿ

ಮರ್ರೆ ಮತ್ತು ಡಾರ್ಲಿಂಗ್ ನದಿಗಳ ಬಯಲು, ಉತ್ತರದಲ್ಲಿರುವ ಐರ್ ಸರೋವರದಿಂದ ಪ್ರತ್ಯೇಕಗೊಂಡಿದೆ. ನದಿಗಳ ನೀರಿನ ಪೂರೈಕೆಯಿಂದಾಗಿ ಇದೊಂದು ಆಸ್ಟ್ರೇಲಿಯದ ಸಮೃದ್ಧ ಕೃಷಿ ಭಾಗವಾಗಿದೆ. ಇದರಿಂದ ಉತ್ತರಕ್ಕಿರುವ ಐರ್ ಸರೋವರ ಮೈದಾನವು ವಿಶಾಲವಾದ ತಟ್ಟೆ ಆಕಾರ(ಸಾಸರ್)ವುಳ್ಳದ್ದಾಗಿದೆ. ಇದು ಮರ್ರೆ–ಡಾರ್ಲಿಂಗ್ ಬಯಲಿನಿಂದ ಉತ್ತರದಲ್ಲಿದೆ. ಇದು ಆಸ್ಟ್ರೇಲಿಯಾದ ಅತ್ಯಂತ ತಗ್ಗು ಭಾಗವು ಮತ್ತು ಐರಿ ಸರೋವರದ ತಳವು ಅತ್ಯಂತ ತಗ್ಗಾದ ಒಂದು ಭಾಗವಾಗಿದೆ. ಇಲ್ಲಿ ಹಲವು ಉಪ್ಪಿನ ಸರೋವರಗಳಿವೆ. ಇದರ ಬಹು ಭಾಗ ಬರಡು ಪ್ರದೇಶವಾಗಿದ್ದು ಅತಿ ವಿರಳ ಜನಸಂಖ್ಯೆಯಿಂದ ಕೂಡಿದೆ. ಫ್ಲಿಂಡರ್ಸ್ ಮತ್ತು ಮಿಚೆಲ್ ನದಿಗಳು ಹರಿಯುವ ಕಾರ್ಪೆಂಟೇರಿಯ ಮೈದಾನವು ಸಮತಟ್ಟಾಗಿದೆ. ಇದನ್ನು ಐರ್ ನದಿಬಯಲಿನಿಂದ ಬರ್ಕ್ಲೆ ಪ್ರಸ್ಥಭೂಮಿಯು ಬೇರ್ಪಡಿಸುತ್ತದೆ.

3. ಪಶ್ಚಿಮದ ಪ್ರಸ್ಥಭೂಮಿ: ಇದು ಕಾರ್ಪೆಂಟೇರಿಯ ಕೊಲ್ಲಿಯಿಂದ ಆನ್‌ಸ್ಲೊ, ಪರ್ತ್ ಮತ್ತು ಆಲ್ಬೇನಿಯವರೆಗೆ ಹರಡಿದೆ. ಆಸ್ಟ್ರೇಲಿಯದ ಮೂರನೆ ಒಂದು (1/3) ಭಾಗವನ್ನಾವರಿಸಿದ ವಿರುತಗ್ಗುಳ್ಳ ಪ್ರಸ್ಥಭೂಮಿ. ಇದು ಬಹುತೇಕ ಮರುಭೂಮಿಯ ಭಾಗವಾಗಿದ್ದು ಅಲ್ಲಿ ಮರಳುದಿಣ್ಣೆಗಳು ಸ್ಥಳಾಂತರಗೊಳ್ಳುತ್ತವೆ. ಇಲ್ಲಿ ಕೆಲವು ಪ್ರಸಿದ್ಧ ಮರುಭೂಮಿಗಳಿವೆ. ಉದಾಹರಣೆಗೆ ಗ್ರೇಟ್ ಸ್ಯಾಂಡಿ ಡೆಸರ್ಟ್, ಗಿಬ್ಸನ್ ಮತ್ತು ವಿಕ್ಟೋರಿಯ ಮರುಭೂಮಿಗಳು. ಈ ಭಾಗವು ಭಾರತದ ದಖನ್ ಪ್ರಸ್ಥಭೂಮಿಯಷ್ಟೇ ಪುರಾತನವಾದುದು. ಇಲ್ಲಿ ಅಪಾರ ಮರಳು ದಿಣ್ಣೆಗಳಿವೆ. ಅಲ್ಲಲ್ಲಿ ಪ್ರತ್ಯೇಕಿತ ಶಿಲಾ–ಬೆಟ್ಟ ಗುಡ್ಡಗಳಿವೆ. ಅವುಗಳಲ್ಲಿ ಖಂಡದ ಕೇಂದ್ರ ಭಾಗದಲ್ಲಿರುವ ಮ್ಯಾಕ್‌ಡೊನೆಲ್ ಮತ್ತು ಮಸ್‌ಗ್ರೇವ್ ಸರಣಿಗಳು ಎತ್ತರವಾದವು.

ನದಿಗಳ ವ್ಯವಸ್ಥೆ: ಅತಿಶಾಖ ಮತ್ತು ಶುಷ್ಕತೆಗಳಿಂದಾಗಿ ಆಸ್ಟ್ರೇಲಿಯದ ಬಹಳಷ್ಟು ಭಾಗವು ಮರುಭೂಮಿಯಿಂದ ಆವರಿಸಿದೆ. ಹೀಗಾಗಿ ನದಿ ವ್ಯವಸ್ಥೆ ಕಡಿಮೆ. ಇದ್ದರೂ ಅವುಗಳಲ್ಲಿ ಹಲವು ಚಿಕ್ಕವು ಮತ್ತು ಅಕಾಲಿಕ ನದಿಗಳು. ಸಮುದ್ರ ಸೇರುವ ನದಿಗಳಿಗಿಂತ ಸರೋವರಗಳಿಗೆ ಸೇರುವ ಒಳನಾಡಿನ ನದಿಗಳೇ ಹೆಚ್ಚು. ಬಹಳಷ್ಟು ನದಿಗಳು ಪೂರ್ವದ ಉನ್ನತ ಪ್ರದೇಶಗಳಲ್ಲಿ ಉಗಮ ಹೊಂದುತ್ತವೆ.



ಆಸ್ಟ್ರೇಲಿಯದ ನದಿಗಳು

ಮರ್ರೆ ಆಸ್ಟ್ರೇಲಿಯದ ಅತಿ ಪ್ರಮುಖವಾದ ನದಿ. ಇದು ನ್ಯೂಸೌತ್‌ವೇಲ್ಸ್‌ನ ಆಗ್ನೇಯಕ್ಕಿರುವ ಕೊಸಿಯುಸ್ಕೊ ಶಿಖರದ ಬಳಿ ಉಗಮ ಹೊಂದಿ ಆರಂಭದಲ್ಲಿ ಪಶ್ಚಿಮ ಹಾಗೂ ನೈಋತ್ಯಕ್ಕೆ ಹರಿದು (2,590 ಕಿ.ಮೀ.) ಎನ್‌ಕೌಂಟರ್ ಕೊಲ್ಲಿಯನ್ನು ಸೇರುತ್ತದೆ. ಡಾರ್ಲಿಂಗ್, ಲಾಚ್‌ಲಾನ್ ಮತ್ತು ಮುರ್ರಂಬಿಡ್ಜ್ ಎಂಬವು ಈ ನದಿಯ ಮುಖ್ಯ ಉಪನದಿಗಳು. ವರ್ಷದ ಕೆಲವು ಋತುಗಳಲ್ಲಿ ಮಾತ್ರ ಈ ನದಿ ಮೂಲಕ ನೌಕಾಯಾನ ಸಾಧ್ಯ. ಪೂರ್ವಾಭಿಮುಖವಾಗಿ ಹರಿಯುವ ನದಿಗಳು ಚಿಕ್ಕವು ಹಾಗೂ ವೇಗವಾಗಿ ಹರಿಯುತ್ತವೆ.

ಪೂರ್ವಕ್ಕೆ ಹರಿಯುವ ನದಿಗಳು ಕಿರಿದಾಗಿವೆ ಮತ್ತು ವೇಗವಾಗಿ ಹರಿಯುತ್ತವೆ. ಅವು ಪೂರ್ವದ ಪಿಟ್ಜರಾಯ್ ಮತ್ತು ಬೆಲ್ಯಾಂಡೋಗಳನ್ನು ಆಕ್ರಮಿಸುತ್ತವೆ. ಈಶಾನ್ಯ ಭಾಗದಲ್ಲಿನ ಮಿಟ್ಚೆಲ್, ಗಿಲ್‌ಬರ್ಟ್ ಮತ್ತು ಫ್ಲಿಂಡರ್ಸ್ ನದಿಗಳು ವಾಯುವ್ಯಕ್ಕೆ ಹರಿಯುತ್ತವೆ. ಮತ್ತು ಕಾರ್ಪೆಂಟರಿಯ ಕೊಲ್ಲಿಯನ್ನು ಸೇರುತ್ತವೆ. ಡಾಲಿ, ವಿಕ್ಟೋರಿಯ, ವೆಸ್ಟ್ ಫಿಡ್ಜರಾಯ್ ಮತ್ತು ಇತರ ನದಿಗಳು ವಾಯುವ್ಯ ಮತ್ತು ಉತ್ತರಾಭಿಮುಖವಾಗಿ ಹರಿದು ಟಿಮೋರ್ ಸಮುದ್ರವನ್ನು ಸೇರುತ್ತವೆ.

ಕೂಪರ್ ಕ್ರೀಕ್, ಡೈಯಮೆಂಟೈನ್ ಮತ್ತು ಮುಕುಂಬ ನದಿಗಳು ಐರಿ ಸರೋವರದ ಕಡೆಗೆ ಹರಿಯುತ್ತವೆ. ಮುರ್ಚಿಸನ್, ಅವೋನ್, ಬ್ಲ್ಯಾಕ್‌ವುಸ್ ಮುಂತಾದ ನದಿಗಳು ಹಿಂದೂ ಮಹಾಸಾಗರದ ಕಡೆಗೆ ಹರಿಯುತ್ತವೆ.

ಆಸ್ಟ್ರೇಲಿಯದಲ್ಲಿ ಕೆಲವು ಸರೋವರಗಳಿವೆ. ಅವು ಚಿಕ್ಕವು ಮತ್ತು ಅವುಗಳಲ್ಲಿ ಹೆಚ್ಚು ಉಪ್ಪು ನೀರಿನ ಸರೋವರಗಳು. ಉದಾ: ಐರ್, ಟಾರೆನ್ಸ್, ಗೆರ್ಡ್‌ನರ್ ಟಾರೆನ್ಸ್, ಬೇಷ್ ಇತ್ಯಾದಿ. ಇವುಗಳಲ್ಲಿ ಐರ್ ಸರೋವರ ಅತಿ ದೊಡ್ಡದು ಮತ್ತು ಖಂಡದ ಅತ್ಯಂತ ತಗ್ಗಿನಲ್ಲಿದೆ. ಇದರಿಂದ ಪಶ್ಚಿಮ ಭಾಗದಲ್ಲಿ ಪ್ರಪಂಚದ ಅತಿದೊಡ್ಡ ಏಕಶಿಲೆಯಾದ ಆಯರ್ಸ್ (ಉಲೂರು) ಶಿಲೆಯಿದೆ.

ಆಯರ್ಸ್ (ಉಲೂರು) ಶಿಲೆ

ಐರಿ ಸರೋವರ

3. ವಾಯುಗುಣ ಮತ್ತು ಸ್ವಾಭಾವಿಕ ಸಸ್ಯವರ್ಗ

ವಾಯುಗುಣ: ಆಸ್ಟ್ರೇಲಿಯದ ಮಧ್ಯದಲ್ಲಿ ಮಕರ ಸಂಕ್ರಾಂತಿ ವೃತ್ತವು ಹಾಯ್ದು ಹೋಗಿದೆ. ಹೀಗಾಗಿ ಆಸ್ಟ್ರೇಲಿಯದಲ್ಲಿ ಉಷ್ಣವಲಯ ಮತ್ತು ಉಪಉಷ್ಣವಲಯದ ವಾಯುಗುಣವಿದೆ. ಖಂಡದ ಬಹಳಷ್ಟು ಭಾಗದಲ್ಲಿ ವರ್ಷವಿಡೀ ಅಧಿಕ ಉಷ್ಣಾಂಶವಿರುತ್ತದೆ. ಪಶ್ಚಿಮ ತೀರದಲ್ಲಿ ಶೀತಸಾಗರ ಪ್ರವಾಹ ಹರಿಯುತ್ತದೆ. ಇದರಿಂದ ಆಸ್ಟ್ರೇಲಿಯದ ಪಶ್ಚಿಮ ಭಾಗ ಮರುಭೂಮಿ ಮತ್ತು ಶುಷ್ಕ ವಾಯುಗುಣವನ್ನು ಹೊಂದಿದೆ. ಉತ್ತರ ಭಾಗಗಳಲ್ಲಿ ಮಾನ್ಸೂನ್ ಮತ್ತು ದಕ್ಷಿಣ ಕರಾವಳಿಯಲ್ಲಿ ಮೆಡಿಟರೇನಿಯನ್ ಮಾದರಿ ವಾಯುಗುಣವಿದೆ.

ಚಳಿಗಾಲ: ಆಸ್ಟ್ರೇಲಿಯ ಖಂಡವು ದಕ್ಷಿಣ ಗೋಳಾರ್ಧದಲ್ಲಿರುವುದರಿಂದ ಋತುಕಾಲಗಳು ಉತ್ತರ ಗೋಳಾರ್ಧಕ್ಕೆ ವಿರುದ್ಧ ಅವಧಿಯಲ್ಲಿ ಏರ್ಪಡುತ್ತವೆ. ಅಂದರೆ ಉತ್ತರ ಗೋಳಾರ್ಧದಲ್ಲಿ

ಬೇಸಿಗೆಯಿದ್ದಾಗ ಇಲ್ಲಿ ಚಳಿಗಾಲವಾಗಿರುತ್ತದೆ. ಉದಾ: ಜೂನ್‌ನಿಂದ ಆಗಸ್ಟ್. ಈ ಅವಧಿಯಲ್ಲಿ ಉಷ್ಣಾಂಶ ಕಡಿಮೆ. ಅದು ಉತ್ತರದಿಂದ ದಕ್ಷಿಣಕ್ಕೆ ಕಡಿಮೆಯಾಗುತ್ತದೆ. ಆದರೆ ಒತ್ತಡ ಹೆಚ್ಚಾಗುತ್ತದೆ. ಮಾರುತಗಳು ಒಳನಾಡಿನಿಂದ ಸಮುದ್ರದ ಕಡೆಗೆ ಬೀಸುತ್ತವೆ. ಅವು ಹೆಚ್ಚು ಮಳೆ ತರುವುದಿಲ್ಲ. ಶುಷ್ಕ ಮತ್ತು ಶಾಖವುಳ್ಳ ವಾಯುಗುಣವಿರುತ್ತದೆ. ತಾಸ್ಮೇನಿಯದಲ್ಲಿ ಭಿನ್ನವಾದ ವಾಯುಗುಣವಿರುತ್ತದೆ.

ಬೇಸಿಗೆ ಕಾಲ: ಇದು ಡಿಸೆಂಬರಿನಿಂದ ಫೆಬ್ರವರಿವರೆಗಿರುತ್ತದೆ. ಈ ಅವಧಿಯಲ್ಲಿ ಉಷ್ಣಾಂಶ ಹೆಚ್ಚು. ಖಂಡದ ಪೂರ್ವಭಾಗಕ್ಕಿಂತ ಪಶ್ಚಿಮದ ಮರುಭೂಮಿಗಳಲ್ಲಿ ಗರಿಷ್ಠ ತಾಪಮಾನವಿರುತ್ತದೆ. ದಕ್ಷಿಣ, ಆಗ್ನೇಯ ಭಾಗಗಳು ಮತ್ತು ತಾಸ್ಮೇನಿಯ ದ್ವೀಪಗಳಲ್ಲಿ ಸಾಧಾರಣ ಉಷ್ಣಾಂಶವಿರುತ್ತದೆ. ಒಳನಾಡಿನಲ್ಲಿ ಕಡಿಮೆ ಒತ್ತಡವಿದ್ದು, ಮಾರುತಗಳು ಸಮುದ್ರದ ಕಡೆಯಿಂದ ಬೀಸುವಾಗ ಸ್ವಲ್ಪ ಮಳೆ ತರುತ್ತದೆ. ಖಂಡದ ದಕ್ಷಿಣ ಮತ್ತು ಆಗ್ನೇಯ ಭಾಗಗಳಿಗೆ ಮಳೆ ಹೆಚ್ಚು.

ಆಸ್ಟ್ರೇಲಿಯದಲ್ಲಿ ಆವರ್ತಗಾಳಿ (ಸೈಕ್ಲೋನ್ಸ್)ಗಳನ್ನು 'ವಿಲ್ಲಿ ವಿಲ್ಲೀಸ್' ಎಂದು ಕರೆಯುವರು. ಆಸ್ಟ್ರೇಲಿಯದ ಮಳೆಯು ಸಾಮಾನ್ಯವಾಗಿ ಮಾನ್ಸೂನ್ ಮಾದರಿಯದಾಗಿದ್ದು ಅನಿಶ್ಚಿತ ಮತ್ತು ಅಕಾಲಿಕವಾಗಿದೆ. ಆಗ್ನೇಯ ಉತ್ತರ ಮತ್ತು ನೈಋತ್ಯ ಕರಾವಳಿ ಪ್ರದೇಶಗಳಲ್ಲಿ ವಾರ್ಷಿಕ ಮಳೆಯು 75 ಸೆಂ.ಮೀ.ಗಿಂತ ಹೆಚ್ಚಿಗೆ ಕಂಡುಬರುವುದು. ಆಸ್ಟ್ರೇಲಿಯದ ಒಳನಾಡಿನ ಮರುಭೂಮಿಗಳ ವಿಶಾಲವಾದ ಪ್ರದೇಶವು 25 ಸೆಂ.ಮೀ.ಗಿಂತ ಕಡಿಮೆ ಮಳೆ ಪಡೆಯುವುದು.

ಸ್ವಾಭಾವಿಕ ಸಸ್ಯವರ್ಗ: ದಟ್ಟವಾದ ಕಾಡುಗಳ ಕೊರತೆಯು ಆಸ್ಟ್ರೇಲಿಯದ ಪ್ರಮುಖ ಲಕ್ಷಣ. ಖಂಡದ ಬಹಳಷ್ಟು ಭಾಗವು ಹುಲ್ಲುಗಾವಲು, ಕುರುಚಲು ಸಸ್ಯ ಮತ್ತು ತೆರೆದ ವಿರಳವಾದ ಮರಗಳಿಂದ ಕೂಡಿದ ಸಸ್ಯವರ್ಗವನ್ನು ಹೊಂದಿದೆ. ಇದು ಖಂಡದ ವಾಯುಗುಣವನ್ನು ಪ್ರತಿಬಿಂಬಿಸುತ್ತದೆ. ಆಸ್ಟ್ರೇಲಿಯ ಖಂಡದ ವಿವಿಧ ಸ್ವಾಭಾವಿಕ ಸಸ್ಯವರ್ಗವು ಈ ಕೆಳಕಂಡಂತಿದೆ.



ಆಸ್ಟ್ರೇಲಿಯದ ಸ್ವಾಭಾವಿಕ ಸಸ್ಯವರ್ಗ

1. ಉಷ್ಣವಲಯದ ಕಾಡುಗಳು: ಹೆಚ್ಚು ಮಳೆ ಬೀಳುವ ಉತ್ತರ ಮತ್ತು ಈಶಾನ್ಯ ಕರಾವಳಿ ಪ್ರದೇಶಗಳಲ್ಲಿ ಇಂತಹ ಕಾಡುಗಳಿವೆ. ಅಲ್ಲಲ್ಲಿ ಚದುರಿದಂತೆ ಕಂಡುಬರುವ ಇವು ಬಹಳ ಕಡಿಮೆ ಕ್ಷೇತ್ರವನ್ನಾವರಿಸಿವೆ. ಇಲ್ಲಿ ಬೆಳೆಯುವ ಪ್ರಮುಖ ಮರಗಳೆಂದರೆ ಆ್ಯಶ್, ಸಿಡಾರ್, ಬೀಚ್ ಮತ್ತು ತಾಳೆ.

2. ಸಮಶೀತೋಷ್ಣವಲಯದ ಕಾಡುಗಳು: ಇಂತಹ ಕಾಡುಗಳು ಪರ್ವತ ಮತ್ತು ಬೆಟ್ಟಗುಡ್ಡಗಳಲ್ಲಿ ಕಂಡು ಬರುತ್ತವೆ. ಹೀಗಾಗಿ ಇವುಗಳನ್ನು "ಗುಡ್ಡಗಾಡು ಅರಣ್ಯ"ಗಳೆಂತಲೂ ಕರೆಯುತ್ತಾರೆ. ಅವು ಹೆಚ್ಚಾಗಿ ಕ್ವೀನ್ಸ್‌ಲ್ಯಾಂಡ್, ನ್ಯೂಸೌತ್‌ವೇಲ್ಸ್, ವಿಕ್ಟೋರಿಯ ಮತ್ತು ತಾಸ್ಮೇನಿಯಗಳಲ್ಲಿ ಹಂಚಿಕೆಯಾಗಿವೆ. ಇಲ್ಲಿನ ಪ್ರಮುಖ ಮರಗಳೆಂದರೆ ನೀಲಗಿರಿ, ಪೈನ್, ಕಳ್ಳಿ ಇತ್ಯಾದಿ. ಇವು ತೈಲ ಮತ್ತು ಕಾಗದ ತಯಾರಿಕೆಗೆ ಹೆಚ್ಚು ಉಪಯುಕ್ತ.

3. ಹುಲ್ಲುಗಾವಲು: ಆಸ್ಟ್ರೇಲಿಯದ ಹುಲ್ಲುಗಾವಲಿನಲ್ಲಿ ಎರಡು ವಿಧಗಳಿವೆ: (i) ಉಷ್ಣವಲಯದ ಹುಲ್ಲುಗಾವಲು ಅಥವಾ ಸವನ್ನ; ಮತ್ತು (ii) ಸಮಶೀತೋಷ್ಣವಲಯದ ಹುಲ್ಲುಗಾವಲು ಅಥವಾ ಡೌನ್ಸ್.

ಮೊದಲನೆಯದು ಪೂರ್ವದ ಉನ್ನತ ಪ್ರದೇಶಗಳಿಂದ ಪಶ್ಚಿಮ ಭಾಗಗಳಾದ ಕ್ವೀನ್ಸ್ ಲ್ಯಾಂಡ್, ಉತ್ತರ ಆಸ್ಟ್ರೇಲಿಯದ ಮಧ್ಯ ಮತ್ತು ಪಶ್ಚಿಮ ಆಸ್ಟ್ರೇಲಿಯದ ಉತ್ತರ ಭಾಗಗಳಲ್ಲಿ ಹರಡಿದೆ. ಇದನ್ನು 'ಸವನ್ನ ಹುಲ್ಲುಗಾವಲು' ಎಂದು ಕರೆಯಲಾಗಿದೆ. ಎರಡನೆಯ ಪ್ರಕಾರದ ಹುಲ್ಲುಗಾವಲು ಮರ್ರೆ ಡಾರ್ಲಿಂಗ್ ಬಯಲಿನಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿದೆ. ಇದು ಸಮಶೀತೋಷ್ಣ ಹುಲ್ಲುಗಾವಲಾಗಿದ್ದು ಇದನ್ನು 'ಡೌನ್ಸ್' ಎನ್ನುವರು. ಇದು ಪಶುಪಾಲನೆಗೆ ಹೆಚ್ಚು ಉಪಯುಕ್ತವಾಗಿದೆ. ಸಮಶೀತೋಷ್ಣವಲಯದ ಹುಲ್ಲುಗಾವಲಿನಲ್ಲಿ ಪೊದೆಹುಲ್ಲು, ಮಿಚೆಲ್ ಮತ್ತು ಅಟ್ರೇಬಲ್ ಹುಲ್ಲು ಪ್ರಭೇದಗಳು ಕಂಡುಬರುತ್ತವೆ. ಪೊದೆ ಹುಲ್ಲುಗಾವಲು ಕುರಿ ಸಾಕಾಣೆಗೆ ಯೋಗ್ಯವಾದುದು.

ಸವನ್ನ ಹುಲ್ಲುಗಾವಲು

ಡೌನ್ಸ್ ಹುಲ್ಲುಗಾವಲು

4. ಕುರುಚಲು ಸಸ್ಯವರ್ಗ: ಇದು ಪಶ್ಚಿಮ ಆಸ್ಟ್ರೇಲಿಯದ ದಕ್ಷಿಣ ಮತ್ತು ಪಶ್ಚಿಮ ಭಾಗಗಳು, ದಕ್ಷಿಣ ಆಸ್ಟ್ರೇಲಿಯ ನ್ಯೂಸೌತ್ ವೇಲ್ಸ್‌ನ ಪಶ್ಚಿಮ ಭಾಗ ಹಾಗೂ ಕ್ವೀನ್ಸ್‌ಲ್ಯಾಂಡ್‌ನ ಕೆಲವು ಭಾಗಗಳಲ್ಲಿ ಕಂಡು ಬರುತ್ತದೆ. ಮಳೆ ಕೊರತೆಯಿಂದಾಗಿ ಕುರುಚಲು ಗಿಡಗಳು ಬೆಳೆಯುತ್ತವೆ. ಶುಷ್ಕ ಭಾಗಗಳಲ್ಲಿ ಜಾಲಿಮರಗಳೇ ಹೆಚ್ಚಾಗಿ ಕಂಡುಬರುತ್ತವೆ. ಅಲ್ಲಲ್ಲಿ ನೀಲಗಿರಿ ಮರಗಳು, ಕತ್ತಾಳೆ ಮತ್ತು ಮುಳ್ಳಿನ ಗಿಡಗಂಟಿಗಳು ಬೆಳೆಯುತ್ತವೆ.

ಆ್ಯಶ್

ಸಿಡಾರ್

ತಾಲ್

ನೀಲಗಿರಿ

5. ಮರುಭೂಮಿ ಸಸ್ಯವರ್ಗ: ಪಶ್ಚಿಮ ಆಸ್ಟ್ರೇಲಿಯದ ಕೇಂದ್ರ ಮತ್ತು ಪೂರ್ವ ಭಾಗದಲ್ಲಿ ಈ ಸಸ್ಯವರ್ಗ ಹಂಚಿಕೆಯಾಗಿದೆ. ಇಲ್ಲಿ ಕಳ್ಳಿಜಾತಿ ಮರಗಳು, ಸಾಲ್ಟ್‌ಬುಶ್, ಕುಬ್ಜಹುಲ್ಲು ಹಾಗೂ ವಿವಿಧ ಮುಳ್ಳಿನ ಗಿಡಗಂಟಿಗಳು ಬೆಳೆಯುತ್ತವೆ. ಇವು ಕ್ಷಾಮ ನಿಭಾಯಿಸಬಲ್ಲ ಗುಣಲಕ್ಷಣವನ್ನು ಹೊಂದಿವೆ. ಪ್ರಾಣಿವರ್ಗ ಆಸ್ಟ್ರೇಲಿಯದಲ್ಲಿ ಬೇರೆಲ್ಲೂ ಇಲ್ಲದ ಅಪರೂಪದ ಹಾಗೂ ವಿಚಿತ್ರ ಪ್ರಾಣಿ ಪಕ್ಷಿಗಳಿವೆ. ಪ್ಲಾಟಿಪಸ್ ಎನ್ನುವ ಸಸ್ತನಿ ಮೊಟ್ಟೆ ಇಡುತ್ತದೆ ಹಾಗೂ ತನ್ನ ಮರಿಗಳಿಗೆ ಮೊಲೆಯುಣಿಸುತ್ತದೆ. ಮೈತುಂಬ ತುಪ್ಪಳವುಳ್ಳ ಚರ್ಮದ ಹೊದಿಕೆ ಹೊಂದಿದೆ. ಇವು ತಮ್ಮ ಮರಿಗಳನ್ನು ಹೊಟ್ಟೆಯ

ಹೊರಚೀಲಗಳಲ್ಲಿ ಪೋಷಿಸುತ್ತವೆ. ಎಮು ಆಸ್ಟ್ರೇಲಿಯದ ಅತಿ ದೊಡ್ಡ ಪಕ್ಷಿ. ಲೈರ್ ಎಂಬುದು ನವಿಲಿನಂತಹ ಸುಂದರವಾದ ಪಕ್ಷಿ. ನಗುವಿನಂತೆ ಕೂಗುವ ಕೂಕಾಬುರ್ರ, ಕಪ್ಪು ಹಂಸ ಮುಂತಾದ ಪಕ್ಷಿಗಳಿವೆ. ಕಾಂಗರೂ ರಾಷ್ಟ್ರೀಯ ಪ್ರಾಣಿಯಾಗಿದೆ. ಡಿಂಗೊ ಎಂಬುದು ತೋಳದಂತೆ ಕಾಣುವ ಕಾಡುನಾಯಿ. ವಲ್ಲಬಿ, ನೊಣ ತಿನ್ನುವ ಎಕಿಡ್ನ, ಮರಹತ್ತುವ ಸಣ್ಣ ಆಕಾರವುಳ್ಳ ಕರಡಿಕೋಲ ಇತ್ಯಾದಿ ಪ್ರಾಣಿಗಳಿವೆ. ಸರೀಸೃಪಗಳು ಮತ್ತು ವಿಷಪೂರಿತ ಹಾವುಗಳು ಸರ್ವೇಸಾಮಾನ್ಯ.

ಕಾಂಗರೂ

ವಲ್ಲಬಿ

ಡಿಂಗೊ

ಕರಡಿಕೋಲ

ಎಮು



ಕಪ್ಪು ಹಂಸ

ಆಸ್ಟ್ರೇಲಿಯ "ಅಪರೂಪದ ಪ್ರಾಣಿ ಪಕ್ಷಿಗಳ ನಾಡು". ಸು.60%ರಷ್ಟು ಇಲ್ಲಿನ ಪ್ರಾಣಿ ಪಕ್ಷಿಗಳು ಪ್ರಪಂಚದಲ್ಲೆಲ್ಲೂ ಕಾಣುವುದಿಲ್ಲ.

5. ವ್ಯವಸಾಯ ಮತ್ತು ಪಶುಸಂಗೋಪನೆ

ವ್ಯವಸಾಯ: ವ್ಯವಸಾಯ ಆಸ್ಟ್ರೇಲಿಯದ ವೃತ್ತಿಗಳಲ್ಲಿ ಒಂದಾಗಿದೆ. ಆದರೆ ಇಲ್ಲಿ ಕೃಷಿ ಭೂಮಿ ಕಡಿಮೆ. ಈ ಖಂಡದ ವಿಸ್ತೀರ್ಣದಲ್ಲಿ ಶೇ.4 ಭಾಗ ಮಾತ್ರ ಕೃಷಿಗೆ ಯೋಗ್ಯವಾದುದು. ಅದು ಸಮುದ್ರ ತೀರ ಮತ್ತು ನದಿ ಬಯಲುಗಳಲ್ಲಿ ಕಂಡುಬರುತ್ತದೆ. ಒಟ್ಟು ಜನಸಂಖ್ಯೆಯಲ್ಲಿ ಶೇ. 4.4 ರಷ್ಟು ಭಾಗ ಜನರು ಮಾತ್ರ ವ್ಯವಸಾಯದಲ್ಲಿ ತೊಡಗಿಸಿಕೊಂಡಿರುತ್ತಾರೆ. ಬಿಳಿಯನ್ನರು ಈ ವೃತ್ತಿಯಲ್ಲಿ ನಿರತರಾಗಿರುವುದು ವಿಶೇಷ.

ಮಳೆಯ ಅಭಾವ ಮತ್ತು ಅಕಾಲಿಕ ಹಂಚಿಕೆ, ಫಲವತ್ತಲ್ಲದ ಮರಳುಮಣ್ಣು, ಕೃಷಿಯೋಗ್ಯ ಭೂಮಿಯ ಕೊರತೆ ಮತ್ತು ನೀರಾವರಿಯ ಕೊರತೆಗಳಿಂದಾಗಿ ಕೃಷಿಕ್ಷೇತ್ರ ಕಡಿಮೆ. ಆದರೂ

ಆಸ್ಟ್ರೇಲಿಯವು ತನ್ನ ಬೇಡಿಕೆಯನ್ನು ಪೂರೈಸಿಕೊಳ್ಳುವಷ್ಟು ಕೃಷಿ ಉತ್ಪನ್ನಗಳಲ್ಲಿ ಸ್ವಯಂ ಪೂರ್ಣತೆಯನ್ನು ಹೊಂದಿದೆ.

ಆಸ್ಟ್ರೇಲಿಯವು ವಿಸ್ತರಣಾ ಬೇಸಾಯ ಪದ್ಧತಿಯನ್ನು ಅನುಸರಿಸುತ್ತದೆ. ಭೂಹಿಡುವಳಿ ಗಾತ್ರ ದೊಡ್ಡದು. ಆಧುನಿಕ ಬೇಸಾಯ ಕ್ರಮವನ್ನು ಬಳಸಲಾಗುವುದು. ರಫ್ತು ಮಾಡುವ ಉದ್ದೇಶದಿಂದ ವಾಣಿಜ್ಯ ಬೆಳೆಗಳ ಸಾಗುವಳಿಗೆ ಆದ್ಯತೆ ಹೆಚ್ಚು.ಆದರೂ ವಿವಿಧ ಬೆಳೆಗಳನ್ನು ಬೆಳೆಯಲಾಗುವುದು. ಉದಾ: ಗೋಧಿ, ಕಬ್ಬು, ಹತ್ತಿ, ತಂಬಾಕು, ಮೆಕ್ಕೆ ಜೋಳ, ವಿವಿಧ ಹಣ್ಣು ಮತ್ತು ತರಕಾರಿಗಳನ್ನು ದಕ್ಷಿಣ ಆಸ್ಟ್ರೇಲಿಯ, ಕ್ವೀನ್ಸ್‌ಲ್ಯಾಂಡ್, ನ್ಯೂಸೌತ್‌ವೇಲ್ಸ್ ಮತ್ತು ವಿಕ್ಟೋರಿಯ ಪ್ರಾಂತ್ಯಗಳಲ್ಲಿ ಬೆಳೆಯಲಾಗುತ್ತದೆ.

ಗೋಧಿ

ಕಬ್ಬು

ತಂಬಾಕು

ಹತ್ತಿ ಬೇಸಾಯ

ಸೇಬು ಬೆಳೆ

ಗೋಧಿ ಆಸ್ಟ್ರೇಲಿಯದ ಅತ್ಯಂತ ಪ್ರಮುಖವಾದ ಆಹಾರ ಬೆಳೆ. ಇದನ್ನು ದಕ್ಷಿಣ ಆಸ್ಟ್ರೇಲಿಯ, ಕ್ವೀನ್ಸ್‌ಲ್ಯಾಂಡ್, ನ್ಯೂಸೌತ್‌ವೇಲ್ಸ್ ಮತ್ತು ವಿಕ್ಟೋರಿಯಗಳಲ್ಲಿ ಬೆಳೆಯಲಾಗುವುದು. ಮರ್ರೆ ಡಾರ್ಲಿಂಗ್ ಬಯಲು ಪ್ರದೇಶ ಗೋಧಿಗೆ ಪ್ರಸಿದ್ಧ. ಆಸ್ಟ್ರೇಲಿಯ ತನ್ನ ಗೋಧಿ ಉತ್ಪನ್ನದಲ್ಲಿ ಶೇ.70ರಷ್ಟು ಭಾಗವನ್ನು ರಫ್ತು ಮಾಡುತ್ತದೆ.

ಮೆಕ್ಕೆ ಜೋಳ ಮತ್ತೊಂದು ಆಹಾರದ ಬೆಳೆ. ಇದನ್ನು ಜಾನುವಾರುಗಳ ಆಹಾರ ತಯಾರಿಕೆಗಾಗಿ ಬೆಳೆಯಲಾಗುತ್ತದೆ. ಇದನ್ನು ಕ್ವೀನ್ಸ್‌ಲ್ಯಾಂಡ್ ಮತ್ತು ನ್ಯೂಸೌತ್‌ವೇಲ್ಸ್‌ಗಳಲ್ಲಿ ಹೆಚ್ಚು ಬೆಳೆಯಲಾಗುವುದು. ಮರ್ರೆ ಡಾರ್ಲಿಂಗ್ ಬಯಲಿನಲ್ಲಿ ಸ್ವಲ್ಪಮಟ್ಟಿಗೆ ಭತ್ತ ಬೆಳೆಯಲಾಗುತ್ತದೆ.

ಕಬ್ಬು ಆಸ್ಟ್ರೇಲಿಯದ ಪ್ರಮುಖ ವಾಣಿಜ್ಯ ಬೆಳೆ. ಇದನ್ನು ಹೆಚ್ಚಾಗಿ ಪೂರ್ವ ಕರಾವಳಿಗೆ ಹೊಂದಿಕೊಂಡಿರುವ ಉತ್ತರ ನ್ಯೂಸೌತ್‌ವೇಲ್ಸ್‌ನಿಂದ ಕ್ವೀನ್ಸ್‌ಲ್ಯಾಂಡ್‌ವರೆಗಿನ ಪ್ರದೇಶದಲ್ಲಿ ಬೆಳೆಯಲಾಗುವುದು. ಮತ್ತೊಂದು ವಾಣಿಜ್ಯ ಬೆಳೆಯಾದ ತಂಬಾಕನ್ನು ಕ್ವೀನ್ಸ್‌ಲ್ಯಾಂಡ್‌ನಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತದೆ. ವಿವಿಧ ಹಣ್ಣು ಮತ್ತು ತರಕಾರಿಗಳನ್ನು ತಾಸ್ಮೇನಿಯ, ವಿಕ್ಟೋರಿಯ ಮತ್ತು ನ್ಯೂಸೌತ್‌ವೇಲ್ಸ್‌ಗಳಲ್ಲಿ ಬೆಳೆಯಲಾಗುತ್ತದೆ. ಸೇಬು, ದ್ರಾಕ್ಷಿ, ಪೇರು, ಕಿತ್ತಳೆ ಮುಂತಾದವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ.

ಪಶುಸಂಗೋಪನೆ: ಇದು ಆಸ್ಟ್ರೇಲಿಯದ ಅತಿ ಪ್ರಮುಖ ವೃತ್ತಿ. ಆಸ್ಟ್ರೇಲಿಯವು "ಪಶುಪಾಲನಾ ದೇಶ" ಎಂದೇ ಪ್ರಸಿದ್ಧಿ. ಹಾಲಿನ ಉತ್ಪನ್ನ, ಮಾಂಸ, ಉಣ್ಣೆ ಮತ್ತು ಚರ್ಮದ ವಸ್ತುಗಳಿಗಾಗಿ ಕುರಿ ಮತ್ತು ದನಕರುಗಳನ್ನು ಸಾಕಲಾಗುವುದು.

ಕುರಿ ಸಾಕಾಣಿಕೆ

ಕುರಿಸಾಕಣೆಯು ಆಸ್ಟ್ರೇಲಿಯದ ಅತ್ಯಂತ ಪ್ರಮುಖ ಆರ್ಥಿಕ ವೃತ್ತಿ. ಅಧಿಕ ಸಂಖ್ಯೆಯ ಕುರಿಗಳನ್ನು ಹೊಂದಿರುವ ಈ ಖಂಡ ಉಣ್ಣೆಯ ಉತ್ಪಾದನೆ ಮತ್ತು ಕಚ್ಚಾಉಣ್ಣೆಯನ್ನು ರಫ್ತು ಮಾಡುವುದರಲ್ಲಿಯೂ ಮುಂದಿದೆ. ವಿಶಾಲ ಹುಲ್ಲುಗಾವಲು, ಆರ್ಟೀಸಿಯನ್ ಬಾವಿಗಳಿಂದ ನೀರಿನ ಲಭ್ಯತೆ, ತಂಪು ಮತ್ತು ಶುಷ್ಕ ವಾಯುಗುಣ, ಅತ್ಯಾಧುನಿಕ ವಿಧಾನದ ಕುರಿಸಾಕಣೆ, ವಿಶಾಲ ಮಾರುಕಟ್ಟೆ ಸೌಲಭ್ಯಗಳು ಕುರಿಸಾಕಣೆಗೆ ಉತ್ತೇಜಕವಾಗಿವೆ. ಇಲ್ಲಿ ಸಾಕುವ ಕುರಿಗಳಲ್ಲಿ ಸುಮಾರು ಶೇ.75 ಭಾಗ 'ಮೆರಿನೊ' ಜಾತಿಗೆ ಸೇರಿವೆ. ಅವು ಉತ್ತಮ ಗುಣಮಟ್ಟದ ಉಣ್ಣೆಯನ್ನು ನೀಡುತ್ತವೆ. ವಿಶಾಲವಾದ ಕುರಿಸಾಕಣೆ ಪ್ರದೇಶಕ್ಕೆ 'ಕುರಿಗಾವಲು' ಎನ್ನುವರು.

ದನಕರುಗಳನ್ನು ಪ್ರಮುಖವಾಗಿ ಗೋಮಾಂಸ ಮತ್ತು ಕ್ಷೀರೋತ್ಪನ್ನಗಳಿಗಾಗಿ ಸಾಕಲಾಗುತ್ತದೆ. ಸವನ್ನ ಪ್ರದೇಶದಲ್ಲಿ ಗೋಮಾಂಸಕ್ಕಾಗಿ ಮತ್ತು ಸಮಶೀತೋಷ್ಣವಲಯದ ಡೌನ್ಸ್ ಹುಲ್ಲುಗಾವಲಿನ ಪ್ರದೇಶದಲ್ಲಿ ಕ್ಷೀರೋತ್ಪನ್ನಗಳಿಗಾಗಿ ದನಕರುಗಳನ್ನು ಸಾಕಲಾಗುವುದು.

6. ಖನಿಜ ಮತ್ತು ಕೈಗಾರಿಕೆಗಳು

ಖನಿಜಗಳು: ಆಸ್ಟ್ರೇಲಿಯದಲ್ಲಿ ಸಾಕಷ್ಟು ಖನಿಜ ಸಂಪತ್ತಿದೆ. ಕಬ್ಬಿಣದ ಅದಿರು, ಬಾಕ್ಸೈಟ್, ಸತು, ನಿಕ್ಕಲ್, ತಾಮ್ರ, ಮ್ಯಾಂಗನೀಸ್, ಚಿನ್ನ, ತವರ, ಸೀಸ ಮತ್ತು ಯುರೇನಿಯಂ ಪ್ರಮುಖ ಖನಿಜಗಳು. ಜೊತೆಗೆ ಇಂಧನ ಖನಿಜಗಳಾದ ಕಲ್ಲಿದ್ದಲು, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಗಳೂ ಸಹ ದೊರೆಯುತ್ತವೆ. ಇವುಗಳಲ್ಲಿ ಅನೇಕ ಖನಿಜಗಳು ರಫ್ತಾಗುತ್ತವೆ.

ಆಸ್ಟ್ರೇಲಿಯ ಒಂದು ಪ್ರಮುಖ ಕಬ್ಬಿಣದ ಅದಿರು ಉತ್ಪಾದಿಸುವ ದೇಶ. ಅತ್ಯಧಿಕ ಪ್ರಮಾಣದ ಕಬ್ಬಿಣದ ಅದಿರು ಜಪಾನಿಗೆ ರಫ್ತಾಗುತ್ತದೆ. ಐರನ್‌ನಾಬ್, ಐರನ್ ಮಾನಾರ್ಕ್, ಐರನ್ ಬೇರನ್‌ಹಿಲ್, ಪಿಲ್ಬಾರ ಮತ್ತು ಯಾಂಪಿಗಳು ಪ್ರಮುಖ ಕಬ್ಬಿಣದ ಅದಿರು ಉತ್ಪಾದಕ ಪ್ರದೇಶಗಳು.

ಪ್ರಪಂಚದಲ್ಲೆ ಹೆಚ್ಚು ಬಾಕ್ಸೈಟ್ ನಿಕ್ಷೇಪವು ಆಸ್ಟ್ರೇಲಿಯದಲ್ಲಿದೆ. ವೈಪ, ಗೋವ್, ಮಿಚೆಲ್ ಪ್ರಸ್ಥಭೂಮಿ ಮತ್ತು ಜರ್ಮ್ಯಾಂಡಲೆಗಳು ಪ್ರಮುಖ ಬಾಕ್ಸೈಟ್ ಉತ್ಪಾದಿಸುವ ಭಾಗಗಳು. ಆಸ್ಟ್ರೇಲಿಯ ಪ್ರಪಂಚದಲ್ಲಿ ಅತಿ ಹೆಚ್ಚು ಬಾಕ್ಸೈಟ್ ಉತ್ಪಾದಿಸುತ್ತದೆ. ಪಶ್ಚಿಮ ಆಸ್ಟ್ರೇಲಿಯದ ಕೂಲ್‌ಗಾರ್ಡಿ ಮತ್ತು ಕಾಲ್ಗೂರ್ಲಿಗಳು ಪ್ರಸಿದ್ಧ ಚಿನ್ನ ಉತ್ಪಾದಿಸುವ ಕೇಂದ್ರಗಳಾಗಿವೆ. ನ್ಯೂಸೌತ್‌ವೇಲ್ಸ್, ವಿಕ್ಟೋರಿಯ ಮತ್ತು ಕ್ವೀನ್ಸ್‌ಲ್ಯಾಂಡಗಳಲ್ಲಿಯು ಚಿನ್ನ ದೊರೆಯುತ್ತದೆ. ಸೀಸ, ಸತು ಮತ್ತು ಬೆಳ್ಳಿಗಳು ಜೊತೆಜೊತೆಯಾಗಿ ದೊರೆಯುತ್ತವೆ. ಇವುಗಳನ್ನು ಉತ್ಪಾದಿಸುವ ಪ್ರಮುಖ ಭಾಗಗಳೆಂದರೆ, ಬ್ರೋಕನ್‌ಹಿಲ್ಸ್ (ನ್ಯೂಸೌತ್‌ವೇಲ್ಸ್) ರೆನಿಸನ್ ಮತ್ತು ರಿಸ್ಟನ್ (ಟಾಸ್ಮೇನಿಯ) ಐಸ್ ಪರ್ವತ (ಕ್ವೀನ್ಸ್‌ಲ್ಯಾಂಡ್) ಮತ್ತು ಆರ್ಥರ್ ನದಿ ಬಯಲು (ಉತ್ತರ ಪ್ರಾಂತ್ಯ).

ನ್ಯೂಸೌತ್‌ವೇಲ್ಸ್‌ನಲ್ಲಿ ಹೆಚ್ಚು ತಾಮ್ರ ಉತ್ಪಾದನೆಯಾಗುತ್ತದೆ. ಹಾಗೆಯೇ ಕಾರ್ಪೆಂಟೇರಿಯ ಕೊಲ್ಲಿ ಪ್ರದೇಶವು ಮ್ಯಾಂಗನೀಸ್ ಉತ್ಪಾದನೆಯಲ್ಲಿ ಮುಂದಿದೆ. ಆಸ್ಟ್ರೇಲಿಯವು ಅತ್ಯಧಿಕ ಪ್ರಮಾಣದ ಯುರೇನಿಯಂ ನಿಕ್ಷೇಪವನ್ನು ಹೊಂದಿದೆ. ಅದು ಹೆಚ್ಚಾಗಿ ಕ್ವೀನ್ಸ್‌ಲ್ಯಾಂಡ್ ಉತ್ತರ ಪ್ರಾಂತ್ಯ (60%), ಪಶ್ಚಿಮ ಆಸ್ಟ್ರೇಲಿಯ ಮತ್ತು ದಕ್ಷಿಣ ಆಸ್ಟ್ರೇಲಿಯದಲ್ಲಿ ದೊರೆಯುತ್ತದೆ.

ಕಲ್ಲಿದ್ದಲು, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಗಳು ಆಸ್ಟ್ರೇಲಿಯಾದಲ್ಲಿ ಪ್ರಮುಖ ಶಕ್ತಿಸಂಪನ್ಮೂಲಗಳಾಗಿವೆ. ಆಸ್ಟ್ರೇಲಿಯಾದಲ್ಲಿ ಸಂಪದ್ಭರಿತ ಕಲ್ಲಿದ್ದಲು ಸಂಪನ್ಮೂಲವಿರುವುದು. ಕಲ್ಲಿದ್ದಲು ಗಣಿಗಾರಿಕೆಯು ನ್ಯೂಸೌತ್‌ವೇಲ್ಸ್, ಕ್ವೀನ್ಸ್‌ಲ್ಯಾಂಡ್ ಮತ್ತು ವಿಕ್ಟೋರಿಯಗಳಲ್ಲಿದೆ. ಆಸ್ಟ್ರೇಲಿಯಾ ತನ್ನ ಬೇಡಿಕೆಯನ್ನು ಪೂರೈಸಿಕೊಳ್ಳುವಷ್ಟು ಉತ್ಪಾದನೆಯನ್ನು ಹೊಂದಿದೆ. ಉಪಭೋಗಿಸಿ ಉಳಿದುದ್ದನ್ನು ರಫ್ತು ಮಾಡುವುದು. ಆಸ್ಟ್ರೇಲಿಯಾ ಸ್ವಲ್ಪ ಪ್ರಮಾಣದಲ್ಲಿ ಪೆಟ್ರೋಲಿಯಂನ್ನು ಉತ್ಪಾದಿಸುವುದು. ಮೂನೀ, ರೋಮಾ, ರೌರೇಂಜ್ ಮತ್ತು ಬಾಸ್‌ಆಖಾತ್ ಪ್ರಮುಖ ತೈಲ ಗಣಿಗಾರಿಕ ಪ್ರದೇಶಗಳಾಗಿವೆ. ಡೋಂಗರೆ, ಬಾಸ್‌ಆಖಾತ್, ಮರ್ಸೇನಿಯ ಮತ್ತು ರೋಮಾ ಪ್ರಮುಖ ನೈಸರ್ಗಿಕ ಅನಿಲ ಉತ್ಪಾದಕಗಳಾಗಿವೆ.

ಕೈಗಾರಿಕೆಗಳು: ಇಂದು ಆಸ್ಟ್ರೇಲಿಯವು ವಿವಿಧ ಕೈಗಾರಿಕೆಗಳ ಪ್ರಗತಿಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ. ಖನಿಜ ಸಂಪತ್ತು, ಕೃಷಿ ಅಭಿವೃದ್ಧಿ, ವಿಜ್ಞಾನ ಮತ್ತು ತಂತ್ರಜ್ಞಾನಗಳ ಪ್ರಗತಿ, ವಿದೇಶೀ ಬಂಡವಾಳ ಹೂಡಿಕೆ ಮತ್ತು ವಿಶಾಲ ಮಾರುಕಟ್ಟೆಗಳು ಕೈಗಾರಿಕಾಭಿವೃದ್ಧಿಗೆ ಪೂರಕವಾಗಿವೆ.

ಪ್ರಾರಂಭದಿಂದಲೂ ಆಸ್ಟ್ರೇಲಿಯದ ಕೈಗಾರಿಕೋದ್ಯಮ ವಿದೇಶಿ ನೆರವನ್ನು ಅವಲಂಬಿಸಿದೆ. ಅದರಲ್ಲೂ ಜಪಾನಿನ ಕೊಡುಗೆ ಅಪಾರವಾದುದು. ಆಸ್ಟ್ರೇಲಿಯದ ಕೆಲವು ಪ್ರಮುಖ ಕೈಗಾರಿಕೆಗಳು ಈ ಕೆಳಕಂಡಂತಿವೆ.

- ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ
- ಜವಳಿ ಉದ್ಯಮ
- ಸ್ವಚಾಲಿತ ವಾಹನ ಕೈಗಾರಿಕೆ
- ಕಾಗದ, ರಟ್ಟು ಮತ್ತು ಮರದ ತಿರುಳು
- ಹಡಗು ನಿರ್ಮಾಣ
- ತೈಲ ಶುದ್ಧೀಕರಣ
- ವಿದ್ಯುದುಪಕರಣ

ಸಿಡ್ನಿ ಕೈಗಾರಿಕಾ ಪಟ್ಟಣ

ಇತರೆ ಕೈಗಾರಿಕೆಗಳೆಂದರೆ ವಿಮಾನ ತಯಾರಿಕೆ (ಸಿಡ್ನಿ, ಮೆಲ್ಬೋರ್ನ್), ಹಿಟ್ಟಿನ ಗಿರಣಿ, ಮೀನು ಮತ್ತು ಹಣ್ಣು ಸಂಸ್ಕರಣೆ, ರಾಸಾಯನಿಕ ವಸ್ತುಗಳ ತಯಾರಿಕೆ ಇತ್ಯಾದಿ.

7. ಜನಸಂಖ್ಯೆ

ಬೆಳವಣಿಗೆ: ಈಗಾಗಲೇ ತಿಳಿಸಿದಂತೆ ಆಸ್ಟ್ರೇಲಿಯ ಖಂಡವು ವಿಸ್ತೀರ್ಣದಲ್ಲಿ ಮಾತ್ರವಲ್ಲ ಜನಸಂಖ್ಯೆಯಲ್ಲೂ ಚಿಕ್ಕದು. ಇದರ ಒಟ್ಟು ಜನಸಂಖ್ಯೆ 20.0 ದಶಲಕ್ಷ (2012). ಇದು ಪ್ರಪಂಚದ ಒಟ್ಟು ಜನಸಂಖ್ಯೆಯಲ್ಲಿ ಶೇ.0.31 ಭಾಗದಷ್ಟು ಮಾತ್ರ. ಈ ಖಂಡದ ಜನಸಂಖ್ಯೆ 1860ರಲ್ಲಿ 1.15 ದಶಲಕ್ಷವಾಗಿತ್ತು. ಅದು 1998ರಲ್ಲಿ 18.7 ದಶಲಕ್ಷವಾಯಿತು. ಕಳೆದ ಶತಮಾನದ ಅಂತ್ಯಾವಧಿಯಲ್ಲಿ ಖಂಡದ ಜನಸಂಖ್ಯಾ ಬೆಳವಣಿಗೆ ಹೆಚ್ಚಾಗಿರುವುದು ಕಂಡುಬರುತ್ತದೆ.

ಹಂಚಿಕೆ: ಆಸ್ಟ್ರೇಲಿಯದ ಜನಸಂಖ್ಯಾ ಹಂಚಿಕೆಯಲ್ಲಿ ವಿರಳತೆ ಮತ್ತು ಅಸಮಾನತೆಯಿದೆ. ಖಂಡದ ಒಳನಾಡಿನ ಬಹುಭಾಗವು ನಿರ್ಜನವಾದುದು. ನ್ಯೂಸೌತ್‌ವೇಲ್ಸ್ ಅತಿ ಜನಭರಿತವಾದ $\left(\frac{1}{3}\right)$ಪ್ರಾಂತ್ಯ. ವಿಕ್ಟೋರಿಯ ಎರಡನೆಯ $\left(\frac{1}{4}\right)$ ಸ್ಥಾನದಲ್ಲಿದೆ. ತರುವಾಯ ಕ್ವೀನ್ಸ್‌ಲ್ಯಾಂಡ್, ದಕ್ಷಿಣ ಆಸ್ಟ್ರೇಲಿಯ ಮತ್ತು ತಾಸ್ಮೇನಿಯಗಳು ಸ್ಥಾನ ಪಡೆದಿವೆ. ಪ್ರತಿಯಾಗಿ ಉತ್ತರ ಪ್ರಾಂತ್ಯವು ಅತ್ಯಂತ ವಿರಳ ಜನರಿಂದ ಕೂಡಿದೆ. ದೇಶದ ಜನಸಂಖ್ಯೆಯಲ್ಲಿ ಅರ್ಧಕ್ಕೂ ಹೆಚ್ಚು ಭಾಗ ಆರು ನಗರಗಳಲ್ಲಿ ಸಾಂದ್ರೀಕೃತವಾಗಿದೆ. ಉದಾ: ಸಿಡ್ನಿ, ಮೆಲ್ಬೋರ್ನ್, ಬ್ರಿಸ್ಬೇನ್, ಅಡಿಲೇಡ್, ಪರ್ತ್ ಮತ್ತು ನ್ಯೂಕ್ಯಾಸಲ್.

ಜನಸಾಂದ್ರತೆ: ಪ್ರಪಂಚದ ಅತಿ ಕಡಿಮೆ ಜನಸಾಂದ್ರತೆವುಳ್ಳ ದೇಶಗಳಲ್ಲಿ ಆಸ್ಟ್ರೇಲಿಯವು ಒಂದಾಗಿದೆ. ಇದರ ಸರಾಸರಿ ಜನಸಾಂದ್ರತೆ ಪ್ರತಿ ಚದರ ಕಿಲೋ ಮೀಟರ್‌ಗೆ ಮೂರು ಜನರು ಮಾತ್ರ. ಇದು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗುತ್ತದೆ. ಎಲ್ಲಾ ನಗರ ಪ್ರದೇಶ, ರಾಜಧಾನಿ ಮತ್ತು ಕೈಗಾರಿಕಾ ಕೇಂದ್ರಗಳಲ್ಲಿ ಜನಸಾಂದ್ರತೆ ಹೆಚ್ಚು. ಉದಾ: ವಿಕ್ಟೋರಿಯ, ನ್ಯೂಸೌತ್‌ವೇಲ್ಸ್, ತಾಸ್ಮೇನಿಯ, ಕ್ವೀನ್ಸ್‌ಲ್ಯಾಂಡ್ ಇತ್ಯಾದಿ. ಈ ಖಂಡದ ಆಗ್ನೇಯ ಭಾಗಗಳಲ್ಲಿ ಸಾಧಾರಣ ಜನಸಾಂದ್ರತೆ ಇದೆ. ಆದರೆ ಮರುಭೂಮಿ ಮತ್ತು ಅರೆಮರುಭೂಮಿಗಳಿಂದ ಕೂಡಿದ ಸುಮಾರು ಶೇ.80 ಭಾಗದಲ್ಲಿ ಜನಸಾಂದ್ರತೆ ಅತಿ ವಿರಳ. ಒಟ್ಟಾರೆ ಈ ಖಂಡದ ಜನಸಂಖ್ಯಾ ಹಂಚಿಕೆಯು ಭೌಗೋಳಿಕ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ.



ಆಸ್ಟ್ರೇಲಿಯದ ಜನಸಾಂದ್ರತೆ

ಆಸ್ಟ್ರೇಲಿಯದಲ್ಲಿ ಗ್ರಾಮೀಣ ಜನಸಂಖ್ಯೆಗಿಂತ (15%) ನಗರ ಜನಸಂಖ್ಯೆಯ (85%) ಪ್ರಮಾಣ ಹೆಚ್ಚು.

ಹೊಸ ಪದಗಳು

ದ್ವೀಪಖಂಡ, ಗೊಂಡ್ವಾನ, ತಟ್ಟೆ ಆಕಾರ, ಏಕಶಿಲೆ, ಹವಳದಿಣ್ಣೆ, ಕಾಂಗರೂ, ಲೈರ್, ಡಿಂಗೊ, ಕೂಕಾಬುರ್ರ, ವಲ್ಲಬಿ, ಎಕಿಡ್ನ ಕರಡಿಕೋಲ ಮತ್ತು ಶಿಲಾದ್ವೀಪ.

ಅಭ್ಯಾಸಗಳು

I ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಆಸ್ಟ್ರೇಲಿಯವನ್ನು 'ಅತ್ಯಂತ ಸಮತಟ್ಟಾದ ಭೂಖಂಡ' ಎನ್ನುವರು. ಏಕೆ?
2. ಆಸ್ಟ್ರೇಲಿಯ ಖಂಡದ ಸ್ಥಾನ ಮತ್ತು ಸನ್ನಿವೇಶಗಳನ್ನು ತಿಳಿಸಿರಿ.
3. ಆಸ್ಟ್ರೇಲಿಯದ ಪ್ರಮುಖ ಪ್ರಾಕೃತಿಕ ವಿಭಾಗಗಳಾವುವು?
4. ಆಸ್ಟ್ರೇಲಿಯದ ನದಿವ್ಯವಸ್ಥೆ ಕುರಿತು ತಿಳಿಸಿರಿ.
5. ಆಸ್ಟ್ರೇಲಿಯದ ಪ್ರಮುಖ ಬೆಳೆಗಳಾವುವು?
6. ಆಸ್ಟ್ರೇಲಿಯ ಖಂಡದ ಪ್ರಮುಖ ಖನಿಜಗಳಾವುವು?
7. ಆಸ್ಟ್ರೇಲಿಯದ ಪ್ರಮುಖ ಕೈಗಾರಿಕೆಗಳನ್ನು ತಿಳಿಸಿರಿ.
8. ಆಸ್ಟ್ರೇಲಿಯದಿಂದ ರಫ್ತಾಗುವ ಪದಾರ್ಥಗಳನ್ನು ತಿಳಿಸಿರಿ.
9. ಆಸ್ಟ್ರೇಲಿಯದಲ್ಲಿ ಜನಸಾಂದ್ರತೆ ವಿರಳ ಏಕೆ?
10. ಆಸ್ಟ್ರೇಲಿಯದ ಹುಲ್ಲುಗಾವಲುಗಳನ್ನು ಹೆಸರಿಸಿ.

ಚಟುವಟಿಕೆ

1. ಆಟ್ಲಾಸ್ ಪುಸ್ತಕದ ನೆರವಿನಿಂದ ಆಸ್ಟ್ರೇಲಿಯ ಖಂಡದ ಪ್ರಮುಖ ಪರ್ವತ, ನದಿ ಮತ್ತು ಸರೋವರಗಳನ್ನು ಗುರುತಿಸಿ, ಪಟ್ಟಿ ಮಾಡಿ ಹಾಗೂ ಬಾಹ್ಯನಕ್ಷೆಯಲ್ಲಿ ಗುರುತಿಸಿರಿ.
2. ನೀವು ವಾಸವಾಗಿರುವ ಸ್ಥಳದ ಸುತ್ತಲಿನ ಭಾಗಗಳನ್ನು ವೀಕ್ಷಿಸಿ ಅಲ್ಲಿನ ಬೆಳೆ, ಸಸ್ಯವರ್ಗ, ಪ್ರಾಣಿ ಪಕ್ಷಿ, ಬೆಟ್ಟಗಳ ಬಗ್ಗೆ ಒಂದು ಪಟ್ಟಿ ತಯಾರಿಸಿರಿ.

★ ★ ★

ಪಾಠ 13	ಅಂಟಾರ್ಕ್‌ಟಿಕ್ ಶ್ವೇತ ಭೂಖಂಡ

ಪಾಠದ ಪರಿಚಯ

ಈ ಪಾಠದಲ್ಲಿ ಅಂಟಾರ್ಕ್‌ಟಿಕ್ ಖಂಡದ ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶ, ಮೇಲ್ಮೈ ಲಕ್ಷಣ, ಸ್ವಾಭಾವಿಕ ಸಸ್ಯವರ್ಗ ಮತ್ತು ಪ್ರಾಣಿ ಸಂಪತ್ತು, ಅನ್ವೇಷಣೆ, ಅಂಟಾರ್ಕ್‌ಟಿಕ್ ಒಪ್ಪಂದ ಮತ್ತು ಪ್ರಮುಖ ಸಂಶೋಧನಾ ಕೇಂದ್ರಗಳನ್ನು ಕುರಿತು ಪರಿಚಯಿಸಲಾಗಿದೆ.

ಸಾಮರ್ಥ್ಯಗಳು

1] ಅಂಟಾರ್ಕ್‌ಟಿಕ್ ಖಂಡದ ಸ್ಥಾನ, ವಿಸ್ತಿರ್ಣ ಮತ್ತು ಭೌಗೋಳಿಕ ಸನ್ನಿವೇಶಗಳನ್ನು ತಿಳಿಯುವರು.

2] ಅಂಟಾರ್ಕ್‌ಟಿಕ್ ಖಂಡದ ಮೇಲ್ಮೈ ಲಕ್ಷಣ, ನೆಲ ಮತ್ತು ಜಲಗಳ ಬಗ್ಗೆ ಅರಿಯುವರು.

3] ಸ್ವಾಭಾವಿಕ ಸಸ್ಯವರ್ಗ ಮತ್ತು ಪ್ರಾಣಿ ಸಂಪತ್ತನ್ನು ತಿಳಿದುಕೊಳ್ಳುವರು.

4] ಅಂಟಾರ್ಕ್‌ಟಿಕ್ ಖಂಡದ ಅನ್ವೇಷಣೆ, ಒಪ್ಪಂದ ಮತ್ತು ಸಂಶೋಧನಾ ಕೇಂದ್ರಗಳ ಬಗ್ಗೆ ಅರಿಯುವರು.

1. ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶ

ಸ್ಥಾನ: ದಕ್ಷಿಣ ಧ್ರುವದ ಸುತ್ತ ವ್ಯಾಪಿಸಿರುವ ಭೂಖಂಡ. ಅಂಟಾರ್ಕ್‌ಟಿಕ್ ವೃತ್ತ ಅಥವಾ $66^{0}30^{1}$ ದಕ್ಷಿಣ ಅಕ್ಷಾಂಶದೊಳಗೆ ಹರಡಿರುವ ಖಂಡ. ಉತ್ತರ ಧ್ರುವದಲ್ಲಿರುವ ಆರ್ಕ್‌ಟಿಕ್ ಸಾಗರಕ್ಕೆ ವಿರುದ್ಧವಾಗಿರುವುದು ಈ ಭೂಖಂಡದ ವೈಶಿಷ್ಟ್ಯ.

ವಿಸ್ತೀರ್ಣ: ಅಂಟಾರ್ಕ್‌ಟಿಕವು ಪ್ರಪಂಚದ ಐದನೆಯ ದೊಡ್ಡ ಭೂಖಂಡ. ಇದರ ಒಟ್ಟು ವಿಸ್ತೀರ್ಣ 14.2 ಮಿಲಿಯನ್ ಚ.ಕಿ.ಮೀ.ಗಳು. ಇದು ಭಾರತ ಮತ್ತು ಚೀನ ದೇಶಗಳ ವಿಸ್ತೀರ್ಣಕ್ಕಿಂತ ದೊಡ್ಡದು. ಅಮೆರಿಕ ಸಂಯುಕ್ತ ಸಂಸ್ಥಾನದ ವಿಸ್ತೀರ್ಣದ ಅರ್ಧಕ್ಕಿಂತ ಸ್ವಲ್ಪ ಹೆಚ್ಚಾಗಿದೆ.

ಭೌಗೋಳಿಕ ಸನ್ನಿವೇಶ: ಅಂಟಾರ್ಕ್‌ಟಿಕ್ ಖಂಡವನ್ನು ಸುತ್ತಲೂ ಜಲರಾಶಿಗಳು ಆವರಿಸಿವೆ. ಈ ಜಲರಾಶಿಯನ್ನು ದಕ್ಷಿಣ ಸಾಗರವೆಂದೇ ಕರೆಯಲಾಗಿದೆ. ಆದರೆ ಇದು ಪ್ರತ್ಯೇಕ ಜಲರಾಶಿಯಲ್ಲ, ಬದಲಾಗಿ ಹಿಂದೂ ಮಹಾಸಾಗರ ಮತ್ತು ಪೆಸಿಫಿಕ್ ಮಹಾಸಾಗರಗಳು ಒಂದುಗೂಡಿರುವ ಭಾಗ. ಲ್ಯಾಟಿನ್ ಅಮೆರಿಕದ ದಕ್ಷಿಣದ ತುತ್ತತುದಿಯ ಕೇಪ್‌ಹಾರ್ನ್ ಈ ಖಂಡದ ಸಮೀಪಕ್ಕಿರುವ ಭೂಭಾಗ. ಇದು 990 ಕಿ.ಮೀ. ದೂರದಲ್ಲಿದೆ. ಈ ಖಂಡದ ಪೂರ್ವಕ್ಕೆ ಹಿಂದೂ ಮಹಾಸಾಗರ, ಪಶ್ಚಿಮಕ್ಕೆ ಪೆಸಿಫಿಕ್ ಮಹಾಸಾಗರ ಹಾಗೂ ವಾಯುವ್ಯಕ್ಕೆ ಅಟ್ಲಾಂಟಿಕ್ ಮಹಾಸಾಗರಗಳಿವೆ.



ಅಂಟಾರ್ಕ್‌ಟಿಕ್ ಖಂಡ

2. ಮೇಲ್ಮೈ ಲಕ್ಷಣಗಳು

ಅಂಟಾರ್ಕ್‌ಟಿಕ್ ಖಂಡದ ಶೇ.98 ಭಾಗ ಹಿಮಾವೃತವಾಗಿದೆ. ಇದರ ಭೂಮೇಲ್ಮೈ ಲಕ್ಷಣಗಳು ಬಹುವಾಗಿ ಮಂಜುಗಡ್ಡೆ ಹಾಳೆಯಿಂದ ಮುಚ್ಚಿ ಹೋಗಿವೆ. ಎತ್ತರವಾದ ಪರ್ವತ ಶಿಖರ ಮತ್ತು ಪ್ರಸ್ಥಭೂಮಿಗಳು ಗೋಚರಿಸುತ್ತವೆ. ಮಂಜುಗಡ್ಡೆಯ ಪದರವು ಸುಮಾರು 2,300 ಮೀಟರ್‌ಗಳಿಗಿಂತ ಹೆಚ್ಚು ಮಂದವಾಗಿದ್ದು, ಎಲ್ಲೆಡೆಯೂ ಶ್ವೇತವರ್ಣಮಯ. ಹೀಗಾಗಿ ಈ ಖಂಡವನ್ನು 'ಶ್ವೇತ ಖಂಡ', 'ಹಿಮದ ಮರುಭೂಮಿ' ಎಂತಲೂ ಹಾಗೂ ಅತ್ಯಂತ ಶೀತವಾಗಿರುವುದರಿಂದ 'ಶೀತಲ ಖಂಡ' ಎಂದೂ ಕರೆಯಲಾಗಿದೆ.

ನೀರ್ಗಲ್ಲು ಬೆಟ್ಟ

ಅಂಟಾರ್ಕ್‌ಟಿಕ್ ಖಂಡದಲ್ಲಿ ಪರ್ವತ, ಪ್ರಸ್ಥಭೂಮಿ, ಕಣಿವೆ, ಕಂದರಗಳಂತಹ ಭೂಸ್ವರೂಪಗಳಿವೆ. ಸಮುದ್ರ ಮಟ್ಟಕ್ಕೆ ಸರಾಸರಿ 2,300 ಮೀಟರ್ ಎತ್ತರವುಳ್ಳ ಅಂಟಾರ್ಕ್‌ಟಿಕವು ಭೂಗೋಳದ ಎತ್ತರವಾದ ಭೂಖಂಡವಾಗಿದೆ. ಟ್ರಾನ್ಸ್ ಅಂಟಾರ್ಕ್‌ಟಿಕ್ ಪರ್ವತ ಸರಣಿಯು ಈ ಖಂಡವನ್ನು ಎರಡು ಪ್ರಮುಖ ಭೌಗೋಳಿಕ ವಿಭಾಗಗಳಾಗಿ ವಿಭಜಿಸುತ್ತದೆ: (1) ಪೂರ್ವ ಅಂಟಾರ್ಕ್‌ಟಿಕ್ ಮತ್ತು (2) ಪಶ್ಚಿಮ ಅಂಟಾರ್ಕ್‌ಟಿಕ್.

(1) ಪೂರ್ವ ಅಂಟಾರ್ಕ್‌ಟಿಕವು ಅಟ್ಲಾಂಟಿಕ್ ಮತ್ತು ಹಿಂದೂ ಮಹಾಸಾಗರಗಳ ಕಡೆಗೆ ಮುಖವಾಗಿದೆ. ಅವು ಈ ಖಂಡದ ಅರ್ಧಕ್ಕೂ ಹೆಚ್ಚಿನ ಭಾಗವನ್ನಾವರಿಸಿವೆ. ಆದ್ದರಿಂದ ಇದನ್ನು 'ಗ್ರೇಟರ್ ಅಂಟಾರ್ಕ್‌ಟಿಕ್' ಎನ್ನುವರು. ಇದರ ಕರಾವಳಿಯಲ್ಲಿ ಪರ್ವತ, ಕಣಿವೆ ಮತ್ತು ಹಿಮನದಿಗಳಿವೆ. ಈ ವಿಭಾಗದ ಮಧ್ಯಭಾಗ ಪ್ರಸ್ಥಭೂಮಿಯಾಗಿದೆ. ಅಲ್ಲಿ ದಕ್ಷಿಣ ಧ್ರುವವು ನೆಲೆಗೊಂಡಿದೆ.

(2) ಪಶ್ಚಿಮ ಅಂಟಾರ್ಕ್‌ಟಿಕವು ಪೆಸಿಫಿಕ್ ಸಾಗರದ ಕಡೆಗಿದೆ. ಇದರ ಬಹಳಷ್ಟು ಭಾಗವು ಸಮುದ್ರ ಮಟ್ಟದಿಂದ ಕೆಳಗಿದೆ. ಈ ಭೌಗೋಳಿಕ ವಿಭಾಗದ ಅಂಟಾರ್ಕ್‌ಟಿಕ್‌ಪರ್ಯಾಯ ಭಾಗವು ಪರ್ವತಗಳಿಂದ ಕೂಡಿದ್ದು, ಅದರ 'S' ಆಕಾರದ ತುದಿಯು ದಕ್ಷಿಣ ಅಮೆರಿಕದ ಕಡೆಗೆ ಮೊನಚಾಗಿದೆ. ಇದರ ಸಮೀಪದಲ್ಲಿ ಹಲವು ದ್ವೀಪಗಳಿವೆ. ಜೊತೆಗೆ ಪರ್ವತ ಶಿಖರ ಮತ್ತು ಜ್ವಾಲಾಮುಖಿಗಳಿವೆ. ಈ ಭಾಗದ ಎಲ್ಸ್‌ವರ್ತ್ ಪರ್ವತ ಸರಣಿಯಲ್ಲಿರುವ ವಿನ್ಸನ್ ಮ್ಯಾಸಿಫ್ (5140 ಮೀ.) ಶಿಖರವು ಅಂಟಾರ್ಟಿಕ ಖಂಡದಲ್ಲೇ ಎತ್ತರವಾದುದು. ರಾಸ್ ದ್ವೀಪದಲ್ಲಿರುವ ಮೌಂಟ್ ಎರೆಬಸ್ ಎಂಬುದು ಅಂಟಾರ್ಕ್‌ಟಿಕ ಖಂಡದ ಅತಿ ಪ್ರಮುಖ ಜಾಗೃತ ಜ್ವಾಲಾಮುಖಿಯಾಗಿದೆ. ಪ್ರಿನ್ಸ್ ಚಾರ್ಲ್ಸ್ ಎಂಬುದು ಮತ್ತೊಂದು ಪರ್ವತ.

ಟ್ರಾನ್ಸ್ ಅಂಟಾರ್ಕ್‌ಟಿಕ್ ಪರ್ವತ ಸರಣಿಗಳ ವಿರುದ್ಧ ಅಂಚಿನಲ್ಲಿ ಎರಡು ದೊಡ್ಡ ಖಾರಿಗಳಿವೆ: ರಾಸ್ ಸಮುದ್ರ ಮತ್ತು ವೆಡೆಲ್ ಸಮುದ್ರ

3. ಸಸ್ಯ ಮತ್ತು ಪ್ರಾಣಿಸಂಪತ್ತು

ಈ ಮೊದಲು ತಿಳಿಸಿದಂತೆ ಅಂಟಾರ್ಕ್‌ಟಿಕ್ ಖಂಡವು ಹಿಮಾವೃತವಾಗಿದ್ದು ಪ್ರತಿಕೂಲವಾದ ಶೀತ ಹವಾಮಾನದಿಂದ ಕೂಡಿದೆ. ವರ್ಷದಲ್ಲಿ ಆರು ತಿಂಗಳು ಕತ್ತಲು ಮತ್ತು ಆರು ತಿಂಗಳು ಬೆಳಕಿನಿಂದ ಕೂಡಿದೆ. ಇಲ್ಲಿ ಜೀವಿಗಳ ಪೋಷಣೆ ಕಷ್ಟ. ಪಾಚಿ, ಶಿಲಾವಲ್ಕ ಮತ್ತು ಹಾವಸೆಗಳೇ ಇಲ್ಲಿನ ಪ್ರಮುಖ ಸಸ್ಯಗಳು. ಅವು ತೆರೆದ ಭಾಗದಲ್ಲಿರುವ ಬಂಡೆಗಳ ಮೇಲೆ ಕಂಡುಬರುತ್ತವೆ.

ಇಲ್ಲಿನ ಪ್ರತಿಕೂಲ ವಾಯುಗುಣವನ್ನು ನಿಭಾಯಿಸಬಲ್ಲ ಕೆಲವು ಪ್ರಾಣಿಗಳು ಜೀವಿಸುತ್ತವೆ. ಆದರೆ ಸುತ್ತಲಿನ ಜಲಭಾಗಗಳಲ್ಲಿ ವಿವಿಧ ಪ್ರಾಣಿಗಳನ್ನು ಕಾಣಬಹುದು. ಉದಾ: ಪೆಂಗ್ವಿನ್, ತಿಮಿಂಗಿಲ, ಸೀಲ್, ಕ್ರಿಲ್ ಮೀನು ಮತ್ತು ಬಗೆಬಗೆಯ ಪಕ್ಷಿಗಳು. ಸೀಗಡಿ ಮೀನು ಮತ್ತು ಇಂಚಾಕಗಳನ್ನು ಹೋಲುವ ಕ್ರಿಲ್‌ಗಳ ಸಂಖ್ಯೆ ಅಪಾರ. ಅವು ಗುಂಪುಗುಂಪಾಗಿ ಈಜುತ್ತಾ ಬದುಕುತ್ತವೆ. ಇಂಥ ಸೂಕ್ಷ್ಮ ಜೀವಿಗಳು ಸಮುದ್ರದ ದೊಡ್ಡ ಪ್ರಾಣಿ ಮತ್ತು ಮೀನುಗಳಿಗೆ ಮುಖ್ಯ ಆಹಾರವಾಗುತ್ತವೆ.

ಸಮುದ್ರ ತೀರಗಳಲ್ಲಿ ಅಸಂಖ್ಯಾತ ಪೆಂಗ್ವಿನ್‌ಗಳು ವಾಸಿಸುತ್ತವೆ. ಇವು ಹಾರಾಟ ಮಾಡದ ಪಕ್ಷಿಗಳು. ಅದಿಲೆ ಚಿನ್‌ಸ್ಟ್ರಾಪ್ ಮತ್ತು ಎಂಪರರ್ ಪೆಂಗ್ವಿನ್ ಇವು ಇಲ್ಲಿನ ಪ್ರಮುಖ ಪೆಂಗ್ವಿನ್ ಪ್ರಭೇದಗಳು. ಹಿಮಾವೃತವಾದ ಈ ಖಂಡಕ್ಕೆ ಆಗಮಿಸುವ ಹಡಗುಗಳಿಗೆ ಮೊದಲು ಸ್ವಾಗತ ನೀಡುವವೇ ಅದಿಲೆ ಪೆಂಗ್ವಿನ್‌ಗಳು. ಈ ಖಂಡದ ಸಮೀಪದ ದ್ವೀಪಗಳು ಮತ್ತು ಸಮುದ್ರ ತೀರಗಳಲ್ಲಿ ಸೀಲ್ ಸಂತತಿ ಹೆಚ್ಚು. ಆರು ಬಗೆಯ ಸೀಲ್‌ಗಳನ್ನು ಗುರುತಿಸಲಾಗಿದೆ. ನಿರಂತರ ಬೇಟೆಯಿಂದ ಸೀಲ್ ಅಳಿವಿನಂಚಿನಲ್ಲಿವೆ.

- ಪೆಂಗ್ವಿನ್‌ಗಳು ತಮ್ಮ ಸಂತಾನಾಭಿವೃದ್ಧಿಗಾಗಿ ಕಲ್ಲು ಪೊಟರೆಗಳಲ್ಲಿ ನಿರ್ಮಿಸಿಕೊಂಡ ಗೂಡುಗಳಿಗೆ 'ರೂಕರಿ' ಎನ್ನುವರು.
- ದಕ್ಷಿಣ ಧ್ರುವಕ್ಕೆ ಸಮೀಪದಲ್ಲಿರುವ ಈ ಖಂಡದ 'ವೋಸ್ಟಾಕ್' ಪ್ರಪಂಚದಲ್ಲೇ ಅತ್ಯಂತ ಕಡಿಮೆ ಉಷ್ಣಾಂಶವನ್ನು ದಾಖಲಿಸುವ ಸ್ಥಳ (– 89^0ಸೆ).

ಪೆಂಗ್ವಿನ್

ಸೀಲ್‌ಗಳು

4. ಅಂಟಾರ್ಕ್‌ಟಿಕ ಯಾನ – ಅಂಟಾರ್ಕ್‌ಟಿಕ ಒಪ್ಪಂದ

ಅಂಟಾರ್ಕ್‌ಟಿಕ ಯಾನ: ಹದಿನೆಂಟನೆಯ ಶತಮಾನದ ಅಂತ್ಯಾವಧಿಯಿಂದಲೂ ಅಂಟಾರ್ಕ್‌ಟಿಕ್ ಖಂಡ ಕುರಿತ ಸಂಶೋಧನೆ ನಡೆಯುತ್ತಿದೆ. ಹಲವು ಸಾಗರಯಾನಿಗಳು ಈ ಖಂಡದ ಶೋಧನೆಗೆ ಸಾಹಸಯಾನ ಮಾಡಿರುವರು. ಅಂತಹವರಲ್ಲಿ ಚಾರ್ಲ್‌ಸ್ ವಿಲ್ಕೀಸ್ ಅ.ಸಂ. ಸಂಸ್ಥಾನದ ನೌಕಾಪಡೆಯ ಮುಖ್ಯಸ್ಥ ಈ ಖಂಡದ ಅಸ್ತಿತ್ವವನ್ನು ಖಚಿತಪಡಿಸಿದನು. ಅನಂತರ ಬ್ರಿಟನ್ನಿನ ಪರಿಶೋಧಕ ಜೇಮ್ಸ್ ಕ್ಲಾರ್ಕ್‌ರಾಸ್ 1841ರಲ್ಲಿ (ಈತನ ಹೆಸರಿನಿಂದ ಕರೆಯುವ) ಈ ಖಂಡದ ರಾಸ್ ಸಮುದ್ರವನ್ನು ಪತ್ತೆಹಚ್ಚಿದ. ಇಂಗ್ಲೆಂಡಿನ ರಾಬರ್ಟ್ ಫಾಲ್ಕನ್ ಸ್ಕಾಟ್ ಈ ಸಮುದ್ರ ದಾಟುವುದರಲ್ಲಿ ಯಶಸ್ವಿಯಾದನು. ಪರಿಶೋಧಕರು ಬೇಸಿಗೆಯ ಅಂತಿಮಾವಧಿಯಲ್ಲಿ ಸಮುದ್ರದ ಮೂಲಕ ಈ ಖಂಡವನ್ನು ಪ್ರವೇಶಿಸುವರು. ಅನಂತರ ತಮ್ಮ ಚಳಿಗಾಲದ ಶಿಬಿರಕ್ಕೆ ನೆಲೆ ಮಾಡಿಕೊಳ್ಳುವರು.



ಸ್ಕಾಟ್ ಮತ್ತು ಅಮುಂಡ್‌ಸನ್

ಅಂಟಾರ್ಕ್‌ಟಿಕ್ ಖಂಡದ ಸಮಗ್ರ ಪರಿಶೋಧನೆ 20ನೆಯ ಶತಮಾನದ ಆರಂಭದಲ್ಲಿ ಪ್ರಾರಂಭಗೊಂಡಿತು. 1910ರಲ್ಲಿ ದಕ್ಷಿಣ ಧ್ರುವವನ್ನು ಮೊದಲು ಕಂಡುಹಿಡಿದವನು ರಾಬರ್ಟ್‌ಎಫ್ ಸ್ಕಾಟ್. ಆದರೆ ನಾರ್ವೆಯ ಅನ್ವೇಷಣಕಾರನಾದ ರೊನಾಲ್ಡ್ ಅಮುಂಡ್ ಸೇನ್ ಇದನ್ನು 1911ರಲ್ಲಿ ತಲುಪಿದನು. ಒಂದು ತಿಂಗಳ ತರುವಾಯ ರಾಬರ್ಟ್‌ಫಾಲ್ಕನ್ ಸ್ಕಾಟನು ಮತ್ತೊಂದು ಯಾನದಲ್ಲಿ ಈ ಧ್ರುವವನ್ನು 1912ರ ಮಾರ್ಚ್‌ನಲ್ಲಿ ತಲುಪಿ ಹಿಂದಿರುಗುವಾಗ ಕಾಲವಶನಾಗುವನು. ಅವನ ದಿನಚರಿಯಲ್ಲಿ ದೊರೆತ ಮಾಹಿತಿಗಳು ಮುಂದಿನ ವೈಜ್ಞಾನಿಕ ಅನ್ವೇಷಣೆಗೆ ಹೆಚ್ಚು ನೆರವಾದವು. ಅಮೆರಿಕದ ನೌಕೌಪಡೆಯ ಅಡ್ಮಿರಲ್ ರಿಚರ್ಡ್ ಇಬ್ಯೆರ್ಡ್ ಈ ಖಂಡದ ಪರಿಶೋಧನೆಗಾಗಿ ವಿಮಾನದ ಮೂಲಕ ಮೊದಲಿಗೆ (1929) ತಲುಪಿದನು. ತರುವಾಯ ಈ ಖಂಡದ ಅಧ್ಯಯನಕ್ಕೆ ಅನೇಕ ದೇಶಗಳು ಮುಂದಾದವು.

ಅಂಟಾರ್ಕ್‌ಟಿಕ್ ಒಪ್ಪಂದ: ಅಂತರರಾಷ್ಟ್ರೀಯ ಭೂಭೌತ ವರ್ಷ 1957–58ದೊಂದಿಗೆ ಅಂಟಾರ್ಕ್‌ಟಿಕ್ ಖಂಡದ ವ್ಯಾಪಕ ಪರಿಶೋಧನೆ ಪ್ರಗತಿಗೊಂಡಿತು. ಪ್ರಪಂಚದ ಅನೇಕ ವಿಜ್ಞಾನಿಗಳು ಯೋಜನೆಗಳನ್ನು ರೂಪಿಸಿಕೊಂಡು ಅಧ್ಯಯನದ ಪ್ರಯತ್ನ ಮಾಡಿದರು. ಹನ್ನೆರಡು ರಾಷ್ಟ್ರಗಳ ಪ್ರತಿನಿಧಿಗಳು ವಾಷಿಂಗ್‌ಟನ್ ಡಿ.ಸಿ.(ಯು.ಎಸ್.ಎ.)ಯಲ್ಲಿ ಸಭೆ ಸೇರಿ ಡಿಸೆಂಬರ್ 1959ರಲ್ಲಿ ಅಂಟಾರ್ಕ್‌ಟಿಕ್ ಖಂಡದ ಒಪ್ಪಂದದ ಕರಡು ಸಿದ್ಧಗೊಳಿಸಿದರು. 23 ಜೂನ್, 1961ರಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಿದವು. ಒಪ್ಪಂದವು 60^0 ಅಕ್ಷಾಂಶದ ದಕ್ಷಿಣ ಪ್ರದೇಶಕ್ಕೆ ಅನ್ವಯವಾಗುವುದು. ಸದಸ್ಯ ರಾಷ್ಟ್ರಗಳು ಅರ್ಜೆಂಟೈನಾ, ಆಸ್ಟ್ರೇಲಿಯಾ, ಬೆಲ್ಜಿಯಂ, ಚಿಲಿ, ಫ್ರಾನ್ಸ್, ಜಪಾನ್, ನ್ಯೂಜಿಲ್ಯಾಂಡ್, ನಾರ್ವೆ, ದಕ್ಷಿಣ ಆಫ್ರಿಕಾ, ರಷ್ಯಾ, ಯು.ಕೆ. ಮತ್ತು ಯು.ಎಸ್.ಎ ಸದಸ್ಯ ರಾಷ್ಟ್ರಗಳಾಗಿವೆ.

ಆಧುನಿಕ ಸಂಶೋಧನಾ ಕೇಂದ್ರಗಳು

ಪ್ರಮುಖ ಉದ್ದೇಶಗಳು: ಈ ಒಪ್ಪಂದದ ಪ್ರಕಾರ ಈ ಖಂಡವು ವೈಜ್ಞಾನಿಕ ಸಂಶೋಧನೆಗಷ್ಟೇ ಮೀಸಲು. ಹೀಗಾಗಿ ಈ ಖಂಡವನ್ನು "ವಿಜ್ಞಾನ ಭೂಖಂಡ" ಎಂತಲೂ ಕರೆಯುತ್ತಾರೆ. ಅಲ್ಲಿ ಪರಮಾಣು ಶಸ್ತ್ರಾಸ್ತ್ರಗಳನ್ನು ಪರೀಕ್ಷಿಸುವಂತಿಲ್ಲ. ಯಾವ ದೇಶವೂ ನೆಲ, ಜಲದ ಮೇಲೆ ಸ್ವಾಮ್ಯ ಹೊಂದುವಂತಿಲ್ಲ. ಇಲ್ಲಿನ ಪರಿಸರವನ್ನು ಮಾಲಿನ್ಯಗೊಳಿಸುವಂತಿಲ್ಲ. ಈ ಖಂಡದ ಸಂಶೋಧನೆಗೆ

ಬರುವವರು ಯಾವುದೇ ಹೊರ ಜೀವಿ ಪ್ರಭೇದವನ್ನು ತರುವಂತಿಲ್ಲ. ಅಲ್ಲದೆ ತಿಮಿಂಗಿಲಗಳ ಬೇಟೆಗೆ ನಿಷೇಧವಿದೆ. ವೈಜ್ಞಾನಿಕ ಮಾಹಿತಿಗಳ ಮುಕ್ತ ವಿನಿಮಯಕ್ಕೆ ಅವಕಾಶವಿದೆ. ಇಲ್ಲಿನ ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸಬೇಕು. ಒಟ್ಟಾರೆ ಈ ಖಂಡವು ಶಾಂತಿಯ ಉದ್ದೇಶಗಳಿಗೆ ಮಾತ್ರ ಮೀಸಲು.




ಹಿಮಾವೃತ ಖಂಡದಲ್ಲಿ ಸಂಶೋಧನೆ ಕೇಂದ್ರಗಳು

ಅಂಟಾರ್ಕ್‌ಟಿಕ್ ಖಂಡದಲ್ಲಿ ಪ್ರಪಂಚದ ಶೇ.90 ಭಾಗದ ಸಿಹಿನೀರು ಮಂಜುಗಡ್ಡೆಯ ರೂಪದಲ್ಲಿದೆ.

5. ಪ್ರಮುಖ ಸಂಶೋಧನಾ ಕೇಂದ್ರಗಳು

ಹಲವು ದೃಷ್ಟಿಯಿಂದ ಅಂಟಾರ್ಕ್‌ಟಿಕ್ ಖಂಡವು ಜಾಗತಿಕ ಸಂಶೋಧನೆಗಾಗಿ ಮೀಸಲಾಗಿದ್ದು ವೈಜ್ಞಾನಿಕವಾದ ಆಸಕ್ತಿಯನ್ನು ಹುಟ್ಟಿಸುತ್ತದೆ. ಈ ಖಂಡದ ಉಗಮ ಮತ್ತು ಭೂರಚನೆ, ವಾಯುಗುಣದ ಪರಿಸ್ಥಿತಿ, ಜೀವಿಪರಿಸರ ವ್ಯವಸ್ಥೆ, ಜೈವಿಕ ವೈವಿಧ್ಯತೆ ಮತ್ತು ಸಂರಕ್ಷಣೆ, ಅಲ್ಲಿನ ಪರಿಸರ ಮಾಲಿನ್ಯ ಮತ್ತು ಪರಿಹಾರ, ತ್ಯಾಜ್ಯ ಪದಾರ್ಥಗಳ ವಿಲೇವಾರಿ ಮತ್ತು ನಿರ್ವಹಣೆ, ತೈಲ ಸೋರಿಕೆಯಿಂದಾಗುವ ಅವಘಡ ಮತ್ತು ಆ ಬಗ್ಗೆ ತೆಗೆದುಕೊಳ್ಳಬೇಕಾದ ಕಟ್ಟುನಿಟ್ಟಿನ ಕ್ರಮ ಮೊದಲಾದವುಗಳು ಸಂಶೋಧನಾ ವಿಷಯಗಳಾಗಿವೆ. ಈ ಬಗ್ಗೆ ಸಂಶೋಧನೆ ಮಾಡಲು ಪ್ರಪಂಚದ ಅನೇಕ ರಾಷ್ಟ್ರಗಳು ತಮ್ಮ ಸಂಶೋಧನಾ ಕೇಂದ್ರಗಳನ್ನು ಇಲ್ಲಿ ಸ್ಥಾಪಿಸಿವೆ.

ಭಾರತವು ಸಹ ತನ್ನ ಸ್ವಂತ ಸಂಶೋಧನಾ ಕೇಂದ್ರವನ್ನು ಈ ಖಂಡದಲ್ಲಿ ಸ್ಥಾಪಿಸಿದೆ. ಮೊಟ್ಟಮೊದಲಿಗೆ 1981ರ ಡಿಸೆಂಬರ 6ರಂದು ಎಸ್.ಜೆಡ್.ಕಾಸಿಂರ ನೇತೃತ್ವದಲ್ಲಿ ವಿಜ್ಞಾನಿಗಳ ತಂಡವು ಗೋವಾದಿಂದ ಪ್ರಯಾಣ ಆರಂಭಿಸಿತು. ಈ ತಂಡವನ್ನು ಒಯ್ದ ಪೋಲಾರ್ ಸರ್ಕಲ್ ನೌಕೆಯು 1982 ಜನವರಿ 9ರಂದು ಅಂಟಾರ್ಕ್‌ಟಿಕ್ ಖಂಡವನ್ನು ತಲಪಿತು. ಭಾರತೀಯ ತಂಡ ಸ್ಥಾಪಿಸಿದ ಮೊದಲ ಸಂಶೋಧನಾ ಕೇಂದ್ರದ ಹೆಸರು "ದಕ್ಷಿಣ ಗಂಗೋತ್ರಿ". ಇದು ನಿರ್ಮಾಣಗೊಂಡದ್ದು 1983ರಲ್ಲಿ ಮತ್ತು ಈ ಹೆಸರನ್ನು ಕೊಟ್ಟದ್ದು 1989ರಲ್ಲಿ. ಈಗ ಇದು ಮಾನವರಹಿತವಾಗಿದ್ದು ದಾಸ್ತಾನಿಗಷ್ಟೇ ಬಳಕೆಯಾಗುತ್ತಿದೆ.

'ಮೈತ್ರಿ' ಭಾರತದ ಸಂಶೋಧನಾ ಕೇಂದ್ರ

'ಭಾರತಿ' ಭಾರತದ ಮತ್ತೊಂದು ಸಂಶೋಧನಾ ಕೇಂದ್ರ

ಮೊದಲ ಯಾನದ ಯಶಸ್ಸಿನ ನಂತರ ಈವರೆಗೆ ಸುಮಾರು 50 ಬಾರಿ ಭಾರತದ ಸಂಶೋಧನಾ ತಂಡಗಳು ಅಂಟಾರ್ಕ್‌ಟಿಕ ಖಂಡಕ್ಕೆ ಹೋಗಿ ಬಂದಿವೆ. "ಮೈತ್ರಿ" ಎರಡನೆಯ ಸಂಶೋಧನಾ ಕೇಂದ್ರ. ಇದು ಶಿರ್ಮಾಚರ್ ಓಯಸಿಸ್ ಮೇಲೆ ನಿರ್ಮಾಣ ಗೊಂಡಿದೆ (1988–89). ಇದು ಸರ್ವಋತು ಕೇಂದ್ರ ಮತ್ತು 26 ಮಂದಿ ಒಟ್ಟಿಗೆ ಇರಲು ಅನುಕೂಲವಿದೆ. ಇಲ್ಲಿಂದ 255 ಮೀ. ದೂರದಲ್ಲಿ ಸಿಹಿನೀರಿನ ಪೂರೈಕೆಗಾಗಿ "ಪ್ರಿಯದರ್ಶಿನಿ" ಎಂಬ ಸರೋವರವನ್ನು ಭಾರತ ನಿರ್ಮಿಸಿದೆ. ಮೈತ್ರಿ ಕೇಂದ್ರದಲ್ಲಿ ಭೂವಿಜ್ಞಾನ, ಭೂಗೋಳಶಾಸ್ತ್ರ ಮತ್ತು ಔಷಧಿಗಳ ಬಗ್ಗೆ ಸಂಶೋಧನೆ ನಡೆಯುತ್ತದೆ.

"ಭಾರತಿ" ಎಂಬ ಮತ್ತೊಂದು ಸಂಶೋಧನಾ ಕೇಂದ್ರವನ್ನು ಅಂಟಾರ್ಕ್‌ಟಿಕದಲ್ಲಿ ಸ್ಥಾಪಿಸಲು ಭಾರತವು ಯೋಚಿಸಿದೆ. ಇದು ವಿಶೇಷವಾಗಿ ಸಾಗರಾಧ್ಯಯನ ಶೋಧನೆ ಉದ್ದೇಶವುಳ್ಳದ್ದು. ಅಗತ್ಯವಾದ ಸರ್ವೇಕಾರ್ಯವು ಈಗಾಗಲೇ ಮುಗಿದಿದೆ.

ಹೊಸ ಪದಗಳು

ಶ್ವೇತಖಂಡ, ಶೀತಲ ಖಂಡ, ವಿನ್ಸನ್ ಮ್ಯಾಸಿಫ್, ಎರೆಬಸ್, ಹಾವಸೆ, ಪೆಂಗ್ವಿನ್, ತಿಮಿಂಗಿಲ, ಸೀಲ್, ಸೀಗಡಿ, ಅದಿಲೆ, ಚಿನ್‌ಸ್ಟ್ರಾಪ್, ಕ್ರಿಲ್, ಭೂಭೌತ, ದಕ್ಷಿಣ ಗಂಗೋತ್ರಿ, ಮೈತ್ರಿ, ಭಾರತಿ.

ಅಭ್ಯಾಸಗಳು

I ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಅಂಟಾರ್ಕ್‌ಟಿಕ್ ಭೂಖಂಡದ ಸ್ಥಾನ ಮತ್ತು ವಿಸ್ತೀರ್ಣ ತಿಳಿಸಿರಿ.
2. ಅಂಟಾರ್ಕ್‌ಟಿಕ್ ಖಂಡದ ಭೌಗೋಳಿಕ ಸನ್ನಿವೇಶ ಕುರಿತು ವಿವರಿಸಿ.
3. ಅಂಟಾರ್ಕ್‌ಟಿಕವನ್ನು 'ಶ್ವೇತ ಖಂಡ' ಎನ್ನುವರು. ಏಕೆ?
4. ಅಂಟಾರ್ಕ್‌ಟಿಕ್ ಖಂಡದ ಪ್ರಮುಖ ಪರ್ವತ ಮತ್ತು ಶಿಖರಗಳನ್ನು ತಿಳಿಸಿ.
5. ಅಂಟಾರ್ಕ್‌ಟಿಕ್ ಖಂಡದ ಸಸ್ಯ ಮತ್ತು ಪ್ರಾಣಿಗಳನ್ನು ಹೆಸರಿಸಿ.
6. ಅಂಟಾರ್ಕ್‌ಟಿಕದಲ್ಲಿ ಭಾರತದ ಸಂಶೋಧನಾ ಕೇಂದ್ರಗಳ ಹೆಸರನ್ನು ತಿಳಿಸಿ.

ಚಟುವಟಿಕೆಗಳು

1. ಅಂಟಾರ್ಕ್‌ಟಿಕ್ ಖಂಡದಲ್ಲಿ ಸ್ಥಾಪನೆಯಾಗಿರುವ ವಿವಿಧ ದೇಶಗಳ ಸಂಶೋಧನಾ ಕೇಂದ್ರಗಳ ಚಿತ್ರಗಳನ್ನು ಸಂಗ್ರಹಿಸಿ ಅವುಗಳ ಪಟ್ಟಿ ಸಿದ್ಧಗೊಳಿಸುವುದು.
2. ಅಂಟಾರ್ಕ್‌ಟಿಕ್ ಖಂಡದ ವಿವಿಧ ಸಸ್ಯ ಮತ್ತು ಪ್ರಾಣಿಗಳ ಪಟ್ಟಿ ಮಾಡಿ ಅವುಗಳ ಚಿತ್ರಗಳನ್ನು ಸಂಗ್ರಹಿಸುವುದು.

☆ ☆ ☆